ಶನಿವಾರ, ಫೆಬ್ರುವರಿ 26, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಲಿಯಾ ಬೆಡಗು

ಮುಂಬೈನಲ್ಲಿ ಶುಕ್ರವಾರ ನಡೆದ 'ಗಂಗೂಬಾಯಿ ಕಾಠಿಯಾವಾಡಿ' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಆಲಿಯಾ ಭಟ್ ಪಾಲ್ಗೊಂಡಿದ್ದರು

bigbasket

A TATA Enterprise

ಬಿಗ್‌ಬಾಸ್ಕೆಟ್‌ನ ವಾಗ್ದಾನ

ಪ್ರತಿ ದಿನ ಕಡಿಮೆ ಬೆಲೆ

ಕನಿಷ್ಠ 5% ರಿಯಾಯಿತಿ

5,000ಕ್ಕೂ ಹೆಚ್ಚು ಉತ್ಕೃಷ್ಟ ಉತ್ಪನ್ನಗಳ ಮೇಲೆ

ಉಚಿತ ಡೆಲಿವರಿ ಪಡೆಯಿರಿ

ಬಿಬಿ ಸ್ಟಾರ್ ಗ್ರಾಹಕರಿಗೆ ₹199ಕ್ಕಿಂತ ಹೆಚ್ಚಿನ ಆರ್ಡರುಗಳ ಮೇಲೆ

ಉಳಿದ ಎಲ್ಲಾ ಗ್ರಾಹಕರಿಗೆ ₹399ಕ್ಕಿಂತ ಹೆಚ್ಚಿನ ಆರ್ಡರುಗಳ ಮೇಲೆ

Great offers on a wide range of categories

Min. 20% off — Fruits & Vegetables

Up to 25% off — Eggs, Fish & Meat

Up to 40% off — Rice, Dal, Oil & Masala

Up to 50% off — Bread, Cakes & Dairy

Up to 55% off — Pasta, Soups, Sauces & Cheese

Up to 50% off — Snacks & Packaged Foods

Up to 30% off — Beverages & Health Drinks

Up to 40% off — Diapers & Baby Products

Up to 50% off — Beauty & Personal Care

Up to 50% off — Detergents & Cleaners

Up to 60% off — Cooking Utensils

AMERICAN EXPRESS — 10% instant discount# — Up to ₹500, Minimum order ₹2,500 — Valid from February 25-27, 2022

kotak — 10% instant discount** — Up to ₹300 for Credit Cards & ₹250 for Debit Cards

Paytm CASHBACK — Up to ₹500 cashback — Minimum order ₹1,000 — Valid twice on Paytm Wallet transaction — Valid till February 28, 2022

Download the bigbasket app or visit bigbasket.com to start shopping now.

Offers valid in Bengaluru, Tumkur & Hosur only. **Minimum order ₹2,200 for Debit Cards and ₹2,000 for Credit Cards. bigbasket strives to offer products at discounted prices and reserves the right to change, modify or end offers and discounts without any prior notice. For more offers, detailed terms & conditions visit the bigbasket app or log on to bigbasket.com

PENTAGON 8973

India's largest online supermarket

27 ಕಚೇರಿಗಳಲ್ಲಿ ಏಕಕಾಲಕ್ಕೆ ಶೋಧ • 45 ಕಡತಗಳು ತನಿಖಾ ತಂಡದ ವಶಕ್ಕೆ

ಬಿಬಿಎಂಪಿ: ನೂರಾರು ಕೋಟಿ ಅಕ್ರಮ ಪತ್ತೆ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಕಚೇರಿಯಲ್ಲಿ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಶುಕ್ರವಾರ ಶೋಧ ನಡೆಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ಅಧಿಕಾರ ದುರ್ಬಳಕೆ, ಭ್ರಷ್ಟಾಚಾರ ಮತ್ತು ಅವ್ಯವಹಾರಗಳ ಆರೋಪದ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) 27 ಕಚೇರಿಗಳಲ್ಲಿ ಶುಕ್ರವಾರ ಶೋಧ ನಡೆಸಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ನೂರಾರು ಕೋಟಿ ರೂಪಾಯಿ ಮೊತ್ತದ ಅಕ್ರಮಗಳನ್ನು ಪತ್ತೆಮಾಡಿದೆ.

ಬಿಬಿಎಂಪಿ ಕಚೇರಿಗಳಲ್ಲಿ ವ್ಯಾಪಕ ಅಕ್ರಮಗಳು ನಡೆಯುತ್ತಿರುವ ಕುರಿತು ತನಿಖಾ ಸಂಸ್ಥೆಗೆ ದೂರುಗಳು ಬಂದಿದ್ದವು. ಈ ಸಂಬಂಧ ಪ್ರಾಥಮಿಕ ತನಿಖೆ ನಡೆಸಲಾಗಿತ್ತು. ದೂರಿನಲ್ಲಿರುವ ಆರೋಪಗಳು ಮೇಲ್ನೋಟಕ್ಕೆ ಸತ್ಯ ಎಂಬುದಕ್ಕೆ ಸಾಕ್ಷ್ಯಗಳು ಲಭಿಸಿದ್ದವು. ಅದನ್ನು ಆಧರಿಸಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿರುವ ಎಸಿಬಿ, ಶುಕ್ರವಾರ ಬೆಳಿಗ್ಗೆಯಿಂದ ಸಂಜೆಯವರೆಗೂ 11 ಸ್ಥಳಗಳಲ್ಲಿ ಏಕಕಾಲಕ್ಕೆ ಶೋಧ ನಡೆಸಿತು.

‘ಪಾಲಿಕೆಯ ಜಾಹೀರಾತು ವಿಭಾಗ, ಕಂದಾಯ ವಿಭಾಗ, ವರ್ಗಾವಣೆ ಮಾಡಬಹುದಾದ ಅಸ್ತಿ ಹಕ್ಕು (ಟಿಡಿಆರ್) ವಿಭಾಗ, ನಗರ ಯೋಜನಾ ವಿಭಾಗ ಮತ್ತು ಕಾಮಗಾರಿಗಳ ವಿಭಾಗಗಳಲ್ಲಿ ಭಾರಿ ಪ್ರಮಾಣದ ಅಕ್ರಮಗಳು ಕಂಡುಬಂದಿವೆ. ಹೆಚ್ಚಿನ ತನಿಖೆಗಾಗಿ 45 ಕಡತಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಎಸಿಬಿಯ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ನಗರದ ವ್ಯಾಪ್ತಿಯಲ್ಲಿ ಜಾಹೀರಾತು ಪ್ರದರ್ಶಿಸುವವರಿಂದ ವಾರ್ಷಿಕ ಗುತ್ತಿಗೆ ಮೊತ್ತ, ಸರಕು ಮತ್ತು ಸೇವಾ ತೆರಿಗೆ ವಸೂಲಿಯಲ್ಲಿ ಅಕ್ರಮ ನಡೆಯುತ್ತಿರುವುದು ಪತ್ತೆಯಾಗಿದೆ. ಜಾಹೀರಾತು ವಿಭಾಗಕ್ಕೆ ಬರಬೇಕಿರುವ ₹ 230 ಕೋಟಿ ಬಾಕಿ ವಸೂಲಿ ಮಾಡಲು ಕ್ರಮಗಳನ್ನು ಕೈಗೊಂಡಿಲ್ಲ. ಒಂದು ವರ್ಷದಿಂದ ಬಸ್ ನಿಲ್ದಾಣಗಳಲ್ಲಿ ಜಾಹೀರಾತು ಅಳವಡಿಸಲು ಟೆಂಡರ್ ಪ್ರಕ್ರಿಯೆ ನಡೆಸದೇ ಕೋಟ್ಯಂತರ ರೂಪಾಯಿ ನಷ್ಟ ಉಂಟುಮಾಡಿರುವುದು ಕಂಡುಬಂದಿದೆ ಎಂದು ತನಿಖಾ ತಂಡ ಮಾಹಿತಿ ನೀಡಿದೆ.

ಸಂಬಂಧಿಕರ ಕಂಪನಿಗೆ ಟಿಡಿಆರ್: ಆದೂರು, ರಾಮಪುರ, ಸೀಗೇಹಳ್ಳಿ, ವೈಟ್‌ಫೀಲ್ಡ್, ವಾರಣಾಸಿ ಮತ್ತಿತರ ಕಡೆಗಳಲ್ಲಿ ಟಿಡಿಆರ್ ವಿಭಾಗದಲ್ಲಿ ಭಾರಿ ಅಕ್ರಮ ನಡೆದಿರುವುದು ಪತ್ತೆಯಾಗಿದೆ. ಬಿಬಿಎಂಪಿ ಅಧಿಕಾರಿಗಳು ಮತ್ತು ಸಿಬ್ಬಂದಿ ಭೂಮಾಲೀಕರು ಹಾಗೂ ಮಧ್ಯವರ್ತಿಗಳ ಜತೆ ಸೇರಿ ಅಕ್ರಮ ಎಸಗಿದ್ದಾರೆ. ಕೆಲವೆಡೆ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಸಂಬಂಧಿಕರ ಕಂಪನಿಗಳ ಹೆಸರಿಗೆ ಅಕ್ರಮವಾಗಿ ಟಿಡಿಆರ್ ನೀಡಿರುವುದಕ್ಕೆ ದಾಖಲೆಗಳು ಲಭಿಸಿವೆ’ ಎಂದು ಎಸಿಬಿ ತಿಳಿಸಿದೆ.

ಅಕ್ರಮವಾಗಿ ಬಹುಮಹಡಿ ಕಟ್ಟಡಗಳ ನಿರ್ಮಾಣಕ್ಕೆ ನಗರ ಯೋಜನಾ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿ ಬಿಲ್ಡರ್‌ಗಳಿಗೆ ಸಹಕಾರ ನೀಡಿರುವುದನ್ನು ಎಸಿಬಿ ಬಯಲಿಗೆಳೆದಿದೆ. ಅಕ್ರಮಗಳ ಬಗ್ಗೆ ಮಾಹಿತಿ ಇದ್ದರೂ, ಯಾವುದೇ ಕ್ರಮ ಕೈಗೊಳ್ಳದಿರುವುದು ಕಂಡುಬಂದಿದೆ. ಕೆಲವು ಪ್ರಕರಣಗಳಲ್ಲಿ ಕಾನೂನಿಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣಕ್ಕೆ ಅನುಮತಿ, ಸ್ವಾಧೀನ ಪ್ರಮಾಣ ಪತ್ರ ವಿತರಿಸಿರುವುದಕ್ಕೆ ಸಂಬಂಧಿಸಿದ ಕಡತಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತನಿಖಾ ಸಂಸ್ಥೆ ಹೇಳಿದೆ.

ಒಂದೇ ಕೆಲಸಕ್ಕೆ ಎರಡು ಬಿಲ್: ಬಿಬಿಎಂಪಿಯಲ್ಲಿ ಕಾಮಗಾರಿ ನಡೆಸುತ್ತಿರುವ ವಿವಿಧ ವಿಭಾಗಗಳ ಕಚೇರಿಗಳಲ್ಲಿ 200 ಕಡತಗಳನ್ನು ಎಸಿಬಿ ತಂಡ ಪರಿಶೀಲಿಸಿದೆ. ಕೆಲವು ಪ್ರಕರಣಗಳಲ್ಲಿ ಒಂದೇ ಕೆಲಸಕ್ಕೆ ಎರಡು ಬಾರಿ ಬಿಲ್ ನೀಡಿರುವುದು ಕಂಡುಬಂದಿದೆ. ಗುತ್ತಿಗೆದಾರರು ಅಧಿಕಾರಿಗಳು ಸೇರಿ ನಕಲಿ ದಾಖಲೆ ಸೃಷ್ಟಿಸಿ ಹಣ ಪಡೆದಿರುವುದು ಪತ್ತೆಯಾಗಿದೆ ಎಂದು ಎಸಿಬಿ ತಿಳಿಸಿದೆ.

ಕಾರ್ಯಾಚರಣೆಗೆ 200 ಮಂದಿ

ಎಸಿಬಿ ಬೆಂಗಳೂರು ನಗರ ಎಸ್‌ಪಿ ಜಿ.ಎಚ್. ಯತೀಶ್‌ಚಂದ್ರ, ಕೇಂದ್ರ ವಲಯ ಎಸ್‌ಪಿ ಕಲಾ ಕೃಷ್ಣಸ್ವಾಮಿ ಮತ್ತು ಕೇಂದ್ರ ಸ್ಥಾನ ಎಸ್‌ಪಿ ಉಮಾ ಪ್ರಶಾಂತ್ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದರು. ಡಿವೈಎಸ್‌ಪಿಗಳು, ಇನ್‌ಸ್ಪೆಕ್ಟರ್‌ಗಳು ಸೇರಿದಂತೆ 200 ಅಧಿಕಾರಿಗಳು, ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ತೆರಿಗೆ ವಸೂಲಿಯಲ್ಲೂ ಅಕ್ರಮ

ಪಾಲಿಕೆ ವ್ಯಾಪ್ತಿಯ ಆಸ್ತಿಗಳ ಮಾಲೀಕರಿಂದ ಆಸ್ತಿ ತೆರಿಗೆ ವಸೂಲಿ ಮಾಡುವುದರಲ್ಲಿ ಅಧಿಕಾರಿಗಳು, ಸಿಬ್ಬಂದಿ ಅಕ್ರಮ ಎಸಗಿರುವುದು ತನಿಖೆ ವೇಳೆ ಪತ್ತೆಯಾಗಿದೆ. ಒಂದು ಖಾಸಗಿ ಆಸ್ಪತ್ರೆ ಮತ್ತು ಎರಡು ಮಾಲ್‌ಗಳಿಂದ ಕೋಟ್ಯಂತರ ರೂಪಾಯಿ ತೆರಿಗೆ ಸಂಗ್ರಹಿಸದೇ ನಷ್ಟ ಉಂಟುಮಾಡಿರುವುದು ಕಂಡುಬಂದಿದೆ ಎಂದು ಎಸಿಬಿ ಹೇಳಿದೆ.

ನಗರದ ಪಿಇಎಸ್ ವಿಶ್ವವಿದ್ಯಾಲಯದ ಫಿಸಿಯೋಥೆರಪಿ ಕ್ಲಿನಿಕ್ ಅನ್ನು ಮಾಜಿ ಕ್ರಿಕೆಟಿಗ ಲಕ್ಷ್ಮೀಪತಿ ಬಾಲಾಜಿ ಅವರು ಗುರುವಾರ ಉದ್ಘಾಟಿಸಿದರು. ತರಬೇತುದಾರ ರಾಮ್‌ಜಿ ಶ್ರೀನಿವಾಸನ್, ವಿಶ್ವವಿದ್ಯಾಲಯದ ಉಪಕುಲಾಧಿಪತಿ ಪ್ರೊ.ಡಿ. ಜವಾಹರ್, ಉಪಕುಲಪತಿ ಜೆ. ಸೂರ್ಯಪ್ರಸಾದ್, ಕುಲಸಚಿವ ಕೆ.ಎಸ್. ಶ್ರೀಧರ್, ವಾಣಿಜ್ಯ ಮತ್ತು ನಿರ್ವಹಣೆ ವಿಜ್ಞಾನದ ಡೀನ್ ಶೈಲಶ್ರೀ ಹರಿದಾಸ್, ವಿದ್ಯಾರ್ಥಿ ವ್ಯವಹಾರಗಳ ಡೀನ್ ವಿ. ಕೃಷ್ಣ ಮತ್ತು ಕ್ರೀಡಾ ವಿಭಾಗದ ನಿರ್ದೇಶಕ ವಿನಯ್ ಎಂ.ಎಸ್. ಇದ್ದರು.

ಈಶಾ: ರುದ್ರಾಕ್ಷಿ ದೀಕ್ಷೆಗೆ ನೋಂದಣಿ ಪ್ರಾರಂಭ

ಬೆಂಗಳೂರು: ಈಶಾ ಫೌಂಡೇಷನ್ ರುದ್ರಾಕ್ಷಿ ದೀಕ್ಷೆಗೆ ಆನ್‌ಲೈನ್ ವೇದಿಕೆ ಮೂಲಕ ನೋಂದಣಿ ಪ್ರಾರಂಭಿಸಿದ್ದು, ರುದ್ರಾಕ್ಷಿಗಳನ್ನು ಶಿವರಾತ್ರಿ ಹಬ್ಬದ ರಾತ್ರಿ ಭಕ್ತಾದಿಗಳಿಗೆ ವಿತರಿಸಲಾಗುತ್ತದೆ.

‘ದೀಕ್ಷೆಗೆ ಹೆಸರು ನೋಂದಾಯಿಸಿದ ಭಕ್ತರಿಗೆ ಧ್ಯಾನ ಲಿಂಗದ ಸನ್ನಿಧಿಯಲ್ಲಿ ಈಶಾ ವಿಭೂತಿ ಜತೆಗೆ ರುದ್ರಾಕ್ಷಿ ನೀಡಲಾಗುತ್ತದೆ. ರುದ್ರಾಕ್ಷಿ ದೀಕ್ಷೆ ಪ್ಯಾಕೇಜ್ ಆದಿಯೋಗಿಯ ಛಾಯಾಚಿತ್ರ ಒಳಗೊಂಡಿದೆ. ರುದ್ರಾಕ್ಷಿಗಳು ಶಿವನ ಆನಂದಬಾಷ್ಪದ ಹನಿಗಳು’ ಎಂದು ಫೌಂಡೇಷನ್ ತಿಳಿಸಿದೆ.

‘ಈಶಾದಲ್ಲಿ ರಾತ್ರಿಯಿಡೀ ನಡೆಯುವ ಮಹಾಶಿವರಾತ್ರಿ ಆಚರಣೆಗಳು ಸದ್ಗುರುಗಳಿಂದ ಶಕ್ತಿಯುತ ಧ್ಯಾನಗಳನ್ನು ಒಳಗೊಂಡಿರುತ್ತವೆ. ಖ್ಯಾತ ಕಲಾವಿದರಿಂದ ಅದ್ಭುತವಾದ ಸಂಗೀತ ಪ್ರದರ್ಶನಗಳಿಂದ ತೀವ್ರವಾದ ಆಧ್ಯಾತ್ಮಿಕ ಅನುಭವಗಳನ್ನು ಅನಾವರಣಗೊಳಿಸುತ್ತವೆ. ಈ ರುದ್ರಾಕ್ಷಿಗಳನ್ನು ಮನೆಗೆ ಉಚಿತವಾಗಿ ಪಡೆಯಲು ಮೊ. 83000 83000ಗೆ ಮಿಸ್ಡ್ ಕಾಲ್ ನೀಡಬೇಕು. ಕೂಡಲೇ ಮೊಬೈಲ್ ಸಂಖ್ಯೆಗೆ ನೋಂದಣಿಯ ಲಿಂಕ್‌ನ ಸಂದೇಶ ಬರಲಿದ್ದು, ಆನ್‌ಲೈನ್ ಮೂಲಕ ಅರ್ಜಿ ನಮೂನೆಯಲ್ಲಿ ವಿವರಗಳನ್ನು ನಮೂದಿಸಬೇಕು. ಬಳಿಕ ನೋಂದಣಿ ಪೂರ್ತಿಗೊಳ್ಳಲಿದೆ’ ಎಂದು ಪ್ರಕಟಣೆ ತಿಳಿಸಿದೆ.

ಶಿವರಾತ್ರಿ ಅಂಗವಾಗಿ ಹಾಪ್‌ಕಾಮ್ಸ್‌ನ ಕ್ರಮ

ದ್ರಾಕ್ಷಿ–ಕಲ್ಲಂಗಡಿಗೆ ರಿಯಾಯಿತಿ ದರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವರಾತ್ರಿ ಅಂಗವಾಗಿ ಹಾಪ್‌ಕಾಮ್ಸ್‌ನ ಎಲ್ಲ ಮಳಿಗೆಗಳಲ್ಲಿ ಮಾರ್ಚ್ 3ರವರೆಗೆ ರಿಯಾಯಿತಿ ದರದಲ್ಲಿ ದ್ರಾಕ್ಷಿ ಮತ್ತು ಕಲ್ಲಂಗಡಿ ಮಾರಾಟ ನಡೆಯಲಿದೆ.

‘ಶುಕ್ರವಾರದಿಂದಲೇ (ಫೆ.25) ಈ ರಿಯಾಯಿತಿ ದರದಲ್ಲಿ ಮಾರಾಟ ಶುರುವಾಗಿದೆ. ವಿಜಯಪುರ, ಬಾಗಲಕೋಟೆ, ಗದಗ ಹಾಗೂ ಬೆಂಗಳೂರು ಸುತ್ತಮುತ್ತಲ ಜಿಲ್ಲೆಗಳಲ್ಲಿ ಬೆಳೆದ ದ್ರಾಕ್ಷಿ ತಳಿಗಳನ್ನು ಮಾರಾಟಕ್ಕೆ ಇಡಲಾಗಿದೆ’ ಎಂದು ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ ತಿಳಿಸಿದರು.

‘ಮಾ.3ರವರೆಗೆ ಒಂದೇ ದರದಲ್ಲಿ ಮಾರಾಟ ಇರಲಿದೆ. ಈ ಅವಧಿಯಲ್ಲಿ ದರ ಏರಿದರೂ ನಿಗದಿತ ದರದಲ್ಲಿ ವ್ಯತ್ಯಾಸ ಇರುವುದಿಲ್ಲ. ರೈತರ ಅನುಕೂಲಕ್ಕಾಗಿ ಶೀಘ್ರದಲ್ಲೇ ದ್ರಾಕ್ಷಿ–ಕಲ್ಲಂಗಡಿ ಮೇಳ ಆಯೋಜನೆ ಮಾಡಲಿದ್ದೇವೆ’ ಎಂದರು.

ಶಿವರಾತ್ರಿಯಂದು ಧಾರ್ಮಿಕ ಕಾರ್ಯಕ್ರಮಗಳು:
ಬೆಂಗಳೂರು: ನಗರದ ಶ್ರೀಶಿವಬಾಲಯೋಗಿ ಮಹಾರಾಜ ಟ್ರಸ್ಟ್ ವತಿಯಿಂದ ಶಿವರಾತ್ರಿಅಂಗವಾಗಿ ಮಾರ್ಚ್ 1ರಂದು ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 6.30ರಿಂದ ಮಹಾ ಕುಂಭಾಭಿಷೇಕ, 108 ಕೆ.ಜಿ ಹೂವಿನಿಂದ ಪುಷ್ಪಾಭಿಷೇಕ, 9 ಗಂಟೆಗೆ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಮಧ್ಯಾಹ್ನ 1ರಿಂದ ಮರುದಿನ ಬೆಳಿಗ್ಗೆ 5 ಗಂಟೆಯವರೆಗೆ ಭಕ್ತಾದಿಗಳಿಂದ ಶಿವನಿಗೆ ಕ್ಷೀರಾಭಿಷೇಕ ಮಾಡಲು ಅವಕಾಶ ಕಲ್ಪಿಸಿದೆ.

‘ಸಂಜೆ 4.30ಕ್ಕೆ ಭಜನೆ, 6 ಗಂಟೆಯಿಂದ ಭಕ್ತಿಗೀತೆಗಳು, ಭಜನೆ, ಭರತನಾಟ್ಯ ಹಾಗೂ ರಾತ್ರಿ 11ರಿಂದ 1 ಗಂಟೆಯವರೆಗೆ ಯಕ್ಷಗಾನ ಪ್ರದರ್ಶನವೂ ಇರಲಿದೆ. ಭಕ್ತಾದಿಗಳು ಭಾಗವಹಿಸಬಹುದು’ ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಶ್ರೀಶಿವಬಾಲಯೋಗಿ ಮಹಾರಾಜ ಟ್ರಸ್ಟ್, ಇಂಟರ್ ನ್ಯಾಷನಲ್ ಸೆಂಟರ್ ಫಾರ್ ಇಂಡಿಯನ್ ಕಲ್ಚರ್, 3ನೇ ಅಡ್ಡರಸ್ತೆ, ಶಿವಬಾಲಯೋಗಿ ಮಹಾರಾಜ ಆಶ್ರಮ ರಸ್ತೆ, ಜೆ.ಪಿ ನಗರ 3ನೇ ಹಂತ.
ಸಂಪರ್ಕ: 9480462998

ರಿಯಾಯಿತಿ ದರಪಟ್ಟಿ
(ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ದ್ರಾಕ್ಷಿ ತಳಿ	ವಿಶೇಷ ದರ
ಬೆಂಗಳೂರು ನೀಲಿ	64
ದ್ರಾಕ್ಷಿ ಟಿ.ಎಸ್	70
ದ್ರಾಕ್ಷಿ ಟಿ.ಜಿ	75
ಸೋನಾಕ	75
ದಿಲ್‌ಕುಷ್	80
ಸೂಪರ್ ಸೋನಾಕ	82
ಶರದ್	154
ಕೃಷ್ಣ ಶರದ್	165
ಇಂಡಿಯನ್‌ರೆಡ್‌ಗ್ಲೋಬ್	174
ಕೃಷ್ಣ ಶರದ್ ಸೂಪರ್	185
ಜಂಬೂ ಶರದ್	195
ಆಸ್ಟ್ರೇಲಿಯಾ ರೆಡ್‌ಗ್ಲೋಬ್	450
ಕಲ್ಲಂಗಡಿ ತಳಿ	**ವಿಶೇಷ ದರ**
ಕಿರಣ	25
ಕಲ್ಲಂಗಡಿ–ನಾಮಧಾರಿ	25

ಸುದ್ದಿ 2 ನಿಮಿಷ

ಪ್ರಚೋದನಕಾರಿ ಬರಹ ಆರೋಪ: ನಟ ಚೇತನ್‌ಗೆ ಜಾಮೀನು

ಬೆಂಗಳೂರು: 'ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚೋದನಕಾರಿ ಬರಹ ಪ್ರಕಟಿಸಿದ್ದಾರೆ’ ಎಂಬ ಆರೋಪದಡಿ ಬಂಧಿಸಲಾಗಿರುವ ನಟ ಎ. ಚೇತನ್ ಕುಮಾರ್ ಅವರಿಗೆ ಶುಕ್ರವಾರ ಜಾಮೀನು ಮಂಜೂರಾಗಿದೆ.

‘ಜಾತಿ, ಧರ್ಮ ಹಾಗೂ ಎರಡು ಗುಂಪಿನ ನಡುವೆ ದ್ವೇಷ ಉಂಟು ಮಾಡುವ ಹೇಳಿಕೆ ಪ್ರಚುರಪಡಿಸಿದ (ಐಪಿಸಿ 505 (2) ಹಾಗೂ ಅಪರಾಧ ಕೃತ್ಯ ಕೈಗೊಳ್ಳಲು ಪ್ರಚೋದನೆ (ಐಪಿಸಿ 504) ನೀಡಿದ್ದಾರೆ’ ಎಂಬ ಆರೋಪದಡಿ ಶೇಷಾದ್ರಿಪುರ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿದ್ದರು.

ಫೆ. 22ರಂದು ಚೇತನ್ ಅವರನ್ನು ಬಂಧಿಸಿದ್ದ ಪೊಲೀಸರು, ನ್ಯಾಯಾಧೀಶರ ಎದುರು ಹಾಜರುಪಡಿಸಿದ್ದರು. 14 ದಿನಗಳವರೆಗೆ ಚೇತನ್ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ಚೇತನ್ ಅವರಿಗೆ ಜಾಮೀನು ಕೋರಿ 8ನೇ ಎಸಿಎಂಎಂ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ಅದನ್ನು ಮಾನ್ಯ ಮಾಡಿರುವ ನ್ಯಾಯಾಲಯ, ‘ಇಬ್ಬರು ಸರ್ಕಾರಿ ನೌಕರರ ಶ್ಯೂರಿಟಿ ನೀಡಬೇಕು. ತನಿಖಾಧಿಕಾರಿ ತನಿಖೆಗೆ ಸಹಕರಿಸಬೇಕು. ನ್ಯಾಯಾಲಯದ ಮುಂದಿನ ವಿಚಾರಣೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು’ ಎಂಬ ಷರತ್ತು ವಿಧಿಸಿ ಜಾಮೀನು ಮಂಜೂರು ಮಾಡಿದೆ.

ಸುಳ್ಳು ಮೊಕದ್ದಮೆ ಆರೋಪ: ವಿಧಾನಸೌಧ ಎದುರು ಪ್ರತಿಭಟನೆ

ಬೆಂಗಳೂರು: ‘ವಕೀಲ ಜಗದೀಶ್ ಕೆ.ಎನ್. ಮಹಾದೇವ್ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ’ ಎಂದು ಆರೋಪಿಸಿ ನಗರದ ವಿಧಾನಸೌಧ ಎದುರು ಶುಕ್ರವಾರ ಪ್ರತಿಭಟನೆ ನಡೆಯಿತು.

ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ್ ನೇತೃತ್ವದಲ್ಲಿ ಸೇರಿದ್ದ ವಕೀಲರು, ಹೋರಾಟಗಾರರು ಹಾಗೂ ಸಾಮಾಜಿಕ ಕಾರ್ಯಕರ್ತರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸೌಧ ಎದುರಿನ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆ ಸ್ಥಳದಿಂದ ಮೆರವಣಿಗೆ ಮೂಲಕ ಸಾಗಿ, ಪೊಲೀಸ್ ಕಮಿಷನರ್ ಕಚೇರಿಗೆ ಮುತ್ತಿಗೆ ಹಾಕಲು ಪ್ರತಿಭಟನಕಾರರು ತೀರ್ಮಾನಿಸಿದ್ದರು. ಆದರೆ, ಅವರನ್ನು ವಿಧಾನಸೌಧ ಎದುರೇ ಪೊಲೀಸರು ತಡೆದರು. ಪ್ರತಿಭಟನಕಾರರು ಸ್ಥಳದಲ್ಲೇ ಸಭೆ ನಡೆಸಿದರು.

‘ಐಪಿಎಸ್ ಅಧಿಕಾರಿಯೊಬ್ಬರ ಭ್ರಷ್ಟಾಚಾರದ ವಿರುದ್ಧ ವಕೀಲ ಜಗದೀಶ್ ಹೋರಾಡುತ್ತಿದ್ದರು. ನ್ಯಾಯಾಲಯದಲ್ಲಿ ನಡೆದ ಘಟನೆಯನ್ನೇ ಅಸ್ತ್ರ ಮಾಡಿಕೊಂಡ ಪೊಲೀಸರು, ಜಗದೀಶ್ ವಿರುದ್ಧ ಕೊಲೆ ಯತ್ನ (ಐಪಿಸಿ 307) ಪ್ರಕರಣ ದಾಖಲಿಸಿದ್ದಾರೆ. ಇದು ಸುಳ್ಳು ಪ್ರಕರಣ’ ಎಂದು ಪ್ರತಿಭಟನಕಾರರು ದೂರಿದರು.

‘ಸುಳ್ಳು ಪ್ರಕರಣವನ್ನು ಹಿಂಪಡೆಯಬೇಕು. ಈ ಷಡ್ಯಂತ್ರದ ಹಿಂದಿರುವವರನ್ನು ಪತ್ತೆ ಮಾಡಿ, ಅವರ ವಿರುದ್ಧ ಕ್ರಮ ಜರುಗಿಸಬೇಕು’ ಎಂದೂ ಒತ್ತಾಯಿಸಿದರು.

ಹಿಂದುಳಿದವರ ಸಮಾವೇಶ ಮಾರ್ಚ್‌ನಲ್ಲಿ

ಮೈಸೂರು: ‘ಹಿಂದುಳಿದ ವರ್ಗದವರ ರಾಜಕೀಯ ಮೀಸಲಾತಿ ರಕ್ಷಣೆಗಾಗಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಸಮಾವೇಶವನ್ನು ಮೈಸೂರಿನಲ್ಲಿ ಮಾರ್ಚ್ ತಿಂಗಳ ಮೂರನೇ ವಾರದಲ್ಲಿ ನಡೆಸಲಾಗುವುದು’ ಎಂದು ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಹೇಳಿದರು.

ಶನಿವಾರ, ಫೆಬ್ರುವರಿ 26, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 57 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಹದಿವಯಸ್ಸಿನ ಜೋಡಿಗಳ ಮೊದಲ ಭೇಟಿಯ ಪ್ರೀತಿ ಶಾಶ್ವತವಾಗಿ ಉಳಿಯಬೇಕು. ಈ ಹಂತದಲ್ಲಿ ಹುಟ್ಟುವ ಗೊಂದಲಗಳ ನಿವಾರಣೆಗೆ ಅನುಸರಿಸಬಹುದಾದ ಗೌರವಯುತ ದಾರಿಗಳು ಇಲ್ಲಿವೆ.



ಚರ್ಚೆ
ಶಾಸಕರು, ಸಚಿವರ ವೇತನ ಹೆಚ್ಚಳ ಸರಿಯಾದ ನಡೆಯೇ? 9
ಕೆಪಿಎಸ್‌ಸಿ: ಕೆಎಎಸ್ ಅಧಿಕಾರಿಗಳ ಸ್ಥಾನಪಲ್ಲಟ 11
‘ಭಾರತ ಇಸ್ಲಾಮೀಕರಣಗೊಳಿಸುವ ಹುನ್ನಾರ’ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,858	16,658	₹52,280 (ಬೆಂಗಳೂರು)	₹67,100 (ಬೆಂಗಳೂರು)	75.33

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಚಿನ್ನದ ಸಾಲ 7.25% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

ಕಾಮನ್‌ವೆಲ್ತ್ ಗೇಮ್ಸ್‌ಗೆ ಮೀರಾಬಾಯಿ

ಸಿಂಗಪುರ (ಪಿಟಿಐ): ಭಾರತದ ಮೀರಾಬಾಯಿ ಚಾನು ಶುಕ್ರವಾರ ಸಿಂಗಪುರ ಅಂತರರಾಷ್ಟ್ರೀಯ ವೇಟ್‌ಲಿಫ್ಟಿಂಗ್‌ನ 55 ಕೆಜಿ ವಿಭಾಗದಲ್ಲಿ ಚಿನ್ನ ಗೆದ್ದರು. ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಲು ಅರ್ಹತೆ ಗಳಿಸಿದರು. 13

ಚಿನಕುರಳಿ
ಪ್ರಕಾಶ್ ಶೆಟ್ಟಿ

ಎರಡನೇ ದಿನವೂ ಉಕ್ರೇನ್ ಮೇಲೆ ಆಕ್ರಮಣ: ಸಾವಿನ ಸಂಖ್ಯೆ 137ಕ್ಕೆ ಏರಿಕೆ

ರಾಜಧಾನಿಗೆ ರಷ್ಯಾ ದಾಳಿ

ಕೀವ್ (ಎಎಫ್‌ಪಿ): ಉಕ್ರೇನ್ ರಾಜಧಾನಿ ಕೀವ್‌ನ ಬೀದಿಗಳಲ್ಲಿ ರಷ್ಯಾ ಮತ್ತು ಉಕ್ರೇನ್ ಸೈನಿಕರ ನಡುವೆ ಶುಕ್ರವಾರ ಕಾಳಗ ನಡೆದಿದೆ. ನಾಗರಿಕರನ್ನು ಗುರಿಯಾಗಿಸಿ ರಷ್ಯಾ ಸೈನಿಕರು ದಾಳಿ ಮಾಡುತ್ತಿದ್ದಾರೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಆರೋಪಿಸಿದ್ದಾರೆ. ರಷ್ಯಾ ಮೇಲೆ ಇನ್ನಷ್ಟು ನಿರ್ಬಂಧಗಳನ್ನು ಹೇರುವಂತೆ ಅವರು ಒತ್ತಾಯಿಸಿದ್ದಾರೆ.

ಉಕ್ರೇನ್‌ನ ಮೇಲೆ ರಷ್ಯಾ ದಾಳಿ ನಡೆಸಿದ ಎರಡನೇ ದಿನ, ಶುಕ್ರವಾರ ಮುಂಜಾನೆಗೆ ಮುನ್ನವೇ ಕೀವ್ ಮೇಲೆ ದಾಳಿ ಆರಂಭವಾಗಿದೆ. ರಷ್ಯಾ ದಾಳಿ ಮಾಡಿದಾಗಿನಿಂದ 137 ಜನರು ಮೃತಪಟ್ಟಿದ್ದಾರೆ ಎಂದು ಉಕ್ರೇನ್ ಹೇಳಿಕೊಂಡಿದೆ. ಸುಮಾರು ಒಂದು ಲಕ್ಷ ಜನರು ನಿರಾಶ್ರಿತರಾಗಿದ್ದಾರೆ.

ಅಮೆರಿಕ ಮತ್ತು ಅದರ ಮಿತ್ರ ದೇಶಗಳು ಹಲವು ನಿರ್ಬಂಧಗಳನ್ನು ಹೇರಿದ್ದರೂ ರಷ್ಯಾ ಅದಕ್ಕೆ ಜಗ್ಗಿಲ್ಲ. ಯುದ್ಧದ ಆರಂಭದಲ್ಲಿಯೇ ಸಿಕ್ಕ ವ್ಯೂಹಾತ್ಮಕವಾಗಿ ಮುಖ್ಯವಾದ ಗೆಲುವಿನ ಅನುಕೂಲ ಪಡೆದುಕೊಳ್ಳುವ ಲೆಕ್ಕಾಚಾರದಲ್ಲಿ ರಷ್ಯಾ ಇದೆ.

ನಾಜಿ ಜರ್ಮನಿಯು 1941ರಲ್ಲಿ ನಡೆಸಿದ ದಾಳಿಯನ್ನು ಝೆಲೆನ್‌ಸ್ಕಿ ಅವರು ನೆನಪಿಸಿಕೊಂಡಿದ್ದಾರೆ. ರಷ್ಯಾ ದಾಳಿಯ ಸಂದರ್ಭದಲ್ಲಿ ದಿಟ್ಟತನ ತೋರಿದ್ದಕ್ಕಾಗಿ ಅವರು ಉಕ್ರೇನ್‌ನ ಜನರನ್ನು ಅಭಿನಂದಿಸಿದ್ದಾರೆ.

ಯುದ್ಧದ ಅನುಭವ ಇರುವ ಜನರು ಶಸ್ತ್ರ ಕೈಗೆತ್ತಿಕೊಂಡು ಉಕ್ರೇನ್ ದೇಶವನ್ನು ರಕ್ಷಿಸಬೇಕು. ಪಶ್ಚಿಮ ದೇಶಗಳು ನೆರವು ನೀಡುವ ವಿಚಾರದಲ್ಲಿ ಅತ್ಯಂತ ನಿಧಾನವಾಗಿ ನಿರ್ಧಾರ ಕೈಗೊಳ್ಳುತ್ತಿವೆ ಎಂದು ಝೆಲೆನ್‌ಸ್ಕಿ ಹೇಳಿದ್ದಾರೆ.

ರಷ್ಯಾ ಮತ್ತು ಜಗತ್ತಿನ ನಡುವೆ ಕಬ್ಬಿಣದ ಪರದೆ ನಿರ್ಮಾಣವಾಗಿದೆ. ‘ನಮ್ಮನ್ನು ಏಕಾಂಗಿ ಮಾಡಲಾಗಿದೆ’ ಎಂದು ಝೆಲೆನ್‌ಸ್ಕಿ ಹೇಳಿದ್ದಾರೆ.

10ನೇ ಪುಟ ನೋಡಿ
ವಿಶೇಷ ಪುಟ 10

ರಷ್ಯಾದ ಪಡೆಗಳು ನಡೆಸಿದ ರಾಕೆಟ್ ದಾಳಿಯಿಂದ ಉಕ್ರೇನ್‌ನ ರಾಜಧಾನಿ ಕೀವ್‌ನಲ್ಲಿ ಶುಕ್ರವಾರ ಕಟ್ಟಡವೊಂದಕ್ಕೆ ಹತ್ತಿಕೊಂಡಿದ್ದ ಬೆಂಕಿಯನ್ನು ಅಗ್ನಿಶಾಮಕ ದಳದವರು ನಂದಿಸಲು ಯತ್ನಿಸಿದರು –ಎಪಿ/ಪಿಟಿಐ ಚಿತ್ರ

ತೀವ್ರಗೊಂಡ ವಲಸೆ

- ಕಾರುಗಳು ಮತ್ತು ಕಾಲ್ನಡಿಗೆಯಲ್ಲಿ ಜನರು ಉಕ್ರೇನ್ ತೊರೆದು ಹೋಗುತ್ತಿದ್ದಾರೆ. ಹಂಗೆರಿ, ಪೋಲೆಂಡ್ ಮತ್ತು ರೊಮೇನಿಯಾದತ್ತ ನೂರಾರು ಮಂದಿ ಸಾಗಿದ್ದಾರೆ
- ಉಕ್ರೇನ್ ಸಂಘರ್ಷದಲ್ಲಿ ಈವರೆಗೆ ಸಾವಿರಕ್ಕೂ ಹೆಚ್ಚು ಸೈನಿಕರು ಮೃತಪಟ್ಟಿದ್ದಾರೆ ಎಂದು ಉಕ್ರೇನ್ ರಕ್ಷಣಾ ಸಚಿವಾಲಯ ಹೇಳಿದೆ. ರಷ್ಯಾ ಸೇನೆಗೆ ಬೇರೆ ಯಾವ ಕಾರ್ಯಾಚರಣೆಯಲ್ಲಿಯೂ ಇಷ್ಟೊಂದು ಸಾವು ನೋವು ಸಂಭವಿಸಿಲ್ಲ ಎಂದಿದೆ
- ಬ್ರಿಟನ್‌ನ ಬ್ರಿಟಿಷ್ ಏರ್‌ವೇಸ್ ಮೇಲೆ ರಷ್ಯಾ ನಿಷೇಧ ಹೇರಿದೆ. ರಷ್ಯಾದ ಏರೊಫ್ಲೋಟ್ ವಿಮಾನ ಯಾನ ಸಂಸ್ಥೆಗೆ ಬ್ರಿಟನ್ ನಿಷೇಧ ಹೇರಿದ್ದಕ್ಕೆ ಪ್ರತಿಯಾಗಿ ಈ ಕ್ರಮ ಕೈಗೊಳ್ಳಲಾಗಿದೆ
- ವ್ಲಾಡಿಮಿರ್ ಪುಟಿನ್ ಮತ್ತು ರಷ್ಯಾ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಅವರ ಆಸ್ತಿ ಮುಟ್ಟುಗೋಲಿನ ನಿರ್ಧಾರವನ್ನು ತಕ್ಷಣ ತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದು 27 ದೇಶಗಳ ಐರೋಪ್ಯ ಒಕ್ಕೂಟವು ಹೇಳಿದೆ

ಭಾರತೀಯರು ಇಂದು ತಾಯ್ನಾಡಿಗೆ

ನವದೆಹಲಿ: ಯುದ್ಧ ಭೀತಿಯಿಂದಾಗಿ ಉಕ್ರೇನ್‌ನ ಬಹುತೇಕ ವಿಮಾನ ನಿಲ್ದಾಣಗಳು ಸ್ಥಗಿತಗೊಂಡಿವೆ. ನೆರೆಯ ರೊಮೇನಿಯಾ, ಸ್ಲೋವಾಕಿಯಾ, ಪೋಲೆಂಡ್ ಹಾಗೂ ಹಂಗೆರಿ ದೇಶಗಳ ಗಡಿಗಳಿಗೆ ಭಾರತೀಯರನ್ನು ರಸ್ತೆ ಮೂಲಕ ಕರೆತಂದು, ಅಲ್ಲಿಂದ ವಿಮಾನದ ಮೂಲಕ ವಾಪಸ್ ಕಳುಹಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ಕೇಂದ್ರದ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಹಾಗೂ ವಿದೇಶಾಂಗ ವ್ಯವಹಾರಗಳ ರಾಜ್ಯ ಖಾತೆ ಸಚಿವ ವಿ.ಮುರಳೀಧರನ್ ತಿಳಿಸಿದರು.

1,000 ಜನ ಗಡಿ ತಲುಪಿದ್ದು, ಶನಿವಾರ ಬೆಳಿಗ್ಗೆ ರೊಮೇನಿಯಾದ ಗಡಿಯಿಂದ ಹೊರಡಲಿರುವ ಎರಡು ವಿಮಾನಗಳು ಅವರನ್ನು ಹೊತ್ತು ಮುಂಬೈ ಹಾಗೂ ನವದೆಹಲಿಗೆ ಬರಲಿವೆ ಎಂದು ಶುಕ್ರವಾರ ಸಂಜೆ ಜಂಟಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಉಕ್ರೇನ್‌ನಲ್ಲಿ ಅಂದಾಜು 20,000 ಭಾರತೀಯರು ಇರುವ ಬಗ್ಗೆ ಮಾಹಿತಿ ಲಭಿಸಿದೆ. ಆ ಪೈಕಿ 18,000 ವಿದ್ಯಾರ್ಥಿಗಳು ವಿವಿಧೆಡೆ ವ್ಯಾಸಂಗ ಮಾಡುತ್ತಿದ್ದಾರೆ. ಇದುವರೆಗೆ ಒಟ್ಟು 4,000 ನಾಗರಿಕರು ವಾಪಸಾಗಿದ್ದು, ಇನ್ನೂ ಅಲ್ಲಿಯೇ ಇರುವ 16,000 ಜನ ಸುರಕ್ಷಿತವಾಗಿದ್ದಾರೆ ಎಂದರು.

PhonePe ಇನ್ಶುರೆನ್ಸ್ ಬ್ರೋಕಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (IRDAI ನೋಂ. 766) ಡೈರೆಕ್ಟ್ ಬ್ರೋಕರ್ – ಲೈಫ್ ಮತ್ತು ಜನರಲ್ – ಆಗಸ್ಟ್ 10, 2024ರ ವರೆಗೆ ಮಾನ್ಯ. CIN - U66000KA2020FTC132814. ನೋಂದಾಯಿತ ಕಚೇರಿ – ಕಚೇರಿ-2, ಮಹಡಿ 4,5,6,7, ವಿಂಗ್ A, ಬ್ಲಾಕ್ A, ಸಲಾರ್ಪುರಿಯಾ ಸಾಫ್ಟ್ ಜೋನ್, ಸರ್ವೀಸ್ ರೋಡ್, ಗ್ರೀನ್ ಗ್ಲೆನ್ ಲೇಔಟ್, ಬೆಳ್ಳಂದೂರು, ಬೆಂಗಳೂರು, ಕರ್ನಾಟಕ – 560103. ಮಾರಾಟವನ್ನು ಮುಕ್ತಾಯ ಮಾಡುವುದಕ್ಕಿಂತ ಮೊದಲು ಸಂಬಂಧಿಸಿದ ವಿಮೆದಾರರ ಮಾರಾಟ ಕೈಪಿಡಿಯನ್ನು ದಯವಿಟ್ಟು ಗಮನವಿಟ್ಟು ಓದಿ. PhonePe ಟ್ರೇಡ್ ಲೋಗೋದ ಮಾಲೀಕತ್ವವನ್ನು PhonePe ಪ್ರೈವೇಟ್ ಲಿಮಿಟೆಡ್ ಹೊಂದಿದೆ ಮತ್ತು ಬಳಕೆದಾರರ ಲೈಸೆನ್ಸ್ ಕರಾರು ಅಡಿಯಲ್ಲಿ PhonePe ಇನ್ಶುರೆನ್ಸ್ ಬ್ರೋಕಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಬಳಸಿದೆ. ಜಾಹೀರಾತು ಕೋಡ್: PM/370. ^ತೆರಿಗೆ ಪ್ರಯೋಜನಗಳು ತೆರಿಗೆ ಕಾನೂನುಗಳ ಬದಲಾವಣೆಗೆ ಒಳಪಟ್ಟಿದೆ.

ಪತ್ರಿಕಾಗೋಷ್ಠಿಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಮಾಹಿತಿ

‘ನಗರದಲ್ಲಿ ಮೂರು ದಿನ ಪಾದಯಾತ್ರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಮಾರ್ಚ್ 1ರಿಂದ ಮೂರು ದಿನಗಳ ಕಾಲ ನಗರದಲ್ಲಿ ಪಾದಯಾತ್ರೆ ನಡೆಸಲಾಗುವುದು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ತಿಳಿಸಿದರು.

ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಫೆಬ್ರುವರಿ 27ರಂದು ರಾಮನಗರದಿಂದ ಆರಂಭವಾಗುವ ಪಾದಯಾತ್ರೆ 28ರಂದು ಕೆಂಗೇರಿ ತಲುಪಲಿದೆ. ಮಾರ್ಚ್ 1ರಂದು ಕೆಂಗೇರಿಯಿಂದ ಆರಂಭವಾಗಿ, ಮಾರ್ಚ್ 3ರಂದು ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಬೃಹತ್ ಸಮಾವೇಶದೊಂದಿಗೆ ಮುಕ್ತಾಯವಾಗಲಿದೆ’ ಎಂದರು.

ಕಾಂಗ್ರೆಸ್ ಹಮ್ಮಿಕೊಂಡಿರುವ ಪಾದಯಾತ್ರೆಯು ಕೆಂಗೇರಿಯಿಂದ ನಾಯಂಡಹಳ್ಳಿ, ಬನಶಂಕರಿ ದೇವಸ್ಥಾನ, ಜಯದೇವ ಆಸ್ಪತ್ರೆ, ಬಿಟಿಎಂ ಬಡಾವಣೆ, ಕೋರಮಂಗಲ, ವಿವೇಕನಗರ, ಹಲಸೂರು, ಜೆ.ಸಿ. ಪಾಳ್ಯ, ಟಿ.ವಿ. ಟವರ್ ಮೂಲಕ ಅರಮನೆ ಮೈದಾನದವರೆಗೆ ಸಾಗಿ,

ನಂತರ ಸ್ಯಾಂಕಿ ಕೆರೆ, ಮಲ್ಲೇಶ್ವರ, ಶೇಷಾದ್ರಿಪುರ, ರೈಲು ನಿಲ್ದಾಣ, ಚಾಮರಾಜಪೇಟೆ ಮೂಲಕ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನಕ್ಕೆ ತಲುಪಲಿದೆ ಎಂದು ವಿವರಿಸಿದರು.

ನಗರದಲ್ಲಿ ಐದು ದಿನಗಳ ಕಾಲ ಪಾದಯಾತ್ರೆ ನಡೆಸಲು ನಿರ್ಧರಿಸಲಾಗಿತ್ತು. ಆದರೆ, ಮಾರ್ಚ್ 4ರಿಂದ ವಿಧಾನಮಂಡಲ ಅಧಿವೇಶನ ಆರಂಭವಾಗುತ್ತಿದೆ. ಈ ಕಾರಣದಿಂದ ಮೂರು ದಿನಕ್ಕೆ ಕಡಿತಗೊಳಿಸಲಾಗಿದೆ. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರು ಮಲ್ಲೇಶ್ವರಕ್ಕೂ ಪಾದಯಾತ್ರೆ ಪ್ರವೇಶಿಸಬೇಕು ಎಂಬ ಮನವಿ ಮಾಡಿದ್ದರು. ಈ ಕಾರಣದಿಂದ ಮಾರ್ಗದಲ್ಲಿ ಕೆಲವು ಬದಲಾವಣೆ ಮಾಡಲಾಗಿದೆ ಎಂದು ಹೇಳಿದರು.

ಮೇಕೆದಾಟು ಯೋಜನೆಯಿಂದ ಬೆಂಗಳೂರು ನಗರದ ಜನರಿಗೆ ಹೆಚ್ಚಿನ ಅನುಕೂಲವಾಗಲಿದೆ. ಈ ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಕಾಂಗ್ರೆಸ್ ಹೋರಾಟ ನಡೆಸುತ್ತಿದೆ. ಜನರು ಹೋರಾಟಕ್ಕೆ ಬೆಂಬಲ ನೀಡುವ ಭರವಸೆ ಇದೆ ಎಂದು ಅವರು ಹೇಳಿದರು.

ಕೆಪಿಸಿಸಿ ವಕ್ತಾರ ಸಿ.ಆರ್. ನಾರಾಯಣಪ್ಪ, ಪಕ್ಷದ ಮುಖಂಡರಾದ ಎಂ. ನಾರಾಯಣಸ್ವಾಮಿ ಮತ್ತು ಜೆ. ಹುಚ್ಚಪ್ಪ ಪತ್ರಿಕಾಗೋಷ್ಠಿಯಲ್ಲಿದ್ದರು.

ಬೆಂಬಲ: ಚಿತ್ರನಟರು, ಕನ್ನಡ ಸಂಘಟನೆಗಳಿಗೆ ಮನವಿ

ನವದೆಹಲಿ: ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ಇದೇ 27ರಂದು ಕಾಂಗ್ರೆಸ್ ಪಕ್ಷವು ರಾಮನಗರದಿಂದ ಆರಂಭಿಸಲಿರುವ ಪಾದಯಾತ್ರೆಯಲ್ಲಿ ಕನ್ನಡ ಚಲನಚಿತ್ರ ನಟರು, ತಂತ್ರಜ್ಞರು, ಕನ್ನಡ ಪರ ಹಾಗೂ ವಿವಿಧ ಕಾರ್ಮಿಕ ಸಂಘಟನೆಗಳ ಸದಸ್ಯರು ಪಾಲ್ಗೊಳ್ಳಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು.

ಇಲ್ಲಿನ ಕರ್ನಾಟಕ ಭವನದಲ್ಲಿ ಶುಕ್ರವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೆಂಗಳೂರು ನಗರದ ಶೇ 25ರಷ್ಟು ಜನತೆಗೆ ಕುಡಿಯುವ ನೀರು ಪೂರೈಸಲು ಮತ್ತು 400 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಉದ್ದೇಶ ಹೊಂದಿರುವ ಈ ಯೋಜನೆ ಆರಂಭಿಸುವಂತೆ ಆರಂಭಿಸಲಾದ ಹೋರಾಟಕ್ಕೆ ಪ್ರತಿಯೊಬ್ಬರೂ ಪಕ್ಷಾತೀತವಾಗಿ ಬೆಂಬಲ ನೀಡಬೇಕು’ ಎಂದು ಕೋರಿದರು.

ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವೇ ಆಡಳಿತ ನಡೆಸುತ್ತಿದ್ದರೂ, ಮೇಕೆದಾಟು ಯೋಜನೆಗೆ ಅಗತ್ಯವಿರುವ ಪರಿಸರ ಅನುಮತಿ ದೊರೆಯುತ್ತಿಲ್ಲ. ಯೋಜನೆ ವಿರೋಧಿಸಿ ತಮಿಳುನಾಡು ಸಲ್ಲಿಸಿರುವ ಮೇಲ್ಮನವಿ ಕುರಿತು ಸುಪ್ರೀಂ ಕೋರ್ಟ್ ತಡೆ ನೀಡಿಲ್ಲ. ಆದರೂ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು ಕೇಂದ್ರದ ಮೇಲೆ ಒತ್ತಡ ಹೇರಲು ವಿಫಲವಾಗಿದೆ ಎಂದು ಅವರು ದೂರಿದರು.

‘ಬಿಐಸಿ ಹಬ್ಬ’ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್’ನ ನಾಲ್ಕನೇ ವರ್ಷದ ‘ಬಿಐಸಿ ಹಬ್ಬ’ ಫೆ.26 ಮತ್ತು 27ರಂದು ನಡೆಯಲಿದೆ.

ಎರಡು ದಿನಗಳ ಕಾಲ ಬೆಳಿಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಎಲ್ಲ ವಯೋಮಾನದ ಮಕ್ಕಳಿಗಾಗಿ ವೈವಿಧ್ಯಮಯ ಕಾರ್ಯಕ್ರಮಗಳು ಮತ್ತು ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ. ನಾಟಕ ಮತ್ತು ನೃತ್ಯ ಕಾರ್ಯಕ್ರಮಗಳು ಸಹ ನಡೆಯಲಿವೆ.

ಫೆ.26ರಂದು ಮಧ್ಯಾಹ್ನ 12.30ಕ್ಕೆ ‘ನನ್ನ ನಗರ, ನನ್ನ ಸವಾಲುಗಳು’ ಕುರಿತು 8ರಿಂದ 16 ವರ್ಷದ ಮಕ್ಕಳಿಗೆ ಜನಾಗ್ರಹ ಸಂಸ್ಥೆಯಿಂದ ಕಾರ್ಯಾಗಾರ ಆಯೋಜಿಸಲಾಗಿದೆ.

ಈ ಬಾರಿ ಸಾಮಾಜಿಕ ಚಟುವಟಿಕೆಗಳಲ್ಲಿ ನಿಸ್ವಾರ್ಥದಿಂದ ತೊಡಗಿರುವ ಸರ್ಕಾರೇತರ ಸಂಸ್ಥೆಗಳಿಗೆ ಹಬ್ಬದಲ್ಲಿ ವೇದಿಕೆ ಒದಗಿಸಿರುವುದು ವಿಶೇಷವಾಗಿದೆ.

ವಿಶ್ವಾಸಾರ್ಹವಾಗಿರುವ ಮತ್ತು ಅತ್ಯುತ್ತಮ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿರುವ 75 ಸರ್ಕಾರೇತರ ಸಂಸ್ಥೆಗಳು ಹಬ್ಬದಲ್ಲಿ ಪಾಲ್ಗೊಳ್ಳಲಿವೆ.

ಮಹಿಳೆಯರ ಸಬಲೀಕರಣ, ಅಂಗವಿಕಲರಿಗೆ ನೆರವು, ದುರ್ಬಲ ವರ್ಗದವರಿಗೆ ಶಿಕ್ಷಣ ಒದಗಿಸುವುದು, ಆರೋಗ್ಯ ಕ್ಷೇತ್ರ, ವನ್ಯಜೀವಿಗಳ ರಕ್ಷಣೆ, ಹವಾಮಾನ ಬದಲಾವಣೆ, ಪರಿಸರ ರಕ್ಷಣೆ ಮುಂತಾದ ಸಾಮಾಜಿಕ ಕಾರ್ಯಗಳನ್ನು ಕೈಗೊಂಡಿರುವ ಸಂಸ್ಥೆಗಳಿಗೆ ಆದ್ಯತೆ ನೀಡಲಾಗಿದೆ. ಈ ಸಂಸ್ಥೆಗಳ ಚಟುವಟಿಕೆಗಳ ಬಗ್ಗೆ ನಾಗರಿಕರಿಗೆ ಮಾಹಿತಿ ನೀಡುವ ಉದ್ದೇಶದಿಂದ ಹಬ್ಬದಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಸುಸ್ಥಿರ ಅಭಿವೃದ್ಧಿ ಕೇಂದ್ರ, ವನ್ಯಜೀವಿ ಅಧ್ಯಯನಗಳ ಕೇಂದ್ರ, ದಕ್ಷಿಣ ಫೌಂಡೇಷನ್ ಮುಂತಾದ ಸಂಸ್ಥೆಗಳು ‘ಬಿಐಸಿ ಹಬ್ಬ’ದಲ್ಲಿ ಪಾಲ್ಗೊಳ್ಳಲಿವೆ.

ಈ ಬಾರಿಯ ‘ಬಿಐಸಿ ಹಬ್ಬ’ದಲ್ಲಿ ಸಸ್ಯಗಳ ಆಧಾರಿತ ಆಹಾರದ ಬಗ್ಗೆಯೂ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ವಿಶೇಷವಾಗಿದೆ. ವಿವರಗಳಿಗೆ: https://bangaloreinternationalcentre.org ವೆಬ್‌ಸೈಟ್ ವೀಕ್ಷಿಸಬಹುದು.

ಕಸಾಪ: ಶೈಕ್ಷಣಿಕ ಮಾನದಂಡ ಸಡಿಲಿಕೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಸದಸ್ಯತ್ವ ಪಡೆಯಲು ಏಳನೇ ತರಗತಿ ವಿದ್ಯಾರ್ಹತೆ ನಿಗದಿಗೆ ರಾಜ್ಯದ ವಿವಿಧೆಡೆ ಆಕ್ಷೇಪ ವ್ಯಕ್ತವಾಗಿದ್ದರಿಂದ ಕಲಾವಿದರು ಸೇರಿದಂತೆ ಕೆಲವರಿಗೆ ಶೈಕ್ಷಣಿಕ ಮಾನದಂಡವನ್ನು ಕೈಬಿಡಲಾಗಿದೆ.

ಪರಿಷತ್ತಿನ ಬೈ–ಲಾ ತಿದ್ದುಪಡಿಗೆ ಸಂಬಂಧಿಸಿದಂತೆ ಕಾರ್ಯಕಾರಿ ಸಮಿತಿಯ ಸಭೆ ಶುಕ್ರವಾರ ನಡೆಯಿತು. ಸಭೆಯಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್ ನೇತೃತ್ವದ ಸಮಿತಿಯ ಶಿಫಾರಸುಗಳ ಬಗ್ಗೆ ಚರ್ಚಿಸಲಾಯಿತು. ಹಾಲಿ ಬೈ–ಲಾ ಆಮೂಲಾಗ್ರ ತಿದ್ದುಪಡಿಗೆ ಒಮ್ಮತದ ಅನುಮೋದನೆ ಪಡೆಯಲಾಯಿತು. ಮೊದಲು 10ನೇ ತರಗತಿ ಉತ್ತೀರ್ಣರಾದವರಗೆ ಸದಸ್ಯತ್ವ ನೀಡಬೇಕೆಂದು ಸಮಿತಿಯು ಶಿಫಾರಸು ಮಾಡಿತ್ತು. ಬಳಿಕ ಅದನ್ನು ಬದಲಾಯಿಸಿ, ಏಳನೇ ತರಗತಿಗೆ ಇಳಿಸಿತ್ತು. ಶೈಕ್ಷಣಿಕ ಅರ್ಹತೆ ಹೊಂದಿರದವರಿಗೆ ಸರಳ ಕನ್ನಡ ಪರೀಕ್ಷೆ ನಡೆಸುವ ಬಗ್ಗೆ ಶಿಫಾರಸು ಮಾಡಲಾಗಿತ್ತು. ಅದಕ್ಕೂ ವಿರೋಧ ವ್ಯಕ್ತವಾಗಿತ್ತು. ಕಾರ್ಯಕಾರಿ ಸಮಿತಿಯಲ್ಲಿ ಈ ಬಗ್ಗೆ ಚರ್ಚಿಸಿ, ನಿರ್ಬಂಧ ಸಡಿಲಿಸಲಾಗಿದೆ.

‘ವಿವಿಧ ಕಲಾ ಪ್ರಕಾರದಲ್ಲಿ ತೊಡಗಿಕೊಂಡವರಿಗೆ ಸದಸ್ಯತ್ವ ಪಡೆಯಲು ಶೈಕ್ಷಣಿಕ ಮಾನದಂಡ ಹಾಗೂ ಓದು–ಬರಹ ಬರಬೇಕೆಂಬ ನಿರ್ಬಂಧವನ್ನು ಕೈಬಿಡಲಾಗಿದೆ. ಚಿತ್ರರಂಗದರು, ಕೃಷಿಕರು, ಕುಶಲಕರ್ಮಿಗಳು, ಹೋರಾಟಗಾರರು ಸೇರಿ ಕೆಲ ವರ್ಗದವರಿಗೆ ಮಾತ್ರ ವಿನಾಯಿತಿ ನೀಡಲಾಗಿದೆ’ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

ಸದಸ್ಯತ್ವ ಶುಲ್ಕ ಇಳಿಕೆ: ಸದಸ್ಯತ್ವ ಶುಲ್ಕ ₹ 250ಕ್ಕೆ ಇಳಿಕೆ ಮಾಡಲಾಗಿದೆ.

ಮೇ ತಿಂಗಳಲ್ಲಿ ಹಾವೇರಿಯ ಕಾಗಿನೆಲೆಯಲ್ಲಿ ವಿಶೇಷ ಸರ್ವಸದಸ್ಯರ ಸಭೆ ನಡೆಯಲಿದೆ.

ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಯಪ್ಪನಹಳ್ಳಿ ಮೆಟ್ರೊ ರೈಲು ನಿಲ್ದಾಣದಲ್ಲಿ ಮುಂದಿನ ಆರು ತಿಂಗಳ ಕಾಲ 3ನೇ ಪ್ಲಾಟ್‌ಫಾರಂ ಮಾತ್ರ ಕಾರ್ಯ ನಿರ್ವಹಿಸಲಿದೆ.

ಈ ನಿಲ್ದಾಣದಿಂದ ವೈಟ್‌ಫೀಲ್ಡ್ ಮಾರ್ಗಕ್ಕೆ ಸಂಪರ್ಕ ಕಲ್ಪಿಸುವ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ಮಾ.2ರಿಂದ ಮುಂದಿನ ಆರು ತಿಂಗಳ ಕಾಲ ಈ ವ್ಯವಸ್ಥೆ ಇರಲಿದೆ. ರೈಲುಗಳ ಕಾರ್ಯಾಚರಣೆಯಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರವು ಮಾ.10ರಿಂದ 15ರವರೆಗೆ ಮೈಸೂರಿನಲ್ಲಿ ‘ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ’ ಹಮ್ಮಿಕೊಂಡಿದ್ದು, ಪುಸ್ತಕಗಳ ಮಳಿಗೆಗಳಿಗೆ ಅರ್ಜಿ ಆಹ್ವಾನಿಸಿದೆ.

ಅರ್ಜಿ ನಮೂನೆಗಳು ಪ್ರಾಧಿಕಾರದ ಕೇಂದ್ರ ಕಚೇರಿ, ಜಿಲ್ಲೆಗಳಲ್ಲಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಪ್ರಾಧಿಕಾರದ ವೆಬ್‌ಸೈಟ್ www.kannadapustakapradhikara.comನಲ್ಲಿ ದೊರೆಯಲಿವೆ.

ಮಳಿಗೆಗೆ ದಿನವೊಂದಕ್ಕೆ ₹ 500ರಂತೆ ಆರು ದಿನಗಳಿಗೆ ₹ 3 ಸಾವಿರ ಬಾಡಿಗೆ ಹಾಗೂ ₹ 1 ಸಾವಿರ ಠೇವಣಿ ನಿಗದಿಪಡಿಸಲಾಗಿದೆ. ಭರ್ತಿ ಮಾಡಿದ ಅರ್ಜಿ ನಮೂನೆಯ ಜತೆಗೆ ನಿಗದಿಪಡಿಸಿದ ಮೊತ್ತದ ಡಿಡಿಯನ್ನು ಮಾ.8ರೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ಈ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಬೇಕು. ಇ ಮೇಲ್ ವಿಳಾಸ kannadappradhikara@gmail.com ಮೂಲಕವೂ ಸಲ್ಲಿಸಬಹುದು. ಸಂಪರ್ಕಕ್ಕೆ: 080 22484516 / 22107704

ಮಹಾಬಲೇಶ್ವರ ಕಾಟ್ರಹಳ್ಳಿ ನೆನಪಿಗೆ ಪುಸ್ತಕ

ಬೆಂಗಳೂರು: ಪತ್ರಕರ್ತ ದಿವಂಗತ ಮಹಾಬಲೇಶ್ವರ ಕಾಟ್ರಹಳ್ಳಿ ಅವರ ನೆನಪಿನ ಹೊತ್ತಗೆ ತರಲು ಸಂಸ್ಮರಣೆ ಸಮಿತಿ ಮುಂದಾಗಿದೆ.

ನಾಡಿನ ಬಹುತೇಕ ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಮತ್ತು ವಾಹಿನಿಗಳಲ್ಲಿ ಸೇವೆ ಸಲ್ಲಿಸಿದ್ದ ಮಹಾಬಲೇಶ್ವರ ಅವರು, ಪ್ರಾದೇಶಿಕ ಪತ್ರಿಕೆಗಳನ್ನು ಸಹ ಆರಂಭಿಸಿ ಕೈಸುಟ್ಟುಕೊಂಡಿದ್ದರು. ಕಾಟ್ರಹಳ್ಳಿ ಅವರು ವೈವಿಧ್ಯಮಯ ವಿಷಯಗಳಲ್ಲಿ ನಾಲ್ಕು ಡಜನ್ ಪುಸ್ತಕಗಳನ್ನು ಪ್ರಕಟಿಸಿದ್ದರು. ಅವರ ಜತೆ ಒಡನಾಡಿದವರು, ಸ್ನೇಹಿತರು ಆತ್ಮೀಯರು, ಸಹೋದ್ಯೋಗಿಗಳು ತಮ್ಮ ಅನುಭವಗಳನ್ನು ಒಂದು ತಿಂಗಳಲ್ಲಿ ಹಂಚಿಕೊಳ್ಳಲು ಸಮಿತಿ ಮನವಿ ಮಾಡಿದೆ.

ಸಂಪರ್ಕ: 9448202685, 8762396344, 8762944334

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್

ಸರ್ಕಾರಿ ಕೋಟಾದಲ್ಲಿ ಕೋವಿಡ್–19 ಚಿಕಿತ್ಸೆ ಪಡೆದಿರುವ
ಸಾರ್ವಜನಿಕರ ಗಮನಕ್ಕೆ

- ಕೋವಿಡ್–19 ಚಿಕಿತ್ಸೆಗಾಗಿ ಸರ್ಕಾರಿ ಕೋಟಾದಲ್ಲಿ ಆಸ್ಪತ್ರೆಗಳಿಗೆ ದಾಖಲಾಗಿ ಚಿಕಿತ್ಸೆ ಪಡೆದವರಿಂದ ಆಸ್ಪತ್ರೆಗಳು ಹೆಚ್ಚುವರಿಯಾಗಿ (ತಪಾಸಣೆ, ಚಿಕಿತ್ಸೆ ಹಾಗೂ ಔಷಧಿಗಾಗಿ) ಹಣ ಪಡೆದ ಬಗ್ಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (SAST) ಸಹಾಯವಾಣಿ ಕೇಂದ್ರದಲ್ಲಿ ದೂರುಗಳು ದಾಖಲಾಗಿರುತ್ತವೆ.
- ದೂರುಗಳಿಗೆ ಸಂಬಂಧಿಸಿದಂತೆ ಎಸ್.ಎ.ಎಸ್.ಟಿ ಕಚೇರಿಯಲ್ಲಿ ವಿಚಾರಣೆ (Hearing) ನಡೆಯುತ್ತಿದೆ.
- ಆಸ್ಪತ್ರೆಗಳು ಹಾಗೂ ದೂರುದಾರರಿಗೆ ನೋಟಿಸ್ ಮತ್ತು ದೂರವಾಣಿ ಮೂಲಕ ಈ ಬಗ್ಗೆ ಮಾಹಿತಿ ನೀಡಲಾಗಿದ್ದು ಸಂಬಂಧಿಸಿದವರು ನಿಗದಿತ ದಿನಾಂಕಗಳಂದು ಸೂಕ್ತ ದಾಖಲೆಗಳೊಂದಿಗೆ ತಪ್ಪದೇ ಹಾಜರಾಗುವುದು.
- ಸಲ್ಲಿಕೆಯಾದ ದೂರುಗಳನ್ನು ಆಸ್ಪತ್ರೆ ಮತ್ತು ದೂರುದಾರರ ಸಮ್ಮುಖದಲ್ಲಿ ಆಲಿಸಿ ಇತ್ಯರ್ಥಪಡಿಸಲಾಗುವುದು ಹಾಗೂ ಆಸ್ಪತ್ರೆಗಳಲ್ಲಿ ವಸೂಲಿ ಮಾಡಿಕೊಂಡಿರುವ ಹೆಚ್ಚುವರಿ ಹಣವನ್ನು ಸಂಬಂಧಿಸಿದ ದೂರುದಾರರಿಗೆ ಅಥವಾ ಅವರ ಕಾನೂನು ಬದ್ಧ ವಾರಸುದಾರರಿಗೆ ಮರುಪಾವತಿಸಲು ಕ್ರಮವಹಿಸಲಾಗುವುದು.
- ಸರ್ಕಾರಿ ಕೋಟಾದಲ್ಲಿ ಕೋವಿಡ್ ಚಿಕಿತ್ಸೆ ಪಡೆದುಕೊಂಡಿರುವ ವ್ಯಕ್ತಿಗಳು ಇದುವರೆಗೂ ಈ ಬಗ್ಗೆ ದೂರು ಸಲ್ಲಿಸದಿದ್ದಲ್ಲಿ ಕೆಳಕಂಡ ವಿಳಾಸಕ್ಕೆ ಸೂಕ್ತ ದಾಖಲೆಗಳೊಂದಿಗೆ ದೂರು ಸಲ್ಲಿಸಿದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಕಛೇರಿ ವಿಳಾಸ:
ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್
“ಆರೋಗ್ಯ ಸೌಧ”, 7ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–560023
ದೂರವಾಣಿ: 080–22536200, ಫ್ಯಾಕ್ಸ್: 080–22536221

ಉಚಿತ ಸಹಾಯವಾಣಿ ಸಂಖ್ಯೆ:
1800 425 8330 / 1800 425 2646
(ಬೆಳಿಗ್ಗೆ: 8.00 ರಿಂದ ಸಂಜೆ: 8.00 ಗಂಟೆಯವರೆಗೆ)

ಇ–ಮೇಲ್ ಐಡಿ:
cvosast@gmail.com,
sastgrievance@gmail.com

ಮಾಸ್ಕ್ ಧರಿಸಿ · ದೈಹಿಕ ಅಂತರ ಪಾಲಿಸಿ · ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ · ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

“ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು” – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ರಾಮಯ್ಯ ಆಸ್ಪತ್ರೆ ಸಹಯೋಗದಲ್ಲಿ ರೋಟರಿ ಬೆಂಗಳೂರು ಸದಾಶಿವನಗರ ಡಿಸ್ಟ್ರಿಕ್ 3190 ನಗರದಲ್ಲಿ ಆಯೋಜಿಸಿದ್ದ ಉಚಿತ ಗಾಲಿ ಕುರ್ಚಿ ವಿತರಣಾ ಸಮಾರಂಭವನ್ನು ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಆರ್.ಜಯರಾಂ ಉದ್ಘಾಟಿಸಿದರು. ರೋಟರಿ 3190 ಗವರ್ನರ್ ಜಿತೇಂದ್ರ ಅನೇಜ, ಗೋಕುಲ ಶಿಕ್ಷಣ ಪ್ರತಿಷ್ಠಾನದ (ವೈದ್ಯಕೀಯ) ಮುಖ್ಯಕಾರ್ಯನಿರ್ವಾಹಕ ಎಂ.ಆರ್.ಶ್ರೀನಿವಾಸಮೂರ್ತಿ, ಭಗವಾನ್ ಮಹಾವೀರ್ ವಿಕಲಾಂಗ ಸಹಾಯತ ಸಮಿತಿ ಅಧ್ಯಕ್ಷ ಲಲಿತ್ ಎಂ. ಜೈನ್, ಸುರೇಶ್ ಅಂಬ್ಲಿ ಇದ್ದರು.

ಹೆಳವ ಸಮಾಜದ ರಾಜ್ಯ ಮಟ್ಟದ ಮುಖಂಡರ ಸಭೆಯಲ್ಲಿ ಬಿ.ಕೆ.ಹರಿಪ್ರಸಾದ್ ಅಭಿಮತ

‘ಹಿಂದುಳಿದ ಸಮುದಾಯಗಳಿಗೆ ತ್ರಿಶಂಕು ಸ್ಥಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾತಿ ಪದ್ಧತಿ ಮಾನವ ಹಕ್ಕುಗಳ ಉಲ್ಲಂಘನೆ. ಜಾತಿ ಹೆಸರಿನಲ್ಲಿ ದಬ್ಬಾಳಿಕೆ ಮತ್ತು ಶೋಷಣೆ ನಡೆಯುತ್ತಿದೆ. ಧರ್ಮದ ಹೆಸರಿನ ಚೌಕಟ್ಟುಗಳೇ ಇದಕ್ಕೆ ಕಾರಣ. ಇದೆಲ್ಲದರಿಂದ ಹಿಂದುಳಿದ ಸಮುದಾಯಗಳು ತ್ರಿಶಂಕು ಸ್ಥಿತಿಯಲ್ಲಿವೆ’ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದರು.

ನಗರದಲ್ಲಿ ಶುಕ್ರವಾರ ನಡೆದ ಅಖಿಲ ಕರ್ನಾಟಕ ಹೆಳವ ಸಮಾಜದ ರಾಜ್ಯ ಮಟ್ಟದ ಮುಖಂಡರ ಸಭೆ ಮತ್ತು ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಅವಕಾಶ ಸಿಗಬೇಕು. ಸಂವಿಧಾನ ಬಹು ಸಂಖ್ಯಾತರಿಗೆ ಮೀಸಲು ಅಲ್ಲ. ಎಲ್ಲ ವರ್ಗದ ಜನರಿಗೂ ಅವಕಾಶವಿದೆ. ಈ ಅವಕಾಶ ಮತ್ತು ಹಕ್ಕುಗಳನ್ನು ಪಡೆದುಕೊಳ್ಳಲು ಒಗ್ಗಟ್ಟಿನಿಂದ ಹೋರಾಟ ನಡೆಸಬೇಕು’ ಎಂದು ಸಲಹೆ ನೀಡಿದರು.

‘ನಿಮಗೆ ಸಹಾಯ ಮಾಡುವ ಪಕ್ಷಕ್ಕೆ ಮತ ಹಾಕಿ. ಆಗ ಜನಪ್ರತಿನಿಧಿಗಳಿಗೆ ನಮ್ಮ ಶಕ್ತಿ ಏನೆಂಬುದು ಗೊತ್ತಾಗುತ್ತದೆ. ಹಿಂದುಳಿದ ವರ್ಗಕ್ಕೆ ರಾಜಕೀಯ ಮೀಸಲಾತಿ ಇಲ್ಲ. ಸಾಕಷ್ಟು ಸವಾಲುಗಳನ್ನು ಹಿಂದುಳಿದ ವರ್ಗಗಳು ಎದುರಿಸಬೇಕಾಗಿದೆ’ ಎಂದು ಹೇಳಿದರು.

ಅಖಿಲ ಕರ್ನಾಟಕ ಹೆಳವ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ಎಮ್. ನಾಗರಾಜ್, ‘ಹೆಳವ ಸಮುದಾಯ ಅಕ್ಷರ ಜ್ಞಾನವಿಲ್ಲದಿದ್ದರೂ ಮೌಖಿಕವಾಗಿಯೇ ತಮ್ಮ ವಿಶಿಷ್ಟ ಕಲಾ ನೈಪುಣ್ಯದಿಂದ 500 ರಿಂದ 600 ವರ್ಷದ ವಂಶಾವಳಿ ಹೇಳುತ್ತದೆ. ಹೆಳವರು ಉಳಿದವರ ಕುಲದ ಕಥೆ ಹೇಳಿದರು, ಇತಿಹಾಸ ಕಟ್ಟಿಕೊಟ್ಟರು. ಆದರೆ, ತಮ್ಮ ಇತಿಹಾಸವನ್ನು ಬರೆದಿಡಲಿಲ್ಲ, ತಮ್ಮ ಹಕ್ಕುಗಳಿಗಾಗಿ ಆಗ್ರಹಿಸಲಿಲ್ಲ. ಹೀಗಾಗಿ, ಸರ್ಕಾರದ ಯಾವುದೇ ಸೌಲಭ್ಯಗಳು ಹೆಳವ ಸಮುದಾಯಕ್ಕೆ ಸಿಗುತ್ತಿಲ್ಲ’ ಎಂದು ಹೇಳಿದರು.

ಹೆಳವ ಸಮಾಜದ ಗುರು ಪೀಠಾಧ್ಯಕ್ಷ ಬಸವ ಭೃಂಗೇಶ್ವರಸ್ವಾಮಿ, ಸಿದ್ದಪ್ಪನಕಟ್ಟೆ ಮಾವಿನಬಾವಿಯ ಬಸವರಾಜ ಗುರೂಜಿ ಅವರು ಆಶೀರ್ವಚನ ನೀಡಿದರು.

ದಾರ್ಶನಿಕರ ಚಿತ್ರಗಳಿಗೆ ಹೆಳವ ಸಮಾಜದ ಗುರು ಪೀಠಾಧ್ಯಕ್ಷ ಬಸವ ಭೃಂಗೇಶ್ವರಸ್ವಾಮಿ ಪುಷ್ಪ ನಮನ ಸಲ್ಲಿಸಿದರು. ಎಂ. ನಾಗರಾಜ್, ಬಿ.ಕೆ.ಹರಿಪ್ರಸಾದ್, ಬಸವರಾಜ ಗುರೂಜಿ, ಕರ್ನಾಟಕ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಅಧ್ಯಕ್ಷ ಎಂ.ಸಿ. ವೇಣುಗೋಪಾಲ್, ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ, ಕೆ.ಆರ್. ನಿರಂಜನ್, ಕರ್ನಾಟಕ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಖಜಾಂಚಿ ಎಂ.ಎ. ಮಂಜುನಾಥ್ ಇದ್ದರು –ಪ್ರಜಾವಾಣಿ ಚಿತ್ರ

ಶಾಸಕರ ವೇತನ ಹೆಚ್ಚಳ: ಎಐಡಿವೈಒ ವಿರೋಧ

ಬೆಂಗಳೂರು: ‘ಶಾಸಕರು, ಸಚಿವರು ಮತ್ತು ಸಚೇತಕರ ಮಾಸಿಕ ವೇತನವನ್ನು ಹೆಚ್ಚಿಸಿಕೊಂಡಿರುವುದು ಖಂಡನೀಯ’ ಎಂದು ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ) ತಿಳಿಸಿವೆ.

‘ಜನರ ಸಮಸ್ಯೆಗಳ ನಿವಾರಣೆಗೆ ಹಣಕಾಸಿನ ಕೊರತೆ ಎಂದು ಸಬೂಬು ನೀಡುವ ಸರ್ಕಾರ, ಈ ವಿಷಯದಲ್ಲಿ ಮಾತ್ರ ಜಾಣ ಮೌನ ವಹಿಸಿದೆ’ ಎಂದು ಹೇಳಿದೆ.

‘ವಿಧಾನಸಭೆಯಲ್ಲಿ ಯಾವುದೇ ಚರ್ಚೆಗಳಿಲ್ಲದೆಯೇ ಶಾಸಕರು, ಸಚಿವರು ಮತ್ತು ಸಚೇತಕರ ವೇತನ, ಭತ್ಯೆ ಮತ್ತು ಸೌಲಭ್ಯಗಳನ್ನು ಶೇಕಡಾ 50ರಿಂದ 60ರಷ್ಟು ಹೆಚ್ಚಿಸುವ ಮಸೂದೆಯನ್ನು ಅಂಗೀಕರಿಸಲಾಗಿದೆ. ಪ್ರತಿನಿತ್ಯ ಜನಜೀವನಕ್ಕೆ ಸಂಬಂಧವೇ ಇಲ್ಲದ ಕ್ಷುಲ್ಲಕ ವಿಷಯಗಳಿಗೆ ಕಚ್ಚಾಡುವ ವಿರೋಧ ಪಕ್ಷಗಳು ಕೂಡ ಪಕ್ಷ ಭೇದ ಮರೆತು ಒಗ್ಗಟ್ಟಿನಿಂದ ಈ ತೀರ್ಮಾನಕ್ಕೆ ಸಮ್ಮತಿ ಸೂಚಿಸಿವೆ’ ಎಂದು ಹೇಳಿದೆ.

‘ಪ್ರಸ್ತುತ ಸಂಕಷ್ಟದ ಕಾಲದಲ್ಲಿ ತಮ್ಮ ವೆಚ್ಚ ಕಡಿತ ಮಾಡಿಕೊಂಡು ಸರಳವಾಗಿ ಬದುಕಿ ಜನಪ್ರತಿನಿಧಿಗಳು ಮಾದರಿಯಾಗಬೇಕು. ಆದರೆ ಇಡೀ ಜನ ಸಮುದಾಯ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ತಮ್ಮದೇ ವೇತನವನ್ನು ಹೆಚ್ಚಿಸಿಕೊಂಡಿರುವುದು ಅತ್ಯಂತ ನಾಚಿಕೆಗೇಡಿತನ ಮತ್ತು ಜನ ವಿರೋಧಿ ಕ್ರಮವಾಗಿದೆ’ ಎಂದು ಎಐಡಿವೈಓ ಆಗ್ರಹಿಸಿದೆ.

ಪಲ್ಸ್ ಪೋಲಿಯೊ ಅಭಿಯಾನ ನಾಳೆ

ಬೆಂಗಳೂರು: ಕೋವಿಡ್ ಮೂರನೇ ಅಲೆಯಿಂದಾಗಿ ಮುಂದೂಡಲ್ಪಟ್ಟಿದ್ದ ಪಲ್ಸ್ ಪೋಲಿಯೊ ಹನಿ ನೀಡುವ ಕಾರ್ಯಕ್ರಮವನ್ನು ಆರೋಗ್ಯ ಇಲಾಖೆಯು ಇದೇ ಭಾನುವಾರ ರಾಜ್ಯದಾದ್ಯಂತ ಹಮ್ಮಿಕೊಂಡಿದೆ.

ಕೇಂದ್ರ ಆರೋಗ್ಯ ಸಚಿವಾಲಯವು ಈ ಮೊದಲು 2022ರ ಜ.23 ರಂದು ಪೋಲಿಯೊ ಲಸಿಕೆ ವಿತರಣೆ ಅಭಿಯಾನ ಹಮ್ಮಿಕೊಳ್ಳಲು ಸೂಚಿಸಿತ್ತು. ಆದರೆ, ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದ್ದರಿಂದ ಈ ಅಭಿಯಾನವನ್ನು ಮುಂದೂಡಲಾಗಿತ್ತು.

‘ದೇಶವು ಪೋಲಿಯೊ ಮುಕ್ತವಾಗಿದ್ದರೂ ನೆರೆಯ ರಾಷ್ಟ್ರವಾದ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದಲ್ಲಿ 2020ರಲ್ಲಿ 140 ಪ್ರಕರಣಗಳು ವರದಿಯಾಗಿವೆ. ಹಾಗಾಗಿ, ಆ ದೇಶಗಳಿಂದ ಪೋಲಿಯೊ ಹರಡುವ ಸಾಧ್ಯತೆಯಿದೆ. ಆದ್ದರಿಂದ ಐದು ವರ್ಷದೊಳಗಿನ ಎಲ್ಲ ಮಕ್ಕಳೂ ಲಸಿಕೆ ಪಡೆದುಕೊಳ್ಳಬೇಕು. ಈ ಮೂಲಕ ಪೋಲಿಯೊ ವಿರುದ್ಧ ಹೋರಾಟದಲ್ಲಿ ವಿಜಯ ಸಾಧಿಸುವುದನ್ನು ಮುಂದುವರಿಸಲು ಕೈಜೋಡಿಸಬೇಕು. ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ನೋಡಿಕೊಳ್ಳಬೇಕು’ ಎಂದು ಆರೋಗ್ಯ ಇಲಾಖೆ ಮನವಿ ಮಾಡಿದೆ.

‘ರಾಜ್ಯದ ಎಲ್ಲ ಆಸ್ಪತ್ರೆಗಳು, ಗ್ರಾಮೀಣ ಪ್ರದೇಶ, ಗುಡ್ಡಗಾಡು ಪ್ರದೇಶ ಸೇರಿದಂತೆ ವಿವಿಧೆಡೆ ಲಸಿಕೆ ಹಾಕಲು ವ್ಯವಸ್ಥೆ ಮಾಡಲಾಗಿದೆ. ಕಳೆದ 10 ವರ್ಷಗಳಿಂದ ದೇಶದಲ್ಲಿ ಯಾವುದೇ ಪೋಲಿಯೊ ಪ್ರಕರಣ ವರದಿಯಾಗಿಲ್ಲ. ಪೋಲಿಯೊ ಹನಿಗೆ ಸಂಬಂಧಿಸಿದ ಮಾಹಿತಿಗೆ ಆರೋಗ್ಯ ಸಹಾಯವಾಣಿ 104ಕ್ಕೆ ಕೂಡ ಸಂಪರ್ಕಿಸಬಹುದು’ ಎಂದು ಇಲಾಖೆ ಹೇಳಿದೆ.

ನಿಧನ ವಾರ್ತೆ

ಪಿ.ಎಲ್.ನಂಜುಂಡಸ್ವಾಮಿ

ಮಳವಳ್ಳಿ (ಮಂಡ್ಯ): ನೀರಾವರಿ ಇಲಾಖೆಯ ನಿವೃತ್ತ ಮುಖ್ಯ ಎಂಜಿನಿಯರ್, ತಾಲ್ಲೂಕಿನ ಪೂರಿಗಾಲಿ ಗ್ರಾಮದ ನಿವಾಸಿ ಪಿ.ಎಲ್. ನಂಜುಂಡಸ್ವಾಮಿ(93) ವಯೋಸಹಜ ಅನಾರೋಗ್ಯದಿಂದ ಗುರುವಾರ ನಿಧನರಾದರು. ಬೆಂಗಳೂರಿನ ಡಾ.ಬಿ. ಆರ್.ಅಂಬೇಡ್ಕರ್ ಮಹಾವಿದ್ಯಾಲಯ, ಅಂಬೇಡ್ಕರ್ ತಂತ್ರಜ್ಞಾನ ಕಾಲೇಜು, ಪಿ.ಎಲ್.ಎನ್. ಪದವಿ ಪೂರ್ವ ಕಾಲೇಜು ಸ್ಥಾಪಿಸಿದ್ದರು. ನೀರಾವರಿ ಇಲಾಖೆಯ ಮುಖ್ಯ ಎಂಜಿನಿಯರ್ ಆಗಿದ್ದ ಅವರು ಮೈಸೂರಿನಿಂದ ಬೆಂಗಳೂರಿಗೆ ಕಾವೇರಿ ನೀರು ಸರಬರಾಜು ಯೋಜನೆ ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಅವರಿಗೆ ಮೂವರು ಪುತ್ರರು, ಪುತ್ರಿ, ಅಳಿಯ, ಕೆಎಎಸ್ ಅಧಿಕಾರಿ ಮಹದೇವ ಕಾಂಬ್ಳೆ ಇದ್ದಾರೆ. ಅಂತ್ಯಕ್ರಿಯೆಯು ಸ್ವ ಗ್ರಾಮ ಪೂರಿಗಾಲಿ ಗ್ರಾಮದ ಅವರ ಜಮೀನಿನಲ್ಲಿ ನಡೆಯಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಸರ್ವಜ್ಞನಗರ ವಿಭಾಗ, ಬೃ.ಬೆಂ.ಮ.ಪಾ, 7ನೇ ಮಹಡಿ, ಪಿ.ಯು.ಬಿ, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560 001.

ಸಂಖ್ಯೆ: ಕಾಪಾಅ/ಸನ/ಟೆಂಡರ್–12/ತಿದ್ದುಪಡಿ–2/2021–22 ದಿನಾಂಕ: 25.02.2022

ತಿದ್ದುಪಡಿ–02

ವಿಷಯ: ಟೆಂಡರ್‌ನಲ್ಲಿನ ಕಾಮಗಾರಿಯನ್ನು ತಿದ್ದುಪಡಿ ಮಾಡಿ ಪ್ರಕಟಿಸುವ ಬಗ್ಗೆ. **ಉಲ್ಲೇಖ:** 1. ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ಸನ/ಇ–ಪ್ರೊಕ್/ಟೆಂಡರ್/12/2021–22 ದಿನಾಂಕ: 31.01.2022.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸರ್ವಜ್ಞನಗರ ವಿಭಾಗದಲ್ಲಿ ದಿನಾಂಕ: 31.01.2022 ರಂದು ಕೆಳಕಂಡ ಕಾಮಗಾರಿಗಳಿಗೆ ಟೆಂಡರನ್ನು ಆಹ್ವಾನಿಸಲಾಗಿದ್ದು, ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ಪರಿಷ್ಕೃತ ದಿನಾಂಕವನ್ನು ತಿದ್ದುಪಡಿ ಮಾಡಲಾಗಿದೆ.

ಕ್ರ. ಸಂ.	ಕ್ರ.ಸಂ. ಟೆಂಡರ್ ಪ್ರಕಟಣೆಯ ಪ್ರಕಾರ	ಈಗಾಗಲೇ ನೀಡಿರುವ ದಿನಾಂಕ		ಪರಿಷ್ಕೃತ ದಿನಾಂಕ
1	21, 38, 44, 45	ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡುವ ದಿನಾಂಕ	05.02.2022	25.02.2022ರ ಸಂಜೆ 4:00 ಗಂಟೆಗೆ
		ಭರ್ತಿ ಮಾಡಿದ ಟೆಂಡರ್ ದಾಖಲೆಗಳಿಗೆ ಸಲ್ಲಿಸಲು ಕೊನೆಯ ದಿನಾಂಕ	14.02.2022	04.03.2022ರ ಸಂಜೆ 4:00 ಗಂಟೆಗೆ
		ಟೆಂಡರ್‌ಗಳ ತೆರೆಯುವ ದಿನಾಂಕ	15.02.2022	05.03.2022ರ ಸಂಜೆ 4:30 ಗಂಟೆಗೆ

ಸಹಿ/– ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆರೋಗ್ಯಾಧಿಕಾರಿರವರ ಕಛೇರಿ, ರಾಜರಾಜೇಶ್ವರಿ ನಗರ ವಲಯ, ಐಡಿಯಲ್ ಹೋಮ್ಸ್ ಬಡಾವಣೆ, ರಾಜರಾಜೇಶ್ವರಿನ ನಗರ, ಬೆಂಗಳೂರು–560098.

ಸಂಖ್ಯೆ: ಆ.ಅ/ರಾರಾನವ/ಪಿ.ಆರ್/232/2021–22 ದಿನಾಂಕ: 15.02.2022

ಪ್ರಕಟಣೆ

ಆರ್‌ಆರ್ ನಗರ ವ್ಯಾಪ್ತಿಯಲ್ಲಿ ಪುನರಾರಂಭಿಸುತ್ತಿರುವ ಜೆ.ಪಿ. ಪಾರ್ಕ್ ಡಯಾಲಿಸಿಸ್ ಕೇಂದ್ರದಲ್ಲಿ ಈ ಕೆಳಗಿನ ಪಟ್ಟಿಯಲ್ಲಿರುವ ಹುದ್ದೆಗಳಿಗೆ 01 ವರ್ಷದ ಅವಧಿಗೆ ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ **ವಾಕ್–ಇನ್ ಸಂದರ್ಶನದ** ಮೂಲಕ ನೇಮಕಾತಿ ಮಾಡಿಕೊಳ್ಳಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. (ಎಲ್ಲಾ ಹುದ್ದೆಗಳಿಗೆ ಸಂಪೂರ್ಣವಾಗಿ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಯನ್ನು ಆಯ್ಕೆಮಾಡಲಾಗುವುದು).

ಕ್ರ. ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ	ಒಟ್ಟು ಖಾಲಿ ಹುದ್ದೆಗಳು	ವೇತನ
1	Nephrologist	MBBS, MD with one year experience in Dialysis Centre.	1	1,20,000/-
2	On Duty Medical Officer	Only MBBS Degree. Registered in Medical Council. 2 years experience.	2	45,000/-
3	Manager	BBM / MBA 1 year experience	1	30,000/-
4	Dialysis Technicians	PUC trained Dialysis certification 1 year experience for technician 3-4 years experience for Senior technician	10	20,000/- for Technician and 30,000/- for Senior Technician
5	Dietician	M.Sc. Nutrition 2-3 years experience	2	30,000/-
6	Hospital Attendant	10th Standard	6	12,500/-

ಅರ್ಹತಾ ಮಾನದಂಡಗಳು:

1. **ವಯೋಮಿತಿ:** ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳು ತುಂಬಿರಬೇಕು ಹಾಗೂ 50 ವರ್ಷ ವಯೋಮಿತಿಯನ್ನು ಮೀರಿರಬಾರದು.
2. ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ.
3. ಅಭ್ಯರ್ಥಿಗಳು “ಜೆ.ಪಿ. ಪಾರ್ಕ್” ಆಸ್ಪತ್ರೆಯ ಸುತ್ತಮುತ್ತ 3 ಕಿಲೋ ಮೀಟರ್ ವಿಸ್ತರಣದಲ್ಲಿ ವಾಸಿಸುತ್ತಿರುವವರಿಗೆ ಆದ್ಯತೆ ನೀಡಲಾಗುವುದು.

ಆರ್ ಆರ್ ನಗರ ಆರೋಗ್ಯಾಧಿಕಾರಿಗಳ ಕಛೇರಿಗೆ ಬೆಳಗ್ಗೆ 11:00 ರಿಂದ ಸಂಜೆ 4:00ರ ವರೆಗೂ ಅರ್ಜಿ ಮತ್ತು ಮೂಲ ದಾಖಲಾತಿಗಳೊಂದಿಗೆ ವಾಕ್–ಇನ್ ಸಂದರ್ಶನಕ್ಕೆ ಭಾಗವಹಿಸಲು ಸೂಚಿಸಲಾಗಿದೆ. ಆಯ್ಕೆಗೊಂಡ ಅಭ್ಯರ್ಥಿಯನ್ನು 01 ವರ್ಷದ ಅವಧಿಗೆ ಸಂಪೂರ್ಣ ಗುತ್ತಿಗೆ ಆಧಾರದ ಒಡಂಬಡಿಕೆ ಮಾಡಿಕೊಂಡು ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗುವುದು.

ವಾಕ್–ಇನ್ ಸಂದರ್ಶನ ನಡೆಯುವ ದಿನಾಂಕ: **28.02.2022 @ 11:00,** ಸ್ಥಳ: **ಆರೋಗ್ಯಾಧಿಕಾರಿರವರ ಕಛೇರಿ, ರಾಜರಾಜೇಶ್ವರಿ ನಗರ ವಲಯ, ಐಡಿಯಲ್ ಹೋಮ್ಸ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು–560098.** ಇ–ಮೇಲ್: **horrnagar@gmail.com**

ಸಹಿ/– ಆರೋಗ್ಯಾಧಿಕಾರಿ, ರಾಜರಾಜೇಶ್ವರಿ ನಗರ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101 ದೂರವಾಣಿ ಸಂಖ್ಯೆ: ಕಛೇರಿ:08156–270427 ಫ್ಯಾಕ್ಸ್: 08156–270427 ಇ–ಮೇಲ್: eemidcbpura@gmail.com

ಸಂ.:ಕಾಸಬ/ಯೋ.ಶಾ/ಸ.ಇಂ–1/ಟೆಂಡರ್ ಪ್ರಕಟಣೆ ಸಂಖ್ಯೆ:16/417/2021–22 ದಿನಾಂಕ:23.02.2022

ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಅಡಿಯಲ್ಲಿನ ಟೆಂಡರ್ ಪ್ರಕಟಣೆ ಸಂಖ್ಯೆ: 16/2021–22 ದಿನಾಂಕ: 21.02.2022 ಭಾಗ–1: ಅಲ್ಪಾವಧಿ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನ–ಕೆಡಬ್ಲ್ಯೂ–2

1. ಇ–ಪ್ರೊಕ್ಯೂರ್‌ಮೆಂಟ್ ಅನ್ವಯ ಕಾಮಗಾರಿಗೆ ಟೆಂಡರ್ ಅನ್ನು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಚಿಕ್ಕಬಳ್ಳಾಪುರರವರು ಟೆಂಡರ್ ಕರೆಯಲಾಗಿದ್ದು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(viz.,https://eproc.karnataka.gov.in)** ರಲ್ಲಿ ಟೆಂಡರ್‌ಗಳನ್ನು ಒಂದು ಕವರ್ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. (1) **ಕಾಮಗಾರಿಯ ಹೆಸರು:** ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕಿನ ಮರಿಮಾಕಲಹಳ್ಳಿ ಗ್ರಾಮದ ಬಳಿ ದೊಡ್ಡಹಳ್ಳಕ್ಕೆ ಸೇತುವೆ ನಿರ್ಮಾಣ ಕಾಮಗಾರಿ. **ಟೆಂಡರ್ ಫಾರಂನ ಮಾದರಿ:** ಕೆಡಬ್ಲ್ಯೂ–2. ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 50.00. ಇ.ಎಂ.ಡಿ. 100000.00 ಟೆಂಡರ್ ಫಾರಂ ಬೆಲೆ: **ಇ–ಪ್ರೊಕ್ಯೂರ್‌ಮೆಂಟ್ ದರದಂತೆ.** ಕಾಲಾವಧಿ (ಮಳೆಗಾಲವು ಸೇರಿ): **06 ತಿಂಗಳು.** ಗುತ್ತಿಗೆದಾರರ ದರ್ಜೆ: **1 ಮತ್ತು 2ನೇ ದರ್ಜೆ ಮೇಲ್ಪಟ್ಟು.** (1) ಸದರಿ ಟೆಂಡರ್‌ನಲ್ಲಿ ಕರೆದಿರುವ ಕಾಮಗಾರಿಗೆ ಸಂಬಂಧಿಸಿದ ಇಎಂಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿರುವ ಯಾವುದಾದರೊಂದು ರೂಪದಲ್ಲಿ ಟೆಂಡರ್ ಊರ್ಜಿತ ಅವಧಿಯನ್ನು ಬಿಟ್ಟು ಹೆಚ್ಚುವರಿಯಾಗಿ 45 ದಿನಗಳನ್ನು ಒಳಗೊಂಡಂತೆ ಸಲ್ಲಿಸಬೇಕಾಗಿರುತ್ತದೆ. (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(viz.,https://eproc.karnataka.gov.in)** ಗೆ **ದಿನಾಂಕ: 14.03.2022ರಂದು ಸಂಜೆ 16.00 ಗಂಟೆವರೆಗೆ** ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಕೆಲಸ ನಿರ್ವಹಿಸಿದ ಬಗ್ಗೆ ಅನುಭವ ಕೆಲಸ ಅರ್ಹತೆ ಬಗ್ಗೆ ಇತ್ಯಾದಿ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಟೆಂಡರ್ ಮೌಲ್ಯಮಾಪನ ಸಮಯದಲ್ಲಿ ಪರಿಶೀಲನೆಗೆ ಸಲ್ಲಿಸತಕ್ಕದ್ದು. (3) ಭರ್ತಿ ಮಾಡಿದ ತಾಂತ್ರಿಕ ಬಿಡ್‌ನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **ದಿನಾಂಕ:17.03.2022ರಂದು** ತೆರೆಯಲಾಗುವುದು. (4) ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ396/ಎಂ.ಸಿ.ಎ/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಉಪನಿರ್ದೇಶಕರ ಕಛೇರಿ, ನಗರ ಜಿಲ್ಲಾ ಕೇಂದ್ರ ಗ್ರಂಥಾಲಯ, ರಾಜಾಜಿನಗರ, ಬೆಂಗಳೂರು–560 010. ದೂರವಾಣಿ: 080–23127376, ಇ–ಮೇಲ್: udc_library@yahoo.in

ಸಂಖ್ಯೆ: ನ.ಜಿ.ಕೇ.ಗ್ರಂ/ಬೆಂ/ಲೆಪವಿ/ಪುಸಾಕೆ/11/1679/2021–22 ದಿನಾಂಕ: 25.02.2022

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2021–22ನೇ ಸಾಲಿಗೆ ನಗರ ಜಿಲ್ಲಾ ಕೇಂದ್ರ ಗ್ರಂಥಾಲಯ, ರಾಜಾಜಿನಗರ, ಬೆಂಗಳೂರು ಈ ಕಛೇರಿ ಮಸ್ತಕ ಖರೀದಿ ವಿಭಾಗದಲ್ಲಿ ಖರೀದಿಸಿದ ಪುಸ್ತಕಗಳು ಹಾಗೂ ಇತರೆ ಸಾಮಾಗ್ರಿಗಳನ್ನು ಶಾಖೆ, ಗ್ರಾಮ ಪಂಚಾಯಿತಿ, ಕೊಳಚೆ, ಅಲೆಮಾರಿ ಸಮುದಾಯ ಗ್ರಂಥಾಲಯಗಳಿಗೆ TATA-407/709 ವಾಹನದಲ್ಲಿ ಸಾಗಾಣಿಕೆ ಮಾಡಲು ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಮರು ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಎರಡು ವರ್ಷಗಳ ಅನುಭವವುಳ್ಳ ನೊಂದಾಯಿತ ಸಂಸ್ಥೆಯವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಬಹುದು. ಟೆಂಡರ್‌ಗಿಟ್ಟ ಅಂದಾಜು ಮೊತ್ತ: **ರೂ. 10.00 ಲಕ್ಷ** (ರೂಪಾಯಿ ಹತ್ತು ಲಕ್ಷ ಮಾತ್ರ) ಇ.ಎಂ.ಡಿ ಮೊತ್ತ: **ರೂ. 20,000/–** (ರೂಪಾಯಿ ಇಪ್ಪತ್ತು ಸಾವಿರ ಮಾತ್ರ) ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಕರ್ನಾಟಕ ಸರ್ಕಾರದ https://eproc.karnataka.gov.in ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ **ದಿನಾಂಕ: 04.03.2022 ಸಮಯ ಸಂಜೆ 4:00 ಗಂಟೆ.** ತಾಂತ್ರಿಕ ಲಕೋಟೆಯನ್ನು **ದಿನಾಂಕ: 07.03.2022ರ ಸಂಜೆ 4:30 ಗಂಟೆಗೆ** ತೆರೆಯಲಾಗುವುದು. ಟೆಂಡರ್‌ದಾರರು ಹೆಚ್ಚಿನ ವಿವರಗಳನ್ನು ಈ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯುವುದು.

ಸಹಿ/– ಉಪನಿರ್ದೇಶಕರು,
ವಾಸಾಸಂಇ/ಬೆಂ.ನ/ಜಗದಾಳೆ ಅಡ್ವರ್ಟೈಸಿಂಗ್/3533/2021–22 ನಗರ ಜಿಲ್ಲಾ ಕೇಂದ್ರ ಗ್ರಂಥಾಲಯ, ಬೆಂಗಳೂರು.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

IN THE COURT OF THE 10th ADDL. DISTRICT AND SESSION JUDGE AT BANGALORE RURAL, BANGALORE.

Com. O.S. No.101/2020

BETWEEN: State Bank of India
Nelamangala Branch, Nelamangala Taluk, Bangalore Rural District. .....**PLAINTIFF**
AND M/s Suneetha Foods ....DEPENDENTS

Summons to the Defendants under order V rule 20(1A) and (1-A) of the Code of Civil Procedure

To : Defendant: M/s Suneetha Foods
Represented by its proprietor,
Sri. Venkataswamy Boogu S/o Bikshalu Boogu, Aged about 41 years, No.134,1st cross, Byraveshwara Layout, Nelamangala Town, Bangalore Rural District -562123

Whereas, the above plaintiff bank has instituted suit against you for recovery of sum of Rs.**13,71,769.00** (Rupees Thirteen Lakhs Seventy One thousand and Seven hundred and Sixty Nine only) together with the court costs, current and future interest at contractual rate of interest of 9.5% per annum from date of suit till date of payment. You are hereby called upon to appear before this court in person or by advocate on the 16.03.2022 at 11.00 AM in the forenoon to defend yourself, in Default of your appearance on the day mentioned above the suit will be heard and determined in your absence. Given under my hand and seal of this court, this the 23rd day of February 2022.

By order of the Court,
sign/- Sheristedar,

Advocate for Petitioner:
Mohamed Afroze Ahamed
Opp. State Bank of India, M.G. Road, Tumkur.

IN THE COURT OF THE XCI ADDL CITY CIVIL AND SESSIONS JUDGE AND SPECIAL JUDGE FOR KPIDFE ACT AT BENGALURU.

Misc No. 430/2020

BETWEEN

The Competent Authority
For M/S TGS Construction Pvt Ltd
Assistant Commissioner/
Bengaluru South sub division
Kandaya Bhavana, 2nd Floor,
Bengaluru.-560009. ...Petitioner

AND

M/S TGS Constructions Pvt Ltd
And others ...Respondents

Notice to Respondents No. 1 and 2

1. M/s TGS Construction Pvt Ltd
Represented by its Managing Director
Smt. Mandeep Kaur
No.577/B, II Floor, Outer Ring Road
Teachers Colony Koramangala
Near Silk Board, Bengaluru-560034.

2. Smt. Mandeep Kaur W/o Sachin Naik
Aged Major
No.577/B, II Floor, Outer Ring Road
Teachers Colony Koramangala
Near Silk Board, Bengaluru-560068.

Whereas, the Petitioner has filed the above petition under section 5(2) of the KPIDFE Act 2004 against Respondents.

The Respondent No. 1 and 2 are hereby issued show cause notice u/s 12(1) of KPIDFE Act 2004, to appear in court of the XCI Addl City Civil & Sessions Judge (CCH-92) at Bengaluru, in person or by a pleader duly instructed and able to answer all material questions relating to above petitions on **05-03-2022** at 11.00 ‘O’ Clock in the forenoon.

Take notice that in default of your appearance on the date above mentioned, the petition will be heard and determined in your absence.

Given under my hand and seal of the Court this day 19th February 2022.

Sd/-
Smt. Shantha Mullur
Special Public Prosecutor

By order of the Court
Assistant Registrar
City Civil Court
Bengaluru

DIPR/DDU/3519/AKAR/2021-22

IN THE COURT OF THE XCI ADDL CITY CIVIL AND SESSIONS JUDGE AND SPECIAL JUDGE FOR KPIDFE ACT AT BENGALURU.

Misc No. 07/2020

BETWEEN

The Competent Authority,
For M/s Tiforp Trading Services Pvt Ltd.,
Assistant Commissioner,
Bengaluru South sub-division,
Bengaluru, Kandaya Bhavana,
K. G. Road, Bengaluru-560009

AND

1. M/s Tiforp Trading Services Pvt Ltd.,
and others

Notice to Respondents No. 1 and 2

1. M/s Tiforp Trading Services Pvt Ltd.,
Having its office at RSP Arcade,
No.1253, 2nd Floor, 25th ‘A’ Main Cross Road,
9th Block, Jayanagar,
Bengaluru-560 011.
Represented by its Director Manjunath Balraj.

2. Habib Ullah Sheriff,
Aged about 41 years,
S/o Rahamathullah Sheriff,
R/at No. 253, New No.9, 8th ‘A’ Cross,
4th Main Road, 1st Block, Byrasandra,
Jayanagar, Bengaluru-560 011.

Whereas, the Petitioner has filed the above petition under section 5(2) of the KPIDFE Act 2004 against Respondents.

The Respondent No. 1 and 2 are hereby issued show cause notice u/s 12(1) of KPIDFE Act 2004, to appear in court of the XCI Addl City Civil & Sessions Judge (CCH-92) at Bengaluru, in person or by a pleader duly instructed and able to answer all material questions relating to above petition on **07-03-2022** at 11.00 ‘O’ Clock in the forenoon.

Take notice that in default of your appearance on the date above mentioned, the petition will be heard and determined in your absence.

Given under my hand and seal of the Court this day 19th February 2022.

Sd/-
Smt. Shantha Mullur
Special Public Prosecutor

By order of the Court
Assistant Registrar
City Civil Court
Bengaluru

DIPR/DDU/3522/AKAR/2021-22

ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರ

ಮಹಾನಗರ ಆಯುಕ್ತರವರ ಕಛೇರಿ, ನಂ.1002, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052. ದೂರವಾಣಿ ಸಂಖ್ಯೆ: 080–22263479

ಸಂಖ್ಯೆ : STRRPA/TP/ಭೂ.ಪ/65/2021–22 ದಿನಾಂಕ: 25.02.2022

“ಪ್ರಕಟಣೆ”

ಉಪನಗರ ವರ್ತುಲ ರಸ್ತೆ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಈ ಕೆಳಕಂಡ ಅರ್ಜಿದಾರರು ಪ್ರಸ್ತಾಪಿತ ಪ್ರದೇಶದಲ್ಲಿ ಶೈಕ್ಷಣಿಕ ಉದ್ದೇಶಕ್ಕೆ ಭೂಪರಿವರ್ತನೆ ಮಾಡಲು ಅಭಿಪ್ರಾಯ ಕೋರಿರುತ್ತಾರೆ. ಸದರಿ ಜಮೀನು ಅನುಮೋದಿತ ಮಧ್ಯಂತರ ಮಹಾಯೋಜನೆ ನಕ್ಷೆಯಂತೆ ಕೃಷಿ ವಲಯದಲ್ಲಿದ್ದು, ವಲಯ ನಿಯಮಾವಳಿಗಳಂತೆ ಕೃಷಿ ವಲಯದಲ್ಲಿ ವಿಶೇಷ ಸಂದರ್ಭದಲ್ಲಿ ಶೈಕ್ಷಣಿಕ ಉದ್ದೇಶಕ್ಕೆ ಅನುಮತಿ ನೀಡಲು ಅವಕಾಶ ಇದ್ದು, ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು, ಹೋಬಳಿ, ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಅರ್ಜಿದಾರರು ಕೋರಿರುವ ಭೂಉಪಯೋಗ
ಶ್ರೀಮತಿ ನಾರಾಯಣಮ್ಮ ಕೋಂ ಮುನಿಸ್ವಾಮಿ	ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಗಂಗವಾರ ಚೌಡಪ್ಪನಹಳ್ಳಿ	238/1	0–26	ವ್ಯವಸಾಯ	ಶೈಕ್ಷಣಿಕ
ಶ್ರೀಮತಿ ಮುನಿತಾಯಮ್ಮ ಕೋಂ ಲೇಟ್ ವೆಂಕಟಗಿರಿಯಪ್ಪ	ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಗಂಗವಾರ ಚೌಡಪ್ಪನಹಳ್ಳಿ	238/2	0–27	ವ್ಯವಸಾಯ	ಶೈಕ್ಷಣಿಕ
ಶ್ರೀ ಎಂ.ಲೋಕೇಶ್ ಬಿನ್ ಮುನಿಯಪ್ಪ	ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಗಂಗವಾರ ಚೌಡಪ್ಪನಹಳ್ಳಿ	238/3	0–27	ವ್ಯವಸಾಯ	ಶೈಕ್ಷಣಿಕ
		258	2–00	ವ್ಯವಸಾಯ	ಶೈಕ್ಷಣಿಕ

ಸದರಿ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ ಹದಿನೈದು ದಿನದೊಳಗಾಗಿ ಲಿಖಿತವಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮುಗಿದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

DIPR/DDU/Zen/RO-3551/2021-22

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರದ ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿ ವಾಹನಗಳು ಶುಕ್ರವಾರ ಅಡ್ಡಾದಿಡ್ಡಿಯಾಗಿ ಸಂಚರಿಸಿದ್ದರಿಂದ ದಟ್ಟಣೆ ಉಂಟಾಯಿತು (ಎಡಚಿತ್ರ) ಬಿವಿಕೆ ಅಯ್ಯಂಗಾರ್ ರಸ್ತೆಯ ಪಾದಚಾರಿ ಮಾರ್ಗವನ್ನು ಅಗೆದಿರುವುದು – ಪ್ರಜಾವಾಣಿ ಚಿತ್ರಗಳು/ಎಂ.ಎಸ್.ಮಂಜುನಾಥ್

ಬಿ.ವಿ. ಅಯ್ಯಂಗಾರ್ ರಸ್ತೆಯಲ್ಲಿ ನಿತ್ಯದ ಗೋಳು • ಪಾದಚಾರಿ ಮಾರ್ಗ ಅತಿಕ್ರಮಣ

ಅಯ್ಯಂಗಾರ್ ರಸ್ತೆ: ತಪ್ಪದ ಸಂಚಾರ ಕಿರಿಕಿರಿ

• ಸಂತೋಷ ಜಿಗಳಿಕೊಪ್ಪ

ಪ್ರಯಾಣ ಪ್ರಯಾಸ

ಬೆಂಗಳೂರು: ಗುಂಡಿ ಬಿದ್ದ ರಸ್ತೆಗಳು... ನಿಧಾನಗತಿಯಲ್ಲಿ ಸಾಗಿರುವ ಕಾಮಗಾರಿ... ಕಿರಿದಾದ ರಸ್ತೆಯಲ್ಲಿ ಅಡ್ಡಾದಿಡ್ಡಿ ನಿಲ್ಲಿಸಿದ ವಾಹನಗಳು... ರಸ್ತೆ ಅವ್ಯವಸ್ಥೆ ಹಾಗೂ ಪಾದಚಾರಿ ಮಾರ್ಗದ ಒತ್ತುವರಿಯಿಂದ ಉಂಟಾದ ದಟ್ಟಣೆ. ಸಾಲುಗಟ್ಟಿ ನಿಂತ ವಾಹನಗಳು... ಪಾದಚಾರಿ ಮಾರ್ಗಗಳಲ್ಲಿ ನಡೆದಾಡಲು ಕಷ್ಟಪಡುವ ಜನ...

ನಗರದ ವಾಣಿಜ್ಯ ವಹಿವಾಟಿನ ಕೇಂದ್ರ ಸ್ಥಳಗಳಲ್ಲಿ ಒಂದಾದ ಬಿವಿಕೆ ಅಯ್ಯಂಗಾರ್ ರಸ್ತೆ ಹಾಗೂ ಒಳರಸ್ತೆಗಳ ಸ್ಥಿತಿ ಇದು. ನಿತ್ಯವೂ ಕೋಟ್ಯಂತರ ರೂಪಾಯಿ ವಹಿವಾಟು ನಡೆಯುವ ರಸ್ತೆಯು ಅವ್ಯವಸ್ಥೆ ಆಗರವಾಗಿದ್ದು, ಇದರಿಂದಾಗಿ ಮಾರುಕಟ್ಟೆಗೆ ಬಂದು ಹೋಗುವ ಜನ ಸಂಚಾರ ಕಿರಿಕಿರಿ ಅನುಭವಿಸುತ್ತಿದ್ದಾರೆ.

ಎಲೆಕ್ಟ್ರಿಕ್ ಉತ್ಪನ್ನ, ಬಟ್ಟೆಗಳು, ಸೀರೆಗಳು, ಮದುವೆ ಆಮಂತ್ರಣ ಪತ್ರಿಕೆ, ವಾಹನಗಳ ಬಿಡಿಭಾಗ ಸೇರಿದಂತೆ ಹಲವು ವಸ್ತುಗಳ ಮಾರಾಟ ಮಳಿಗೆಗಳು ಅಯ್ಯಂಗಾರ್ ರಸ್ತೆಯಲ್ಲಿವೆ. ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳ ಸಣ್ಣ ವ್ಯಾಪಾರಿಗಳು, ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಮಾರುಕಟ್ಟೆಗೆ ಬಂದು ಹೋಗುತ್ತಾರೆ. ಸದ್ಯದ ರಸ್ತೆ ಸ್ಥಿತಿ ನೋಡಿ ಅವರೆಲ್ಲ, ಸ್ಥಳೀಯ ಆಡಳಿತ ಮಂಡಳಿ ಹಾಗೂ ಜನಪ್ರತಿನಿಧಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಮೈಸೂರು ರಸ್ತೆಯಿಂದ ಕೆಂಪೇಗೌಡ ರಸ್ತೆಯವರೆಗೆ ಬಿವಿಕೆ ಅಯ್ಯಂಗಾರ್ ರಸ್ತೆ ವ್ಯಾಪಿಸಿದೆ. ಇದಕ್ಕೆ ಹೊಂದಿಕೊಂಡು ರಂಗಸ್ವಾಮಿ ಗುಡಿ ಬೀದಿ, ಕಿಲ್ಲಾರಿ ರಸ್ತೆ, ಹಳೇ ತಾಲ್ಲೂಕು ಕಚೇರಿ ರಸ್ತೆ, ಸುಲ್ತಾನ್ ಪೇಟೆ ಮುಖ್ಯರಸ್ತೆ, ಪೊಲೀಸ್ ರಸ್ತೆ ಹಾಗೂ ಪೂರ್ಣ ವೆಂಕಟರಾವ್ ರಸ್ತೆಗಳಿವೆ. ಕಿಲ್ಲಾರಿ ರಸ್ತೆಯಲ್ಲಿ ಹಲವು ತಿಂಗಳಿನಿಂದ ಕಾಮಗಾರಿ ನಡೆದಿದ್ದು, ಮುಗಿಯುವ ಲಕ್ಷಣವೇ ಗೋಚರಿಸುತ್ತಿಲ್ಲವೆಂದು ಸ್ಥಳೀಯರು ದೂರುತ್ತಿದ್ದಾರೆ.

'ನಗರದ ಇತರೆ ರಸ್ತೆಗಳಿಗೆ ಹೋಲಿಸಿದರೆ, ಅಯ್ಯಂಗಾರ್ ರಸ್ತೆಯಲ್ಲಿ ವಾಣಿಜ್ಯ ಚಟುವಟಿಕೆ ಹೆಚ್ಚು. ಅತೀ ಹೆಚ್ಚು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಭರಿಸುವ ವ್ಯಾಪಾರಿಗಳು ಇಲ್ಲಿದ್ದಾರೆ. ಆದರೆ, ಮೂಲ ಸೌಕರ್ಯ ಸಹ ನಮಗೆ ಸಿಗುತ್ತಿಲ್ಲ' ಎಂದು ಸಗಟು ಬಟ್ಟೆ ವ್ಯಾಪಾರಿ ಸುಖದೇವ್ ಹೇಳಿದರು.

'ಸ್ಮಾರ್ಟ್ ಸಿಟಿ ಹಾಗೂ ಟೆಂಡರ್ ಶ್ಯೂರ್ ಕಾಮಗಾರಿ ಹೆಸರಿನಲ್ಲಿ ಒಳ ರಸ್ತೆಗಳನ್ನು ಅಗೆಯಲಾಗಿದ್ದು, ಕಾಮಗಾರಿ ಮಾತ್ರ ಪೂರ್ಣಗೊಂಡಿಲ್ಲ. ಇದರಿಂದ ಜನರ ಓಡಾಟಕ್ಕೆ ತೊಂದರೆ ಆಗಿದ್ದು, ವ್ಯಾಪಾರದ ಮೇಲೂ ಹೊಡೆತ ಬಿದ್ದಿದೆ' ಎಂದರು.

ಎಲೆಕ್ಟ್ರಿಕ್ ಉತ್ಪನ್ನ ವ್ಯಾಪಾರಿ ರಾಜೇಂದ್ರ, 'ಅಯ್ಯಂಗಾರ್ ರಸ್ತೆಯ ಎರಡೂ ಬದಿಯಲ್ಲೂ ವಾಹನಗಳು ಸಂಚರಿಸುತ್ತವೆ. ರಸ್ತೆ ಚಿಕ್ಕದಾಗಿರುವುದರಿಂದ ವಾಹನಗಳ ಸಂಚಾರ ನಿಧಾನಗತಿಯಲ್ಲಿ ಇರುತ್ತದೆ. ಯಾರಾದರೂ ವಾಹನವನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಿದರೆ ದಟ್ಟಣೆ ಉಂಟಾಗಿ, ವಾಹನಗಳು ಸಾಲುಗಟ್ಟಿ ನಿಲ್ಲುವ ಸ್ಥಿತಿ ನಿರ್ಮಾಣವಾಗುತ್ತದೆ' ಎಂದೂ ತಿಳಿಸಿದರು.

'ಸಾಲು ಸಾಲು ಬಹುಮಹಡಿ ಕಟ್ಟಡಗಳು ಇಲ್ಲಿವೆ. ಒಳ ಚರಂಡಿ ವ್ಯವಸ್ಥೆ ಸಮರ್ಪಕವಾಗಿಲ್ಲ. ಕುಡಿಯುವ ನೀರಿಗೂ ಪರದಾಟವಿದೆ. ಸಾರ್ವಜನಿಕ ಶೌಚಾಲಯಗಳಿದ್ದರೂ ನಿರ್ವಹಣೆ ಕೊರತೆಯಿಂದ ಪ್ರಯೋಜನಕ್ಕೆ ಬರುತ್ತಿಲ್ಲ. ಈ ಬಗ್ಗೆ ದೂರು ನೀಡಿದರೂ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಂದ ಸ್ಪಂದನೆ ಸಿಗುತ್ತಿಲ್ಲ' ಎಂದೂ ಹೇಳಿದರು.

ಪಾದಚಾರಿ ಮಾರ್ಗ ಅತಿಕ್ರಮಣ: 'ನಿತ್ಯವೂ ಲಕ್ಷಾಂತರ ಮಂದಿ ಅಯ್ಯಂಗಾರ್ ರಸ್ತೆಗೆ ಬರುತ್ತಾರೆ. ಅದರಲ್ಲಿ ಪಾದಚಾರಿಗಳ ಸಂಖ್ಯೆ ಹೆಚ್ಚು. ಪಾದಚಾರಿ ಮಾರ್ಗಗಳ ಅತಿಕ್ರಮಣದಿಂದಾಗಿ ಅವರ ಓಡಾಟಕ್ಕೆ ತೊಂದರೆ ಉಂಟಾಗಿದೆ' ಎಂದು ಬಟ್ಟೆ ವ್ಯಾಪಾರಿ ಗಣಪತಿ ರಾವ್ ಹೇಳಿದರು.

'ಕೆಲವರು ಎಲ್ಲೆಂದರಲ್ಲಿ ತಾತ್ಕಾಲಿಕ ಮಳಿಗೆ ತೆರೆಯುತ್ತಾರೆ. ಜನರು ಓಡಾಡಲೂ ಜಾಗವಿಲ್ಲದಂತೆ ಮಾಡುತ್ತಾರೆ. ಅಂಥವರನ್ನು ಪ್ರಶ್ನಿಸಿದರೆ, ನಮ್ಮ ಜೊತೆಯೇ ಗಲಾಟೆ ಮಾಡುತ್ತಾರೆ. ಆಟೊ ಚಾಲಕರ ಹಾವಳಿಯೂ ಇದೆ. ಸಿಕ್ಕ ಸಿಕ್ಕಲ್ಲೇ ಆಟೊ ನಿಲ್ಲಿಸಿ, ದಟ್ಟಣೆಗೆ ಕಾರಣವಾಗುತ್ತಿದ್ದಾರೆ. ಇವರೆಲ್ಲರಿಂದ ಪೊಲೀಸರು 'ಮಾಮೂಲಿ' ವಸೂಲಿ ಮಾಡುತ್ತಿರುವ ದೂರುಗಳಿವೆ' ಎಂದೂ ಆರೋಪಿಸಿದರು.

'ದಂಡ ವಸೂಲಿಗಷ್ಟೇ ಪೊಲೀಸರು ಸೀಮಿತ'

'ಹಣದ ಸಮೇತವೇ ವ್ಯಾಪಾರಕ್ಕೆಂದು ಜನರು ಅಯ್ಯಂಗಾರ್ ರಸ್ತೆಗೆ ಬರುತ್ತಾರೆ. ಇದನ್ನು ತಿಳಿದಿರುವ ಸಂಚಾರ ಪೊಲೀಸರ ದಂಡ ವಸೂಲಿ ಜೋರಾಗಿರುತ್ತದೆ. ಹಾಳಾದ ರಸ್ತೆಯಲ್ಲಿ ಜನರು ಆಯತಪ್ಪಿ ಬಿದ್ದರೂ ಕ್ಯಾರೆ ಎನ್ನದ ಪೊಲೀಸರು, ತಮ್ಮ ಪಾಡಿಗೆ ದಂಡ ವಸೂಲಿ ಮಾಡಿಕೊಂಡು ಹೋಗುತ್ತಿದ್ದಾರೆ' ಎಂದು ವ್ಯಾಪಾರಿಗಳು ದೂರಿದರು.

'ದಟ್ಟಣೆ ಉಂಟಾಗಿ ವಾಹನಗಳು ಸಾಲುಗಟ್ಟಿ ನಿಂತರೂ ಪೊಲೀಸರು ಮೌನವಾಗಿರುತ್ತಾರೆ. ಅಡ್ಡಾದಿಡ್ಡಿ ವಾಹನ ನಿಲ್ಲಿಸುವವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ' ಎಂದೂ ಹೇಳಿದರು.

'ಸಂಡೆ ಮಾರ್ಕೆಟ್ ವೇಳೆ ಜನಜಂಗುಳಿ'

'ಬಿ.ವಿ.ಅಯ್ಯಂಗಾರ್ ರಸ್ತೆ ಹಾಗೂ ಸುತ್ತಮುತ್ತಲಿನ ರಸ್ತೆಯಲ್ಲಿ ಪ್ರತಿ ಭಾನುವಾರಕ್ಕೊಮ್ಮೆ ನಡೆಯುವ ಸಂಡೇ ಮಾರ್ಕೆಟ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಬರುತ್ತಿದ್ದರು. ಆದರೆ, ಕೋವಿಡ್ ಕಾರಣದಿಂದ ಕೆಲ ತಿಂಗಳಿನಿಂದ ಸಂಡೇ ಮಾರ್ಕೆಟ್ ಬಂದ್ ಮಾಡಲಾಗಿದೆ' ಎಂದು ವ್ಯಾಪಾರಿಗಳು ಹೇಳಿದರು.

'ಭಾನುವಾರ ಬೆಳಿಗ್ಗೆ ಅಲ್ಲಲ್ಲಿ ಅಂಗಡಿಗಳು ತಲೆ ಎತ್ತುತ್ತವೆ. ಮಧ್ಯಾಹ್ನದ ನಂತರ ಬಂದ್ ಆಗುತ್ತವೆ. ಇಂಥ ಸ್ಥಿತಿಯಲ್ಲೂ ಹೆಚ್ಚಿನ ಜನ ಮಾರುಕಟ್ಟೆಗೆ ಬಂದು ಹೋಗುತ್ತಾರೆ. ಈ ವೇಳೆ ದಟ್ಟಣೆ ಸಾಮಾನ್ಯ' ಎಂದೂ ತಿಳಿಸಿದರು.

'ವರದಕ್ಷಿಣೆ ರೂಪದ ಆಸ್ತಿಗಳೂ ಪಾಲುದಾರಿಕೆಗೆ ಅರ್ಹ'

ಬೆಂಗಳೂರು: 'ಹಿಂದೂ ಉತ್ತರಾಧಿಕಾರ ಕಾಯ್ದೆ ಅಡಿ ಮಗಳು ಆಸ್ತಿಯಲ್ಲಿ ಪಾಲು ಕೇಳುವಾಗ ಅಥವಾ ಆಸ್ತಿ ಪಾಲುದಾರಿಕೆ ಕೋರಿ ಕೋರ್ಟ್‌ನಲ್ಲಿ ದಾವೆ ಹೂಡಿದರೆ, ವರದಕ್ಷಿಣೆ ಸಮಯದಲ್ಲಿ ನೀಡಲಾದ ಆಸ್ತಿ ವಿವರಗಳನ್ನೂ ದಾವೆಯಲ್ಲಿ ಸೇರಿಸಬೇಕು' ಎಂದು ಹೈಕೋರ್ಟ್ ತೀರ್ಪು ನೀಡಿದೆ.

ಬೆಂಗಳೂರಿನ ಹೇಮಲತಾ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮಹತ್ವದ ತೀರ್ಪು ನೀಡಿದ್ದು, 'ಮಗಳು ವರದಕ್ಷಿಣೆ ರೂಪದಲ್ಲಿ ಆಸ್ತಿ ಪಡೆದಿದ್ದರೆ ಅದನ್ನು ಸಹಾ ಆಸ್ತಿ ಪಾಲುದಾರಿಕೆ ದಾವೆ ಹೂಡುವಾಗ ನಮೂದಿಸಬೇಕಾಗುತ್ತದೆ' ಎಂದು ಸ್ಪಷ್ಟಪಡಿಸಿದೆ.

'ಆಸ್ತಿಯನ್ನು ವರದಕ್ಷಿಣೆ ರೂಪದಲ್ಲಿ ಕೊಟ್ಟಿದ್ದೋ ಅಥವಾ ಸ್ವಂತವಾಗಿ ಖರೀದಿಸಿದ್ದೋ ಎಂಬುದನ್ನು ವಿಚಾರಣಾ ನ್ಯಾಯಾಲಯವೇ ನಿರ್ಧರಿಸಬೇಕು' ಎಂದು ನ್ಯಾಯಪೀಠ ತಿಳಿಸಿದೆ.

'ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ಅರ್ಜಿದಾರರು ಆಸ್ತಿ ಪಡೆದಿದ್ದರೆ ಅದನ್ನು ಆಸ್ತಿ ಪಾಲು ಮಾಡುವ ಸಂದರ್ಭದಲ್ಲಿ ಒಟ್ಟು ಆಸ್ತಿಯಾಗಿ ಪರಿಗಣಿಸಬೇಕಾಗುತ್ತದೆ. ಅದರಂತೆ ಅರ್ಜಿದಾರರ ಆಸ್ತಿಯನ್ನು ಕೂಡ ಪಾಲು ದಾವೆಯಲ್ಲಿ ಪರಿಗಣಿಸಬೇಕಾಗುತ್ತದೆ. ಆದರೆ, ಆಸ್ತಿಯನ್ನು ಸ್ವಂತವಾಗಿ ಖರೀದಿಸಿದ್ದರೆ ಅದನ್ನು ಪಾಲು ದಾವೆಯಲ್ಲಿ ಪರಿಗಣಿಸುವ ಅಗತ್ಯವಿಲ್ಲ' ಎಂದು ನ್ಯಾಯಪೀಠ ಹೇಳಿದೆ.

'ನ್ಯಾಯಾಧೀಶರ ಮೇಲೆ ಕ್ರಮ ಏಕಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಕಾರಿ ಹೇಳಿಕೆ ಹಾಕಿದ ಆರೋಪದ ಮೇಲೆ ನಟ ಚೇತನ್‌ಕುಮಾರ್ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದ್ದು, ಅಂಥಹದೇ ಆಪಾದನೆ ಎದುರಿಸುತ್ತಿರುವ ಜಿಲ್ಲಾ ನ್ಯಾಯಾಧೀಶರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಬಿಜೆಪಿ ಮುಖಂಡ ಬಿ.ಸೋಮಶೇಖರ್ ಆಗ್ರಹಿಸಿದ್ದಾರೆ.

'ಕಾನೂನು ಎಲ್ಲರಿಗೂ ಒಂದೇ ರೀತಿಯಲ್ಲಿ ಅನ್ವಯಿಸಬೇಕಲ್ಲವೇ, ಅದನ್ನು ಬಿಟ್ಟು ನ್ಯಾಯಾಧೀಶರನ್ನು ಕೇವಲ ವರ್ಗಾವಣೆ ಮಾಡಿರುವುದು ನ್ಯಾಯವೇ' ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಪ್ರಶ್ನಿಸಿದ್ದಾರೆ.

'ಚೇತನ್ ಕುಮಾರ್ ವಿರುದ್ಧ ಐಪಿಸಿ ಸೆಕ್ಷನ್ 505(2)(ಜಾತಿ, ಧರ್ಮ ಮತ್ತು ಗುಂಪುಗಳ ನಡುವೆ ದ್ವೇಷ ಉಂಟು ಮಾಡುವುದು) ಹಾಗೂ ಸೆಕ್ಷನ್ 504 (ಅಪರಾಧ ಪ್ರಚೋದಿಸುವುದು) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ಸೆಕ್ಷನ್‌ಗಳು ಜಿಲ್ಲಾ ನ್ಯಾಯಾಧೀಶರ ಆಪಾದಿತ ವರ್ತನೆಗೂ ಅನ್ವಯ ವಾಗುತ್ತದೆ. ಈ ಇಬ್ಬರ ನಡುವೆ ತಾರತಮ್ಯ ಏಕೆ' ಎಂದು ಅವರು ಕೇಳಿದ್ದಾರೆ.

ಸೋಮಶೇಖರ್

'ರಾಯಚೂರು ಜಿಲ್ಲಾ ನ್ಯಾಯಾಧೀಶರಾಗಿದ್ದವರು ಜ.26 ರಂದು ಗಣರಾಜ್ಯೋತ್ಸವದ ಸಂದರ್ಭದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರ ತೆಗೆಸುವ ಮೂಲಕ ಅಗೌರವ ತೋರಿಸಿದ್ದಾರೆ ಎಂಬ ಅಪಾದನೆಯಿದೆ. ಇದನ್ನು ಇಡೀ ರಾಜ್ಯವೇ ಖಂಡಿಸಿದೆ.

ಈ ಪ್ರತಿಭಟನೆಗಳ ಪರಾಕಾಷ್ಠೆಯಾಗಿ ಸಾವಿರಾರು ಜನರು ಬೆಂಗಳೂರಿಗೂ ಬಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿ ಆಕ್ರೋಶ ತಿಳಿಸಿದ್ದಾರೆ. ಮನವಿ ಸ್ವೀಕರಿಸಿರುವ ಮುಖ್ಯಮಂತ್ರಿ ಅವರು ಸೂಕ್ತ ಕ್ರಮದ ಭರವಸೆ ನೀಡಿರುವುದು ಸ್ವಾಗತಾರ್ಹ. ಆದರೆ, ತಕ್ಷಣ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದ್ದಾರೆ.

ಗ್ರಾಮ ಭಾರತ ಪ್ರತಿಷ್ಠಾನ ಉದ್ಘಾಟನೆ ಸಮಾರಂಭದಲ್ಲಿ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರು ಪ್ರತಿಷ್ಠಾನದ ಪರಿಚಯ ಪತ್ರ ಬಿಡುಗಡೆ ಮಾಡಿದರು. ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಪ್ರಮೋದ ಹೆಗಡೆ, ಮಾಜಿ ಸಂಸದ ಸಿ.ನಾರಾಯಣಸ್ವಾಮಿ, ಪ್ರತಿಷ್ಠಾನದ ಗೌರವಾಧ್ಯಕ್ಷ ಗೊ.ರು. ಚನ್ನಬಸಪ್ಪ ಹಾಗೂ ಅಧ್ಯಕ್ಷ ಟಿ. ತಿಮ್ಮೇಗೌಡ ಇದ್ದಾರೆ –ಪ್ರಜಾವಾಣಿ ಚಿತ್ರ

'ಕಸ ನಿರ್ವಹಣೆ –ಜನರಿಗೂ ಇದೆ ಹೊಣೆ'

ನಿಯಮಗಳ ಕಟ್ಟುನಿಟ್ಟಿನ ಪಾಲನೆ: ನಿವೃತ್ತ ನ್ಯಾ.ಸುಭಾಷ್ ಬಿ. ಅಡಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸದ ಸಮಸ್ಯೆ ನಿವಾರಣೆಯ ಹೊಣೆ ಅಧಿಕಾರಿಗಳಿಗೆ ಸೀಮಿತವಲ್ಲ. ಕಸ ನಿರ್ವಹಣೆಯಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆಯೂ ಮುಖ್ಯ' ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ನೇಮಿಸಿರುವ 'ರಾಜ್ಯ ಮಟ್ಟದ ಕಸ ನಿರ್ವಹಣೆ ಉಸ್ತುವಾರಿ ಸಮಿತಿ'ಯ ಅಧ್ಯಕ್ಷ ನ್ಯಾ.ಸುಭಾಷ್ ಬಿ. ಅಡಿ ಹೇಳಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ 'ಕಸ ನಿರ್ವಹಣೆ ನಿಯಮಗಳು-2016' ಅನುಷ್ಠಾನ, ಕಸ ನಿರ್ವಹಣೆ, ಸಾಗಣೆ ಮತ್ತು ಸಂಸ್ಕರಣೆ ಪ್ರಕ್ರಿಯೆ ಸುಧಾರಣೆ ಕುರಿತು ಗುರುವಾರ ಏರ್ಪಡಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

'ನಾಗರಿಕರು ತಮ್ಮ ಜವಾಬ್ದಾರಿಯನ್ನು ಅರಿತು ಹಸಿ ಹಾಗೂ ಒಣ ಕಸವನ್ನು ಮೂಲದಲ್ಲೇ ವಿಂಗಡಣೆ ಮಾಡಿ ಪಾಲಿಕೆಗೆ ಕೊಡಬೇಕು. ನಗರದಲ್ಲಿ ಶೇ 40 ರಷ್ಟು ಕಸವು ಸಗಟು ಕಸ ಉತ್ಪಾದಕರಿಂದ ಬರುತ್ತಿದೆ. ಎಷ್ಟು ಪ್ರಮಾಣದಲ್ಲಿ ಸಗಟು ಕಸ ಉತ್ಪಾದನೆ ಆಗುತ್ತಿದೆ, ಅದರ ವಿಲೇವಾರಿಗೆ ಪಾಲಿಕೆಯಲ್ಲಿ ಎಷ್ಟು ಮಂದಿ ನೋಂದಣಿಯಾಗಿದ್ದಾರೆ, ಅದನ್ನು ಎಲ್ಲಿ ವಿಲೇವಾರಿ ಮಾಡಲಾಗುತ್ತಿದೆ ಎಂಬ ಬಗ್ಗೆಯೂ ಅಧಿಕಾರಿಗಳು ನಿಗಾ ಇಡಬೇಕು. ಕಸ ಉತ್ಪಾದನೆಯಾಗುವ ಸ್ಥಳಗಳ ಸಮೀಕ್ಷೆ ನಡೆಸಬೇಕು. ಒಟ್ಟು ಅಂಗಡಿಗಳು, ಅವುಗಳ ವಿಧ, ಅಪಾರ್ಟ್‌ಮೆಂಟ್ ಸಮುಚ್ಚಯಗಳ ಸಂಖ್ಯೆ, ಅವುಗಳಲ್ಲಿ ಸಂಗ್ರಹಣೆಯಾಗುವ ಕಸಕ್ಕೆ ಸಂಬಂಧಿಸಿದ ಮಾಹಿತಿ ಪಾಲಿಕೆಯಲ್ಲಿ ಲಭ್ಯವಿರಬೇಕು' ಎಂದರು.

'ಸಗಟು ಕಸ ಉತ್ಪಾದಕರ ಮೇಲೂ ಮಾರ್ಷಲ್‌ಗಳು ಕಣ್ಣಿಡಬೇಕು. ನಗರದಲ್ಲಿ ರಸ್ತೆ ಬದಿ, ಪಾದಚಾರಿ ಮಾರ್ಗ, ಖಾಸಗಿ ಸ್ಥಳಗಳಲ್ಲಿ ಕಸ ಬಿಸಾಡುವವರಿಗೆ ಕಟ್ಟುನಿಟ್ಟಾಗಿ ದಂಡ ವಿಧಿಸಬೇಕು. ಕಸವನ್ನು ಸರಿಯಾದ ಕ್ರಮದಲ್ಲಿ ನೀಡುವ ಬಗ್ಗೆ ಜಾಗೃತಿ ಮೂಡಿಸಬೇಕು. ಅವರು ಕಸವನ್ನು ಸರಿಯಾಗಿ ವಿಲೇವಾರಿ ಮಾಡದಿದ್ದರೆ ದಂಡ ವಿಧಿಸಬೇಕು' ಎಂದು ಸಲಹೆ ನೀಡಿದರು.

ಸಭೆಯಲ್ಲಿ ನಿವೃತ್ತ ನ್ಯಾ.ಸುಭಾಷ್ ಬಿ.ಅಡಿ ಮಾತನಾಡಿದರು. ಗೌರವ್ ಗುಪ್ತ ಇದ್ದಾರೆ

ಮುಖ್ಯ ಆಯುಕ್ತ ಗೌರವ್ ಗುಪ್ತ, 'ನಗರದಲ್ಲಿ ಕಸ ವಿಲೇವಾರಿಗೆ ತಳಮಟ್ಟದ ಯೋಜನೆ ರೂಪಿಸಬೇಕು. ಕಸ ನಿರ್ವಹಣೆ ನಿಯಮಗಳನ್ನು ಪಾಲಿಸವರಿಗೆ ಮುಲಾಜಿಲ್ಲದೇ ದಂಡವನ್ನು ವಿಧಿಸಬೇಕು. ಹಸಿ ಕಸ ಹಾಗೂ ಒಣ ಕಸವನ್ನು ವಿಂಗಡಿಸಿ ಕೊಡುವ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸಬೇಕು. ಜನರ ಸಹಭಾಗಿತ್ವ ಹೆಚ್ಚಿಸಲು ಆಯಾ ವಲಯದ ಜಂಟಿ ಆಯುಕ್ತರು ಕಾರ್ಯಕ್ರಮ ರೂಪಿಸಬೇಕು' ಎಂದು ಸೂಚಿಸಿದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿ ಶ್ರೀನಿವಾಸುಲು, 'ಖಾಲಿ ಸ್ಥಳಗಳಲ್ಲಿ ಕಸ ಬಿಸಾಡುವವರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಕಸ ಸಂಸ್ಕರಣಾ ಘಟಕಗಳ ಸುತ್ತ ಮೀಸಲು ವಲಯ ನಿರ್ಮಿಸಲು ಕ್ರಮ ಕೈಗೊಳ್ಳಬೇಕು' ಎಂದರು.

ಕಸ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತ ಹರೀಶ್ ಕುಮಾರ್, ಜಂಟಿ ಆಯುಕ್ತ ಸರ್ಫರಾಜ್ ಖಾನ್ ಉಪಸ್ಥಿತರಿದ್ದರು.

'ಕಸ ಸಂಸ್ಕರಣೆ–ಸ್ಥಳೀಯರಿಗೆ ಸಮಸ್ಯೆ ಆಗದಿರಲಿ'

'ನಗರದಲ್ಲಿರುವ ಕಸ ಸಂಸ್ಕರಣ ಘಟಕಗಳೆಲ್ಲವೂ ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು. ಅಲ್ಲಿ ಪರಿಸರದ ಸ್ವಚ್ಛತೆ ಕಾಪಾಡಲಾಗಿದೆಯೇ ಎಂಬುದನ್ನು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯವರು ಆಗಿಂದಾಗ್ಗೆ ಪರಿಶೀಲಿಸಬೇಕು. ಸುತ್ತಮುತ್ತಲಿನ ನೀರು, ಗಾಳಿ ಕಲುಷಿತಗೊಳ್ಳದಂತೆ ಎಚ್ಚರ ವಹಿಸಬೇಕು. ಕಸ ಸಂಸ್ಕರಣೆಯಿಂದ ಸ್ಥಳೀಯರಿಗೆ ಸಮಸ್ಯೆ ಆಗದಂತೆ ಬಿಬಿಎಂಪಿ ಮುನ್ನೆಚ್ಚರಿಕೆ ವಹಿಸಬೇಕು' ಎಂದು ನ್ಯಾ.ಸುಭಾಷ್ ಬಿ.ಅಡಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ತುರ್ತು ದುರಸ್ತಿಯ ವ್ಯಾಪ್ತಿಗೆ ಬಾರದ ಕಾಮಗಾರಿ: ನಗರಾಭಿವೃದ್ಧಿ ಇಲಾಖೆ

ವಿಪತ್ತು ನಿಯಂತ್ರಣ: '4ಜಿ' ವಿನಾಯಿತಿಗೆ ನಕಾರ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ವಿಪತ್ತು ಪರಿಹಾರ ನಿಧಿ ಅಡಿಯಲ್ಲಿ ಒಟ್ಟು ₹ 1,171.33 ಕೋಟಿ ವೆಚ್ಚದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕೆಟಿಟಿಪಿ ಕಾಯ್ದೆಯ ನಿಯಮ 4 (ಜಿ) ಅನ್ವಯ ಟೆಂಡರ್ ಕರೆಯುವುದರಿಂದ ವಿನಾಯಿತಿ ಕೋರಿ ಬಿಬಿಎಂಪಿಯು ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿತ್ತು. ಇವುಗಳು ತುರ್ತಾಗಿ ಕೈಗೊಳ್ಳುವ ಕಾಮಗಾರಿಗಳ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ನಗರಾಭಿವೃದ್ಧಿ ಇಲಾಖೆ ಅಭಿಪ್ರಾಯಪಟ್ಟಿದೆ.

ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳನ್ನು ರಾಜ್ಯ ವಿಪತ್ತು ಪರಿಹಾರ ನಿಧಿ ಮಾರ್ಗಸೂಚಿಯಂತೆ ಕೈಗೊಳ್ಳುವ ಪ್ರಸ್ತಾವವನ್ನು ಮರುಪರಿಶೀಲಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಸಲಹೆ ನೀಡಿದ್ದಾರೆ.

ಬಿಬಿಎಂಪಿ ಸಲ್ಲಿಸಿರುವ ಪ್ರಸ್ತಾವಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಈ ಪ್ರಸ್ತಾವದಲ್ಲಿ ಉಲ್ಲೇಖಿಸಲಾದ ಬಹಳಷ್ಟು ಕಾಮಗಾರಿಗಳು ರಸ್ತೆಗಳ ಸಾಮಾನ್ಯ ನಿರ್ವಹಣೆ ಮತ್ತು ಭವಿಷ್ಯದಲ್ಲಿ ವಿಪತ್ತು ಸಂಭವಿಸುವುದನ್ನು ತಡೆಗಟ್ಟುವುದಕ್ಕೆ ಸಂಬಂಧಿಸಿದವು. ಈ ಕಾಮಗಾರಿಗಳು ರಾಜ್ಯ ವಿಪತ್ತು ಪರಿಹಾರ ನಿಧಿಯ ಮಾರ್ಗಸೂಚಿಯನ್ವಯ ತುರ್ತು ದುರಸ್ತಿಗೊಳಿಸುವ ಕಾಮಗಾರಿಗಳ ವ್ಯಾಪ್ತಿಯಲ್ಲಿಲ್ಲ ಎಂದು ಅವರು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಫೆ.11ರಂದು ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಕಾಮಗಾರಿ ಅನುಷ್ಠಾನಕ್ಕಾಗಿ ಟೆಂಡರ್ :ವಿನಾಯಿತಿ ಕೋರಿ ಪ್ರಸ್ತಾವನೆ
- ಬಿಬಿಎಂಪಿ ಆಯುಕ್ತ ಗೌರವ್ ಗುಪ್ತಗೆ ನಗರಾಭಿವೃದ್ಧಿ ಇಲಾಖೆ ಪತ್ರ

₹1,171.33 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗಳನ್ನು ಬಿಬಿಎಂಪಿಯ ಸ್ವಂತ ಸಂಪನ್ಮೂಲ ಭರಿಸಿ ಅನುಷ್ಠಾನಗೊಳಿಸಬೇಕು ಅಥವಾ ಇತ್ತೀಚೆಗೆ ಅನುಮೋದನೆ ನೀಡಿರುವ 'ಅಮೃತ ನಗರೋತ್ಥಾನ ಯೋಜನೆ' ಅಡಿ ಬಿಬಿಎಂಪಿ ಈ ಕಾಮಗಾರಿಗಳನ್ನು ಕೈಗೊಳ್ಳಬಹುದು ಎಂದು ಅವರು ಸಲಹೆ ನೀಡಿದ್ದಾರೆ.

ಅಗತ್ಯವಿದ್ದರೆ, ಯಾವೆಲ್ಲ ಕಾಮಗಾರಿಗಳನ್ನು ರಾಜ್ಯ ವಿಪತ್ತು ಪರಿಹಾರ ನಿಧಿಯಡಿ ಕೈಗೊಳ್ಳಲು ಅವಕಾಶವಿದೆ ಎಂಬುದನ್ನು ಉಲ್ಲೇಖಿಸಿ ಅರ್ಹ ಮೊತ್ತಕ್ಕೆ ಸಂಬಂಧಿಸಿದಂತೆ ಮತ್ತೊಮ್ಮೆ ವರದಿ ಸಲ್ಲಿಸುವಂತೆ ತಿಳಿಸಿದ್ದಾರೆ.

ನಗರದಲ್ಲಿ ಹಾಳಾಗಿರುವ ರಸ್ತೆ ಮತ್ತು ರಾಜಕಾಲುವೆಗಳನ್ನು ಸರಿಪಡಿಸಲು ವಿಪತ್ತು ಪರಿಹಾರ ನಿಧಿಯಡಿ ₹1,171 ಕೋಟಿ ಅನುದಾನ ಮಂಜೂರು ಮಾಡಬೇಕು. ಈ ಕಾಮಗಾರಿಗಳನ್ನು ಟೆಂಡರ್ ಪ್ರಕ್ರಿಯೆ ನಡೆಸದೆಯೇ ಅನುಷ್ಠಾನಗೊಳಿಸಲು ಒಪ್ಪಿಗೆ ನೀಡಬೇಕು ಎಂದು ಕೋರಿ ಬಿಬಿಎಂಪಿಯು 2021ರ ಡಿಸೆಂಬರ್ ಆರಂಭದಲ್ಲಿ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿತ್ತು.

ನಗರದಲ್ಲಿ ಮುಖ್ಯ ಮತ್ತು ಉಪಮುಖ್ಯ ರಸ್ತೆಗಳ ಒಟ್ಟು ಉದ್ದ 1,344 ಕಿಲೋ ಮೀಟರ್‌ಗಳಷ್ಟಿದೆ. 2019-20, 2020-21ನೇ ಸಾಲಿನ ನವ ನಗರೋತ್ಥಾನ ಯೋಜನೆ ಅಡಿ 300 ಕಿ.ಮೀ ಉದ್ದದಷ್ಟು ರಸ್ತೆಗಳ ಅಭಿವೃದ್ಧಿಗೆ ಅನುಮೋದನೆ ದೊರೆತಿದೆ. 192 ಕಿ.ಮೀ ರಸ್ತೆಯನ್ನು ಅತಿ ದಟ್ಟಣೆಯ ಕಾರಿಡಾರ್ ಎಂದು ಗುರುತಿಸಲಾಗಿದ್ದು, ಕೆಆರ್‌ಡಿಸಿಎಲ್‌ಗೆ ನಿರ್ವಹಣೆಗೆ ಒಪ್ಪಿಸಲು ನಿರ್ಧರಿಸಲಾಗಿದೆ.

180 ಕಿ.ಮೀಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ, 30 ಕಿ.ಮೀ.ನಲ್ಲಿ ಸ್ಮಾರ್ಟ್‌ಸಿಟಿ ಯೋಜನೆ ಕೈಗೊಳ್ಳಲಾಗಿದೆ. ಉಳಿದ 642 ಕಿ.ಮೀ ರಸ್ತೆಯಲ್ಲಿ, 62 ಕಿ.ಮೀ ರಸ್ತೆಗಳ ಹೊಣೆಗಾರಿಕೆ ಅವಧಿ (ಡಿಎಲ್‌ಪಿ) ಇನ್ನೂ ಚಾಲ್ತಿಯಲ್ಲಿದ್ದು, ಅವುಗಳ ನಿರ್ವಹಣೆಯ ಹೊಣೆ ಗುತ್ತಿಗೆದಾರರದ್ದು. ಇನ್ನುಳಿದ 580 ಕಿ.ಮೀ ರಸ್ತೆಗಳಿಗೆ 3 ವರ್ಷಗಳಿಂದ ಡಾಂಬರೀಕರಣ ಮಾಡಿಲ್ಲ. ಹಾಗಾಗಿ ಈ ರಸ್ತೆಗಳು ಭಾರಿ ಮಳೆಯಿಂದ ಹಾನಿಗೊಳಗಾಗಿವೆ. ಈ ರಸ್ತೆಗಳ ದುರಸ್ತಿಗೆ ₹ 100 ಕೋಟಿ ವೆಚ್ಚ ಆಗಲಿದೆ ಎಂದು ಅಂದಾಜಿಸಲಾಗಿದೆ' ಎಂದು ಬಿಬಿಎಂಪಿ ತಿಳಿಸಿತ್ತು.

'ನಾಲ್ಕು ಪ್ರಮುಖ ರಾಜಕಾಲುವೆಗಳಲ್ಲಿ ತಡೆಗೋಡೆಗಳು ಶಿಥಿಲಗೊಂಡಿವೆ. ಬಡಾವಣೆಗಳಿಗೆ ಮಳೆ ನೀರು ನುಗ್ಗಿ ಹಾನಿಯಾಗಿದೆ. ತಡೆಗೋಡೆಗಳ ಮರು ನಿರ್ಮಾಣದ ಅವಶ್ಯಕತೆ ಇದೆ. ಅದಕ್ಕಾಗಿ 120 ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದ್ದು, ₹411.33 ಕೋಟಿ ವೆಚ್ಚವಾಗುವ ಅಂದಾಜಿದೆ. 8 ಕಸ ಸಂಸ್ಕರಣಾ ಘಟಕಗಳಿಗೆ ಕಸ ಸಾಗಿಸುವ 600 ಕಾಂಪ್ಯಾಕ್ಟರ್‌ಗಳು ಸಂಚರಿಸುವ ಕೂಡು ರಸ್ತೆಗಳೂ ಹಾಳಾಗಿವೆ. ಅವುಗಳ ದುರಸ್ತಿಗೆ ₹50 ಕೋಟಿ ಅಗತ್ಯವಿದೆ. 8 ವಲಯಗಳ ವ್ಯಾಪ್ತಿಯಲ್ಲಿ ಸುಮಾರು 11 ಸಾವಿರ ರಸ್ತೆಗಳಿದ್ದು, ಭಾರಿ ಮಳೆಯಿಂದ ಆ ರಸ್ತೆಗಳು ಬಹುತೇಕ ಹಾಳಾಗಿವೆ. ಇವುಗಳ ದುರಸ್ತಿಗೆ ₹600 ಕೋಟಿ ಬೇಕಿದೆ' ಎಂದು ಬಿಬಿಎಂಪಿ ವಿವರಿಸಿತ್ತು. ಈ ಎಲ್ಲ ಕಾಮಗಾರಿಗಳನ್ನು ಕೂಡಲೇ ಕೈಗೆತ್ತಿಕೊಳ್ಳಬೇಕಿರುವುದರಿಂದ ಕೆಟಿಪಿಪಿ ಕಾಯ್ದೆಯ 4 (ಜಿ) ನಿಯಮದಡಿ ಟೆಂಡರ್ ಕರೆಯುವುದರಿಂದ ವಿನಾಯಿತಿ ನೀಡಬೇಕು ಎಂದು ಪಾಲಿಕೆ ಕೋರಿತ್ತು.

ಸರ್ಕಾರದಿಂದ ಬಿಬಿಎಂಪಿ ಕೋರಿದ್ದ ಅನುದಾನ

- ₹100 ಕೋಟಿ ರಸ್ತೆ ಮೂಲಸೌಕರ್ಯ ಅಭಿವೃದ್ಧಿಗೆ
- ₹411.33 ಕೋಟಿ ರಾಜಕಾಲುವೆ ದುರಸ್ತಿಗೆ
- ₹50 ಕೋಟಿ ಕಸ ನಿರ್ವಹಣೆ ಮತ್ತು ರಸ್ತೆ ದುರಸ್ತಿಗೆ
- ₹600 ಕೋಟಿ ವಲಯಗಳಲ್ಲಿನ ದುರಸ್ತಿ ಕಾಮಗಾರಿಗಳಿಗೆ
- ₹10 ಕೋಟಿ ನಿಯಂತ್ರಣ ಕೊಠಡಿಗಳಿಗೆ ಯಂತ್ರೋಪಕರಣಗಳ ಖರೀದಿಗೆ

ಮೌಲಾನಾ ಅಬುಲ್ ಕಲಾಂ ಆಜಾದ್ ಭವನ ಉದ್ಘಾಟನೆ

'ಅಲ್ಪಸಂಖ್ಯಾತರು ಮುಖ್ಯವಾಹಿನಿಗೆ ಸೇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಪಸಂಖ್ಯಾತರು ಇಂದಿನ ಬದಲಾವಣೆ ಯುಗದ ವೇಗವನ್ನು ಅಳವಡಿಸಿಕೊಂಡು ಗುರಿಯನ್ನು ಸಾಧಿಸುವುದರ ಜತೆಗೆ ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆಯಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೌಲಾನಾ ಅಬುಲ್ ಕಲಾಂ ಆಜಾದ್ ಭವನವನ್ನು ಗೃಹ ಕಚೇರಿ 'ಕೃಷ್ಣಾ'ದಲ್ಲಿ ಆನ್‌ಲೈನ್ ಮೂಲಕ ಶುಕ್ರವಾರ ಉದ್ಘಾಟಿಸಿ ಮಾತನಾಡಿದರು.

21 ನೇ ಶತಮಾನ ಜ್ಞಾನದ ಶತಮಾನವಾಗಿದ್ದು, ಜಗತ್ತಿನ ಬದಲಾವಣೆಯ ರೀತಿಯನ್ನು ಗ್ರಹಿಸಿ, ಮಕ್ಕಳನ್ನು ಸಿದ್ಧಪಡಿಸಬೇಕು. ಈ ಸ್ಪರ್ಧಾತ್ಮಕ ಯುಗದಲ್ಲಿ ಸರ್ಕಾರ ಮತ್ತು ಸಮಾಜ ಮಕ್ಕಳಿಗೆ ಸೂಕ್ತ ಅವಕಾಶಗಳನ್ನು, ಸವಲತ್ತುಗಳನ್ನು ನೀಡಿ ಜಾಗತಿಕ ಮಟ್ಟಕ್ಕೆ ಬೆಳೆಯಲು ಸಹಕರಿಸಬೇಕು ಎಂದರು.

ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಸಾಮಾಜಿಕ ನ್ಯಾಯದ ಜೊತೆಗೆ ಸಾಮಾಜಿಕ ಅಭಿವೃದ್ಧಿಯ ಗುರಿ ಸಾಧಿಸಲಾಗುವುದು. ಅಲ್ಪಸಂಖ್ಯಾತರಲ್ಲಿನ ಕೆಲವು ಸಮುದಾಯಗಳು ಕಡು ಬಡತನದಲ್ಲಿದ್ದು, ಅವರ ಅಭಿವೃದ್ಧಿಗೆ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಬೊಮ್ಮಾಯಿ ಹೇಳಿದರು.

ಅಲ್ಪಸಂಖ್ಯಾತ ಜನಾಂಗದ ಕಟ್ಟಕಡೆಯ ವ್ಯಕ್ತಿಯನ್ನು ಗಮನದಲ್ಲಿರಿಸಿಕೊಂಡು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲಾಗುವುದು. ವಿಶೇಷವಾಗಿ 8,9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ವೃತ್ತಿಗಳ ಬಗ್ಗೆ ಮಾರ್ಗದರ್ಶನ ನೀಡುವ ಮೂಲಕ ಐಟಿ, ಎಂಜಿನಿಯರಿಂಗ್, ಐಟಿಐ, ಐಎಎಸ್, ಐಪಿಎಸ್ ಸೇರಿದಂತೆ ಇತರ ಹಲವು ಕ್ಷೇತ್ರದಲ್ಲಿನ ಉದ್ಯೋಗ ಅವಕಾಶಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ಹೇಳಿದರು.

ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಬಡವರ ಮಕ್ಕಳು ಸೂಕ್ತ ವೃತ್ತಿ ಮಾರ್ಗದರ್ಶನದಿಂದ ಉತ್ತಮ ಶಿಕ್ಷಣ ಹಾಗೂ ಉದ್ಯೋಗ ಪಡೆಯಬೇಕು. ಇದರಿಂದ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಬಲರಾಗುವ ಜೊತೆಗೆ ಅಲ್ಪಸಂಖ್ಯಾತರು ಸಮಾಜದ ಮುಖ್ಯವಾಹಿನಿಗೆ ಬರಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೌಲಾನಾ ಅಬುಲ್ ಕಲಾಂ ಆಜಾದ್ ಭವನವನ್ನು ಗೃಹ ಕಚೇರಿ 'ಕೃಷ್ಣಾ'ದಲ್ಲಿ ಆನ್‌ಲೈನ್ ಮೂಲಕ ಉದ್ಘಾಟಿಸಿದರು.

'ವಕ್ಫ್ ಆಸ್ತಿ ರಕ್ಷಣೆ ಜವಾಬ್ದಾರಿ ಮಂಡಳಿಗೆ'

ರಾಜ್ಯದಲ್ಲಿರುವ ವಕ್ಫ್ ಆಸ್ತಿ ಕಬಳಿಕೆ ಅಥವಾ ದುರುಪಯೋಗ ಆಗದಂತೆ ಕಾಪಾಡುವ ಅಧಿಕಾರವನ್ನು ವಕ್ಫ್ ಮಂಡಳಿಗೆ ನೀಡಲಾಗಿದೆ ಎಂದು ಬೊಮ್ಮಾಯಿ ಹೇಳಿದರು.

ವಕ್ಫ್ ಆಸ್ತಿ ಅದೇ ಸಮಾಜದ ಬಳಕೆಗಾಗಿ ಮೀಸಲಿಡಬೇಕು. ಈ ವಿಷಯದಲ್ಲಿ ಕಾನೂನುಬಾಹಿರವಾಗಿ ನಡೆದುಕೊಂಡವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಉಕ್ರೇನ್ ಬಿಕ್ಕಟ್ಟು: 'ಪುಟಿನ್ ಜತೆ ಮೋದಿ ಮಾತನಾಡಲಿ'



ದೇವೇಗೌಡ

ಶೃಂಗೇರಿ: ಜಾಗತಿಕವಾಗಿ ಬಲಾಢ್ಯ ರಾಷ್ಟ್ರವಾಗಿರುವ ರಷ್ಯಾ, ಉಕ್ರೇನ್ ವಿರುದ್ಧ ಯುದ್ಧ ಸಾರಿರುವುದು ದುರದೃಷ್ಟಕರ. ಪ್ರಧಾನಿ ಮೋದಿಯವರಿಗೆ ರಷ್ಯಾ ಅಧ್ಯಕ್ಷ ಪುಟಿನ್ ಅವರೊಂದಿಗೆ ಒಳ್ಳೆಯ ಸಂಬಂಧವಿದೆ. ಮೋದಿಯವರು ಪುಟಿನ್ ಅವರೊಂದಿಗೆ ಮಾತುಕತೆ ನಡೆಸಿ, ಯುದ್ಧವನ್ನು ಈ ಹಂತದಲ್ಲೇ ತಡೆಯಬೇಕು ಎಂದು ಎಚ್.ಡಿ. ದೇವೇಗೌಡ ಹೇಳಿದರು.

ಶೃಂಗೇರಿ ಕ್ಷೇತ್ರದರ್ಶನ ಹಾಗೂ ಪಕ್ಷದ ಕಾರ್ಯಕರ್ತರ ಸಭೆಯ ಬಳಿಕ ಅವರು ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದರು. ಜಗತ್ತಿನ ಎಲ್ಲಾ ದೇಶಗಳಿಗೂ ಇದರ ಬಿಸಿ ತಟ್ಟುವುದು ನಿಶ್ಚಿತ. ಈಗ ಯಾವ ರಾಷ್ಟ್ರಕ್ಕೂ ಯುದ್ಧದ ಹೊಡೆತ ಸಹಿಸುವ ಸ್ಥಿತಿಯಲ್ಲಿ ಇಲ್ಲ. ಮಾತುಕತೆ ಮೂಲಕ ಬಗೆಹರಿಸಬಹುದಾದ ಸಮಸ್ಯೆಗೆ ಇಷ್ಟೊಂದು ಬೆಲೆ ತೆರುವಂತಾಗಬಾರದು ಎಂದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಚಪ್ಪರದಕಲ್ಲು (ಬೀರಸಂದ್ರ), ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ.
ದೂರವಾಣಿ: 080–29787463 ಇ–ಮೇಲ್: eerdwsd.bngr1@gmail.com

ಸಂಖ್ಯೆ: ಕಾಅ/ಗ್ರಾಕುನೀನೈವಿ/ಬೆಂ.ಗ್ರಾ/ಹೊರಗುತ್ತಿಗೆ/ಟೆಂಡರ್/2021–22/1151 ದಿನಾಂಕ: 25–02–2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 14/2021–22 ದಿನಾಂಕ: 25.02.2022
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಮತ್ತು ಉಪ ವಿಭಾಗ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ **ಕಿರಿಯ ಸಮಾಲೋಚಕರು–1 (7 ಹುದ್ದೆಗಳು), ಕಿರಿಯ ಸಮಾಲೋಚಕರು–2, (3 ಹುದ್ದೆಗಳು) (ಒಟ್ಟು – 10 ಹುದ್ದೆಗಳು)** ಸಿಬ್ಬಂದಿಗಳ ಸೇವೆಯನ್ನು **ತಾತ್ಕಾಲಿಕವಾಗಿ ಪಡೆಯುವ ಸಲುವಾಗಿ** ಸೂಕ್ತ ಮ್ಯಾನ್ ಪವರ್ ಏಜೆನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕರಾರು ನಿಯಮಗಳು ಹಾಗೂ ಇನ್ನಿತರ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **http://eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ನಿಗದಿಪಡಿಸಿರುವ ಕರಾರು ನಿಯಮಗಳಂತೆ ಎಲ್ಲಾ ದಾಖಲಾತಿಗಳೊಂದಿಗೆ ದರಗಳನ್ನು ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಳು ಬೇಕಾಗಿದ್ದಲ್ಲಿ **ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಬೀರಸಂದ್ರ, ದೇವನಹಳ್ಳಿ ಕಛೇರಿಯ ವೇಳೆಯಲ್ಲಿ** (ರಜೆ ದಿನಗಳನ್ನು ಹೊರತುಪಡಿಸಿ) ಪಡೆದುಕೊಳ್ಳಬಹುದಾಗಿದೆ. ದಾಖಲೆಗಳ ಡೌನ್‌ಲೋಡಿಂಗ್ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಮಾಹಿತಿ ಮುಂತಾದ ಅಂಶಗಳು ಈ ಕೆಳಗಿನಂತಿವೆ.

1) ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **25–02–2022ರಂದು ಸಂಜೆ 4.30 ಗಂಟೆಯ ನಂತರ.** 2) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **11–03–2022ರಂದು ಸಂಜೆ 4.00 ಗಂಟೆವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **14–03–2022ರಂದು ಸಂಜೆ 4.00 ಗಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **17–03–2022ರಂದು 4.00 ಗಂಟೆಗೆ.**

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ.

ವಾಸಾಸಂಇ/ಉನಿಕ/ಬೆಂಗ್ರಾಜಿ/446/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಹೇಳಿಕೆ

ಸರ್ಕಾರದಿಂದ 'ರಾಷ್ಟ್ರೀಯ ವಿಜ್ಞಾನ ದಿನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಮುಂದಿನ ವರ್ಷದಿಂದ ಫೆಬ್ರುವರಿ 28ರ 'ರಾಷ್ಟ್ರೀಯ ವಿಜ್ಞಾನ ದಿನ'ವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವತಿಯಿಂದಲೇ ಆಚರಿಸಲಾಗುವುದು' ಎಂದು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ವತಿಯಿಂದ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ ಹಾಗೂ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಬಾಲ ವಿಜ್ಞಾನಿಗಳಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಈಗ ಮಾನವಿಕ ಕಲಿಕೆಯಲ್ಲೂ ವಿಜ್ಞಾನ ಪ್ರಮುಖ ಪಾತ್ರ ವಹಿಸುತ್ತಿದೆ. 3ರಿಂದ 12ನೇ ವಯಸ್ಸು ಮಕ್ಕಳ ಕಲಿಕೆಯಲ್ಲಿ ನಿರ್ಣಾಯಕ ಹಂತ. ಹಾಗಾಗಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ವೈಜ್ಞಾನಿಕ ಕಲಿಕೆಗೆ ಒತ್ತು ನೀಡಲಾಗಿದೆ' ಎಂದು ಹೇಳಿದರು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, 'ಮೊಘಲರು, ಬ್ರಿಟಿಷರ ಆಕ್ರಮಣಗಳಿಂದ ವೈಜ್ಞಾನಿಕ ಪ್ರಯತ್ನಗಳು ನಿಂತಿದ್ದವು. ಆನಂತರ ಬಂದ ಸರ್ಕಾರಗಳಿಂದಲೂ ಭಾರತೀಯ ವಿಜ್ಞಾನಕ್ಕೆ ಅಗತ್ಯ ಸಹಕಾರ ಸಿಗಲಿಲ್ಲ. ಇದರಿಂದಾಗಿ ದೇಶದ ವಿಜ್ಞಾನ ಬೆಳವಣಿಗೆಯಲ್ಲಿ ಹಿನ್ನಡೆ ಕಂಡಿತು. ಇಂದು ಪ್ರಪಂಚದ ಬಹುತೇಕ ವಿಜ್ಞಾನ ಸಂಸ್ಥೆಗಳಲ್ಲಿ ಶೇ 50ಕ್ಕಿಂತ ಹೆಚ್ಚು ಮಂದಿ ಭಾರತೀಯರೇ ಇದ್ದಾರೆ' ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ,'ರಾಜ್ಯ ವಿಜ್ಞಾನ ಪರಿಷತ್ತಿನ ನೆರವಿಗೆ ಸರ್ಕಾರ ₹1 ಕೋಟಿಯಷ್ಟು ಅನುದಾನ ನೀಡುತ್ತಿತ್ತು. ಈಗ ₹25 ಲಕ್ಷವೂ ಬರುತ್ತಿಲ್ಲ. ಸರ್ಕಾರ ಹೆಚ್ಚಿನ ಅನುದಾನ ನೀಡುವ ಮೂಲಕ ಪರಿಷತ್ತನ್ನು ಹಾಗೂ ವಿಜ್ಞಾನವನ್ನು ಉಳಿಸಬೇಕು' ಎಂದು ಮನವಿ ಮಾಡಿದರು.

ವಿವಿಧ ಶಾಲಾ ವಿದ್ಯಾರ್ಥಿಗಳು ತಮ್ಮ ವಿಜ್ಞಾನ ಮಾದರಿಗಳು ಹಾಗೂ ಸಂಶೋಧನೆಗಳನ್ನು ಪ್ರದರ್ಶಿಸಿದರು.

ಬೆಂಗಳೂರಿನ ಎಸ್. ಅಭಯದತ್ತ 'ವರ್ಷದ ಬಾಲ ವಿಜ್ಞಾನಿ'

ಅಭಯದತ್ತ

ಬಾಲವಿಜ್ಞಾನಿಗಳ ಪೈಕಿ ಅತ್ಯುತ್ತಮ ವಿಜ್ಞಾನ ಯೋಜನೆ ತಯಾರಿಸಿದವರಿಗೆ ರಾಜ್ಯ ವಿಜ್ಞಾನ ಪರಿಷತ್ತು ನೀಡುವ 'ವರ್ಷದ ಬಾಲ ವಿಜ್ಞಾನಿ' ಪ್ರಶಸ್ತಿಗೆ ಬೆಂಗಳೂರಿನ ಪದ್ಮನಾಭ ನಗರದ ಪ್ರಾರ್ಥನಾ ಶಾಲೆಯ 9ನೇ ತರಗತಿ ವಿದ್ಯಾರ್ಥಿ ಎಸ್. ಅಭಯದತ್ತ ಭಾಜನರಾದರು. ಈ ತಂಡದಲ್ಲಿ ಬಿ.ಓಜಸ್ ಮತ್ತು ಆರ್.ಕೆ.ಸಾಕ್ಷಿ ಇದ್ದರು. ಶಾಲೆಯ ವಿಜ್ಞಾನ ಶಿಕ್ಷಕಿ ಪೂರ್ಣಿಮಾ ಹೊಸೂರು ಮಾರ್ಗದರ್ಶನ ನೀಡಿದ್ದರು.

'ಸುಸ್ಥಿರ ಕೃಷಿಗಾಗಿ ಅಂತರ್‌ಜೀವಿಗಳ ಉಪಯೋಗ' ಕುರಿತು ಸಂಶೋಧನೆ ನಡೆಸಿದೆವು. ವಾಯುಮಾಲಿನ್ಯ ತಗ್ಗಿಸುವ ದೃಷ್ಟಿಯಿಂದ ಇಂಗಾಲ ಹೀರಿಕೊಳ್ಳುವ ಬೆಳೆ ಅಭಿವೃದ್ಧಿ ನಮ್ಮ ಯೋಜನೆ. ಇದಕ್ಕಾಗಿ ವಿಶೇಷ ಶಿಲೀಂಧ್ರ (ಫಂಗಸ್) ಸಂಶೋಧಿಸಿ, ರಾಗಿ ಬೀಜದ ಮೇಲೆ ಪ್ರಯೋಗ ನಡೆಸಿದೆವು. ಫಲಿತಾಂಶದಲ್ಲಿ ರಾಗಿ ಚೆನ್ನಾಗಿ ಬೆಳೆದು, ಇಂಗಾಲ ಹೀರಿಕೊಳ್ಳುವ ಸಾಮರ್ಥ್ಯ ಅಭಿವೃದ್ಧಿಯಾಗಿತ್ತು. ನಮ್ಮ ಶಾಲೆಯ ಹತ್ತಿರ ಪ್ರತಿನಿತ್ಯ ಆಗುತ್ತಿದ್ದ ವಾಹನದಟ್ಟಣೆ ಈ ಸಂಶೋಧನೆಗೆ ಪ್ರೇರಣೆ ನೀಡಿತು' ಎಂದು ಎಸ್.ಅಭಯದತ್ತ 'ಪ್ರಜಾವಾಣಿ'ಗೆ ತಿಳಿಸಿದರು.

ಪರಿಷತ್ತಿನ ಅಧ್ಯಕ್ಷ ಗಿರೀಶ್ ಕಡ್ಲೇವಾಡ, ವಿಜ್ಞಾನಿ ಅನುರಾಧಾ, ಕೆ.ವಿ.ಮಾಲಿನಿ, ಬಿ.ಎನ್.ಶ್ರೀನಾಥ್, ಶ್ರೀಮತಿ ಹರಿಪ್ರಸಾದ್ ಭಾಗವಹಿಸಿದ್ದರು.

ನಗರದಲ್ಲಿ ಶುಕ್ರವಾರ 'ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು' ಆಯೋಜಿಸಿದ್ದ "29ನೇ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ" ಕಾರ್ಯಕ್ರಮದಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಬಾಲವಿಜ್ಞಾನಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. (ನಿಂತವರು) ವಿಜ್ಞಾನ ಪರಿಷತ್ತಿನ ಸಹ ಕಾರ್ಯದರ್ಶಿ ಬಿ .ಎನ್ ಶ್ರೀನಾಥ್, ಉಪಾಧ್ಯಕ್ಷ ಎಚ್.ಜಿ ಹುದ್ದಾರ್ ವಿಧಾನ ಪರಿಷತ್ತಿನ ಸದಸ್ಯ ಎಸ್.ವಿ ಸಂಕನೂರ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ವಿಜ್ಞಾನ ಪರಿಷತ್ತಿನ ಸದಸ್ಯೆ ಶ್ರೀಮತಿ ಹರಿಪ್ರಸಾದ್, ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಮಂಡಳಿ ಸದಸ್ಯೆ ಮಾಲಿನಿ ಕೆ.ವಿ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ವಿಜ್ಞಾನ ಪರಿಷತ್ತಿನ ರಾಜ್ಯಾಧ್ಯಕ್ಷ ಗಿರೀಶ ಕಡ್ಲೇವಾಡ, ಸದಸ್ಯ ಎಚ್.ಎಸ್.ಟಿ ಸ್ವಾಮಿ ಮತ್ತು ಕೌಶಿಕ್ ಪಿ.ಎಸ್ ಇದ್ದರು ಪ್ರಜಾವಾಣಿ ಚಿತ್ರ

30 ಬಾಲ ವಿಜ್ಞಾನಿಗಳಿಗೆ ಪ್ರಶಸ್ತಿ ಪ್ರದಾನ

ರಾಜ್ಯ ವಿವಿಧ ಜಿಲ್ಲೆಗಳಿಂದ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದ ಬಾಲ ವಿಜ್ಞಾನಿಗಳಾದ ಎಸ್.ಅಭಯದತ್ತ (ಬೆಂಗಳೂರು), ಅಲೋಕ್ ನೂಜಿಬೈಲ್, ಅನ್ವಿತ್ ಎನ್., ಜಿ.ಆರ್.ಚಿನ್ಮಯಿ (ದಕ್ಷಿಣ ಕನ್ನಡ), ಎಸ್.ಆರ್.ಸಂಪ್ರೀತ್ (ತುಮಕೂರು), ಎಸ್.ತನುಶ್ರೀ (ಹಾವೇರಿ), ವಿಭಾ ಕೆ.ಭಟ್, ದೀಪಿಕಾ ಭಟ್ (ಉತ್ತರ ಕನ್ನಡ), ಹಜಿರಾ ಶಯಿಸ್ತಾ, ಮಂಜುಶ್ರೀ (ಉಡುಪಿ), ಕೆ.ಎಂ.ನಮ್ಯ, ಎಸ್.ಕಿರಣ್ ಕುಮಾರ್ (ಮೈಸೂರು), ಈ.ಅನುಷಾ, ಮಹಂತೇಶ ಕಂಬಾರ, ಪ್ರಗತಿ ಗಟ್ನೂರ (ಬಾಗಲಕೋಟೆ), ಎಚ್.ಜಿ.ರಶ್ಮಿ (ಚಿತ್ರದುರ್ಗ), ನಸೀಮಾ ಬಾನು, ನೇಹಾ ರಾಂಪುರ್ (ಧಾರವಾಡ), ಪ್ರಭುಲಿಂಗ ಮಲಕಜಪ್ಪ ಹೀರಾ (ಬೀದರ್), ಎಸ್.ಲಿಖಿತ (ಚಾಮರಾಜನಗರ), ಎಚ್.ಜಿ.ಪ್ರಣತಿ, ಇನಾ ರಾವ್ (ಶಿವಮೊಗ್ಗ), ಭಾಗ್ಯಶ್ರೀ ಆರ್.ಮದರಿ, ಶಂಕರಿ ಡಿ. ಪೂಜಾರಿ (ಕಲಬುರಗಿ), ಎಚ್.ಸಿ.ಶ್ರುತಿ (ದಾವಣಗೆರೆ), ಸ್ವಾತಿ ಮೈಲಾರಿ, ವಿನಾಯಕ್ ಎಂ.ಅರಕೇರಿ (ಬೆಳಗಾವಿ), ಕೆ.ವಿ.ಚಂದ್ರಿಕಾ (ಚಿಕ್ಕಬಳ್ಳಾಪುರ), ಹೇಮಲತಾ (ಹಾಸನ), ಎಂ.ಎಚ್.ವಿಶ್ವನಾಥ್ (ಗದಗ) ಹಾಗೂ ಮಾರ್ಗದರ್ಶನ ನೀಡಿದ ವಿಜ್ಞಾನ ಶಿಕ್ಷಕರಿಗೆ ಪ್ರಶಸ್ತಿ ನೀಡಲಾಯಿತು.

ಸುದ್ದಿ 2 ನಿಮಿಷ

'ಭಾಷೆ ಹೆಸರಿನಲ್ಲಿ ಸೌಲಭ್ಯ ವಂಚನೆ'

ಬೆಂಗಳೂರು: 'ಕಾಸರಗೋಡಿನಲ್ಲಿ ನೆಲೆಸಿರುವ ಕನ್ನಡ ಭಾಷಿಕರಿಗೆ ಸೌಲಭ್ಯಗಳನ್ನು ವಂಚಿಸುವ ಪ್ರಯತ್ನವನ್ನು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮಾಡುತ್ತಿದ್ದಾರೆ. ಭಾಷೆ ವಿಚಾರವಾಗಿ ಅವರು ನೀಡಿದ ಹೇಳಿಕೆ ಖಂಡನೀಯ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಕೇರಳದಲ್ಲಿ ಮಲಯಾಳ ಭಾಷೆ ಗೊತ್ತಿದ್ದರೆ ಮಾತ್ರ ಸರ್ಕಾರಿ ಉದ್ಯೋಗ' ಎಂಬ ಪಿಣರಾಯಿ ವಿಜಯನ್ ಅವರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿ, 'ಸಂವಿಧಾನದ 30/1ನೇ ವಿಧಿಯು ಭಾಷಾ ಅಲ್ಪಸಂಖ್ಯಾತರಿಗೆ ಅವರದ್ದೇ ಭಾಷೆಯಲ್ಲಿ ಶಿಕ್ಷಣ ಮತ್ತು ಆಡಳಿತ ಅನುಭವಿಸುವ ಮೂಲಭೂತ ಹಕ್ಕನ್ನು ಒದಗಿಸಿದೆ. ಕೇರಳದಲ್ಲಿರುವ ಕಾಸರಗೋಡನ್ನು ಸಂವಿಧಾನದ ಪ್ರಕಾರ 'ಕನ್ನಡ ಭಾಷೆಯ ಅಲ್ಪಸಂಖ್ಯಾತ ಪ್ರದೇಶ' ಎಂದು ಘೋಷಿಸಲಾಗಿದೆ. ಹೀಗಾಗಿ, ಅವರದ್ದೇ ಭಾಷೆಯಲ್ಲಿ ಶಿಕ್ಷಣ ಮತ್ತು ಉದ್ಯೋಗ ಪಡೆದುಕೊಳ್ಳುವ ಅವಕಾಶವನ್ನು ಕಾಸರಗೋಡಿನ ಕನ್ನಡಿಗರಿಗೆ ನೀಡಲಾಗಿದೆ' ಎಂದಿದ್ದಾರೆ.

ಲಕ್ಷ ಟನ್ ಕಡಲೆಕಾಳು ಖರೀದಿಗೆ ಆದೇಶ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆ ಅಡಿಯಲ್ಲಿ ಪ್ರತಿ ಕ್ವಿಂಟಲ್‌ಗೆ ₹ 5,320ರ ದರದಲ್ಲಿ 1.17 ಲಕ್ಷ ಟನ್ ಕಡಲೆಕಾಳು ಖರೀದಿಗೆ ಅವಕಾಶ ಕಲ್ಪಿಸಿ ಸಹಕಾರ ಇಲಾಖೆ ಫೆಬ್ರುವರಿ 14ರಂದು ಆದೇಶ ಹೊರಡಿಸಿದೆ.

ಧಾರವಾಡ, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ಗದಗ, ಬೆಳಗಾವಿ, ವಿಜಯಪುರ, ಕಲಬುರಗಿ, ಯಾದಗಿರಿ, ಬೀದರ್, ಬಾಗಲಕೋಟೆ, ದಾವಣಗೆರೆ, ಚಿಕ್ಕಮಗಳೂರು ಮತ್ತು ರಾಯಚೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಎಂಎಸ್‌ಪಿ ಅಡಿ ಕಡಲೆಕಾಳು ಖರೀದಿಗೆ ಅವಕಾಶ ನೀಡಲಾಗಿದೆ. ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಮತ್ತು ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಮೂಲಕ ಖರೀದಿ ನಡೆಯಲಿದೆ.

ಆದೇಶ ಹೊರಬಿದ್ದ ನಂತರದ 45 ದಿನಗಳವರೆಗೆ ನೋಂದಣಿ ಮತ್ತು 90 ದಿನಗಳವರೆಗೆ ಖರೀದಿಗೆ ಅವಕಾಶವಿದೆ. ಪ್ರತಿ ರೈತರಿಂದ ಎಕರೆಗೆ ತಲಾ ನಾಲ್ಕು ಕ್ವಿಂಟಲ್‌ನಂತೆ ಗರಿಷ್ಠ 15 ಕ್ವಿಂಟಲ್ ಕಡಲೆಕಾಳು ಖರೀದಿಗೆ ಅವಕಾಶ ಇದೆ.

ವಾತಾವರಣಕ್ಕೆ ಹೆಚ್ಚಿನ ಅಣುವಿಕಿರಣ: ಆತಂಕ

ರಷ್ಯಾ ಹಿಡಿತದಲ್ಲಿ ಚೆರ್ನೋಬಿಲ್ ಅಣು ವಿದ್ಯುತ್ ಸ್ಥಾವರ

ಕೀವ್, ಉಕ್ರೇನ್ (ರಾಯಿಟರ್ಸ್): 'ಚೆರ್ನೋಬಿಲ್ ಅಣು ವಿದ್ಯುತ್ ಸ್ಥಾವರ'ದ ಮೇಲೆ ರಷ್ಯಾದ ಸೇನೆ ಹಿಡಿತ ಸಾಧಿಸಿದ ಬೆನ್ನಲ್ಲೇ, ಆ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಣು ವಿಕಿರಣಗಳು ವಾತಾವರಣವನ್ನು ಸೇರುತ್ತಿರುವ ಆತಂಕ ಎದುರಾಗಿದೆ.

'ಸ್ಥಾವರವಿರುವ ಪ್ರದೇಶದ ವಾತಾವರಣದಲ್ಲಿ ಅಣು ವಿಕಿರಣದ ಸಾಂದ್ರತೆಯು ತೀವ್ರಗತಿಯಲ್ಲಿ ಏರಿಕೆ ಆಗಿರುವುದು ದಾಖಲಾಗಿದೆ' ಎಂದು ಉಕ್ರೇನ್‌ನ ಅಣುಶಕ್ತಿ ಏಜೆನ್ಸಿ ಮತ್ತು ಗೃಹ ಸಚಿವಾಲಯವು ಶುಕ್ರವಾರ ತಿಳಿಸಿದೆ.

ಆದರೆ, ಈ ವಾತಾವರಣದಲ್ಲಿ ಹೆಚ್ಚಾಗಿರುವ ಅಣುವಿಕಿರಣದ ಸಾಂದ್ರತೆ ಕುರಿತು ಏಜೆನ್ಸಿಯು ಸ್ಪಷ್ಟ ಮಾಹಿತಿ ಒದಗಿಸಿಲ್ಲ. ಅಲ್ಲಿ ದೊಡ್ಡ ಸಂಖ್ಯೆಯಲ್ಲಿ ಸೇನೆಯ ವಾಹನಗಳು ಚಲಿಸಿದ ಕಾರಣ ಅಣುವಿಕಿರಣ ಒಳಗೊಂಡಿದ್ದ ದೂಳು ಹೆಚ್ಚಾಗಿ ವಾತಾವರಣ ಸೇರಿದೆ ಎಂದು ತಿಳಿಸಿದೆ.

'ಗಾಳಿಯಲ್ಲಿ ವಿಕಿರಣದ ಪ್ರಮಾಣವು ಹೆಚ್ಚಾಗುತ್ತಿದೆ. ಆದರೆ, ಕೀವ್ ನಗರದ ದೃಷ್ಟಿಯಿಂದ ಸದ್ಯದ ಸ್ಥಿತಿಯಲ್ಲಿ ಇದು ಆತಂಕ ಪಡುವಂತಹದ್ದಲ್ಲ. ಆದರೂ ನಾವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದೇವೆ' ಎಂದೂ ಸಚಿವಾಲಯವು ವಿವರಿಸಿದೆ.

ಕೀವ್ ನಗರದ ದಕ್ಷಿಣಕ್ಕೆ 130 ಕಿ.ಮೀ ದೂರದಲ್ಲಿರುವ ಸ್ಥಾವರ ಸದ್ಯ ನಿಷ್ಕ್ರಿಯವಾಗಿದೆ. ಏಪ್ರಿಲ್ 1986 ರಲ್ಲಿ ಇಲ್ಲಿ ಸ್ಫೋಟ ಸಂಭವಿಸಿತ್ತು. ಸ್ಥಾವರದಲ್ಲಿ ಈಗಲೂ ಅಣುವಿಕಿರಣಗಳು ಸಕ್ರಿಯವಾಗಿವೆ ಎಂದು ಹೇಳಲಾಗಿದೆ.

ಚೆರ್ನೋಬಿಲ್ ಅಣುಶಕ್ತಿ ಸ್ಥಾವರದ ನೋಟ (ಸಂಗ್ರಹ ಚಿತ್ರ–ರಾಯಿಟರ್ಸ್)

ಇನ್ನೊಂದೆಡೆ, ಉಕ್ರೇನ್‌ನ ನೆರೆದೇಶವಾದ ಪೋಲೆಂಡ್, ತನ್ನ ವ್ಯಾಪ್ತಿಯಲ್ಲಿ ವಾತಾವರಣದಲ್ಲಿ ಅಣು ವಿಕಿರಣದ ಪ್ರಮಾಣ ಏರಿಕೆಯಾಗಿರುವುದು ದಾಖಲಾಗಿಲ್ಲ ಎಂದು ತಿಳಿಸಿದೆ.

ಮಾಸ್ಕೊ ವರದಿ: ಈ ಮಧ್ಯೆ, ಅಣುಶಕ್ತಿ ವಿದ್ಯುತ್ ಸ್ಥಾವರದ ರಕ್ಷಣೆ ಕಾರ್ಯಕ್ಕಾಗಿ ನೆರವಾಗಲು ಪ್ಯಾರಾಟ್ರೂಪ್ ಸಿಬ್ಬಂದಿ ಕಳುಹಿಸಲಾಗುವುದು. ಅಲ್ಲಿನ ವಾತಾವರಣದಲ್ಲಿ ಅಣುವಿಕಿರಣದ ಪ್ರಮಾಣ ಸದ್ಯ ಸಹಜ ಸ್ಥಿತಿಯಲ್ಲಿದೆ ಎಂದೂ ರಷ್ಯಾ ಹೇಳಿದೆ.



'ಪರೀಕ್ಷೆ ಮುಂದೂಡಿ'

ಚಾಮರಾಜನಗರ: 'ಹಿಜಾಬ್ ಪ್ರಕರಣಕ್ಕೆ ಸಂಬಂಧಿಸಿ ಹೈಕೋರ್ಟ್ ಅಂತಿಮ ತೀರ್ಪು ನೀಡುವವರೆಗೂ ದ್ವಿತೀಯ ಪಿಯುಸಿ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ಹಾಗೂ ಪ್ರಾಯೋಗಿಕ ಪರೀಕ್ಷೆಗಳನ್ನು ಮುಂದೂಡಬೇಕು' ಎಂದು ನಗರದ ಜೆಎಸ್ಎಸ್ ಮಹಿಳಾ ಕಾಲೇಜಿನ ಮುಸ್ಲಿಂ ವಿದ್ಯಾರ್ಥಿನಿಯರು ಒತ್ತಾಯಿಸಿದರು.

ನಗರದಲ್ಲಿ ಅಂಗವಿಕಲರಿಗಾಗಿ ಶುಕ್ರವಾರ ಉದ್ಯೋಗ ಮೇಳ ನಡೆಯಿತು

ಅಂಗವಿಕಲರಿಗೆ ಉದ್ಯೋಗ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗವಿಕಲರು ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ, ಕೌಶಲ ಅಭಿವೃದ್ಧಿ ಮತ್ತು ಜೀವನೋಪಾಯ ಮತ್ತು ಜೀವನೋಪಾಯ ಇಲಾಖೆ ಹಾಗೂ ಬರ್ಕೆಯ್ಸ್ ಸಹಯೋಗದಲ್ಲಿ ಸಮರ್ಥನಂ ಅಂಗವಿಕಲರ ಸಂಸ್ಥೆಯು ಶುಕ್ರವಾರ ಅಂಗವಿಕಲರಿಗಾಗಿ ಉದ್ಯೋಗ ಮೇಳ ಆಯೋಜಿಸಿತ್ತು.

ಕೋವಿಡ್ ನಂತರ ಉದ್ಯೋಗ ಕಳೆದುಕೊಂಡಿರುವವರಿಗೆ ಮತ್ತು ಹೊಸದಾಗಿ ಉದ್ಯೋಗಕ್ಕೆ ಸೇರುವವರಿಗೆ ನೆರವಾಗುವ ಉದ್ದೇಶದಿಂದ ಮೇಳ ಆಯೋಜಿಸಲಾಗಿತ್ತು.

ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಪದವೀಧರರು ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿದ್ದರು. ಅವಿಘ್ನಾ ಎಂಟರ್‌ಪ್ರೈಸಸ್, ವಿ ಮಾರ್ಟ್ ರಿಟೇಲ್ ಲಿಮಿಟೆಡ್, ಬರ್ಗರ್ ಕಿಂಗ್ ಸೇರಿದಂತೆ 25ಕ್ಕೂ ಹೆಚ್ಚು ಕಂಪನಿಗಳು ಮೇಳದಲ್ಲಿ ಪಾಲ್ಗೊಂಡಿದ್ದವು. ಸ್ವಂತ ಉದ್ಯಮ ಆರಂಭಿಸಲು ಬಯಸುವವರಿಗೂ ಸಹ ಮಾರ್ಗದರ್ಶನ ನೀಡಲಾಯಿತು ಎಂದು ಸಂಸ್ಥೆ ತಿಳಿಸಿದೆ.

ಮೇಳದಲ್ಲಿ ಭಾಗಿಯಾಗಿದ್ದ ಕೌಶಲ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ಎಸ್. ಸೆಲ್ವಕುಮಾರ್, 'ಅಂಗವಿಕಲರಿಗೂ ಸಮಾಜದಲ್ಲಿ ಸಮಾನ ಅವಕಾಶಗಳು ದೊರೆಯಬೇಕು. ಸಮರ್ಥನಂ ಸಂಸ್ಥೆ ಈ ನಿಟ್ಟಿನಲ್ಲಿ ಅಂಗವಿಕಲರಿಗೆ ನೆರವಾಗುತ್ತಿರುವುದು ಶ್ಲಾಘನೀಯ. ಸರ್ಕಾರವು ಸಹ ಉಚಿತ ತರಬೇತಿ ಕಾರ್ಯಾಗಾರಗಳ ಮೂಲಕ ಉದ್ಯೋಗ ದೊರಕಿಸಿಕೊಡಲು ನೆರವಾಗುತ್ತಿದೆ' ಎಂದು ತಿಳಿಸಿದರು. ಅಂಗವಿಕಲರು ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆಯ ನಿರ್ದೇಶಕಿ ಕೆ.ಎಸ್. ಲತಾ ಕುಮಾರಿ ಮಾತನಾಡಿ, 'ಮುಂದಿನ ದಿನಗಳಲ್ಲಿಯೂ ಅಂಗವಿಕಲರಿಗೆ ಉದ್ಯೋಗ ಕಲ್ಪಿಸಲು ಮೇಳಗಳನ್ನು ಆಯೋಜಿಸಲು ನೆರವು ನೀಡಲಾಗುವುದು' ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಸ್ಥಾನಕ್ಕೆ ಶಾಸಕರ ನೇಮಕಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪಬ್ಲಿಕ್ ಶಾಲೆಗಳ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ (ಎಸ್‌ಡಿಎಂಸಿ) ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಿಸಿರುವುದು ಕಾನೂನು ಬಾಹಿರ ಎಂದು ಕರ್ನಾಟಕ ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ ಆರೋಪಿಸಿದೆ.

ರಾಜ್ಯ ಸರ್ಕಾರವು 2021ರ ಅ.26ರಂದು ಹೊರಡಿಸಿದ್ದ ಸುತ್ತೋಲೆಯಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿನ ಎಸ್‌ಡಿಎಂಸಿ ಅಧಿಕಾರ ಮತ್ತು ಜವಾಬ್ದಾರಿಗಳ ಬಗ್ಗೆ ವಿವರಿಸಲಾಗಿತ್ತು. ಎಸ್‌ಡಿಎಂಸಿ ಗೌರವಾಧ್ಯಕ್ಷರನ್ನಾಗಿ ಶಾಲಾ ವ್ಯಾಪ್ತಿಯ ಶಾಸಕರು ಹಾಗೂ ಸಮಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಪೋಷಕರ ಪ್ರತಿನಿಧಿಗಳಿಂದ ಆಯ್ಕೆಯಾದ 16 ಜನರ ಪೈಕಿ ಬಹುಮತ ಇರುವವರನ್ನು ಪ್ರಜಾಪ್ರಭುತ್ವ ಮಾದರಿಯಲ್ಲಿ ಆಯ್ಕೆ ಮಾಡಬೇಕೆಂದು ಸ್ಪಷ್ಟವಾಗಿ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು ಎಂದು ವೇದಿಕೆಯ ಮಹಾಪೋಷಕ ಮತ್ತು ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆದರೆ, ಈ ಶಾಲೆಗಳ ಅಭಿವೃದ್ಧಿಗೆ ಸರ್ಕಾರದಿಂದ ಹಣ ಬರಲು ಪ್ರಾರಂಭವಾದ ನಂತರ, ಗೌರವಾಧ್ಯಕ್ಷರ ಸ್ಥಾನಕ್ಕೆ ತೃಪ್ತಿಪಡದ ಶಾಸಕರು ಸರ್ಕಾರದ ಮೇಲೆ ಪ್ರಭಾವ ಬೀರಿದರು. ಗೌರವಾಧ್ಯಕ್ಷರ ಬದಲಾಗಿ ಅಧ್ಯಕ್ಷರಾಗಲು ಮುಂದಾದರು. ಇದರ ಫಲವಾಗಿ, ಮೂಲ ಸುತ್ತೋಲೆಯನ್ನು ಉಲ್ಲಂಘಿಸಿ ಶಾಸಕರೇ ಅಧ್ಯಕ್ಷರಾಗಬೇಕೆಂಬ ಕಾನೂನುಬಾಹಿರ ಸುತ್ತೋಲೆಯನ್ನು ಸರ್ಕಾರವು ಹೊರಡಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ವಿವರಿಸಿದ್ದಾರೆ.

ಹಿಂದಿನ ಕಾನೂನುಬದ್ಧ ಸುತ್ತೋಲೆಯನ್ನು ಮಾರ್ಪಡಿಸಿ ಕಾನೂನುಬಾಹಿರವಾಗಿ ಶಾಸಕರನ್ನು ಅಧ್ಯಕ್ಷರನ್ನಾಗಿಸುವ ಸುತ್ತೋಲೆಯನ್ನು ಕಳೆದ ತಿಂಗಳು 31ರಂದು ಸರ್ಕಾರ ಹೊರಡಿಸಿತು ಎಂದು ತಿಳಿಸಿದ್ದಾರೆ.

ಈ ಸುತ್ತೋಲೆ ಅನ್ವಯ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ ಶಾಸಕರನ್ನೇ ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ಉಲ್ಲೇಖಿಸಲಾಗದೆ. ಆದರೆ, ಇದು ಕಾನೂನುಬಾಹಿರ ಮತ್ತು ಶಿಕ್ಷಣ ಹಕ್ಕು ಕಾಯಿದೆ ಉಲ್ಲಂಘನೆ ಎಂದು ಪ್ರತಿಪಾದಿಸಿದ್ದಾರೆ.

ಎಕ್ಸೈಸ್ ಸುಂಕ ಇನ್ನೊಮ್ಮೆ ಕಡಿತ?

• ಅನ್ನಪೂರ್ಣಾ ಸಿಂಗ್

ನವದೆಹಲಿ: ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ಯಾರೆಲ್‌ಗೆ 100 ಡಾಲರ್‌ಗಿಂತ ಹೆಚ್ಚಾಗಿರುವ ಕಾರಣ, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕೇಂದ್ರ ಸರ್ಕಾರ ಇನ್ನೊಮ್ಮೆ ತಗ್ಗಿಸುವ ಸಾಧ್ಯತೆ ಇದೆ.

ಕಚ್ಚಾ ತೈಲದ ಬೆಲೆ ಹಾಗೂ ದೇಶದ ಚಿಲ್ಲರೆ ಹಣದುಬ್ಬರ ದರದ ನಡುವೆ ನೇರ ಸಂಬಂಧ ಇದೆ. ತೈಲ ದರ ಹೆಚ್ಚಾದರೆ ಸರಕು ಸಾಗಣೆ ವೆಚ್ಚ ಕೂಡ ಜಾಸ್ತಿಯಾಗಿ, ಬಹುತೇಕ ಉತ್ಪನ್ನಗಳ ಬೆಲೆ ದುಬಾರಿ ಆಗುತ್ತದೆ. ಜನವರಿಯಲ್ಲಿ ದೇಶದ ಚಿಲ್ಲರೆ ಹಣದುಬ್ಬರ ದರವು ಆರ್‌ಬಿಐ ನಿಗದಿ ಮಾಡಿ ಕೊಂಡಿರುವ ಗರಿಷ್ಠ ಮಟ್ಟವನ್ನು ಮೀರಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಜಾಸ್ತಿ ಆಗಿದ್ದರೂ, ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಸತತ 111 ದಿನಗಳಿಂದ ಹೆಚ್ಚಿಸಿಲ್ಲ. ಮಾರುಕಟ್ಟೆ ತಜ್ಞರ ಪ್ರಕಾರ, ಬ್ರೆಂಟ್ ಕಚ್ಚಾ ತೈಲದ ಬೆಲೆಯಲ್ಲಿ ಈಗ ಆಗಿರುವ ಹೆಚ್ಚಳದ ಪರಿಣಾಮವಾಗಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ಲೀಟರ್‌ಗೆ ₹ 10ರಷ್ಟು ಜಾಸ್ತಿ ಆಗಿರಬೇಕಿತ್ತು.

ಕೆಲವು ರಾಜ್ಯಗಳ ವಿಧಾನಸಭಾ ಚುನಾವಣೆ ಮುಗಿದ ನಂತರ ಕಂಪನಿಗಳು ತೈಲ ಬೆಲೆಯನ್ನು ಜಾಸ್ತಿ ಮಾಡಬಹುದು. 'ಆದರೆ, ಎಕ್ಸೈಸ್ ಸುಂಕವನ್ನು ಕಡಿಮೆ ಮಾಡಿ, ಬೆಲೆ ಹೆಚ್ಚಳದ ಹೊರೆಯನ್ನು ತಗ್ಗಿಸದೆ ಇದ್ದರೆ ಪರಿಣಾಮವು ಭಾರಿ ಪ್ರಮಾಣದಲ್ಲಿ ಇರುತ್ತದೆ. ಹಾಗಾಗಿ, ಸುಂಕದ ವಿಚಾರದಲ್ಲಿ ಕೇಂದ್ರವು ಕೆಲವು ಕ್ರಮಗಳನ್ನು ಕೈಗೊಳ್ಳಬಹುದು' ಎಂದು ಮೂಲಗಳು ಹೇಳಿವೆ.

'ಶಾಲಾ ಪ್ರಾಧಿಕಾರ ರಚನೆಗೆ ಮುಂದಾಗದ ರಾಜ್ಯಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅನ್ವಯ ರಾಜ್ಯ ಶಾಲಾ ಪ್ರಮಾಣೀಕರಣ ಪ್ರಾಧಿಕಾರ (ಎಸ್‌ಎಸ್‌ಎಸ್‌ಎ) ರಚಿಸಲು ಯಾವುದೇ ರಾಜ್ಯ ಸರ್ಕಾರಗಳು ಮುಂದಾಗುತ್ತಿಲ್ಲ' ಎಂದು ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ (ಕ್ಯಾಮ್ಸ್) ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಹೇಳಿದರು.

'ಎನ್‌ಇಪಿ ಅನ್ವಯ ಎಲ್ಲ ಶಾಲೆಗಳು ಗುಣಮಟ್ಟ ಕಾಪಾಡಲು ಮತ್ತು ಶೈಕ್ಷಣಿಕ ಚಟುವಟಿಕೆಗಳ ನಿಗಾವಹಿಸಲು ಎಸ್‌ಎಸ್‌ಎಸ್‌ಎ ರಚಿಸಬೇಕಾಗಿದೆ. ಇದುವರೆಗೆ ನಾಲ್ಕು ರಾಜ್ಯಗಳು ಮಾತ್ರ ಎಸ್‌ಎಸ್‌ಎಸ್‌ಎ ಸ್ಥಾಪಿಸುವ ಬಗ್ಗೆ ಚಿಂತನೆ ನಡೆಸಿವೆ. ಕೆಲವೆಡೆ ಪರೀಕ್ಷಾ ಮಂಡಳಿಗಳನ್ನೇ ಪ್ರಾಧಿಕಾರಗಳನ್ನಾಗಿ ಪರಿವರ್ತಿಸಲಾಗುತ್ತಿದೆ' ಎಂದು ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಎಸ್‌ಎಸ್‌ಎಸ್‌ಎ ರಚನೆಗೆ ಅಧಿಕಾರಿವರ್ಗ ಆಸಕ್ತಿ ವಹಿಸುತ್ತಿಲ್ಲ. ತಮ್ಮ ಅಧಿಕಾರದ ಬಲ ಕಡಿಮೆಯಾಗುತ್ತದೆ ಎನ್ನುವ ಕಾರಣಕ್ಕಾಗಿ ಉದ್ದೇಶಪೂರ್ವಕವಾಗಿ ವಿಳಂಬ ಮಾಡಲಾಗುತ್ತಿದೆ' ಎಂದರು.

'ಎನ್‌ಇಪಿ ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸಹ ಕಡೆಗಣಿಸಲಾಗುತ್ತಿದೆ. ರಾಜ್ಯದಾದ್ಯಂತ ಶೇ 50ರಷ್ಟು ಖಾಸಗಿ ಶಾಲೆಗಳಿವೆ. ಆದರೂ, ನೀತಿ, ನಿರೂಪಣೆಗಳಲ್ಲಿ ಖಾಸಗಿ ವಲಯವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ' ಎಂದು ಹೇಳಿದರು.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉನ್ನತ ಶಿಕ್ಷಣ ಹಂತದಲ್ಲಿ ಅನುಷ್ಠಾನಗೊಳಿಸಲು ಹೆಚ್ಚು ಆಸಕ್ತಿ ವಹಿಸಿವೆ. ಆದರೆ, ಪ್ರಾಥಮಿಕ ಶಿಕ್ಷಣದ ಬಗ್ಗೆ ಹೆಚ್ಚಿನ ಗಮನಹರಿಸಿಲ್ಲ' ಎಂದು ಸೆಂಟ್ರಲ್‌ಸ್ಕ್ವೇರ್ ಫೌಂಡೇಷನ್‌ನ ಅಮಿತ್ ಹೇಳಿದರು.

ಇಂದು ಸಮಾವೇಶ

ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಕರ್ನಾಟಕ ಖಾಸಗಿ ಶಾಲೆಗಳ ಒಕ್ಕೂಟ (ಕೆಪಿಎಂಟಿಸಿಸಿ) ವತಿಯಿಂದ ಫೆ.26ರಂದು ರಾಷ್ಟ್ರೀಯ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಜಮ್ಮು ಮತ್ತು ಕಾಶ್ಮೀರ ಸೇರಿದಂತೆ 12 ರಾಜ್ಯಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಡಿ. ಶಶಿಕುಮಾರ್ ತಿಳಿಸಿದರು.

₹1,000 ಕೋಟಿ ಮೀಸಲಿಡಲು ಸರ್ಕಾರಕ್ಕೆ ಒತ್ತಾಯ

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ: ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರು, ತೃತೀಯ ಲಿಂಗಿಗಳಿಗೆ ಮತ್ತು ಹಿರಿಯ ನಾಗರಿಕರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಕಲ್ಪಿಸಬೇಕು ಎಂದು ಬೆಂಗಳೂರು ಬಸ್ ಪ್ರಯಾಣಿಕರ ವೇದಿಕೆ ಆಗ್ರಹಿಸಿದೆ.

ಸುರಕ್ಷಿತ ಮತ್ತು ಗೌರವಯುತವಾದ ಪ್ರಯಾಣಕ್ಕಾಗಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸುವುದು ಅಗತ್ಯವಿದೆ ಎಂದು ವೇದಿಕೆ ಪ್ರತಿಪಾದಿಸಿದೆ.

ದುಬಾರಿ ಪ್ರಯಾಣ ದರದ ಬಗ್ಗೆ ವೇದಿಕೆ ಇತ್ತೀಚೆಗೆ ಸಾರ್ವಜನಿಕರ ಅಹವಾಲುಗಳ ಕುರಿತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೈಗೊಂಡಿದ್ದ ನಿರ್ಣಯಗಳನ್ನು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿ ಮಾತನಾಡಿದ ವೇದಿಕೆಯ ವಿನಯ್ ಶ್ರೀನಿವಾಸ್, 'ಸರ್ಕಾರ ಬಸ್ ಸೇವೆಯನ್ನು ಕೇವಲ ಲಾಭ ಮತ್ತು ನಷ್ಟದ ದೃಷ್ಟಿಕೋನದಿಂದ ನೋಡಬಾರದು. ಇದನ್ನು ಸೇವೆಯನ್ನಾಗಿ ಪರಿಗಣಿಸಬೇಕು. ಈ ಉಚಿತ ಸೌಲಭ್ಯಗಳನ್ನು ಕಲ್ಪಿಸಲು ರಾಜ್ಯ ಸರ್ಕಾರ ಮುಂಬರುವ ಬಜೆಟ್‌ನಲ್ಲಿ ಬಿಎಂಟಿಸಿಗೆ ₹1 ಸಾವಿರ ಕೋಟಿ ನೀಡಬೇಕು' ಎಂದು ಒತ್ತಾಯಿಸಿದರು.

ಐಐಎಸ್‌ಸಿಯ ಪ್ರೊ. ಆಶಿಶ್ ವರ್ಮಾ ಮಾತನಾಡಿ, 'ಪ್ರಯಾಣ ದರಗಳು ಜನಸಾಮಾನ್ಯರಿಗೆ ಕೈಗೆಟುಕುವಂತಿರಬೇಕು. ಇದಕ್ಕಾಗಿ ಸರ್ಕಾರ ಮಧ್ಯಪ್ರವೇಶಿಸಿ ಬಿಎಂಟಿಸಿಗೆ ಆರ್ಥಿಕ ನೆರವು ಕಲ್ಪಿಸುವುದು ಅಗತ್ಯವಿದೆ. ನಗರದ ಎಲ್ಲ ಪ್ರಮುಖ ರಸ್ತೆಗಳಲ್ಲಿ ಒಂದು ಪಥವನ್ನು ಬಸ್‌ಗಳಿಗೆ ಮೀಸಲಿಡಬೇಕು' ಎಂದು ಒತ್ತಾಯಿಸಿದರು.

ಸಾಮಾಜಿಕ ಕಾರ್ಯಕರ್ತರಾದ ಸಿಂಥಿಯಾ ಸ್ಟೀಫನ್ ಮಾತನಾಡಿ, 'ಕಾರ್ಮಿಕ ವರ್ಗಕ್ಕೆ ಸೇರಿದವರು ಹೆಚ್ಚಿನ ಸಂಖ್ಯೆಯಲ್ಲಿರುವ ಹೆಗಡೆ ನಗರ, ಟ್ಯಾನರಿ ರಸ್ತೆ ಮುಂತಾದ ಪ್ರದೇಶಗಳಲ್ಲಿ ಬಸ್‌ಗಳ ಸಂಚಾರ ಕಡಿಮೆ. ಇದರಿಂದ ಬಸ್‌ಗಳು ಯಾವಾಗಲೂ ಕಿಕ್ಕಿರಿದು ಭರ್ತಿಯಾಗಿರುತ್ತವೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬಸ್‌ಗಳ ಸಂಚಾರ ಒದಗಿಸಬೇಕು' ಎಂದು ಆಗ್ರಹಿಸಿದರು.

'ಗಾರ್ಮೆಂಟ್ಸ್ ಕಾರ್ಖಾನೆಗಳು ತಮ್ಮದೇ ಆದ ಸಾರಿಗೆ ಸೌಲಭ್ಯ ಒದಗಿಸಿದರೂ ಮಹಿಳೆಯರು ಕಿರುಕುಳ ಎದುರಿಸುತ್ತಿದ್ದಾರೆ. ಹೀಗಾಗಿ, ಬಿಎಂಟಿಸಿ ಸುರಕ್ಷಿತ ಪ್ರಯಾಣಕ್ಕಾಗಿ ಕೈಗೆಟಕುವ ದರಗಳಲ್ಲಿ ಸೇವೆ ನೀಡಬೇಕು. ತಮಿಳುನಾಡು ಮತ್ತು ದೆಹಲಿಯಲ್ಲಿ ಮಹಿಳೆಯರಿಗೆ ಉಚಿತ ಬಸ್ ಸೇವೆ ಒದಗಿಸಲಾಗಿದೆ. ಇದೇ ಮಾದರಿಯನ್ನು ಕರ್ನಾಟಕ ಅನುಸರಿಸಬೇಕು' ಎಂದು ಸಾಮಾಜಿಕ ಕಾರ್ಯಕರ್ತೆ, ಆನೇಕಲ್ ನಿವಾಸಿ ವಿಜಯಕುಮಾರಿ ಒತ್ತಾಯಿಸಿದರು.

ಬೆಂಗಳೂರು ಜಿಲ್ಲಾ ಬೀದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಬಾಬು ಮಾತನಾಡಿ, 'ಹೆಚ್ಚಿನ ಪ್ರಮಾಣದಲ್ಲಿ ಅಸಂಘಟಿತ ವಲಯದ ಕಾರ್ಮಿಕರು ಬಿಎಂಟಿಸಿ ಬಸ್‌ಗಳನ್ನು ಬಳಸುತ್ತಾರೆ. ದರ ಕಡಿಮೆ ಮಾಡುವುದರಿಂದ ಮತ್ತು ಮಹಿಳೆಯರಿಗೆ ಉಚಿತ ಸಾರಿಗೆ ಸೌಲಭ್ಯ ಕಲ್ಪಿಸುವುದರಿಂದ ಅಸಂಘಟಿತ ವಲಯದ ಕಾರ್ಮಿಕರಿಗೆ ಹೆಚ್ಚು ಅನುಕೂಲವಾಗುತ್ತದೆ' ಎಂದು ಹೇಳಿದರು.

ವೇದಿಕೆಯ ಹಕ್ಕೊತ್ತಾಯಗಳು

- ಸಾಮಾನ್ಯ ಜನರ ಪ್ರಯಾಣ ದರವನ್ನು ಅರ್ಧದಷ್ಟು ಕಡಿಮೆ ಮಾಡಬೇಕು.
- ವಿದ್ಯಾರ್ಥಿಗಳು ಉಚಿತವಾಗಿ ನಗರದಾದ್ಯಂತ ಪ್ರಯಾಣಿಸಲು ಅವಕಾಶ ಕಲ್ಪಿಸಬೇಕು. ನಿರ್ದಿಷ್ಟ ಮಾರ್ಗಗಳಿಗೆ ಮಾತ್ರ ಸೌಲಭ್ಯ ಕಲ್ಪಿಸಬಾರದು.
- ಅಸಮರ್ಪಕ ಸೇವೆಗಳಿರುವ ಸ್ಥಳಗಳಲ್ಲಿ ಹೆಚ್ಚುವರಿ ಬಸ್ ಸಂಚಾರ ಒದಗಿಸಬೇಕು.

ನಗರದಲ್ಲಿ ಇಂದು

'ನನ್ನ ಪಾಲಿಸಿ-ನನ್ನ ಕೈಯಲ್ಲಿ' ಬೆಳೆ ವಿಮೆ ಪಾಲಿಸಿ ವಿತರಣಾ ಅಭಿಯಾನ ಉದ್ಘಾಟನೆ–ಕೃಷಿ ಸಚಿವ ಬಿ.ಸಿ.ಪಾಟೀಲ, ಸ್ಥಳ–ಬಿಎಸ್‌ಎಚ್ ಸಭಾಂಗಣ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಳಿಗ್ಗೆ 9

ಎಂ. ವೆಂಕಯ್ಯ ನಾಯ್ಡು

ಗ್ರೀನ್‌ವುಡ್ ಹೈ ಇಂಟರ್‌ನ್ಯಾಷನಲ್ ಸ್ಕೂಲ್‌ನ ಅತ್ಯಾಧುನಿಕ ಕ್ರೀಡೆಗಳು ಮತ್ತು ಕಲಾ ರಂಗ ಉದ್ಘಾಟನೆ–ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು, ಅತಿಥಿ–ರಾಜ್ಯಪಾಲ ಥಾವರಚಂದ್ ಗೆಹಲೋತ್, ಸ್ಥಳ–ಶಾಲೆಯ ಕ್ಯಾಂಪಸ್, ಸರ್ಜಾಪುರ, ಬೆಳಿಗ್ಗೆ 10

ಎಚ್.ಎಸ್.ಶಿವಪ್ರಕಾಶ್ ಅವರ 'ಸಮಗ್ರ ಕಾವ್ಯ ಚರ್ಚೆ' ಮತ್ತು ಸಮಾಜಮುಖಿ ವಾರ್ಷಿಕ ಕಥಾ ಸಂಕಲನ ಬಿಡುಗಡೆ: ವಿಷಯ ಮಂಡನೆ–ಎಂ.ಎಸ್. ಆಶಾದೇವಿ, ಕಮಲಾಕರ ಕಡವೆ, ಆರೀಫ್ ರಾಜಾ, ಅಧ್ಯಕ್ಷತೆ–ಕೆ.ಸತ್ಯನಾರಾಯಣ, ಆಯೋಜನೆ–ಸಮಾಜಮುಖಿ, ಸ್ಥಳ–ಗಾಂಧಿಭವನ, ಬೆಳಿಗ್ಗೆ 10.30

'ಎಸ್‌ಸಿಪಿ-ಟಿಎಸ್‌ಪಿ ಕಾಯ್ದೆಯ ಕಡ್ಡಾಯ ಅನುಷ್ಠಾನ'–ಒಂದು ಚರ್ಚೆ: ಚಾಲನೆ–ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಅಧ್ಯಕ್ಷತೆ–ಗುರುಪ್ರಸಾದ್ ಕೆರಗೋಡು, ಅತಿಥಿಗಳು–ಮಾವಳ್ಳಿ ಶಂಕರ್, ಟಿ.ಆರ್.ಚಂದ್ರಶೇಖರ್, ಡಿ.ಚಂದ್ರಶೇಖರಯ್ಯ, ಕೃಷ್ಣರಾಜು, ವಿ.ನಾಗರಾಜ್, ಲಕ್ಷ್ಮೀನಾರಾಯಣ ನಾಗವಾರ, ಆಯೋಜನೆ–ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ, ಸ್ಥಳ–ಬಾಪೂಜಿ ಸಭಾಂಗಣ, ಲಿಡ್ಕರ್ ಭವನ, ಬಾಬು ಜಗಜೀವನ್ ರಾಮ್ ಚರ್ಮ ಕೈಗಾರಿಕಾ ನಿಗಮ, ವಸಂತನಗರ, ಬೆಳಿಗ್ಗೆ 10.30

ಡಿ.ಎಸ್.ವೀರಯ್ಯ ಅವರ 'ಬಾಬಾ ಸಾಹೇಬ್ ಅಂಬೇಡ್ಕರ್ ಸಂದೇಶಗಳು' ಪುಸ್ತಕ ಬಿಡುಗಡೆ: ಸಚಿವ ಎಸ್. ಟಿ.ಸೋಮಶೇಖರ್, ಕೃತಿ ಬಗ್ಗೆ–ಬೈರಮಂಗಲ ರಾಮೇಗೌಡ, ಅತಿಥಿಗಳು–ಮಲ್ಲೇಪುರಂ ಜಿ.ವೆಂಕಟೇಶ್, ದೊಡ್ಡರಂಗೇಗೌಡ, ಡಿ.ಎಸ್.ವೀರಯ್ಯ, ಆಯೋಜನೆ–ಡಿ.ಎಸ್.ವಿ.ಫೌಂಡೇಷನ್, ಸ್ಥಳ–ನಯನ ಸಭಾಂಗಣ, ಬೆಳಿಗ್ಗೆ 11

ರಾಜ್ಯಮಟ್ಟದ ಪ್ರತಿಭೋತ್ಸವ: ಆಯೋಜನೆ–ವಿವೇಕ ಚೇತನ ಚಾರಿಟಬಲ್ ಟ್ರಸ್ಟ್, ಸ್ಥಳ–ಪ್ರಮೀಳಾ ಬಾಯಿಮಾನೆ ಸಭಾಂಗಣ, ಬಿಬಿಎಂಪಿ ಪ್ರೌಢಶಾಲೆ, ವಿದ್ಯಾರಣ್ಯಪುರ, ಮಧ್ಯಾಹ್ನ 2.30

'ಮಾರ್ಗಝಿ' ನಾಟಕ ಪ್ರದರ್ಶನ: ನಿರ್ದೇಶನ–ವಿ.ಬಾಲಕೃಷ್ಣನ್, ಆಯೋಜನೆ–ಥಿಯೇಟರ್ ನಿಶಾ, ಸ್ಥಳ–ರಂಗಶಂಕರ, ಮಧ್ಯಾಹ್ನ 3.30 ಮತ್ತು ಸಂಜೆ 7.30

ಪಂ.ಭೀಮಸೇನ ಜೋಶಿ ಜನ್ಮಶತಮಾನೋತ್ಸವ: ಉದ್ಘಾಟನೆ–ಸಚಿವ ವಿ.ಸುನಿಲ್ ಕುಮಾರ್, ಅಧ್ಯಕ್ಷತೆ–ಶಾಸಕ ಉದಯ್ ಬಿ.ಗರುಡಾಚಾರ್, ಅತಿಥಿಗಳು–ಸಂಸದ ತೇಜಸ್ವಿ ಸೂರ್ಯ, ಎಸ್.ರಂಗಪ್ಪ, ಜಿ.ಎಸ್.ಹೆಗಡೆ, ಏರ್ಯ ಬಾಲಕೃಷ್ಣ ಹೆಗಡೆ, ನಾಗರಾಜ್‌ರಾವ್ ಹವಾಲ್ದಾರ್, ಆನೂರು ಅನಂತಕೃಷ್ಣ ಶರ್ಮ, ಆಯೋಜನೆ–ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 4.30

ಎಸ್.ಪಿ.ವರದರಾಜು ಪ್ರಶಸ್ತಿ ಪ್ರದಾನ: ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್, ಪುರಸ್ಕೃತರು–ಪ್ರೇಮಾ ಹೊಸಮನಿ, ಚಿಕ್ಕಣ್ಣ, ಅತಿಥಿಗಳು–ಚಿಂದೋಡಿ ಬಂಗಾರೇಶ್, ಬರಗೂರು ರಾಮಚಂದ್ರಪ್ಪ, ಆಯೋಜನೆ–ವರದರಾಜು ಬಳಗ, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ಸ್ವಾತಿ ಅಯ್ಯರ್ ಕಟ್ಟಿ, ಅತಿಥಿಗಳು–ಅಶೋಕ್ ಹಾರನಹಳ್ಳಿ, ಎಲ್.ಎ ರವಿಸುಬ್ರಹ್ಮಣ್ಯ, ಎಂ.ಎ. ರಾಮಚಂದ್ರ, ವೈ.ಕೆ. ಸಂಧ್ಯಾಶರ್ಮ, ಪುಲಿಕೇಶಿ ಕಸ್ತೂರಿ, ಬಿ.ಎಸ್.ರವಿಶಂಕರ್, ಆಯೋಜನೆ–ಮಾತೃಕಾ ಕಲ್ಚರಲ್ ಟ್ರಸ್ಟ್, ಸ್ಥಳ–ಗಾಯನ ಸಮಾಜ, ಸಂಜೆ 5.30


ಸ್ವಾತಿ ಅಯ್ಯರ್ ಕಟ್ಟಿ

ಸಾಧಕರಿಗೆ ಪ್ರಶಸ್ತಿ ಪ್ರದಾನ: ಅತಿಥಿಗಳು–ಸಂಸದ ಡಿ.ವಿ.ಸದಾನಂದಗೌಡ, ಸಚಿವರಾದ ವಿ.ಸೋಮಣ್ಣ, ಸಿ.ಎನ್. ಅಶ್ವತ್ಥನಾರಾಯಣ, ಕೆ.ಗೋಪಾಲಯ್ಯ, ಸಂಸದ ಪಿ.ಸಿ.ಮೋಹನ್, ಆಯೋಜನೆ–ಕರ್ನಾಟಕ ನವನಿರ್ಮಾಣ ಸೇನೆ, ಸ್ಥಳ–ರಾಜ್‌ಕುಮಾರ್ ಒಳಾಂಗಣ ಕ್ರೀಡಾಂಗಣ, ಗೆಳೆಯರ ಬಳಗ, ಮಹಾಲಕ್ಷ್ಮೀ ಬಡಾವಣೆ, ಸಂಜೆ 5

ಹೊಸ ಚಿಗುರು ಹಳೆ ಬೇರು–ಸುಗಮ ಸಂಗೀತ ಉತ್ಸವ: ಉದ್ಘಾಟನೆ–ನಗರ ಶ್ರೀನಿವಾಸ ಉಡುಪ, ಅಧ್ಯಕ್ಷತೆ–ಕಿಕ್ಕೇರಿ ಕೃಷ್ಣಮೂರ್ತಿ, ಅತಿಥಿಗಳು–ಲೇಪಾಕ್ಷ, ಕೃಷ್ಣಸ್ವಾಮಿ ಸುಬ್ಬರಾವ್, ಕೆ.ಎಸ್.ಸತೀಶ್, ಆಯೋಜನೆ–ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಸ್ಥಳ–ಉದಯಭಾನು ಕಲಾ ಸಂಘ, ಗವಿಪುರ, ಸಂಜೆ 5.30

ನಗರದ ಹಲವೆಡೆ ಕಾರ್ಯಾರಂಭ • ಕಳವಾದ ವಾಹನಗಳ ಪತ್ತೆಗೂ ಅನುಕೂಲ

ನಿಯಮ ಉಲ್ಲಂಘನೆ ಪತ್ತೆಗೆ ‘ಎಎನ್‌ಪಿಆರ್’ ಕ್ಯಾಮೆರಾ

ಪ್ರಜಾವಾಣಿ ವಾರ್ತೆ

ಎಎನ್‌ಪಿಆರ್ ಕ್ಯಾಮೆರಾ

ನಗರದ ಶಾಂತಲಾ ಸಿಲ್ಕ್ ಹೌಸ್ ವೃತ್ತ ಬಳಿ ಎಎನ್‌ಪಿಆರ್ ಕ್ಯಾಮೆರಾ ಮೂಲಕ ಸಹಾಯಕ ಸಬ್ ಇನ್‌ಸ್ಪೆಕ್ಟರೊಬ್ಬರು ಗುರುವಾರ ವಾಹನಗಳ ಮಾಹಿತಿ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆಯ ಹಳೇ ಪ್ರಕರಣ ಹಾಗೂ ಕಳವಾದ ವಾಹನಗಳ ಪತ್ತೆಗೆ ಹೊಸ ಮಾರ್ಗ ಕಂಡುಕೊಂಡಿರುವ ಪೊಲೀಸರು, ಸ್ವಯಂಪ್ರೇರಿತ ನೋಂದಣಿ ಸಂಖ್ಯೆ ಗುರುತಿಸುವ (ಎಎನ್‌ಪಿಆರ್) ಕ್ಯಾಮೆರಾ ಉಪಕರಣ ಬಳಸಲು ಮುಂದಾಗಿದ್ದಾರೆ.

‘ಎಲ್ಲೆಂದರಲ್ಲಿ ವಾಹನ ನಿಲ್ಲಿಸಿ ಪೊಲೀಸರು ಕಿರುಕುಳ ನೀಡುತ್ತಾರೆ’ ಎಂಬ ಆರೋಪಗಳು ಸಾರ್ವಜನಿಕರಿಂದ ಕೇಳಿಬಂದಿದ್ದವು. ಕಣ್ಣಿಗೆ ಕಾಣುವ ರೀತಿಯಲ್ಲಿ ನಿಯಮ ಉಲ್ಲಂಘನೆಯಾದರೆ ಮಾತ್ರ ವಾಹನ ನಿಲ್ಲಿಸಿ ತಪಾಸಣೆ ನಡೆಸುವಂತೆ ಹಿರಿಯ ಅಧಿಕಾರಿಗಳು, ಪೊಲೀಸರಿಗೆ ಸೂಚನೆ ನೀಡಿದ್ದರು.

ಇದರ ನಡುವೆಯೂ ಹಲವು ಪೊಲೀಸರು ಸೂಚನೆ ಪಾಲಿಸುತ್ತಿರಲಿಲ್ಲ. ಹೀಗಾಗಿ, ಸಂಚಾರ ಪೊಲೀಸರ ವಿರುದ್ಧ ನಿತ್ಯವೂ ದೂರುಗಳು ಬರುತ್ತಿದ್ದವು. ಇದಕ್ಕೆ ಪರಿಹಾರ ಕಂಡುಕೊಳ್ಳುವುದಕ್ಕಾಗಿ ಸಂಚಾರ ಪೊಲೀಸರು, ಎಎನ್‌ಪಿಆರ್ ಕ್ಯಾಮೆರಾ ಮೊರೆ ಹೋಗಿದ್ದಾರೆ.

‘500 ಮೀಟರ್ ದೂರದಲ್ಲಿ ಎದುರಿಗೆ ಬರುವ ವಾಹನಗಳ ನೋಂದಣಿ ಸಂಖ್ಯೆಯನ್ನು ಗ್ರಹಿಸಿ, ವಾಹನದ ಮೇಲಿರುವ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಪತ್ತೆ ಮಾಡುವ ಸಾಮರ್ಥ್ಯ ಎಎನ್‌ಪಿಆರ್ ಕ್ಯಾಮೆರಾಗಳಿಗೆ ಇದೆ. ಉಪ್ಪಾರಪೇಟೆ, ಚಾಮರಾಜಪೇಟೆ, ಚಿಕ್ಕಪೇಟೆ, ಹೈಗ್ರೌಂಡ್ಸ್, ಬಸವನಗುಡಿ, ರಾಜಾಜಿನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಪ್ರಾಯೋಗಿಕವಾಗಿ ಈ ಕ್ಯಾಮೆರಾ ಬಳಸಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ವಾಹನಗಳ ಸಂಪೂರ್ಣ ಮಾಹಿತಿ ಸಾರಿಗೆ ಇಲಾಖೆಯ ಸರ್ವರ್‌ನಲ್ಲಿದೆ. ನಿಯಮ ಉಲ್ಲಂಘನೆ ಪುರಾವೆಗಳು ಸಂಚಾರ ನಿರ್ವಹಣಾ ಕೇಂದ್ರದ (ಟಿಎಂಸಿ) ಸರ್ವರ್‌ನಲ್ಲಿ ದಾಖಲಾಗುತ್ತಿವೆ. ಎರಡೂ ಸರ್ವರ್‌ಗಳನ್ನು ಎಎನ್‌ಪಿಆರ್ ಕ್ಯಾಮೆರಾ ಉಪಕರಣಕ್ಕೆ ಜೋಡಿಸಲಾಗಿದೆ. ಇದರ ಸಹಾಯದಿಂದ ಕ್ಯಾಮೆರಾ ಕೆಲಸ ಮಾಡಲಿದೆ.’

‘ಉಪಕರಣ ನಿರ್ವಹಣೆ ಜವಾಬ್ದಾರಿಯನ್ನು ನಿರ್ದಿಷ್ಟ ಸಿಬ್ಬಂದಿಗೆ ವಹಿಸಲಾಗಿದೆ. ಅವರ ಮೊಬೈಲ್‌ಗೆ ‘ಉಪಕರಣ ನಿರ್ವಹಣೆ ಆ್ಯಪ್’ ಇನ್‌ಸ್ಟಾಲ್ ಮಾಡಲಾಗಿದೆ. ಎಎನ್‌ಪಿಆರ್ ಕ್ಯಾಮೆರಾ ಉಪಕರಣದಲ್ಲಿ ಕಾಣುವ ಎಲ್ಲ ದೃಶ್ಯಗಳು, ಮೊಬೈಲ್‌ನಲ್ಲಿ ಗೋಚರಿಸಲಿವೆ. ಯಾವುದಾದರೂ ವಾಹನದ ಮೇಲೆ ಹಳೇ ಪ್ರಕರಣಗಳು ಬಾಕಿ ಇರುವುದು ಖಾತ್ರಿಯಾಗುತ್ತಿದ್ದಂತೆ, ಅಂಥ ವಾಹನವನ್ನು ಪೊಲೀಸರು ತಡೆದು ದಂಡ ವಿಧಿಸಲಿದ್ದಾರೆ’ ಎಂದೂ ತಿಳಿಸಿದರು.

ಕಳವಾದ ವಾಹನಗಳೂ ಪತ್ತೆ: ‘ರಾಜ್ಯ ಹಾಗೂ ರಾಷ್ಟ್ರೀಯ ಅಪರಾಧ ದಾಖಲೆಗಳ ಘಟಕಗಳು ತಮ್ಮದೇ ಸರ್ವರ್ ಹೊಂದಿವೆ. ಅವುಗಳನ್ನೂ ಎಎನ್‌ಪಿಆರ್ ಉಪಕರಣಕ್ಕೆ ಜೋಡಿಸಲಾಗಿದೆ. ಹೀಗಾಗಿ, ಕಳುವಾದ ವಾಹನಗಳ ಮಾಹಿತಿಯೂ ಲಭ್ಯವಾಗಲಿದೆ’ ಎಂದು ಪೊಲೀಸ್ ಅಧಿಕಾರಿ ವಿವರಿಸಿದರು.

‘ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಬಾಕಿ ಇದ್ದರೆ ಉಪಕರಣದಲ್ಲಿ ‘ಹಸಿರು’ ಬಣ್ಣದ ಸೂಚನೆ ಸಿಗುತ್ತದೆ. ಕದ್ದ ವಾಹನವಾಗಿದ್ದರೆ ಕೆಂಪು ಬಣ್ಣದ ಸೂಚನೆ ಲಭ್ಯವಾಗುತ್ತದೆ. ಉಪಕರಣದ ಬಗ್ಗೆ ಸಿಬ್ಬಂದಿಗೂ ತರಬೇತಿ ನೀಡಲಾಗಿದೆ. ಬಾಡಿವೋರ್ನ್ ಕ್ಯಾಮೆರಾ ಧರಿಸಲು ಸೂಚಿಸಲಾಗಿದೆ’ ಎಂದರು.

ವಾಹನ ಅಡ್ಡಗಟ್ಟಿ ಸುಲಿಗೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರೊಬ್ಬರ ವಾಹನವನ್ನು ಅಡ್ಡಗಟ್ಟಿ ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಕೆ.ಜಿ.ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಡಿ.ಜೆ.ಹಳ್ಳಿಯ ಎ.ಕೆ ಕಾಲೊನಿಯ ಮಧುರಾಜ್ (23) ಹಾಗೂ ಪಿಳ್ಳಣ್ಣ ಗಾರ್ಡನ್ ನಿವಾಸಿ ಎಸ್. ಸುಜಯ್ (23) ಬಂಧಿತರು.

‘ದಿನಸಿ ಕಂಪನಿಯೊಂದರ ಉದ್ಯೋಗಿ ವೆಂಕಟೇಶ್, ಫೆ. 22ರಂದು ರಾತ್ರಿ 10.30ರ ಸುಮಾರಿಗೆ ಕೆಲಸ ಮುಗಿಸಿಕೊಂಡು ಮನೆಗೆ ಹೊರಟಿದ್ದರು. ಅವರನ್ನು ಅಡ್ಡಗಟ್ಟಿ ಬೆದರಿಸಿದ್ದ ಆರೋಪಿ ಗಳು, ₹ 1,200 ಸುಲಿಗೆ ಮಾಡಿಕೊಂಡು ಪರಾರಿಯಾಗಿದ್ದರು. ಸುಲಿಗೆ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮನೆಯಲ್ಲಿ ಅಜ್ಜಿ- ಮೊಮ್ಮಗಳ ಅನುಮಾನಾಸ್ಪದ ಸಾವು

ವೃದ್ಧೆ ಮುಖದಲ್ಲಿ ಗಾಯ • ನೇಣು ಬಿಗಿದ ಸ್ಥಿತಿಯಲ್ಲಿ ದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮಗಳು, ಮೊಮ್ಮಗ ಇಲ್ಲದ ವೇಳೆ ನಡೆದ ಘಟನೆ
- ಎರಡು ತಿಂಗಳ ಹಿಂದಷ್ಟೇ ಮೊಮ್ಮಗಳ ಮಗು ಸಾವು

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಅಜ್ಜಿ- ಮೊಮ್ಮಗಳು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾರೆ.

‘ಸ್ಥಳೀಯ ಮಾರುತಿ ನಗರದ ನಿವಾಸಿ ಜಯಮ್ಮ (70) ಹಾಗೂ ಅವರ ಮೊಮ್ಮಗಳು ಕೊಟ್ಟಿಗೆಪಾಳ್ಯದ ಮಮತಾ (24) ಮೃತರು. ಮನೆಯ ಕೊಠಡಿಯಲ್ಲಿ ಮುಖಕ್ಕೆ ತೀವ್ರ ರಕ್ತ ಗಾಯವಾಗಿರುವ ಸ್ಥಿತಿಯಲ್ಲಿ ಜಯಮ್ಮ ಮೃತದೇಹ ಪತ್ತೆಯಾಗಿದೆ. ಇನ್ನೊಂದು ಕೊಠಡಿಯಲ್ಲಿ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಮಮತಾ ಮೃತದೇಹ ಸಿಕ್ಕಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಗಳ ಜೊತೆ ವಾಸವಿದ್ದ ವೃದ್ಧೆ: ‘ಮಗಳು ಹಾಗೂ ಮೊಮ್ಮಗನ ಜೊತೆ ವೃದ್ಧೆ ಜಯಮ್ಮ ಮಾರುತಿನಗರದಲ್ಲಿ ವಾಸವಿದ್ದರು. ಎಂ.ಕಾಂ ಪದವಿ ಮುಗಿಸಿದ್ದ ಮೊಮ್ಮಗಳು ಮಮತಾ ಅವರನ್ನು ಕೊಟ್ಟಿಗೆಪಾಳ್ಯದ ಯುವಕನ ಜೊತೆ ಮದುವೆ ಮಾಡಿಕೊಡಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಮತಾ ಅವರಿಗೆ ಜನಿಸಿದ್ದ ಮಗು, ಎರಡು ತಿಂಗಳ ಹಿಂದಷ್ಟೇ ತೀರಿಕೊಂಡಿತ್ತು. ಅದರಿಂದ ಮಮತಾ ಮಾನಸಿಕವಾಗಿ ನೊಂದಿದ್ದರು. ಅಜ್ಜಿ ಮನೆಗೆ ಆಗಾಗ ಬಂದು ಹೋಗುತ್ತಿದ್ದರು’ ಎಂದೂ ತಿಳಿಸಿವೆ.

ಗೋಡೆ ಮೇಲೂ ರಕ್ತ: ‘ಮಗಳು ಹಾಗೂ ಮೊಮ್ಮಗ, ಗುರುವಾರ ಸಂಬಂಧಿಕರೊಬ್ಬರ ಮದುವೆಗೆಂದು ಮಂಡ್ಯಕ್ಕೆ ಹೋಗಿದ್ದರು. ಅಜ್ಜಿ ಜಯಮ್ಮ ಮಾತ್ರ ಮನೆಯಲ್ಲಿದ್ದರು. ಅದೇ ಮನೆಗೆ ಕೊಟ್ಟಿಗೆಪಾಳ್ಯದಿಂದ ಮಮತಾ ಸಹ ಮಧ್ಯಾಹ್ನ ಬಂದಿದ್ದರೆಂದು ಪ್ರತ್ಯಕ್ಷದರ್ಶಿಗಳು ಹೇಳಿಕೆ ನೀಡಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಪತ್ನಿ ಮಮತಾ ಮನೆಗೆ ವಾಪಸು ಬಾರದಿದ್ದರಿಂದ ಅನುಮಾನಗೊಂಡಿದ್ದ ಪತಿ, ಕೊಟ್ಟಿಗೆಪಾಳ್ಯದಿಂದ ಮಾರುತಿನಗರದ ಮನೆಗೆ ಹೋಗಿದ್ದರು. ಮನೆ ಬಾಗಿಲು ಒಳಗಿನಿಂದ ಲಾಕ್ ಆಗಿತ್ತು. ಕಿಟಕಿಯಲ್ಲಿ ನೋಡಿದಾಗ ಮೃತದೇಹಗಳು ಕಂಡಿದ್ದವು. ಬಳಿಕವೇ ಠಾಣೆಗೆ ಮಾಹಿತಿ ನೀಡಿದ್ದರು’ ಎಂದೂ ತಿಳಿಸಿವೆ.

‘ವೃದ್ಧೆಯ ಮುಖದ ಮೇಲೆ ಗಾಯವಾಗಿ, ರಕ್ತ ಹೆಪ್ಪುಗಟ್ಟಿತ್ತು. ಮನೆಯ ಗೋಡೆ ಹಾಗೂ ಕೆಲ ಸಾಮಗ್ರಿಗಳ ಮೇಲೂ ರಕ್ತದ ಕಲೆ ಇದೆ. ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಪತ್ತೆಯಾದ ಮಮತಾ ಅವರ ಕೈಗೂ ರಕ್ತ ಅಂಟಿಕೊಂಡಿದೆ. ಎರಡೂ ಸಾವುಗಳಿಗೆ ಕಾರಣವೇನು ಎಂಬುದು ಮರಣೋತ್ತರ ಪರೀಕ್ಷೆಯಿಂದ ತಿಳಿಯಲಿದೆ. ಪತಿ ಹಾಗೂ ಕುಟುಂಬಸ್ಥರ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಎಲ್ಲ ಆಯಾಮದಲ್ಲೂ ತನಿಖೆ ಮುಂದುವರಿದಿದೆ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಪರಿಶೀಲನೆ ಸುರಕ್ಷತಾ ನಗರ ಯೋಜನೆ ಅಡಿಯಲ್ಲಿ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಬೆಂಗಳೂರು ನಗರ ಪೊಲೀಸ್ ನಿರ್ಮಿಸಿರುವ ‘ನಿರ್ಭಯ ಕೇಂದ್ರ–ಸಖಿ ಒನ್ ಸ್ಟಾಪ್ ಸೆಂಟರ್’ ಅನ್ನು ಪೊಲೀಸ್ ಕಮಿಷನರ್ ಕಮಲ್ ಪಂತ್ ಪರಿಶೀಲಿಸಿದರು. ಆರೋಗ್ಯ ಇಲಾಖೆಯ ಮಾನಸಿಕ ಆರೋಗ್ಯ ವಿಭಾಗದ ಉಪನಿರ್ದೇಶಕಿ ಡಾ. ರಜನಿ ಪಿ., ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಡಾ. ಅರುಂಧತಿ ಚಂದ್ರಶೇಖರ್, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಆರ್. ಪ್ರಮೀಳಾ ನಾಯ್ಡು ಇದ್ದಾರೆ – ಪ್ರಜಾವಾಣಿ ಚಿತ್ರ

ಶ್ರೀಕಂಠೇಶ್ವರ ದೇಗುಲ: ₹ 2.04 ಕೋಟಿ ಸಂಗ್ರಹ

ಪ್ರಜಾವಾಣಿ ವಾರ್ತೆ

ನಂಜನಗೂಡು: ಇಲ್ಲಿನ ಶ್ರೀಕಂಠೇಶ್ವರ ದೇವಾಲಯದ ಹರಕೆ ಹುಂಡಿಗಳಲ್ಲಿ ಭಕ್ತರು ನೀಡಿರುವ ಕಾಣಿಕೆ ಎಣಿಕೆ ಕಾರ್ಯ ಶುಕ್ರವಾರ ನಡೆದಿದ್ದು, ₹ 2.4 ಕೋಟಿ ಸಂಗ್ರಹಗೊಂಡಿದೆ.

ದೇವಾಲಯದ ದಾಸೋಹ ಭವನದಲ್ಲಿ ನಡೆದ ಕಾರ್ಯದಲ್ಲಿ ₹ 2,04,08,923 ಕೋಟಿ ನಗದು, 120 ಗ್ರಾಂ ಚಿನ್ನ, 5.6 ಕೆ.ಜಿ ಬೆಳ್ಳಿ ಹಾಗೂ 15 ವಿದೇಶಿ ಕರೆನ್ಸಿಗಳು ಲಭ್ಯವಾಗಿವೆ.

ನಗರದ ಬ್ಯಾಂಕ್ ಆಫ್ ಬರೋಡ ಸಿಬ್ಬಂದಿ ಹಾಗೂ ಸ್ವಸಹಾಯ ಸಂಘದ ನೂರಕ್ಕೂ ಹೆಚ್ಚು ಮಹಿಳೆಯರು, ದೇವಾಲಯದ ಸಿಬ್ಬಂದಿ ಎಣಿಕೆ ಕಾರ್ಯದಲ್ಲಿ ಭಾಗವಹಿಸಿದ್ದರು.

₹ 50 ಲಕ್ಷ ಮೌಲ್ಯದ ಚಿನ್ನದ ಗಟ್ಟಿ ಕಳ್ಳತನ: ಆರೋಪಿ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಕೆಲಸಕ್ಕಿದ್ದ ಅಂಗಡಿಗೆ ಸೇರಿದ್ದ ₹ 50 ಲಕ್ಷ ಮೌಲ್ಯದ ಚಿನ್ನದ ಗಟ್ಟಿ ಕದ್ದುಕೊಂಡು ಪರಾರಿಯಾಗಿದ್ದ ಆರೋಪಿ ಅಮರ್ ಮೊಹಂತ್ (33) ಎಂಬಾತನನ್ನು ಜಯನಗರ ಪೊಲೀಸರು ಬಂಧಿಸಿದ್ದಾರೆ.

‘ಕೊಲ್ಕತ್ತಾದ ಅಮರ್, ನಗರದ ತಿರುಮಲ ಜ್ಯುವೆಲರ್ಸ್ ಮಳಿಗೆಯಲ್ಲಿ ಕೆಲಸಕ್ಕಿದ್ದ. ಮಾಲೀಕ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡು ಆತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೆಲ ತಿಂಗಳು ಚೆನ್ನಾಗಿ ಕೆಲಸ ಮಾಡಿದ್ದ ಅಮರ್, ಮಾಲೀಕರ ಮೆಚ್ಚುಗೆ ಗಳಿಸಿದ್ದ. ಆತನನ್ನು ನಂಬಿದ್ದ ಮಾಲೀಕ, ‘ಅಕ್ಕಸಾಲಿಗನ ಬಳಿ ಹೋಗಿ ಚಿನ್ನಾಭರಣ ಮಾಡಿಸಿಕೊಂಡು ಬಾ’ ಎಂದು ₹ 50 ಲಕ್ಷ ಮೌಲ್ಯದ ಚಿನ್ನದ ಗಟ್ಟಿಯನ್ನು ಕೊಟ್ಟಿದ್ದರು. ಅದರ ಸಮೇತ ಪರಾರಿಯಾಗಿದ್ದ ಆರೋಪಿ, ಕೋಲ್ಕತ್ತಗೆ ಹೋಗಿದ್ದ.’

‘ಆತನ ವಿಳಾಸವನ್ನು ಪತ್ತೆ ಮಾಡಿದ್ದ ವಿಶೇಷ ತಂಡ, ಕೋಲ್ಕತ್ತ ಸೀತಾಪುರ ಗ್ರಾಮಕ್ಕೆ ಹೋಗಿ ಆರೋಪಿಯನ್ನು ಬಂಧಿಸಿ ಕರೆತಂದಿದೆ. ತನ್ನ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂಬ ಕಾರಣಕ್ಕೆ ಕಳ್ಳತನ ಮಾಡಿದ್ದಾಗಿ ಆರೋಪಿಯು ಹೇಳಿಕೆ ನೀಡಿದ್ದಾನೆ’ ಎಂದೂ ಪೊಲೀಸರು ತಿಳಿಸಿದರು.

80 ಕೆ.ಜಿ ಗಾಂಜಾ ಜಪ್ತಿ: ಇಬ್ಬರ ಸೆರೆ

ಬೆಂಗಳೂರು: ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ನಡೆಸಿರುವ ಮಹಾಲಕ್ಷ್ಮಿ ಲೇಔಟ್ ಪೊಲೀಸರು, ಮೂವರು ಆರೋಪಿಗಳನ್ನು ಬಂಧಿಸಿ 80 ಕೆ.ಜಿ 350 ಗ್ರಾಂ ಗಾಂಜಾ ಜಪ್ತಿ ಮಾಡಿದ್ದಾರೆ.

‘ಠಾಣೆ ವ್ಯಾಪ್ತಿಯ ಕಮಲಮ್ಮ ಗುಂಡಿ ಆಟದ ಮೈದಾನದಲ್ಲಿ ಆರೋಪಿಯೊಬ್ಬ ಗಾಂಜಾ ಮಾರುತ್ತಿದ್ದ. ಆತನನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಗಾಂಜಾ ಜಾಲ ಪತ್ತೆಯಾಯಿತು. ಆಂಧ್ರದಿಂದ ಗಾಂಜಾ ತರುತ್ತಿದ್ದ ಆರೋಪಿಗಳು, ನಗರದಲ್ಲಿ ಮಾರಾಟ ಮಾಡುತ್ತಿದ್ದರು. ಗೂಡ್ಸ್ ವಾಹನ ಸಮೇತ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಪೊಲೀಸ್ ಹೆಸರಿನಲ್ಲಿ ಹಣ ವಸೂಲಿ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನೊಬ್ಬ ಪೊಲೀಸ್ ಕಾನ್‌ಸ್ಟೆಬಲ್’ ಎಂದು ಹೇಳಿಕೊಂಡು ವ್ಯಾಪಾರಿಗಳನ್ನು ಬೆದರಿಸಿ ಹಣ ವಸೂಲಿ ಮಾಡುತ್ತಿದ್ದ ಆರೋಪದಡಿ ವಿಘ್ನೇಶ್ ಎಂಬಾತನನ್ನು ಸಿಟಿ ಮಾರ್ಕೆಟ್ ಪೊಲೀಸರು ಬಂಧಿಸಿದ್ದಾರೆ.

‘ಶ್ರೀರಾಂಪುರ ನಿವಾಸಿ ವಿಘ್ನೇಶ್, ಚಹಾ ಮಾರಾಟ ಕೆಲಸ ಮಾಡುತ್ತಿದ್ದ. ಪೊಲೀಸರ ಹೆಸರಿನಲ್ಲಿ ಹಣ ವಸೂಲಿ ಮಾಡುತ್ತಿದ್ದ ಬಗ್ಗೆ ಮಾಹಿತಿ ಬರುತ್ತಿದ್ದಂತೆ, ಪುರಾವೆ ಸಂಗ್ರಹಿಸಿ ಆತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸಿಟಿ ಮಾರ್ಕೆಟ್, ಹಲಸೂರು ಗೇಟ್, ಚಿಕ್ಕಪೇಟೆ ಹಾಗೂ ಸುತ್ತಮುತ್ತಲಿನ ಮಾರುಕಟ್ಟೆ ಪ್ರದೇಶಗಳಲ್ಲಿ ಬೆಳಿಗ್ಗೆ ಹಾಗೂ ಸಂಜೆ ಆರೋಪಿ ಚಹಾ ಮಾರುತ್ತಿದ್ದ. ಅಂಗಡಿಯಿಂದ ಅಂಗಡಿಗೆ ಸುತ್ತಾಡಿ ಅಲ್ಲಿಯ ವ್ಯಾಪಾರ ತಿಳಿದುಕೊಳ್ಳುತ್ತಿದ್ದ. ಚಹಾ ಮಾರಾಟ ಮುಗಿದ ನಂತರ ಕೆಲ ಅಂಗಡಿಗಳಿಗೆ ಹೋಗುತ್ತಿದ್ದ ಆರೋಪಿ, ‘ನಾನು ಪೊಲೀಸ್ ಕಾನ್‌ಸ್ಟೆಬಲ್. ಹಣ ನೀಡದಿದ್ದರೆ ನಿಮ್ಮ ಮೇಲೆ ಪ್ರಕರಣ ದಾಖಲಿಸುತ್ತೇನೆ’ ಎಂದು ಬೆದರಿಸುತ್ತಿದ್ದ. ಅದಕ್ಕೆ ಹೆದರಿ ವ್ಯಾಪಾರಿಗಳು ಹಣ ನೀಡುತ್ತಿದ್ದರು. ಈ ಕೃತ್ಯದಿಂದ ಆರೋಪಿ ನಿತ್ಯವೂ ಸಾವಿರಾರು ರೂಪಾಯಿ ಸಂಪಾದಿಸುತ್ತಿದ್ದ ಮಾಹಿತಿ ಇದೆ’ ಎಂದೂ ತಿಳಿಸಿದರು.

ಸಿಮೆಂಟ್ ಇಟ್ಟಿಗೆಯಿಂದ ಹೊಡೆದು ವ್ಯಕ್ತಿ ಕೊಲೆ

ಬೆಂಗಳೂರು: ಕಾಮಾಕ್ಷಿಪಾಳ್ಯದಲ್ಲಿ ಸಿಮೆಂಟ್ ಇಟ್ಟಿಗೆಯಿಂದ ತಲೆಗೆ ಹೊಡೆದು ವ್ಯಕ್ತಿಯೊಬ್ಬರನ್ನು ಕೊಲೆ ಮಾಡಲಾಗಿದ್ದು, ಪಾದಚಾರಿ ಮಾರ್ಗದಲ್ಲಿ ಶುಕ್ರವಾರ ಮೃತದೇಹ ಪತ್ತೆಯಾಗಿದೆ.

‘ಪಾದಚಾರಿ ಮಾರ್ಗದಲ್ಲಿದ್ದ ಮೃತದೇಹ ನೋಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಸಿಬ್ಬಂದಿ ಸ್ಥಳಕ್ಕೆ ಹೋಗಿ ಮೃತದೇಹವನ್ನು ವೈದ್ಯಕೀಯ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮೃತದೇಹವಿದ್ದ ಸ್ಥಳದಲ್ಲಿ ಆಧಾರ್ ಕಾರ್ಡ್ ಪತ್ತೆಯಾಗಿದೆ. ಅದರಲ್ಲಿ ಸತೀಶ್ ಎಂಬ ಹೆಸರಿದೆ. ವಿಳಾಸ ಪರಿಶೀಲನೆ ನಡೆಸಿದಾಗ, ನಕಲಿ ಎಂಬುದು ಗೊತ್ತಾಗಿದೆ. ಹೀಗಾಗಿ, ಕೊಲೆಯಾದ ವ್ಯಕ್ತಿ ಹೆಸರು ಏನು ಎಂಬುದು ತಿಳಿದುಬಂದಿಲ್ಲ’ ಎಂದು ತಿಳಿಸಿವೆ.

ಕಾಮಗಾರಿಗೆ ಇರಿಸಿದ್ದ ಇಟ್ಟಿಗೆ: ‘ಕಾಮಾಕ್ಷಿಪಾಳ್ಯ ಮುಖ್ಯರಸ್ತೆಯ ಎರಡೂ ಬದಿಯಲ್ಲಿ ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ. ಇದಕ್ಕಾಗಿ ಸಿಮೆಂಟ್ ಇಟ್ಟಿಗೆಗಳನ್ನು ತರಿಸಿ, ಕೆಲಸದ ಸ್ಥಳದಲ್ಲಿ ಇರಿಸಲಾಗಿದೆ. ಗುರುವಾರ ತಡರಾತ್ರಿ ಇಬ್ಬರ ನಡುವೆ ಗಲಾಟೆ ಆಗಿರುವ ಮಾಹಿತಿ ಇದೆ. ಇದೇ ವೇಳೆ ಆರೋಪಿ, ಸಿಮೆಂಟ್ ಇಟ್ಟಿಗೆಯಿಂದ ತಲೆಗೆ ಹೊಡೆದು ಕೊಲೆ ಮಾಡಿ ಪರಾರಿಯಾಗಿರುವ ಅನುಮಾನವಿದೆ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಶಿರಾಡಿ ಸುರಂಗ ಹಸಿರು ನಿಶಾನೆ?

ಮಂಗಳೂರು: ಕೇಂದ್ರ ಸಚಿವ ನಿತಿನ್ ಗಡ್ಕರಿ ಇದೇ 28ರಂದು ನಗರಕ್ಕೆ ಭೇಟಿ ನೀಡಲಿದ್ದು, ಶಿರಾಡಿ ಸುರಂಗ ಮಾರ್ಗಕ್ಕೆ ಹಸಿರು ನಿಶಾನೆ ಸಿಗುವ ಸಾಧ್ಯತೆಗಳಿವೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಬಿ.ಸಿ. ರಸ್ತೆ -ಅಡ್ಡಹೊಳೆ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ಕಾಮಗಾರಿಗಳಿಗೆ ವೇಗ ನೀಡುವ ಉದ್ದೇಶದಿಂದ ಶಿಲಾನ್ಯಾಸ ಕಾರ್ಯಕ್ರಮವನ್ನು ಮಂಗಳೂರಿನಲ್ಲಿ ಫೆ.28ರಂದು ಆಯೋಜಿಸಲಾಗಿದೆ ಶಾಸಕ ಸಂಜೀವ ಮಠಂದೂರು ತಿಳಿಸಿದ್ದಾರೆ.

ತಿರುಪತಿಯಲ್ಲಿ ಪತ್ನಿ: ಫೇಸ್‌ಬುಕ್‌ನಲ್ಲಿ ಶ್ರದ್ಧಾಂಜಲಿ!

ದೊಡ್ಡಬಳ್ಳಾಪುರ: ಜನ್ಮದಿನದ ಔತಣಕೂಟದ ವಿಚಾರವಾಗಿ ಗಂಡ-ಹೆಂಡತಿ ನಡುವೆ ನಡೆದ ಜಗಳ ವಿಕೋಪಕ್ಕೆ ತಿರುಗಿ ವಿಚಿತ್ರ ತಿರುವು ಪಡೆದುಕೊಂಡಿದೆ.

ಫೇಸ್‌ಬುಕ್ ಖಾತೆಯಲ್ಲಿ ಗಂಡ ತನ್ನ ಹೆಂಡತಿಯ ಫೋಟೊ ಹಾಕಿ ಶ್ರದ್ಧಾಂಜಲಿ ಸಲ್ಲಿಸಿದ್ದಾನೆ.

ಜಗಳದ ನಂತರ ಹೆಂಡತಿ ಕಾಣೆಯಾಗಿದ್ದು, ಆಕೆಯ ಪೋಷಕರು ನಗರದ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ತಾಲ್ಲೂಕಿನ ಉದನಹಳ್ಳಿಯ ಆರ್ಕೆಸ್ಟ್ರಾ ಕಲಾವಿದ ಮುನಿಕೃಷ್ಣ ತನ್ನ ಹೆಂಡತಿ ಲೀಲಾವತಿ (22) ಫೋಟೊವನ್ನು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿ ‘ಆರ್‌ಐಪಿ’ ಎಂದು ಬರೆದು ಶ್ರದ್ಧಾಂಜಲಿ ಸಲ್ಲಿಸಿದ್ದಾನೆ.

ಫೇಸ್‌ಬುಕ್ ಪೋಸ್ಟ್ ನೋಡಿ ಗಾಬರಿಗೊಂಡ ಲೀಲಾವತಿ ಪೋಷಕರು ಆಕೆಗಾಗಿ ಹುಡುಕಾಡಿದ್ದಾಗ ಕಾಣೆಯಾಗಿರುವುದು ಗೊತ್ತಾಗಿದೆ. ಮಗಳನ್ನು ಅಳಿಯ ಮುನಿಕೃಷ್ಣ ಹೊಡೆದು ಸಾಯಿಸಿದ್ದಾನೆಂದು ಎಂದು ಆರೋಪಿಸಿದ್ದಾರೆ.

ಪೊಲೀಸರು ಮುನಿಕೃಷ್ಣನನ್ನು ಠಾಣೆಗೆ ಕರೆದು ವಿಚಾರಣೆ ಮಾಡಿದ್ದು, ಮೊಬೈಲ್ ಟವರ್ ಲೊಕೇಶನ್ ಪತ್ತೆ ಮಾಡಿದಾಗ ಲೀಲಾವತಿ ತಿರುಪತಿಯಲ್ಲಿರುವ ಮಾಹಿತಿ ಲಭ್ಯವಾಗಿದೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸಮಾನ ಮನಸ್ಕ ಸಂಘಟನೆಗಳ ಅಭಿಮತ

‘ಸಮವಸ್ತ್ರ ವಿವಾದದ ಹಿಂದೆ ಕೋಮು ರಾಜಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಹೆಚ್ಚುತ್ತಿರುವ ಕೋಮುದ್ವೇಷದ ಪರಿಸ್ಥಿತಿಯನ್ನು ಹತೋಟಿಗೆ ತರಲು ಸರ್ಕಾರ ಗಂಭೀರವಾದ ಕ್ರಮಗಳಿಗೆ ಮುಂದಾಗಬೇಕು’ ಎಂದು ಸಮಾನ ಮನಸ್ಕ ಸಂಘಟನೆಗಳು ಆಗ್ರಹಿಸಿವೆ.

‘ಹಿಜಾಬ್ ವಿವಾದ ನ್ಯಾಯಾಲಯದಲ್ಲಿದ್ದರೂ ಮಧ್ಯಂತರ ಆದೇಶವನ್ನು ತಪ್ಪಾಗಿ ಅರ್ಥೈಸಿಕೊಂಡ ಪರಿಣಾಮ ರಾಜ್ಯದಲ್ಲಿ ನೂರಾರು ವಿದ್ಯಾರ್ಥಿನಿಯರು ತರಗತಿಗಳಿಂದ ಹೊರನಿಲ್ಲಬೇಕಾಗಿದೆ. ಸರ್ಕಾರ ಒಂದು ಪಕ್ಷದ ವಕ್ತಾರರಾಗಿ ದ್ವೇಷ ಬಿತ್ತುವುದನ್ನು ಬಿಟ್ಟು, ಸಾಂವಿಧಾನಿಕ ಕರ್ತವ್ಯ ನಿರ್ವಹಿಸಬೇಕು. ಶಾಂತಿ-ಸುವ್ಯವಸ್ಥೆ ಕಾಪಾಡಬೇಕು’ ಎಂದು ವಿವಿಧ ಸಂಘಟನೆಗಳ ಮುಖಂಡರು ಶುಕ್ರವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

‘ರಾಜ್ಯದಲ್ಲಿ ಕೇಸರಿ ಶಾಲು-ಹಿಜಾಬ್ ವಿಷಯದ ಸುತ್ತ ಕೋಮು ಸಂಘರ್ಷ ತೀವ್ರಗೊಳ್ಳುತ್ತಿರುವುದು ಎಲ್ಲರನ್ನೂ ಕಂಗೆಡಿಸಿದೆ. ಅಲ್ಪಸಂಖ್ಯಾತ ಸಮುದಾಯದ ಸಾವಿರಾರು ಹೆಣ್ಣುಮಕ್ಕಳು ತಮ್ಮ ತಪ್ಪು ಇಲ್ಲದಿದ್ದರೂ ಶಿಕ್ಷಣದ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ಕ್ಷುಲ್ಲಕ ನೆಪವೊಡ್ಡಿ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಕಾಲೇಜುಗಳಲ್ಲಿ ಪ್ರವೇಶ ನಿರ್ಬಂಧ, ವಿದ್ಯಾರ್ಥಿಗಳನ್ನು ರಾಜಕಾರಣದ ಕೆಸರಿನೊಳಕ್ಕೆ ಎಳೆದು ತರುತ್ತಿರುವುದು ತಲೆತಗ್ಗಿಸುವಂತೆ ಮಾಡಿದೆ. ಇದನ್ನು ಸಮವಸ್ತ್ರದ ಸುತ್ತಲಿನ ಸಮಸ್ಯೆ ಎಂಬಂತೆ ಬಿಂಬಿಸಲಾಗುತ್ತಿದ್ದರೂ, ಇದರ ಹಿಂದೆ ಕೋಮುವಾದಿ ರಾಜಕಾರಣ ಕೆಲಸ ಮಾಡುತ್ತಿರುವುದು ಗೋಚರಿಸುತ್ತಿದೆ’ ಎಂದು ಆರೋಪಿಸಿದರು.

‘ಕರ್ನಾಟಕವೆಂಬ ಎಲ್ಲ ಜಾತಿ ಧರ್ಮಗಳ ಹೂದೋಟಕ್ಕೆ ಬೆಂಕಿಯಿಡುವ ಪ್ರಯತ್ನಗಳನ್ನು ತಡೆಯಬೇಕು. ಶಿಕ್ಷಣದಿಂದ ವಂಚಿತರಾಗುತ್ತಿರುವ ಭವಿಷ್ಯದ ಪ್ರಜೆಗಳಿಗೆ ಸಂವಿಧಾನ ನೀಡಿರುವ ಶಿಕ್ಷಣದ ಹಕ್ಕನ್ನು ದೊರಕಿಸಿಕೊಡಬೇಕು. ದ್ವೇಷ ಭಾಷಣಗಳನ್ನು ಮಾಡುತ್ತಾ ಈ ಸನ್ನಿವೇಶವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲು ಯತ್ನಿಸುತ್ತಿರುವ ರಾಜಕಾರಣಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಲೇಖಕಿ ಬಿ.ಟಿ.ಲಲಿತಾ ನಾಯಕ್, ‘ಜನರ ಸಾಂವಿಧಾನಿಕ ಹಕ್ಕುಗಳನ್ನು ಕಿತ್ತೊಗೆಯುವ ಕೆಲಸ ನಡೆಯುತ್ತಿದೆ. ಇದರ ವಿರುದ್ಧ ಸಂಘಟಿತರಾಗಿ ಹೋರಾಡಬೇಕಿದೆ’ ಎಂದರು.

ದಲಿತ ಮುಖಂಡ ಮೋಹನ್ ರಾಜ್, ‘ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನದಂತಹ ಶೈಕ್ಷಣಿಕ ಹಕ್ಕುಗಳನ್ನು ಕಸಿಯುತ್ತಿದೆ’ ಎಂದು ದೂರಿದರು.

ಎಸ್‌ಡಿಪಿಐ ರಾಜ್ಯ ಕಾರ್ಯದರ್ಶಿ ಭಾಸ್ಕರ್ ಪ್ರಸಾದ್, ‘ಹಿಜಾಬ್ ವಿಚಾರವನ್ನು ಮುಂದಿಟ್ಟುಕೊಂಡು ಜನರ ನಿಜವಾದ ಸಮಸ್ಯೆಗಳನ್ನು ಮರೆಮಾಚಲಾಗುತ್ತಿದೆ. ಸಮಸ್ಯೆಗಳನ್ನು ಬಗೆಹರಿಸುವ ಬದಲು ಹಿಜಾಬ್‌ನಿಂದ ಸಮಸ್ಯೆಗಳನ್ನು ಸೃಷ್ಟಿಸಲಾಗಿದೆ’ ಎಂದರು.

ವಕೀಲ ಬಾಲನ್,‘ದೇಶದಲ್ಲಿ ಕಾರ್ಮಿಕರ ಹಕ್ಕುಗಳನ್ನು ಕಸಿಯಲಾಗುತ್ತಿದೆ. ಹೊರಗುತ್ತಿಗೆ ಹೆಚ್ಚಾಗಿ ಸರ್ಕಾರಿ ವಲಯಗಳಲ್ಲಿ ಕೆಲಸ ಸಿಗುತ್ತಿಲ್ಲ. ಇದು ದೇಶದ ಬಹುದೊಡ್ಡ ಪ್ರಶ್ನೆ. ಈ ಬಗ್ಗೆ ಚಿಂತನೆ ನಡೆಯುತ್ತಿಲ್ಲ’ ಎಂದರು.

‘ಶಿಕ್ಷಣ ಕ್ಷೇತ್ರ ಹಾಳುಗೆಡವಲು ವಿಭಜಕ ಶಕ್ತಿಗಳ ಯತ್ನ’

ಹೊಸಪೇಟೆ (ವಿಜಯನಗರ): ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ (ಎಬಿವಿಪಿ) ಎರಡು ದಿನಗಳ ಕೇಂದ್ರ ಕಾರ್ಯಕಾರಿ ಸಮಿತಿ ಮತ್ತು ರಾಜ್ಯ ಸಂಘಟನಾ ಕಾರ್ಯದರ್ಶಿಗಳ ಸಭೆ ವಿಜಯಶ್ರೀ ಹೆರಿಟೇಜ್‌ನಲ್ಲಿ ಶುಕ್ರವಾರ ಆರಂಭಗೊಂಡಿತು.

ಮೇಘಾಲಯ, ಮಣಿಪುರ ಸೇರಿದಂತೆ ದೇಶದ ವಿವಿಧೆಡೆಯಿಂದ 1,500ಕ್ಕೂ ಹೆಚ್ಚು ಪ್ರತಿನಿಧಿಗಳು ಬೈಠಕ್ ನಲ್ಲಿ ಪಾಲ್ಗೊಂಡಿದ್ದಾರೆ.

ಪರಿಷತ್ತಿನ ರಾಷ್ಟ್ರೀಯ ಅಧ್ಯಕ್ಷ ಪ್ರೊ.ಛಗನ್‌ಭಾಯ್ ಪಟೇಲ್ ಉದ್ಘಾಟಿಸಿ, ‘ಕಾಲೇಜು ಕ್ಯಾಂಪಸ್‌ಗಳಲ್ಲಿ ಸಮವಸ್ತ್ರ ನೀತಿ ಕುರಿತು ಹೈಕೋರ್ಟ್ ಸ್ಪಷ್ಟವಾಗಿ ತಿಳಿಸಿದೆ. ಹೀಗಿದ್ದರೂ ಕೆಲ ವಿಭಜಕ ಶಕ್ತಿಗಳು ಶಿಕ್ಷಣ ಕ್ಷೇತ್ರವನ್ನು ಹಾಳುಗೆಡವಲು ಪ್ರಯತ್ನಿಸುತ್ತಿವೆ’ ಎಂದರು.

ಅಪರೂಪದ ಬೆಂಗಾಲ್ ಫಾಕ್ಸ್ ಪತ್ತೆ

ಔರಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ಹೆಡಗಾಪುರ ಅರಣ್ಯ ಪ್ರದೇಶದಲ್ಲಿ ಶುಕ್ರವಾರ ಅಪರೂಪದ ಬೆಂಗಾಲ್ ಫಾಕ್ಸ್ (ವಲ್ಪೆಸ್ ಬೆಂಗಾಲೆನ್ಸಿಸ್) ನರಿ ಪತ್ತೆಯಾಗಿದೆ.

ಅವಸಾನದ ಅಂಚಿನಲ್ಲಿರುವ ಈ ತಳಿಯ ನಾಲ್ಕು ಮರಿಗಳು ಹಾಗೂ ಒಂದು ಹೆಣ್ಣು ಸೇರಿ ಒಟ್ಟು ಐದು ನರಿಗಳು ಪತ್ತೆಯಾಗಿವೆ.

ಉಪ ವಲಯ ಅರಣ್ಯಾಧಿಕಾರಿ ಅಂಕುಶ ಮಚಕುರಿ ಅವರು ಈ ವಿಶೇಷ ತಳಿಯ ನರಿಗಳನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ.

‘ನಮ್ಮ ಭಾಗದಲ್ಲಿ ಈ ನರಿಗಳು ಸಿಗುವುದು ಅಪರೂಪ. ಕಾಡು ನಾಶ, ಕಾಡಿಗೆ ಬೆಂಕಿ ಬೀಳುವಂತಹ ಘಟನೆಯಿಂದ ಈ ನರಿಗಳ ಸಂತತಿ ಅಳಿವಿನ ಅಂಚಿನಲ್ಲಿವೆ. ಭೂಮಿಯಲ್ಲಿ ರಂಧ್ರ ಕೊರೆದು ಮನೆ ಮಾಡಿಕೊಂಡು ವಾಸಿಸುವ ಈ ನರಿಗಳು ವಿಚಿತ್ರ ಧ್ವನಿಯಿಂದ ಕೂಗು ಹಾಕುತ್ತವೆ’ ಎಂದು ವಲಯ ಅರಣ್ಯಾಧಿಕಾರಿ ಪ್ರೇಮಶೇಖರ್ ಚಾಂದೋರಿ ತಿಳಿಸಿದ್ದಾರೆ.

ಔರಾದ್ ತಾಲ್ಲೂಕಿನ ಹೆಡಗಾಪುರ ಅರಣ್ಯ ಪ್ರದೇಶದಲ್ಲಿ ಗುರುವಾರ ಪತ್ತೆಯಾದ ಬೆಂಗಾಲ್ ಫಾಕ್ಸ್ ನರಿ

ಬಿಜೆಪಿ ಜತೆ ಮೈತ್ರಿ ಇಲ್ಲ: ಮಾಯಾವತಿ

ನಾವು ಯಾವುದೇ ಪಕ್ಷದ ಬಿ ಟೀಂ ಅಲ್ಲ: ಬಿಎಸ್‌ಪಿ ಮುಖ್ಯಸ್ಥೆ ಕಟುನುಡಿ

ಬಸ್ತಿ (ಪಿಟಿಐ): ‘ಉತ್ತರ ಪ್ರದೇಶ ಚುನಾವಣೆಯಲ್ಲಿ ಬಿಎಸ್‌ಪಿಯು ಬಿಜೆಪಿಯೊಂದಿಗೆ ಚುನಾವಣೋತ್ತರ ಮೈತ್ರಿ ಮಾಡಿಕೊಳ್ಳುವುದಿಲ್ಲ’ ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಹೇಳಿದ್ದಾರೆ.

ಉತ್ತರ ಪ್ರದೇಶ ಚುನಾವಣೆಯಲ್ಲಿ ಬಿಎಸ್‌ಪಿ ಇನ್ನೂ ಪ್ರಸ್ತುತವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಮಾಯಾವತಿ ಅವರು, ಸತ್ಯವನ್ನು ಒಪ್ಪಿಕೊಳ್ಳುವ ದೊಡ್ಡತನವನ್ನು ಅಮಿತ್ ಶಾ ತೋರಿದ್ದಾರೆ ಎಂದು ಹೇಳಿದ್ದರು. ಬಿಎಸ್‌ಪಿ-ಬಿಜೆಪಿ ಚುನಾವಣೋತ್ತರ ಮೈತ್ರಿ ಮಾಡಿಕೊಳ್ಳುತ್ತವೆ ಎಂದು ವಿರೋಧ ಪಕ್ಷಗಳು ಈ ಎರಡೂ ಹೇಳಿಕೆಗಳ ನಂತರ ಆರೋಪಿಸಿದ್ದವು. ಸಮಾಜವಾದಿ ಪಕ್ಷವು, ‘ಬಿಎಸ್‌ಪಿಯು ಬಿಜೆಪಿಯ ಬಿ ಟೀಂ’ ಎಂದು ಆರೋಪಿಸಿತ್ತು.

ಮಾಯಾವತಿ

ಈ ಆರೋಪಗಳಿಗೆ ಮಾಯಾವತಿ ಅವರು ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಇಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ನಮ್ಮ ಪಕ್ಷವು ಬಿಜೆಪಿಯ ಬಿ ಟೀಂ ಆಗಿದ್ದೇ ನಿಜವಾದರೆ, ಲೋಕಸಭಾ ಉಪಚುನಾವಣೆಯಲ್ಲಿ ನಮ್ಮ ಜೊತೆ ಸಮಾಜವಾದಿ ಪಕ್ಷವು ಮೈತ್ರಿ ಮಾಡಿಕೊಂಡಿದ್ದು ಏಕೆ’ ಎಂದು ಅವರು ಪ್ರಶ್ನಿಸಿದ್ದಾರೆ.

ಮುಖ್ಯಾಂಶಗಳು
- ಬಿಜೆಪಿ ಜತೆಗೆ ಬಿಎಸ್‌ಪಿ ಮೈತ್ರಿ ಊಹಾಪೋಹಕ್ಕೆ ತೆರೆ
- ಚುನಾವಣೋತ್ತರ ಮೈತ್ರಿಯ ಬಗ್ಗೆ ವರದಿ ಪ್ರಕಟಿಸಿದ್ದ ಮಾಧ್ಯಮಗಳು
- ಬಿಎಸ್‌ಪಿ ಬಿಜೆಪಿಯ ಬಿ ಟೀಂ ಎಂದಿದ್ದ ಎದುರಾಳಿ ಪಕ್ಷಗಳು

‘ಅತ್ಯಾಚಾರ, ಹಲ್ಲೆಗೆ ಗುರಿಯಾದ ದಲಿತರ ಮನೆಗೆ ಬೆಹೆನ್‌ಜೀ (ಮಾಯಾವತಿ) ಭೇಟಿ ನೀಡಿಲ್ಲ ಎಂದು ಈ ಮಾಧ್ಯಮಗಳು ಕೇಳುತ್ತಿವೆ. ಪ್ರಿಯಾಂಕಾ ಗಾಂಧಿಯಂತೆ ಸಂತ್ರಸ್ತರ ಮನೆಗೆ ಹೋಗಿ, ನಾಟಕವಾಡಲು ನಾನು ಯಾವುದೇ ಪಕ್ಷದ ಉಸ್ತುವಾರಿ ಅಥವಾ ಪ್ರಧಾನ ಕಾರ್ಯದರ್ಶಿ ಅಲ್ಲ. ಕಾಂಗ್ರೆಸ್‌ನ ಅಧ್ಯಕ್ಷೆ ಸೋನಿಯಾ ಗಾಂಧಿ ಇರುವಂತೆ, ನಾನು ಒಂದು ರಾಷ್ಟ್ರೀಯ ಪಕ್ಷದ ಅಧ್ಯಕ್ಷೆ. ಸಂತ್ರಸ್ತರ ಮನೆಗೆ ಹೋಗಿ ಭೇಟಿ ನೀಡಲು, ನೆರವು ನೀಡಲು ನಮ್ಮ ಪಕ್ಷದಲ್ಲಿ ಪದಾಧಿಕಾರಿಗಳಿದ್ದಾರೆ. ಅವರು ಆ ಕೆಲಸ ಮಾಡುತ್ತಾರೆ’ ಎಂದು ಅವರು ಮಾಧ್ಯಮಗಳ ವಿರುದ್ಧವೂ ಹರಿಹಾಯ್ದಿದ್ದಾರೆ.

ಜನತಂತ್ರದ ಹಬ್ಬ 2022

ಪಕೋಡಾ ಮಾಡಿದ ಸಚಿವ

ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಅಲಹಾಬಾದ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಂದ ಗೋಪಾಲ್ ಗುಪ್ತಾ ಅವರು ರಸ್ತೆ ಬದಿಯ ಅಂಗಡಿ ಒಂದರಲ್ಲಿ ಪಕೋಡಾ ಮತ್ತು ಪೂರಿಯನ್ನು ಎಣ್ಣೆಯಲ್ಲಿ ಕರಿಯುತ್ತಿರುವ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಪ್ರಚಾರದ ವೇಳೆ ಪಕೋಡಾ ಅಂಗಡಿ ಒಂದರಲ್ಲಿ ಗುಪ್ತಾ ಪಕೋಡಾ ಮಾಡಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

‘ಉದ್ಯೋಗವೇ ಇಲ್ಲ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ. ಆದರೆ ನಿಜವಾಗಿಯೂ ಉದ್ಯೋಗ ಇಲ್ಲದೇ ಇರುವುದು ವಿಪಕ್ಷಗಳಿಗೆ. ಪಕೋಡಾ ಮಾಡುವುದೂ ಒಂದು ಉದ್ಯೋಗ. ಜನರೇ ತಮ್ಮ ಅಂಗಡಿಗೆ ಕರೆಯುತ್ತಾರೆ. ಹೀಗಾಗಿ ಇಲ್ಲಿ ಬಂದು ಪಕೋಡಾ ಮಾಡಿದೆ. ಈ ಮೂಲಕ ಸ್ವಉದ್ಯೋಗವನ್ನು ಉತ್ತೇಜಿಸುತ್ತಿದ್ದೇವೆ’ ಎಂದು ಅವರು ಹೇಳಿದ್ದಾರೆ.

ಉತ್ತರಪ್ರದೇಶ ಹಿಂದುಳಿಯಲು ಬಿಎಸ್‌ಪಿ, ಎಸ್‌ಪಿ, ಬಿಜೆಪಿ ಕಾರಣ: ರಾಹುಲ್ ಟೀಕೆ

ಅಮೇಠಿ (ಉತ್ತರ ಪ್ರದೇಶ) (ಪಿಟಿಐ): ‘ಈ ಹಿಂದೆ ಉತ್ತರ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದ ಪಕ್ಷಗಳು, ರಾಜ್ಯವನ್ನು ಅಭಿವೃದ್ಧಿಯಲ್ಲಿ ಹಿಂದುಳಿಯುವಂತೆ ಮಾಡಿವೆ. ಹೀಗಾಗಿಯೇ ರಾಜ್ಯದ ಜನರು ಉದ್ಯೋಗ ಅರಸಿಕೊಂಡು ಮಹಾರಾಷ್ಟ್ರ, ಪಂಜಾಬ್, ರಾಜಸ್ಥಾನಕ್ಕೆ ವಲಸೆ ಹೋಗುತ್ತಾರೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಈ ಹಿಂದೆ ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಉತ್ತರ ಪ್ರದೇಶದ ಅಮೇಠಿಯಲ್ಲಿ ಕಾಂಗ್ರೆಸ್ ಶುಕ್ರವಾರ ಆಯೋಜಿಸಿದ್ದ ಪ್ರಚಾರ ಸಭೆಯಲ್ಲಿ ರಾಹುಲ್ ಮಾತನಾಡಿದರು. ‘ಉತ್ತರ ಪ್ರದೇಶದಲ್ಲಿ ಸಂಪನ್ಮೂಲಕ್ಕೆ ಕೊರತೆ ಇಲ್ಲ. ಆದರೆ ಇಷ್ಟು ವರ್ಷ ಆಳ್ವಿಕೆ ನಡೆಸಿದ ಸಮಾಜವಾದಿ ಪಕ್ಷ, ಬಿಎಸ್‌ಪಿ ಮತ್ತು ಬಿಜೆಪಿ ನಿಮಗೆ ಸುಳ್ಳು ಭರವಸೆಗಳನ್ನು ನೀಡಿ, ನಿಮ್ಮ ಹಣವನ್ನು ಕಸಿದುಕೊಂಡಿವೆ ಅಷ್ಟೆ’ ಎಂದು ಅವರು ಆರೋಪಿಸಿದ್ದಾರೆ.

> **ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದರು. ಈಗ ಅವರು ಆ ಬಗ್ಗೆ ಮಾತನಾಡುವುದೇ ಇಲ್ಲ**
> **ರಾಹುಲ್ ಗಾಂಧಿ** ಕಾಂಗ್ರೆಸ್ ನಾಯಕ

‘ಸಣ್ಣ ಮತ್ತು ಮಧ್ಯಮ ಮಟ್ಟದ ವ್ಯಾಪಾರಿಗಳು ಮತ್ತು ರೈತರು ಇಲ್ಲಿ ದೊಡ್ಡ ಮಟ್ಟದ ಉದ್ಯೋಗದಾತರು. ಆದರೆ ಪ್ರಧಾನಿ ನರೇಂದ್ರ ಮೋದಿ ಅವರ ನೀತಿಗಳಿಂದ ಸಣ್ಣ ವ್ಯಾಪಾರಿಗಳು ಮತ್ತು ರೈತರ ಬೆನ್ನೆಲುಬು ಮುರಿದಿದೆ. ಹೀಗಾಗಿಯೇ ರಾಜ್ಯದಲ್ಲಿ ಉದ್ಯೋಗಗಳು ನಷ್ಟವಾಗಿವೆ. ಹೊಸ ಉದ್ಯೋಗಗಳೂ ಸೃಷ್ಟಿಯಾಗುತ್ತಿಲ್ಲ’ ಎಂದು ರಾಹುಲ್ ಟೀಕಿಸಿದ್ದಾರೆ.

> **ನಿಮಗೆ ಅಭಿವೃದ್ಧಿ ರಾಜಕಾರಣ ಬೇಕೇ ಅಥವಾ ಧರ್ಮ ಮತ್ತು ಜಾತಿಯ ಪೊಳ್ಳು ಜಾಲದಲ್ಲಿ ಸಿಲುಕಿಸುವ ರಾಜಕಾರಣ ಬೇಕೇ ಎಂಬುದನ್ನು ನೀವೇ ನಿರ್ಧರಿಸಿ**
> **ಪ್ರಿಯಾಂಕಾ ಗಾಂಧಿ ವಾದ್ರಾ,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಪ್ರಚಾರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು, ‘ಬಡವರು ಮತ್ತು ದಲಿತರ ಮೇಲೆ ದೌರ್ಜನ್ಯ ನಡೆದಾಗ ಬಿಜೆಪಿ, ಸಮಾಜವಾದಿ ಪಕ್ಷ ಮತ್ತು ಬಿಜೆಪಿ ನಾಯಕರು ಮನೆಬಿಟ್ಟು ಹೊರಗೆ ಬರಲಿಲ್ಲ. ಸಂತ್ರಸ್ತರನ್ನು ನಿಲ್ಲಿಸಿ, ಈ ನಾಯಕರು ಕುಳಿತುಕೊಳ್ಳುತ್ತಾರೆ’ ಎಂದು ಆರೋಪಿಸಿದ್ದಾರೆ.

ಜಾಗದ ತಗಾದೆ: ಪರಿಶಿಷ್ಟ ಜಾತಿ ವ್ಯಕ್ತಿ ಕೊಲೆ

ದಿನೇಶ್

ಉಜಿರೆ: ಧರ್ಮಸ್ಥಳ ಗ್ರಾಮದ ಕನ್ಯಾಡಿಯಲ್ಲಿ ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿಯ ವ್ಯಕ್ತಿಯನ್ನು ಥಳಿಸಿ, ಕೊಲೆ ಮಾಡಿರುವ ಘಟನೆ ನಡೆದಿದ್ದು, ಹಲ್ಲೆಯ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಕನ್ಯಾಡಿಯ ದಿನೇಶ್ (40) ಕೊಲೆಯಾದ ವ್ಯಕ್ತಿ. ಧರ್ಮಸ್ಥಳ ನಿವಾಸಿ ಕಿಟ್ಟ ಯಾನೆ ಕೃಷ್ಣ ಡಿ. ಆರೋಪಿಯಾಗಿದ್ದು ತಲೆಮರೆಸಿಕೊಂಡಿದ್ದಾನೆ.

ಬುಧವಾರ ಬೆಳಿಗ್ಗೆ 11 ಗಂಟೆಗೆ ಕನ್ಯಾಡಿಯ ದಿನೇಶ್ ಅವರ ಅಂಗಡಿ ಬಳಿ ಬಂದ ಕೃಷ್ಣ, ಜಾಗದ ದಾಖಲೆಗಳ ವಿಚಾರದಲ್ಲಿ ಜಗಳ ತೆಗೆದು, ಗಂಭೀರವಾಗಿ ಹಲ್ಲೆ ನಡೆಸಿದ್ದಾನೆ. ಅದೇ ದಿನ ರಾತ್ರಿ ದಿನೇಶ್ ತೀವ್ರ ಹೊಟ್ಟೆನೋವಿನಿಂದ ಬಳಲಿದ್ದರು. ಮರುದಿನ ಆರೋಪಿ ಕೃಷ್ಣನ ಮನೆಗೆ ಬಂದ ದಿನೇಶ್ ಕುಟುಂಬದವರು 'ನೀನೇ ಹಲ್ಲೆ ನಡೆಸಿದ್ದು, ಆಸ್ಪತ್ರೆಗೆ ಕರೆದುಕೊಂಡು ಹೋಗು' ಎಂದು ಒತ್ತಾಯಿಸಿದ್ದರು.

ಅದರಂತೆ ಫೆ. 24ರಂದು ದಿನೇಶ್ ಅವರನ್ನು ಮಂಗಳೂರು ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಿದ ಕೃಷ್ಣ, 'ಈತ ಕಾಲು ಜಾರಿ ಬಿದ್ದು ಗಾಯಗೊಂಡಿದ್ದಾನೆ' ಎಂದು ವೈದ್ಯರ ಬಳಿ ಹೇಳಿದ್ದ. ಆದರೆ, ದಿನೇಶ್ ಅವರ ಪತ್ನಿ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಕೃಷ್ಣನೇ ದಿನೇಶ್ ಮೇಲೆ ಹಲ್ಲೆ ಮಾಡಿರುವುದಾಗಿ ತಿಳಿಸಿದ್ದಾರೆ. ಗುರುವಾರ ಮಧ್ಯರಾತ್ರಿ ಚಿಕಿತ್ಸೆಗೆ ಸ್ಪಂದಿಸದೆ ದಿನೇಶ್ ಮೃತಪಟ್ಟಿದ್ದಾರೆ. ಈ ಕುರಿತು ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿ ಕೃಷ್ಣ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಗ್ರಾಮ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿ, ಸೋತಿದ್ದ ಎಂದು ಸ್ಥಳೀಯರು ತಿಳಿಸಿದ್ದಾರೆ.

ಯುವಕನ ಹತ್ಯೆ: ಸಿದ್ದರಾಮಯ್ಯ ಖಂಡನೆ

ಬೆಂಗಳೂರು: 'ಧರ್ಮಸ್ಥಳದಲ್ಲಿ ನಡೆದಿರುವ ದಲಿತ ಯುವಕ ದಿನೇಶ್ ಹತ್ಯೆ ಖಂಡನೀಯ. ಕೊಲೆ ಆರೋಪಿ ಬಜರಂಗ ದಳದ ನಾಯಕ ಆಗಿರುವುದರಿಂದ ಮೃತನ ಕುಟುಂಬ ಆತಂಕಕ್ಕೊಳಗಾಗಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.

'ಪೊಲೀಸರು ರಾಜಕೀಯ ಪ್ರಭಾವಕ್ಕೆ ಮಣಿಯದೆ ಕೊಲೆ ಆರೋಪಿಯನ್ನು ತಕ್ಷಣ ಬಂಧಿಸಬೇಕು ಮತ್ತು ಮೃತ ಯುವಕನ ಕುಟುಂಬಕ್ಕೆ ರಕ್ಷಣೆ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

'ಹಿಂದೂಗಳ ರಕ್ಷಣೆಯ ಮಂತ್ರ ಜಪಿಸುತ್ತಿರುವ ಬಿಜೆಪಿ, ಧರ್ಮಸ್ಥಳದ ದಲಿತ ಯುವಕನನ್ನು ಹತ್ಯೆ ಮಾಡಿರುವ ಕೊಲೆಗಾರನ ರಕ್ಷಣೆಗೆ ನಿಂತಿರುವುದು ಅತ್ಯಂತ ನಾಚಿಕೆಗೇಡಿನ ನಡವಳಿಕೆ. ಸಾವಿನ ರಾಜಕೀಯ ನಡೆಸದೆ ಮೃತ ಯುವಕನ ಕುಟುಂಬಕ್ಕೆ ನ್ಯಾಯ ಒದಗಿಸಬೇಕು' ಎಂದು ಆಗ್ರಹಿಸಿದ್ದಾರೆ.

ಮೇಕೆದಾಟು: ನಾಳೆ ಪಾದಯಾತ್ರೆ

ರಾಮನಗರ: ಕಾಂಗ್ರೆಸ್ ನೇತೃತ್ವದಲ್ಲಿ ನಡೆದಿರುವ ಮೇಕೆದಾಟು ಪಾದಯಾತ್ರೆಯ ಎರಡನೇ ಚರಣದ ಆರಂಭಕ್ಕೆ ಇನ್ನೊಂದೇ ದಿನ ಬಾಕಿ ಉಳಿದಿದ್ದು, ಇದಕ್ಕಾಗಿ ನಗರದಲ್ಲಿ ಅಂತಿಮ ಹಂತದ ಸಿದ್ಧತೆ ನಡೆದಿದೆ.

ಭಾನುವಾರ (ಫೆ. 27) ಬೆಳಿಗ್ಗೆ 9ರ ಸುಮಾರಿಗೆ ಇಲ್ಲಿನ ಟಿ.ಆರ್. ಮಿಲ್ ಮೈದಾನದಲ್ಲಿ ಪಾದಯಾತ್ರೆಗೆ ಮತ್ತೆ ಚಾಲನೆ ದೊರೆಯಲಿದೆ. ಇದಕ್ಕೂ ಮುನ್ನ ರಾಮನಗರದ ಚಾಮುಂಡೇಶ್ವರಿ ದೇಗುಲ, ದರ್ಗಾ, ಚರ್ಚ್‌ಗಳಲ್ಲಿ ನಾಯಕರು ಪ್ರಾರ್ಥನೆ ಸಲ್ಲಿಸುವರು.

ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಪಾದಯಾತ್ರೆಗೆ ಹಸಿರು ನಿಶಾನೆ ತೋರಲಿದ್ದಾರೆ. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿ ಪ್ರಮುಖ ನಾಯಕರ ದಂಡು ಹೆಜ್ಜೆ ಹಾಕಲಿದೆ.

ಕಾಲ್ನಡಿಗೆ ವೇಳೆ ಸಂಗಮ ಬಳಿ ಘಟನೆ: ಮಹಿಳೆಯ ಶವ ಪತ್ತೆ

ನದಿಗೆ ಬಿದ್ದ ಮಾದಪ್ಪನ ಭಕ್ತರು

ಪ್ರಜಾವಾಣಿ ವಾರ್ತೆ

ಸಂಗಮ ಪ್ರದೇಶದಲ್ಲಿ ಕಾಲ್ನಡಿಗೆಯಲ್ಲಿ ಕಾವೇರಿ ನದಿ ದಾಟುತ್ತಿರುವ ಭಕ್ತರ ಸಮೂಹ

ರಾಮನಗರ: ಕನಕಪುರ ತಾಲ್ಲೂಕಿನ ಸಂಗಮದಲ್ಲಿ ಮಹದೇಶ್ವರನ ಕೆಲವು ಭಕ್ತರು ಕಾಲ್ನಡಿಗೆಯಲ್ಲಿ ಕಾವೇರಿ ನದಿ ದಾಟುತ್ತಿದ್ದ ವೇಳೆ ನೀರಿನ ಸೆಳೆತಕ್ಕೆ ಸಿಕ್ಕಿ ಕೊಚ್ಚಿ ಹೋಗಿದ್ದು, ಬಹುತೇಕರನ್ನು ರಕ್ಷಿಸಲಾಗಿದೆ. ಆದರೆ, ನದಿ ಪಾತ್ರದಲ್ಲಿ ಮಹಿಳೆಯೊಬ್ಬರ ಶವ ಪತ್ತೆಯಾಗಿದೆ.

ಈ ಭಾಗದ ಭಕ್ತರು ಶಿವರಾತ್ರಿ ಅಂಗವಾಗಿ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ತೆರಳುವ ವಾಡಿಕೆ ಇದೆ. ಅದರಂತೆ ಗುರುವಾರ ಸಂಜೆ ಪಾದಯಾತ್ರಿಗಳು ಸಂಗಮದಲ್ಲಿ ಕಾವೇರಿ ನದಿ ದಾಟುತ್ತಿದ್ದ ವೇಳೆ ನೀರಿನ ಪ್ರವಾಹ ಹೆಚ್ಚಾಗಿ, ರಕ್ಷಣೆಗೆಂದು ಕಟ್ಟಿದ್ದ ಹಗ್ಗ ಆಚೀಚೆ ಆಗಿ ಹತ್ತಾರು ಮಂದಿ ಕೊಚ್ಚಿ ಹೋಗುತ್ತಿದ್ದರು. ಪಕ್ಕದಲ್ಲೇ ಇದ್ದವರು ಕೆಲವರನ್ನು ರಕ್ಷಣೆ ಮಾಡಿದ್ದಾರೆ. ಇನ್ನೂ ಕೆಲವರು ಅಕ್ಕಪಕ್ಕದ ಮರಗಿಡಗಳನ್ನು ಹಿಡಿದು ಪ್ರಾಣ ಉಳಿಸಿಕೊಂಡಿದ್ದಾರೆ. ಆದರೂ ಕೆಲವರು ನೀರಿನಲ್ಲಿ ಕೊಚ್ಚಿ ಹೋದರು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಘಟನೆ ನಡೆದ ಸ್ಥಳವು ಕಾವೇರಿ ವನ್ಯಜೀವಿ ಧಾಮದ ವ್ಯಾಪ್ತಿಯಲ್ಲಿದ್ದು, ಇಲ್ಲಿಗೆ ಸಾರ್ವಜನಿಕರ ಪ್ರವೇಶ ನಿಷೇಧಿಸಲಾಗಿದೆ. ಆದರೆ, ಧಾರ್ಮಿಕ ಕಾರಣಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಕಾಲ್ನಡಿಗೆಗೆ ಅವಕಾಶ ನೀಡುತ್ತಾ ಬಂದಿದ್ದಾರೆ.

ನದಿ ದಾಟುವಾಗ ಯಾವುದೇ ಸುರಕ್ಷತಾ ಕ್ರಮ ಅನುಸರಿಸುತ್ತಿಲ್ಲ. ಕಾಡಿನಲ್ಲಿ ಸಾಗುವಾಗ ವನ್ಯಜೀವಿಗಳ ದಾಳಿಯ ಅಪಾಯವೂ ಇದೆ. ಹೀಗಿದ್ದೂ ಧಾರ್ಮಿಕ ಕಾರಣಕ್ಕೆ ಕಾಲ್ನಡಿಗೆಗೆ ಯಾವುದೇ ಅಡ್ಡಿ ಮಾಡಿಲ್ಲ. ಈವರೆಗೆ ಇಂತಹ ಘಟನೆ ನಡೆದಿರಲಿಲ್ಲ ಎನ್ನುತ್ತಾರೆ ಅರಣ್ಯ ಇಲಾಖೆಯ ಸಿಬ್ಬಂದಿ.

ನದಿಯಲ್ಲಿ ನೀರಿನ ಹರಿವು ಏಕಾಏಕಿ ಏರಿಕೆಯಾಗಿ ಈ ಅನಾಹುತಕ್ಕೆ ಕಾರಣ. ನೀರಿನಲ್ಲಿ ಕೊಚ್ಚಿಹೋಗುತ್ತಿದ್ದ ಬಹುತೇಕರನ್ನು ರಕ್ಷಿಸಿದ್ದಾರೆ ಎಂದು ಸಂಸದ ಡಿ.ಕೆ.ಸುರೇಶ್ ಹೇಳಿದರು.

> ಕಾವೇರಿ ವನ್ಯಜೀವಿಧಾಮಕ್ಕೆ ಸಾರ್ವಜನಿಕರ ಪ್ರವೇಶ ನಿಷಿದ್ಧ. ಇದು ಪ್ರತಿ ವರ್ಷದ ಧಾರ್ಮಿಕ ಕಾರ್ಯಕ್ರಮವಾದ್ದರಿಂದ ಅಡ್ಡಿಪಡಿಸಿಲ್ಲ. ಇನ್ನು ಮುಂದೆ ಎಚ್ಚರ ವಹಿಸುತ್ತೇವೆ
> **ದೇವರಾಜು ಆರ್‌ಎಫ್‌ಒ,** ಸಂಗಮ ವನ್ಯಜೀವಿ ವಲಯ

ನದಿ ಸೆಳೆತಕ್ಕೆ ಸಿಲುಕಿದ್ದ ವೃದ್ಧೆ ಶವ ಪತ್ತೆ

ಹನೂರು (ಚಾಮರಾಜನಗರ ಜಿಲ್ಲೆ): ಮಹಾಶಿವರಾತ್ರಿ ಜಾತ್ರೆಗಾಗಿ ಮಹದೇಶ್ವರ ಬೆಟ್ಟಕ್ಕೆ ಬರಲು ಕಾವೇರಿ ನದಿ ದಾಟುತ್ತಿದ್ದಾಗ ವೃದ್ಧೆಯೊಬ್ಬರು ನದಿಯ ಸೆಳೆತಕ್ಕೆ ಸಿಲುಕಿ ಮೃತಪಟ್ಟಿದ್ದಾರೆ. ಕಾವೇರಿ ವನ್ಯಧಾಮದ ಹನೂರು ವಲಯದ ಕಾವೇರಿ ನದಿಯಲ್ಲಿ ಶುಕ್ರವಾರ ಮಹಿಳೆ ಶವ ಬಿದ್ದಿರುವುದನ್ನು ಗಮನಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಹನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಮಹಿಳೆಯ ಗುರುತು ಪತ್ತೆಯಾಗಿಲ್ಲ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ನೋಂದಣಿ ಕಚೇರಿಗಳ ಅವಧಿ ವಿಸ್ತರಣೆ

ಬೆಂಗಳೂರು: ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಚೇರಿಗಳ ಕೆಲಸದ ಅವಧಿಯನ್ನು ಬೆಳಿಗ್ಗೆ 8ರಿಂದ ರಾತ್ರಿ 8ರ ತನಕ ವಿಸ್ತರಿಸಿ ನೋಂದಣಿ ಉಪ ಮಹಾಪರಿವೀಕ್ಷಕರು (ಆಡಳಿತ ಮತ್ತು ಕಾನೂನು) ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012.
ದೂರವಾಣಿ: 080–23 460 460 | ಫ್ಯಾಕ್ಸ್: 080–23461576
ಇ–ಮೇಲ್: keauthority-ka@nic.in | ವೆಬ್‌ಸೈಟ್: http://kea.kar.nic.in

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ 2022–23ನೇ ಸಾಲಿನಲ್ಲಿ ನಡೆಯುವ ವಿವಿಧ ಪರೀಕ್ಷೆ, ದಾಖಲಾತಿ ಪರಿಶೀಲನೆ ಮತ್ತು ಕಚೇರಿ ಕಾರ್ಯಗಳಿಗೆ ಲೇಖನ, ಲೇಖನೇತರ, ಸ್ವಚ್ಛತಾ ಕಾರ್ಯದ ಸಾಮಗ್ರಿಗಳು ಮತ್ತು ಇತರೆ ಸಾಮಗ್ರಿಗಳನ್ನು ಒದಗಿಸಲು ಅರ್ಹ/ಆಸಕ್ತ ಗುತ್ತಿಗೆದಾರರಿಂದ ಟೆಂಡರ್ ಅರ್ಜಿ ಸಂಖ್ಯೆ: KEA/2021-22/IND134 ಯನ್ನು ದಿನಾಂಕ: 18.02.2022 ರಂದು ಅಹ್ವಾನಿಸಿದೆ. ಆಸಕ್ತ ಟೆಂಡರ್‌ದಾರರು e-procurement ವೆಬ್‌ಸೇಟ್: **http://eproc.karnataka.gov.in** ರಲ್ಲಿ **ದಿನಾಂಕ: 18.03.2022 ರಂದು ಮಧ್ಯಾಹ್ನ 3:00 ಗಂಟೆಯ** ಒಳಗೆ ತಮ್ಮ ಟೆಂಡರ್‌ನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸವನ್ನು ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ಬೆಂ.ನ/ಜಗದಾಳೆ ಅಡ್ವರ್ಟೈಸಿಂಗ್/3553/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಾಯಿತ ಕಛೇರಿ : 5ನೇ ಮಹಡಿ, ಟಿಟಿಎಂಸಿ ಎ ಬ್ಲಾಕ್, ಬಿಎಂಟಿಸಿ ಬಿಲ್ಡಿಂಗ್, ಶಾಂತಿನಗರ, ಕೆ.ಹೆಚ್. ರಸ್ತೆ, ಬೆಂಗಳೂರು – 560027. ಫೋನ್ : 080 – 22278813/14/15/16, ಫ್ಯಾಕ್ಸ್ : 080–22213172 Website: www.ksmc.karnataka.gov.in

No.KSMCL/Sand/CKM/HR Sand/2021-22   Date: 25.02.2022

ಇ–ಟೆಂಡರ್ ಆಹ್ವಾನ

ಕೆಎಸ್‌ಎಂಸಿಎಲ್ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಮರಳು ಬ್ಲಾಕ್‌ಗಳಿಂದ ಮರಳು ಹೊರತೆಗೆಯಲು ಯಂತ್ರೋಪಕರಣಗಳ ಬಾಡಿಗೆಗೆ ಗುತ್ತಿಗೆದಾರರನ್ನು /ಏಜೆನ್ಸಿಯನ್ನು ಆಯ್ಕೆ ಮಾಡಲು ಈ ಕೆಳಗಿನಂತೆ ಇ–ಟೆಂಡರ್‌ಅನ್ನು ಆಹ್ವಾನಿಸುತ್ತದೆ.
1) 1162/ಕೆಎಸ್‌ಎಂಸಿಎಲ್/ಮರಳು/ಸಿಕೆಎಂ/ಜೋಗ/2021–22/2828/2ನೇ ಕರೆ ದಿನಾಂಕ: 25.02.2022.
2) 1163/ಕೆಎಸ್‌ಎಂಸಿಎಲ್/ಮರಳು/ಸಿಕೆಎಂ/ಅಡ್ಡ/2021–22/2827/2ನೇ ಕರೆ ದಿನಾಂಕ: 25.02.2022.

ವೇಳಾಪಟ್ಟಿ

(ಎ)	ಟೆಂಡರ್ ದಸ್ತಾವೇಜು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	14.03.2022, ಸಂಜೆ 5.00 ಗಂಟೆವರೆಗೆ.
(ಬಿ)	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	16.03.2022, ಬೆಳಿಗ್ಗೆ 11.00 ಗಂಟೆಗೆ.

ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡುವುದು. ಹೆಚ್ಚಿನ ಸಹಾಯ ಮತ್ತು ನೋಂದಣಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080–46010000/68948777, ಇ–ಮೇಲ್: support@eprochelpdesk.com ನ್ನು ಸಂಪರ್ಕಿಸಬಹುದು.

ಸಹಿ/–
ಪ್ರಧಾನ ವ್ಯವಸ್ಥಾಪಕರು (ಮರಳು)

DIPR/DDU/Zen/RO- 3544/2021-22

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಹರಪನಹಳ್ಳಿ.
ಸಂಖ್ಯೆ: EE/RDWS&SD/HRP/e-tender/Tech/2021-22/1301   ದಿನಾಂಕ:23–02–2022.

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–32/2021–22

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರು 2021–22ನೇ ಸಾಲಿನ ಜೆ.ಜೆ.ಎಂ ಯೋಜನೆಯಡಿ ಅನುಮೋದನೆಯಾದ ಹೂವಿನಡಹಗಲಿ, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ ಮತ್ತು ಹೊಸಪೇಟೆ ತಾಲ್ಲೂಕಿನಲ್ಲಿ ಕಾರ್ಯತ್ಮಕ ನಳ ಸಂಪರ್ಕ ಕಲ್ಪಿಸಿ ನೀರು ಸರಬರಾಜು ಮಾಡುವ (ರೆಟ್ರೋಫಿಟ್ಟಿಂಗ್) ಕಾಮಗಾರಿಗಳಿಗೆ ಮತ್ತು ಕೆ.ಕೆ.ಆರ್.ಡಿ.ಬಿ ಯೋಜನೆಯಡಿ ಅನುಮೋದನೆಯಾದ ಹರಪನಹಳ್ಳಿ ತಾಲ್ಲೂಕಿನ ಶುದ್ಧ ಕುಡಿಯು ನೀರನ ಘಟಕಗಳ ಅಳವಡಿಸುವ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಇ–ಪ್ರೋಕ್ಯೂರಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ ದಿನಾಂಕ: 23.02.2022 ರಿಂದ 05.03.2022ರ ಸಾಯಂಕಾಲ 5.00 ಗಂಟೆಯವರೆಗೆ ಮತ್ತು ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ:07.03.2022 ಬೆಳಿಗ್ಗೆ 11.00 ಗಂಟೆ ನಂತರ ಹಾಗೂ ದಿನಾಂಕ:28.02.2022 ರಂದು ಬೆಳಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಹರಪನಹಳ್ಳಿಯಲ್ಲಿ ಕರೆಯಲಾಗಿದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ **(e-procurement portal)** ವೆಬ್‌ಸೈಟ್‌ನಲ್ಲಿ ಪಡೆಯಬಹುದು. **(www.eproc.karnataka.gov.in)** ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ & ನೈ ವಿಭಾಗ, ಹರಪನಹಳ್ಳಿ.

ಪುರಸಭೆ ಕಾರ್ಯಾಲಯ, ಕುಷ್ಟಗಿ
Website: www.kustagitown.mrc.gov.in E-mail: itstaff_ulb_kushtagi@yahoo.com
Office Number: 08536-267041

ಸಂಖ್ಯೆ: ಪುಕಾಕು/ತಾಂತ್ರಿಕ ಶಾಖೆ/ಸಿ ಆರ್– /2021–22   ದಿನಾಂಕ:25–2–2022

ಪತ್ರಿಕಾ ಪ್ರಕಟಣೆ

ಕುಷ್ಟಗಿ ಪುರಸಭೆ ವಿವಿಧ ಯೋಜನೆ ಅಡಿಯಲ್ಲಿ ಈ ಕೆಳಕಂಡ ಯಂತ್ರೋಪಕರಣಗಳನ್ನು ಖರಿದಿಸಲು, ಆಸಕ್ತ ಸರಬರಾಜುದಾರರಿಂದ/ಏಜೆನ್ಸಿ/ಫರ್ಮ್ ಸೂಕ್ತ ದರ್ಜೆಯ ಅರ್ಹ ಗುತ್ತಿಗೆದಾರರು / ಏಜೆನ್ಸಿದಾರರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಇಚ್ಛೆವುಳ್ಳ ಅರ್ಹ ಏಜೆನ್ಸಿದಾರರು/ ಸರಬರಾಜುದಾರರು ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

1. ಇಂಡೆಂಟ್‌ನಂ: **DMA/2021-22/IND13039,   EMD: Rs.43,600/-**
2. ಇಂಡೆಂಟ್‌ನಂ: **DMA/2021-22/IND13037,   EMD: Rs.64,000/-**

ಷರತ್ತುಗಳು:
1) ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **16.3.2022 ರ ಸಂಜೆ 5.00 ಗಂಟೆಯೊಳಗಾಗಿ** ಸಲ್ಲಿಸತಕ್ಕದ್ದು. 2) ಟೆಂಡರ್ ತೆರೆಯುವ ದಿನಾಂಕ: **19.3.2022ರ ಬೆಳಿಗ್ಗೆ 11.30 ಗಂಟೆಗೆ.** 3) ಇ–ಪ್ರೊಕ್ಯೂರ್‌ಮೆಂಟ್ ಪ್ರೊಸೆಸಿಂಗ್ ಶುಲ್ಕ ಹಾಗೂ ಇ.ಎಂ.ಡಿ ಮೊತ್ತವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಹೊಂದಿರುವ ಕರ್ನಾಟಕ ಸರ್ಕಾರದ ಸೆಂಟ್ರಲ್ ಪೂಲಿಂಗ್ ಅಕೌಂಟ್‌ನಲ್ಲಿ ಡಾಕ್ಯೂಮೆಂಟ್‌ನಲ್ಲಿ ತಿಳಿಸಿರುವ ಯಾವುದಾದರೂ ಒಂದು ಮಾದರಿಯಲ್ಲಿ ಸಂದಾಯ ಮಾಡುವುದು. 4) ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಮೋ.ನಂ. 08533–230243 ಗೆ ಪಡೆಯಬಹುದು & ವೆಬ್‌ಸೈಟ್: http://eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಮುಖ್ಯಾಧಿಕಾರಿ, ಪುರಸಭೆ ಕುಷ್ಟಗಿ   ಸಹಿ/– ಅಧ್ಯಕ್ಷರು, ಪುರಸಭೆ ಕುಷ್ಟಗಿ

ವಾ.ಸಾ.ಇ./ಕೊಪ್ಪಳ/566/2021–22/ದೇಶಪಾಂಡೆ ಪಬ್ಲಿಸಿಟಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕನೀನಿನಿ ಎಂ.ಬಿ.ಸಿ ವಿಭಾಗ ನಂ. 1, ಗದ್ದನಕೇರಿ ಕ್ಯಾಂಪ್ : ಬಾಗಲಕೋಟೆ. ಕಚೇರಿ ದೂರವಾಣಿ ಸಂ:08354–297046, ಇ–ಮೇಲ್:eeknnlbgk@gmail.com

ಸಂ: ಕನೀನಿನಿ/ವಿ–1/ಪಿಬಿ/ಟಿಎನ್‌ಡಿ/2021–22/1759   ದಿನಾಂಕ:25.02.2022

ಅಲ್ಪಾವಧಿ ಶೇಕಡಾವಾರು ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ಎಂ.ಬಿ.ಸಿ ವಿಭಾಗ ನಂ. 1, ಗದ್ದನಕೇರಿ ಕ್ಯಾಂಪ್ : ಬಾಗಲಕೋಟೆ ಕಚೇರಿಯಲ್ಲಿ ಶೇಕಡಾವಾರು ಪ್ರತಿಶತ ದರಗಳ (Percentage Rate) ಆಧಾರದ ಮೇಲೆ ಏಕ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರಮೆಂಟ ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರರಿಂದ 01 ಕನ್ಸಲ್ಟೆಂಸಿ ಕಾಮಗಾರಿಗೆ ಟೆಂಡರ ಕರೆಯಲಾಗಿದೆ.

Work Indent No. :- 32837
ಟೆಂಡರಿಗೆ ಇಡಲಾದ ಕಾಮಗಾರಿಯ ಮೊತ್ತ (ಜಿ.ಎಸ್.ಟಿ ಹೊರಗೊಂಡಿರುತ್ತದೆ): ರೂ. 42.32 ಲಕ್ಷಗಳು. ಇ.ಎಂ.ಡಿ ಮೊತ್ತ : ರೂ. 42,400/– 1)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿ ಪಡಿಸಿದ ದಿನಾಂಕ:03.03.2022, 17.00 ಘಂಟೆಯವರೆಗೆ, 2)ಇ–ಪ್ರೊಕ್ಯೂರಮೆಂಟ ಪೋರ್ಟಲ್ ಮುಖಾಂತರ ಟೆಂಡರಗಳನ್ನು ದಿನಾಂಕ 04.03.2022 ರಂದು 16.00 ಘಂಟೆಯವರೆಗೂ ಸಲ್ಲಿಸಬಹುದಾಗಿದೆ. 3)ಟೆಂಡರ್ ತೆರೆಯಲು ನಿಗದಿಪಡಿಸಲಾದ ದಿನಾಂಕ :05.03.2022 ರಂದು 16.30 ಘಂಟೆ.

ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ www.eproc.karnataka.gov.in ವೈಬಸೈಟ್‌ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು,
ಕನೀನಿನಿ, ಎಂ.ಬಿ.ಸಿ ವಿಭಾಗ ನಂ. 1, ಗದ್ದನಕೇರಿ ಕ್ಯಾಂಪ್:ಬಾಗಲಕೋಟೆ.

DIPR/BGK/RO-NO-582/MCA/2021-22

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ಘಟಕ
ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು – 560 023. ದೂರವಾಣಿ : 080–2955 7023
ಇಮೇಲ್ : cekhsdrp@gmail.com, cekhsdrp-hfws@karnataka.gov.in

ಸಂ.:ಆಕುಕ/ಇಂ.ಘ/ಮು.ಇಂ/ತಾ.ಸ–3/ಸ.ಇಂ–6/ಟಿಎನ್‌ಡಿ/21–22/3608 ದಿನಾಂಕ: 24–02–2022

ಟೆಂಡರ್ ಪ್ರಕಟಣೆ

ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರುರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಒಂದನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ, ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ದ್ವಿ ಟೆಂಡರ್ ದಾಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (ಇ–ಪ್ರೊಕ್ಯೂರ್‌ಮೆಂಟ್) ಮೂಲಕ ಆಹ್ವಾನಿಸಲಾಗಿದೆ.

ಕಾಮಗಾರಿಯ ವಿವರ : 1) ಬೆಂಗಳೂರು ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು, ಕೆ. ಆರ್. ವೃತ್ತದಲ್ಲಿರುವ ಮೆಕ್ಯಾನಿಕಲ್ ವಿಭಾಗದ ಹೊಸ ಕಟ್ಟಡ ನಿರ್ಮಾಣ ಕಾಮಗಾರಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 6500.00. ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ) : 65.00. ಕಾಲಾವಧಿ (ಮಳೆಗಾಲ ಸೇರಿದಂತೆ) : 24 ತಿಂಗಳು.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು :
1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **04–04–2022 ರಂದು 16.00 ಗಂಟೆಯವರೆಗೆ.**
2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : **06–04–2022 ರಂದು 16.00 ಗಂಟೆಗೆ.**

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-Procurement Platform) www.eproc.karnataka.gov.in ದಿಂದ ಡೌನಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು www.eproc.karnataka.gov.in ನಲ್ಲಿ ವಿದ್ಯುನ್ಮಾನ (electronic) ವಿಧಾನದಲ್ಲಿ ಪಾವತಿಸ ಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (e-Procurement Platform) ನೊಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.
2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/–
ಮುಖ್ಯ ಇಂಜಿನಿಯರ್,
ಆ&ಕು.ಕ.ಇ., ಇಂಜಿನಿಯರಿಂಗ್ ಘಟಕ, ಬೆಂಗಳೂರು.

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ, ಯಾದಗಿರಿ
ಸಂಖ್ಯೆ:ಕಾನಿಅ/ಲೋಇ/ಯಾವಿ/ತಾಶಾ–2&3/ಇ–ಟೆಂಡರ್ ಪ್ರಕಟಣೆ/2021–22/4577
ದಿನಾಂಕ:22.02.2022

ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ

(1) **ಕಾಮಗಾರಿ ವಿವರ:** ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1, 3 ಮತ್ತು 4 ರಂತೆ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 3054–04–337–0–01–422 ಎಸ್.ಸಿ.ಪಿ. ನಿರ್ವಹಣೆ, 5054–04–337–0–01–422, ಎಸ್.ಸಿ.ಪಿ. 5054–04–337–0–01–423 ಟಿ.ಎಸ್.ಪಿ. 5054 ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ) ಮತ್ತು 8443 ಎಂ.ಎಲ್.ಎ. ಲ್ಯಾಡ್ ಅಡಿಯಲ್ಲಿ ಕಾಮಗಾರಿಗಳಿಗೆ ಏಕ–ಲಕೋಟೆ ಹಾಗೂ ದ್ವಿ–ಲಕೋಟೆ ಅಡಿಯಲ್ಲಿ e-Procurement ಮುಖಾಂತರ ಯಾದಗಿರಿ ತಾಲೂಕಿನ 01, ಶಹಾಪೂರ ತಾಲೂಕಿನ 02 ಮತ್ತು ಸುರಪೂರ ತಾಲೂಕಿನ 02 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ವರ್ಕ್ ಇಂಡೆಂಟ್ ಸಂಖ್ಯೆ: ಯಾದಗಿರಿ (1) 149326, ಶಹಾಪೂರ–(1) 149612, (2) 149634, ಮತ್ತು ಸುರಪೂರ–(1) 149079, (2) 149086 (2) ಕಾಮಗಾರಿ ಅಂದಾಜು ಮೊತ್ತ: **ಕನಿಷ್ಠ ರೂ.10.00 ಲಕ್ಷ ಹಾಗೂ ಗರಿಷ್ಠ ರೂ.500.00 ಲಕ್ಷ** (3) ಗುತ್ತಿಗೆದಾರರ ಅರ್ಹತೆ ವಿವರ: 4ನೇ ದರ್ಜೆ ಹಾಗೂ ಮೇಲ್ಪಟ್ಟು (ನಿಯಮಾನುಸಾರ) (4) ಟೆಂಡರ್ ಅರ್ಜಿಯ ಬೆಲೆ ಹಾಗೂ ಇಎಂಡಿ ಮೊತ್ತದ ವಿವರ: ಅರ್ಜಿ ಬೆಲೆ e-Procurement ನಂತೆ, ಇ.ಎಂ.ಡಿ. ಕನಿಷ್ಠ ರೂ.22,200.00 ಗರಿಷ್ಠ ರೂ.6,69,600.00 (5) ಪ್ರೀ–ಬಿಡ್ ಮೀಟಿಂಗ್ ದಿನಾಂಕ:25.02.2022 (11.30 ಗಂಟೆ) (ಕೆಡಬ್ಲ್ಯೂ–4ರ ಕಾಮಗಾರಿಗಳಿಗೆ ಮಾತ್ರ) (6) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:28.02.2022 (17.30 ಗಂಟೆವರೆಗೆ) (7) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:03.03.2022 (16.00 ಗಂಟೆವರೆಗೆ) (8) ಟೆಂಡರ್ ತೆರೆಯುವ ದಿನಾಂಕ ಆರ್ಥಿಕ ಬಿಡ್: 05.03.2022 (11.30 ಗಂಟೆ) (ಕೆಡಬ್ಲ್ಯೂ–1ರ ಕಾಮಗಾರಿಗಳಿಗೆ ಮಾತ್ರ) (9) ಟೆಂಡರ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್: 05.03.2022 (11.30 ಗಂಟೆ) ಕೆಡಬ್ಲ್ಯೂ–3 & 4ರ ಕಾಮಗಾರಿಗಳಿಗೆ ಮಾತ್ರ) (10) ಟೆಂಡರ್ ತೆರೆಯುವ ದಿನಾಂಕ ಆರ್ಥಿಕ ಬಿಡ್: 07.03.2022 (11.30 ಗಂಟೆ) (ಕೆಡಬ್ಲ್ಯೂ–3 & 4ರ ಕಾಮಗಾರಿಗಳಿಗೆ ಮಾತ್ರ) (11) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಛೇರಿ. (12) ಅಂತರ್ಜಾಲ ತಾಣದ ವಿಳಾಸ: www.eproc.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/400/ಎಂಸಿ&ಎ/2021–22

ಕಾರ್ಯನಿರ್ವಾಹಕ ಅಭಿಯಂತರರು, ಯೋಜನಾ ವಿಭಾಗ ಕಚೇರಿ,
ಡಾ|| ಹುಯಿಲಗೋಳ ಹಾಸ್ಪಿಟಲ್ ಬಿಲ್ಡಿಂಗ, 1ನೇ ಮಹಡಿ, ಹುಬ್ಬಳ್ಳಿ ರಸ್ತೆ, ಗದಗ –582103.
ಫೋನ್ –08372–220121 ಫ್ಯಾಕ್ಸ್ ನಂ:08372–220121, ಇ–ಮೇಲ್–kn-gad@pmgsy.nic.in

ಕ್ರ.ಸಂ./ಕಾ.ನಿ.ಇಂ./ಯೋವಿಗ/ವಾಹನ ಟೆಂಡರ/2021–22/883   ದಿನಾಂಕ : 25–03–2022

ಬಾಡಿಗೆ ವಾಹನವನ್ನು ಒದಗಿಸಲು ಅಲ್ಪಾವಧಿ ಟೆಂಡರ ಪ್ರಕಟಣೆ Call-2

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರು, ಯೋಜನಾ ವಿಭಾಗ, ಗದಗ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document (ಏಕಲಕೋಟೆ ಪದ್ಧತಿಯಲ್ಲಿ) ರ ನಿಯಮಗಳನ್ವಯ ಅರ್ಹ ಗುತ್ತೆದಾರರಿಂದ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಗದಗ ಜಿಲ್ಲೆಯಲ್ಲಿ ಯೋಜನಾ ಉಪ ವಿಭಾಗ, ಗದಗ ಕಛೇರಿಯ ಕೆಲಸಕ್ಕಾಗಿ 2021–22 ನೇ ಸಾಲಿಗೆ ಒಂದು ವರ್ಷದ ಅವಧಿಗೆ ಬಾಡಿಗೆ ಆಧಾರದ ಮೇಲೆ ಚಾಲಕರ ಸಹಿತ ವಾಹನಗಳು ಸರಬರಾಜು ಮಾಡಲು ಟೆಂಡರನ್ನು ಆಹ್ವಾನಿಸಲಾಗಿದೆ. ನೊಂದಾಯಿತ ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟಲ್, https://eproc.karnataka.gov.in ಮುಖಾಂತರ ಟೆಂಡರಿನಲ್ಲಿ ಭಾಗವಹಿಸಬಹುದು. ಉಪ ವಿಭಾಗ ಕಛೇರಿಗೆ ಟೆಂಡರಿಗಿಟ್ಟ ಮೊತ್ತ ರೂ. 3,66,000.00, ಇ.ಎಂ.ಡಿ. ಮೊತ್ತ ರೂ. 10,000.00, ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ 12 ತಿಂಗಳು, ವಿಚಾರಣಾ ಮಾಡುವ ಕೊನೆಯ ದಿನಾಂಕ : 04–03–2022 ರಂದು 16.30 ಗಂಟೆಯವರೆಗೆ, ಇ–ಪೋರ್ಟಲ್‌ನಲ್ಲಿ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 05–03–2022 **ರಂದು 16.30 ಗಂಟೆಯ ವರೆಗೆ,** ಟೆಂಡರ ತೆರೆಯುವ ದಿನಾಂಕ : 07–03–2022 ರಂದು 11.00 ಗಂಟೆಗೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, ಈ ಕೆಳಗೆ ಸಹಿ ಮಾಡಿದವರ ಕಚೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಅಥವಾ ವೆಬ್ ಸೈಟಿನಲ್ಲಿಯ https://eproc.karnataka.gov.in ರಲ್ಲಿ ಪಡೆಯಬಹುದು.
ಸೂಚನೆ :(1) ಉಪ ವಿಭಾಗ ಕಛೇರಿಗೆ 2018 ನಂತರದ ಮಾಡೆಲ್ ಡಿಜಾಯಿಲ್ ವಾಹನಗಳು **(Tata Indica / Swift or similar type Non AC Vehicle)** ಇರಬೇಕು.
(2) ಹಳದಿ ಬೋರ್ಡ್ ಹೊಂದಿರಬೇಕು

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಯೋಜನಾ ವಿಭಾಗ, ಗದಗ.

ವಾ.ಸಾ.ಇ/ಗದಗ/562/2021–22/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001
ದೂ: 080–2558 6520/ 2558 9112 ಫ್ಯಾಕ್ಸ್: 080–2588 6321
ಇಮೇಲ್: ho@kspcb.gov.in ವೆಬ್‌ಸೈಟ್: www.kspcb.karnataka.gov.in

ಸಂಖ್ಯೆ: ಕರಾಮಾನಿಮಂ/66/ಹಿಪಅ/ಗಣಿ/ಪಸಾಸ/2021–22/6353 ದಿನಾಂಕ: 24/02/2022

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಮೆ. ಜೆ.ಎಸ್.ಡಬ್ಲ್ಯೂ ಸ್ಟೀಲ್ ಲಿಮಿಟೆಡ್ ರವರ ಬೊಮ್ಮನ್ ಐರನ್ ಓರ್ ಮೈನ್ಸ್ ರವರು ನೀರುತಡಿ ಮೀಸಲು ಅರಣ್ಯ ಹೊಳಲ್ಕೆರೆ ಶ್ರೇಣಿ (ಗಣಿ ಗುತ್ತಿಗೆ ಸಂಖ್ಯೆ: 0014)ರ ಬೆದರಬೊಮ್ಮನಹಳ್ಳಿ ಗ್ರಾಮ, ಹಿರೇಕಂದವಾಡಿ ಗ್ರಾಮ ಮತ್ತು ಇತರೆ ಗ್ರಾಮಗಳ Sy. No.5, 107, 9, 21 & 18ರಲ್ಲಿ, ಹೊಳಲ್ಕೆರೆ ತಾಲ್ಲುಕು ಮತ್ತು ಚಿತ್ರದುರ್ಗ ತಾಲ್ಲುಕು, ಚಿತ್ರದುರ್ಗ ಜಿಲ್ಲೆಯಲ್ಲಿ 93.60 ಹೆಕ್ಟೇರ್ ಪ್ರದೇಶದಲ್ಲಿ 1.0 ಎಂ.ಎಂ.ಟಿ.ಪಿ.ಎ. ಸಾಮರ್ಥ್ಯದ ಕಬ್ಬಿಣದ ಅದಿರು ಗಣಿಗಾರಿಕೆಯ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference (ToR) ಪತ್ರ ಸಂಖ್ಯೆ:SEIAA 410 MIN 2020 ದಿನಾಂಕ: 09.08.2021 ಮತ್ತು ದಿನಾಂಕ: 10.12.2021 ರಂದು ಉದ್ದಿಮೆಯವರು ನೀಡಿದ ನಿವೇದನೆಯ ಪತ್ರದ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ:

1.	**ಕಂಪನಿಯ ಹೆಸರು ಮತ್ತು ವಿಳಾಸ: ಮೆ. ಜೆ.ಎಸ್.ಡಬ್ಲ್ಯೂ ಸ್ಟೀಲ್ ಲಿಮಿಟೆಡ್ ವಿದ್ಯಾ ನಗರ ಅಂಚೆ, ಸಂಡೂರ್ ತಾಲ್ಲುಕು, ಬಳ್ಳಾರಿ ಜಿಲ್ಲೆ – 583 203**
2.	**ಉದ್ದೇಶಿತ ಯೋಜನೆಯ ಸ್ಥಳ: ಗಣಿ ಗುತ್ತಿಗೆ ಸಂಖ್ಯೆ: 0014, ನೀರುತಡಿ ಮೀಸಲು ಅರಣ್ಯ ಹೊಳಲ್ಕೆರೆ ಶ್ರೇಣಿ, Sy. No. 5, 107, 9, 21 & 18, ಬೆದರಬೊಮ್ಮನಹಳ್ಳಿ ಗ್ರಾಮ, ಹಿರೇಕಂದವಾಡಿ ಗ್ರಾಮ ಮತ್ತು ಇತರೆ ಗ್ರಾಮಗಳು, ಹೊಳಲ್ಕೆರೆ ತಾಲ್ಲುಕು ಮತ್ತು ಚಿತ್ರದುರ್ಗ ತಾಲ್ಲುಕು, ಚಿತ್ರದುರ್ಗ ಜಿಲ್ಲೆ.**
3.	**ಯೋಜನೆಯ ಕಾರ್ಯಚಟುವಟಿಕೆ:** 1.0 ಎಂ.ಎಂ.ಟಿ.ಪಿ.ಎ. ಸಾಮರ್ಥ್ಯದ ಕಬ್ಬಿಣ ಅದಿರು ಗಣಿಗಾರಿಕೆಯ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ.
4.	**ಮಾಲಿನ್ಯ ನಿಯಂತ್ರಣ ಕ್ರಮಗಳು:** ಮೈನ್ ಕಛೇರಿಯಿಂದ ಬರುವ ಗೃಹ ಬಳಕೆಯ ತ್ಯಾಜ್ಯ ನೀರನ್ನು ಸೆಪ್ಟಿಕ್ ಟ್ಯಾಂಕ್ – ನೆನೆಸುವ ಹಳ್ಳದ ವ್ಯವಸ್ಥೆಗೆ ಬಿಡಲಾಗುತ್ತದೆ. ಮಳೆಗಾಲದಲ್ಲಿ ಗಣಿ ಹೊಂಡಗಳಲ್ಲಿ ಸಂಗ್ರಹವಾದ ಮಳೆನೀರನ್ನು ಧೂಳು ನಿಗ್ರಹಕ್ಕೆ ಮತ್ತು ತೋಟಗಾರಿಕೆಗೆ ಬಳಸಲಾಗುತ್ತದೆ. ಸಾಗಿಸುವ ಮತ್ತು ಪ್ರವೇಶ ರಸ್ತೆಗಳಲ್ಲಿ ನಿಯಮಿತವಾಗಿ ನೀರನ್ನು ಸಿಂಪಡಿಸಲಾಗುತ್ತದೆ. ಡೀಸಲ್ ಎಂಜಿನ್‌ಗಳಿಂದ ಹೊರಹೊಮ್ಮುವ ಧೂಳಿನ ಕಣಗಳು ಮತ್ತು ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಎಲ್ಲಾ ಉಪಕರಣಗಳನ್ನು ನಿಯಮಿತವಾಗಿ ನಿರ್ವಹಣೆ ಮಾಡಲಾಗುತ್ತದೆ. ನೀರು ಸಿಂಪಡೆಯುವಿಕೆ, ಒದ್ದೆ ಕೊರೆಯುವಿಕೆ, ಕಡಿಮೆ ಸಾಂದ್ರತೆಯ ಸ್ಫೋಟಕಗಳ ಬಳಕೆಯಿಂದಾಗಿ ನಿಯಂತ್ರಿತ ಬ್ಲಾಸ್ಟಿಂಗ್ ಮೂಲಕ ಧೂಳನ್ನು ನಿಯಂತ್ರಿಸಲಾಗುತ್ತದೆ. ಗಣಿಗಾರಿಕೆ ಪ್ರದೇಶದ ಸುತ್ತಲೂ ವಿಶಾಲವಾದ ಹಸಿರು ಪಟ್ಟಿಯನ್ನು ಅಭಿವೃದ್ಧಿಮಾಡಲಾಗುತ್ತದೆ.
5.	**ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ಉದ್ದೇಶಿತ ಯೋಜನಾ ಸ್ಥಳ, ಗಣಿ ಗುತ್ತಿಗೆ ಸಂಖ್ಯೆ: 0014, ನೀರುತಡಿ ಮೀಸಲು ಅರಣ್ಯ ಹೊಳಲ್ಕೆರೆ ಶ್ರೇಣಿ, Sy. No. 5, 107, 9, 21 & 18, ಬೆದರಬೊಮ್ಮನಹಳ್ಳಿ ಗ್ರಾಮ, ಹೊಳಲ್ಕೆರೆ ತಾಲ್ಲುಕು, ಚಿತ್ರದುರ್ಗ ಜಿಲ್ಲೆ ದಿನಾಂಕ: 29.03.2022(ಮಂಗಳವಾರ) ರಂದು ಪೂರ್ವಾಹ್ನ 11:00 ಗಂಟೆಗೆ**
6.	**ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ:** (ಅ) ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಚಿತ್ರದುರ್ಗ (ಈ) ತಾಲ್ಲೂಕು ಪಂಚಾಯಿತಿ, ಹೊಳಲ್ಕೆರೆ ಮತ್ತು ಚಿತ್ರದುರ್ಗ (ಉ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಬೊಮ್ಮೇನಹಳ್ಳಿ, ಬೀಮಸಮುದ್ರ, ಬಿ–ದುರ್ಗ (ಊ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಚಿತ್ರದುರ್ಗ (ಋ) ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ. 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು–01 (ಎ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ
ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು
ಶ್ರೀ ಮಹಾಲಕ್ಷ್ಮೀ ಆರ್ಕೇಡ್, ಎಸ್.ಎಸ್.ಪುರಂ ಮುಖ್ಯರಸ್ತೆ, ಕಾಫಿ ಬೋರ್ಡ್ ಕಾಲೋನಿ, ತುಮಕೂರು–572 102
ದೂರವಾಣಿ:0816–2278190
ವೆಬ್‌ಸೈಟ್: www.smartcitytumakuru.in
ಇ–ಮೇಲ್: smartcitytumakuru@gmail.com
ಸಂಖ್ಯೆ:ತುಸ್ಮಾಸಿ/ಟೆಂಡರ್/ಸಿಆರ್/46&13/2021–22   ದಿನಾಂಕ: 24.02.2022

ಟೆಂಡರ್ ಪ್ರಕಟಣೆ

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಸ್ತಾನನ್ನು ಇ–ಪೋರ್ಟಲ್ www.eproc.karnataka.gov.in – ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ:080–22340948 ಹಾಗೂ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816–2278190 ಯನ್ನು ಸಂಪರ್ಕಿಸಬಹುದು.

ಕಾಮಗಾರಿಯ ಹೆಸರು: 1. ತುಮಕೂರು ಅಮಾನಿಕೆರೆ ಕೋಡಿ ಹಳ್ಳವನ್ನು ದಾಟಲು ಬಾಕ್ಸ್ ಕಲ್ವರ್ಟ್ ನಿರ್ಮಾಣ ಕಾಮಗಾರಿ. ಕಾಮಗಾರಿಯ ಮೊತ್ತ **ರೂ.1.744 ಕೋಟಿಗಳು.** ಇಎಂಡಿ **ರೂ.2,61,600/–.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:**15.03.2022.** ಟೆಂಡರ್ ತೆರೆಯುವ ದಿನಾಂಕ: **16.03.2022.** 2. ತುಮಕೂರು ನಗರದ ವಿವಿಧ 3 ಸ್ಥಳಗಳಲ್ಲಿ ಅಂಗನವಾಡಿ ಕೇಂದ್ರಗಳ ನಿರ್ಮಾಣ ಕಾಮಗಾರಿಯ ಮೊತ್ತ **ರೂ.63.00ಲಕ್ಷಗಳು.** ಇಎಂಡಿ **ರೂ.1,26,000/–.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **15.03.2022.** ಟೆಂಡರ್ ತೆರೆಯುವ ದಿನಾಂಕ:**16.03.2022.** ಟೆಂಡರ್ ದಾಸ್ತಾನನ್ನು ದಿನಾಂಕ: **28.02.2022** ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. **ಸೂಚನೆ:** ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು,
ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.

DIPR/TUM/687/MCA/2021-22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರರವರ ಕಛೇರಿ, ಬೆಂಗಳೂರು ದಕ್ಷಿಣ ವಿಭಾಗ, ಅಮೃತನಗರ, ಕೋಣನಕುಂಟೆ ಮುಖ್ಯರಸ್ತೆ, ಸೌದಾಮಿನಿ ಬಡಾವಣೆ,ಬೆಂಗಳೂರು–560062

ಸಂ: ಬಿಬಿಎಂಪಿ/ಕಾಪಾಅ/ಬೆಂದವಿ/ಟೆಂಡ್/14/2021–22   ದಿನಾಂಕ: 25.02.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)   (ಏಕ & ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ದಕ್ಷಿಣ ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)
1	ವಾರ್ಡ್ ಸಂಖ್ಯೆ 194, ಗೊಟ್ಟಿಗೆರೆಯಲ್ಲಿ ಅಂಗವಿಕಲರ ಶೌಚಾಲಯ ನಿರ್ಮಿಸುವ ಕಾಮಗಾರಿ (ಇತರೆ ಪ್ರವರ್ಗಕ್ಕೆ ಮೀಸಲಿರಿಸಿದೆ).	35.00	70,000/-
2	ವಾರ್ಡ್ ಸಂಖ್ಯೆ 194, ಗೊಟ್ಟಿಗೆರೆಯಲ್ಲಿ ಅಂಗನವಾಡಿ ಕಟ್ಟಡ ನಿರ್ಮಿಸುವ ಕಾಮಗಾರಿ (ಇತರೆ ಪ್ರವರ್ಗಕ್ಕೆ ಮೀಸಲಿರಿಸಿದೆ).	40.00	80,000/-
3	ವಾರ್ಡ್ ಸಂಖ್ಯೆ 194, ಗೊಟ್ಟಿಗೆರೆ ಹಂತ–1ರಲ್ಲಿ ಪಿಳ್ಳಗಾನಹಳ್ಳಿ ಸ್ಮಶಾನಕ್ಕೆ ಬೇಲಿ / ಕಾಂಪೌಂಡ್ ಒದಗಿಸುವ ಕಾಮಗಾರಿ (ಇತರೆ ಪ್ರವರ್ಗಕ್ಕೆ ಮೀಸಲಿರಿಸಿದೆ).	50.00	1,00,000/-
4	ವಾರ್ಡ್ ಸಂಖ್ಯೆ 194, ಗೊಟ್ಟಿಗೆರೆ ಹಂತ–2ರಲ್ಲಿ ಪಿಳ್ಳಗಾನಹಳ್ಳಿ ಸ್ಮಶಾನಕ್ಕೆ ಬೇಲಿ / ಕಾಂಪೌಂಡ್ ಒದಗಿಸುವ ಕಾಮಗಾರಿ (ಪ.ಜಾತಿ ಪ್ರವರ್ಗಕ್ಕೆ ಮೀಸಲಿರಿಸಿದೆ).	50.00	50,000/-
5	ಬೆಂಗಳೂರು ದಕ್ಷಿಣ ವಿಭಾಗದ ಉತ್ತರಹಳ್ಳಿ, ಅರೆಹಳ್ಳಿ, ತುರಹಳ್ಳಿ, ವಡ್ಡರೆಪಾಳ್ಯ, ಗುಬ್ಬಲಾಳ, ಸುಬ್ರಹ್ಮಣ್ಯಪುರ, ವಸಂತಪುರ ಮತ್ತು ದೊಡ್ಡಕಲ್ಲಸಂದ್ರ, ಅಂಜನಾಪುರ, ಕೆಂಬತ್ತಹಳ್ಳಿ, ಗೊಲ್ಲಹಳ್ಳಿ, ಅಲಹಳ್ಳೀ, ತಿಪ್ಪಸಂದ್ರ, ಗೊಟ್ಟಿಗೆರೆ, ಪಿಳ್ಳಗಾನಹಳ್ಳಿ, ಪರಪ್ಪನ ಅಗ್ರಹಾರ, ನಾಗನಾಥಪುರ, ಕೂಡ್ಲು, ಕಾಳೇನ ಅಗ್ರಹಾರ, ಬೇಗೂರು, ಬಸವನಪುರ, ಕಮ್ಮನಹಳ್ಳಿ, ಯೆಲೆನಹಳ್ಳಿ, ಬಸಾಪುರ, ಚಿಕ್ಕತೋಗೂರು, ಬೆರೆಟೇನ ಅಗ್ರಹಾರ, ದೊಡ್ಡ ತೋಗೂರು, ಮತ್ತು ಚಂದ್ರಶೇಖರಪುರದಲ್ಲಿ ಬೋರ್‌ವೆಲ್‌ಗಳು, ಕೊಳವೆಮಾರ್ಗಗಳ ಜಾಲ ಮತ್ತು ಅಂತರ್ಜಲ ಮರುಪೂರಣ ಸೌಲಭ್ಯಗಳ ಮೂಲಕ ನೀರಿನ ಪೂರೈಕೆಯನ್ನು ಹೆಚ್ಚಿಸುವುದು (ಇತರೆ ಪ್ರವರ್ಗಕ್ಕೆ ಮೀಸಲಿರಿಸಿದೆ).	910.00	9,10,000/-
6	ವಾರ್ಡ್ ಸಂಖ್ಯೆ 191, ಸಿಂಗಸಂದ್ರ ಪರಪ್ಪನ ಅಗ್ರಹಾರ ಗ್ರಾಮದ ಪೆಪ್ಸಿ ಗೋಡೌನ್, ಹಾಗೂ ಕುವೆಂಪು ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶ, ವಿಶ್ವೇಶ್ವರಯ್ಯ ಬಡಾವಣೆ, ರಾಯಲ್ ಕೌಂಟಿ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶ, ವೈಷ್ಣವಿ ಬಡಾವಣೆ, ಸಾಯಿ ಬಡಾವಣೆ, ಪಂಚಮುಖಿ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆ ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿ (ಇತರೆ ಪ್ರವರ್ಗಕ್ಕೆ ಮೀಸಲಿರಿಸಿದೆ).	300.00	3,00,000/-
7	ವಾರ್ಡ್ ಸಂಖ್ಯೆ 185ರಲ್ಲಿ ಅಂಗವಿಕಲರ ಶೌಚಾಲಯ ನಿರ್ಮಿಸುವ ಕಾಮಗಾರಿ (ಇತರೆ ಪ್ರವರ್ಗಕ್ಕೆ ಮೀಸಲಿರಿಸಿದೆ).	60.00	1,20,000/-
8	ವಾರ್ಡ್ ಸಂಖ್ಯೆ 191, ಸಿಂಗಸಂದ್ರದಲ್ಲಿ 14ನೇ ಮುಖ್ಯರಸ್ತೆ, ಜಿ.ಕೆ. ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ರಸ್ತೆ ಸುಧಾರಣಾ ಕಾಮಗಾರಿಗಳು.(ಇತರೆ ಪ್ರವರ್ಗಕ್ಕೆ ಮೀಸಲಿರಿಸಿದೆ).	18.06	45,150/-
9	ವಾರ್ಡ್ ಸಂಖ್ಯೆ 191, ಸಿಂಗಸಂದ್ರದಲ್ಲಿ ಜಿ.ಡಿ. ಬಡಾವಣೆ ಮುಖ್ಯರಸ್ತೆಯಲ್ಲಿ ಸಿಸಿ ಒಳಚರಂಡಿ ನಿರ್ಮಾಣ ಕಾಮಗಾರಿ (ಪ.ಜಾತಿ ಪ್ರವರ್ಗಕ್ಕೆ ಮೀಸಲಿರಿಸಿದೆ).	30.00	37,500/-

1)ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **25.03.2022 ಸಂಜೆ 4.00 ಗಂಟೆಯವರೆಗೆ** 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **28.03.2022 ರ ಸಂಜೆ 4.30 ಗಂಟೆಗೆ.** 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ಅರ್ಹ ಬಿಡ್ದುದಾರರಿಗೆ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು

ಸಹಿ/– ಕಾರ್ಯಪಾಲಕ ಅಭಿಯಂತರರು, ದಕ್ಷಿಣ ವಿಭಾಗ.

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾಫಿಗೆ ಹೋಗೋಣ್ವಾ?

ಪ್ರೀತಿ – ಆಕರ್ಷಣೆಯ ನಡುವೆ...

ನಡಹಳ್ಳಿ ವಸಂತ್

ಕಾಲೇಜು ಕ್ಯಾಂಪಸ್ಸಿನಲ್ಲೋ ಸಾಮಾಜಿಕ ಸಂದರ್ಭದಲ್ಲೋ ಭೇಟಿಯಾಗುತ್ತೀರಿ. ಕಣ್ಣೋಟಗಳು ಸೇರಿದಂತೆ ಒಂದು ಕ್ಷಣ ದೇಹ ಸ್ಪಂದಿಸುತ್ತದೆ. ಅಲ್ಲಿಂದಲೇ ಕಾಡುವ ಸೆಳೆತದ ಆರಂಭ. ಇದೇನು ಮೊದಲ ನೋಟದ ಪ್ರೀತಿಯೇ?

ಹದಿಯವಸ್ಸಿಗೆ ಬಂದಂತೆ ದೇಹದಲ್ಲಿ ಹಾರ್ಮೋನ್‌ಗಳನ್ನು ಸೃಜಿಸಿ ಗಂಡು ಹೆಣ್ಣುಗಳನ್ನು ಹತ್ತಿರ ಸೆಳೆಯುವ ಪ್ರಕೃತಿಯ ಪವಾಡ ಇದು. ಇದನ್ನು ಆಕರ್ಷಣೆ ಎಂದು ಕರೆಯೋಣ. ಸಾಹಿತ್ಯ, ಸಿನಿಮಾಗಳಲ್ಲಿ ಇದನ್ನೇ ಪ್ರೀತಿ ಎನ್ನುತ್ತಾರೆ. ಪ್ರೀತಿ ಆಕರ್ಷಣೆಯಿಂದಲೇ ಪ್ರಾರಂಭವಾಗುತ್ತದೆ. ಆದರೆ ನಮ್ಮ ಸಾಮಾಜಿಕ ಸಂದರ್ಭಗಳಲ್ಲಿ ದೀರ್ಘಕಾಲ ಉಳಿಯಬೇಕಾದ ಸಂಬಂಧಕ್ಕೆ ಕಣ್ಣೋಟದ ಆಕರ್ಷಣೆಯಿಂದ ಮುಂದೆಹೋಗಿ ಪರಸ್ಪರ ಪರಿಚಿತರಾಗಬೇಕಾಗುತ್ತದೆ. ಇಲ್ಲಿಂದಲೇ ಆಕರ್ಷಣೆ ಪ್ರೀತಿಗಳ ನೂರಾರು ಗೊಂದಲಗಳು ನಿಮ್ಮೆದುರು ತೆರೆದುಕೊಳ್ಳುತ್ತದೆ.

> ಹದಿವಯಸ್ಸಿನ ಜೋಡಿಗಳ ಮೊದಲ ಭೇಟಿಯ ಪ್ರೀತಿ ಶಾಶ್ವತವಾಗಿ ಉಳಿಯಬೇಕು. ಈ ಹಂತದಲ್ಲಿ ಹುಟ್ಟುವ ಗೊಂದಲಗಳ ನಿವಾರಣೆಗೆ ಅನುಸರಿಸಬಹುದಾದ ಗೌರವಯುತ ದಾರಿಗಳು ಇಲ್ಲಿವೆ.



'ಕಾಫಿಗೆ ಬರ್ತೀರಾ?' ಎಂದು ನೀವೇ ಕೇಳಬಹುದು ಅಥವಾ ಅವನು/ಳು ಕೇಳಬಹುದು. ಇದನ್ನು ಪ್ರೀತಿ ಗಟ್ಟಿಯಾಗುತ್ತಿರುವುದರ ಸೂಚನೆಯೆಂದು ನಿಮ್ಮೊಳಗಿನ ಹಾರ್ಮೋನ್‌ಗಳು ಹೇಳಬಹುದು. ಸ್ವಲ್ಪ ನಿಧಾನಿಸಿ, ನಿಮ್ಮೊಳಗೆ ಆಕರ್ಷಣೆ ಮೂಡುತ್ತಿರುವುದನ್ನು ಗುರುತಿಸಿಕೊಳ್ಳಿ ಮತ್ತು ಅದನ್ನು ಸಹಜವೆಂದು ಒಪ್ಪಿಕೊಳ್ಳಿ. ಪ್ರೀತಿಯ ದಾರಿ ಇನ್ನೂ ದೂರವಿದೆ ಎಂದು ನೆನಪಿಸಿಕೊಳ್ಳಿ.

ಸ್ನೇಹಿತ/ತೆಯ ಆಹ್ವಾನ ನಿಮಗೆ ಒಪ್ಪಿಗೆಯಿಲ್ಲದಿದ್ದರೆ 'ಕ್ಷಮಿಸಿ' ಎಂದು ನಯವಾಗಿ ಹೇಳಿ ಮುನ್ನಡೆಯಿರಿ. ಅನಗತ್ಯವಾದ ಸಿಟ್ಟು ಟೀಕೆ, ಚುಚ್ಚುಮಾತುಗಳ ಅಗತ್ಯವೇನಿರುವುದಿಲ್ಲ. ಹಾಗೊಮ್ಮೆ ನಿಮ್ಮ ಆಹ್ವಾನವನ್ನು ಅವನು/ಳು ತಿರಸ್ಕರಿಸಿದರೂ 'ಧನ್ಯವಾದಗಳು' ಎಂದು ಹೇಳಿ ದೂರವಿರಿ. ತಕ್ಷಣಕ್ಕೆ ನಿಮ್ಮ ಕುರಿತು ನಿಮ್ಮೊಳಗೇ ಕಹಿಭಾವನೆಗಳು ಮೂಡಬಹುದು. ಅವರು ತಿರಸ್ಕರಿಸುತ್ತಿರುವುದು ನಿಮ್ಮ ಸ್ನೇಹದ ಆಹ್ವಾನವನ್ನೇ ಹೊರತು, ನಿಮ್ಮ ಸಂಪೂರ್ಣ ವ್ಯಕ್ತಿತ್ವವನ್ನಲ್ಲ ಎಂದು ನೆನಪು ಮಾಡಿಕೊಳ್ಳಿ. 'ನಿಮ್ಮ ಆತ್ಮಗೌರವವನ್ನು ನೀವಾಗಿಯೇ ಬಿಟ್ಟುಕೊಡದಿದ್ದರೆ ಯಾರೂ ಕಸಿದುಕೊಳ್ಳಲಾಗುವುದಿಲ್ಲ' ಎನ್ನುವ ಗಾಂಧೀಜಿಯ ಮಾತುಗಳನ್ನು ಅನ್ವಯಿಸಿಕೊಳ್ಳಿ.

ಸರಿ, ಇಬ್ಬರ ಒಪ್ಪಿಗೆಯಿಂದ ಭೇಟಿ ನಿರ್ಧಾರವಾಯಿತು. ಹಾಗಿದ್ದರೂ ಸಂಬಂಧಗಳು ಗಟ್ಟಿಯಾಗಲು ಸಾಕಷ್ಟು ಸಮಯದ ಅಗತ್ಯವಿರುತ್ತದೆ. ಆದರೇನು ಮಾಡುವುದು? ಹದಿವಯಸ್ಸಿನ ಹಾರ್ಮೋನ್‌ಗಳು ನಿಮ್ಮೊಳಗೆ ತೀವ್ರವಾಗಿ ಒತ್ತಡವನ್ನು ಹೇರುತ್ತಿರುತ್ತವೆ. ಇದನ್ನು ಆಗಾಗ ನೆನಪಿಸಿಕೊಂಡು ನಿಮ್ಮನ್ನೇ ಸಂತೈಸಿಕೊಳ್ಳಿ. ಭೇಟಿಯಾದಾಗ ಅಲ್ಲಿ ಮಾತನಾಡುವುದು ವರ್ತಿಸುವುದು ಹೇಗೆ? ಎಲ್ಲಾ ಭೇಟಿಗಳಿಗೆ ಉಪಯುಕ್ತವಾಗುವ ಕೆಲವು ಸರಳ ಅಂಶಗಳನ್ನು ಹೇಳುತ್ತೇನೆ.

- ನಿಮ್ಮೊಳಗೆ ಅನಿಶ್ಚಿತತೆ, ಆತಂಕ ಕಾಡುತ್ತಿದ್ದರೆ ಮೊದಲೇ ಅದನ್ನು ಹೇಳಿಕೊಂಡು ಬಿಡಿ. ಇದರಿಂದ ಮುಂದಿನ ಮಾತುಕತೆ ಸರಾಗವಾಗುತ್ತದೆ.
- ಎಲ್ಲಾ ಮಾಹಿತಿಯನ್ನು ತಿಳಿಯುವ ಮತ್ತು ಹಂಚಿಕೊಳ್ಳುವ ಕುತೂಹಲ ಸಹಜವಾದದ್ದು. ಆದರೆ ತುಂಬಾ ಖಾಸಗಿ ವಿಷಯಗಳನ್ನು ಹಂಚಿಕೊಳ್ಳುವಷ್ಟು ಸಂಬಂಧಗಳು ಗಟ್ಟಿಯಾಗಿವೆಯೇ ಎನ್ನುವ ಎಚ್ಚರಿಕೆಯೂ ಇರಬೇಕಲ್ಲವೇ? ಅದಿಲ್ಲದಿದ್ದರೆ ಅನಗತ್ಯವಾಗಿ ತೊಂದರೆಗಳನ್ನು ಆಹ್ವಾನಿಸಿಕೊಂಡಂತಾಗಬಹುದು.

ಉದಾಹರಣೆಗೆ ಹಿಂದಿನ ಸ್ನೇಹಿತ/ತೆಯ ಕುರಿತ ಮಾಹಿತಿಗಳನ್ನು ಹೇಳಿಕೊಳ್ಳುವ ಅಥವಾ ತಿಳಿದುಕೊಳ್ಳುವಂತಹ ಸೂಕ್ಷ್ಮ ವಿಚಾರಗಳನ್ನು ಮೊದಲ ಕೆಲವು ಭೇಟಿಯಲ್ಲಿ ಮಾತನಾಡುವುದು ಕಷ್ಟವಾಗಬಹುದು. ಇಂತಹ ವಿಷಯಗಳು ಇಬ್ಬರಲ್ಲಿಯೂ ಹಲವಾರು ಭಾವನೆಗಳನ್ನು ಕೆರಳಿಸಿ ಸ್ನೇಹ ಆರಂಭದಲ್ಲಿಯೇ ಮುರಿದುಬೀಳುವ ಸಾಧ್ಯತೆಗಳಿರುತ್ತವೆ. ಅಥವಾ ಆ ವ್ಯಕ್ತಿ ಇದನ್ನು ಅನಗತ್ಯವಾಗಿ ಸಾರ್ವಜನಿಕಗೊಳಿಸಿ ನಿಮಗೆ ಮುಜುಗರ ಉಂಟುಮಾಡಬಹುದು.

- ಇವನೇ/ಳೇ ನನ್ನ ಜೀವನ ಸಂಗಾತಿ ಎಂದು ತೀರ್ಮಾನಿಸಿಕೊಂಡು ಮುಂದುವರಿದರೆ ಅಹಿತಕರ ಅನುಭವಗಳನ್ನು ಕಡೆಗಣಿಸುತ್ತೀರಿ. ಇದರಿಂದ ಮುಂದೆ ಪಶ್ಚಾತ್ತಾಪಪಡಬೇಕಾಗಬಹುದು. ಇವನು/ಳು ನನ್ನ ಸಂಗಾತಿಯಾಗಬಹುದೇ? ಎನ್ನುವ ಕುತೂಹಲದ ಪ್ರಶ್ನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮುಂದುವರಿಯಿರಿ.
- ನಿಮಗೆ ಹಂಚಿಕೊಳ್ಳಲು ಇಷ್ಟವಿರದ ಮಾಹಿತಿಗಳಿಗೆ ಬೇಡಿಕೆ ಬಂದರೆ ನಯವಾಗಿ ತಿರಸ್ಕರಿಸಿ. 'ಕ್ಷಮಿಸಿ, ಸದ್ಯಕ್ಕೆ ಈ ವಿಷಯ ಮಾತನಾಡಲು ಇಷ್ಟವಿಲ್ಲ. ಮುಂದೆ ನಮ್ಮ ಸ್ನೇಹಕ್ಕೆ ಗಟ್ಟಿತನ ಬಂದಾಗ ಮಾತ್ರ ಹೇಳುತ್ತೇನೆ' ಎಂದು ಮುಗಿಸಿಬಿಡಿ.

ಕರುಳಿನ ಕರೆ

ಸಂಬಂಧವನ್ನು ಉಳಿಸಿಕೊಳ್ಳುವ ಮತ್ತು ಗಟ್ಟಿಯಾಗಿಸುವ ಪ್ರಯತ್ನದಲ್ಲಿ ಕೆಲವೊಮ್ಮೆ ನಿಮಗಿಷ್ಟವಿಲ್ಲದ ಕೆಲಸಗಳನ್ನು ಮಾಡಿಬಿಡಬಹುದು. ಆಗ ನಿಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಿರುವ ಅನುಭವವಾಗುತ್ತದೆ. ಇದನ್ನು ಗುರುತಿಸುವಷ್ಟರಲ್ಲಿ ಹಿಂದಿರುಗಲಾರದಷ್ಟು ದೂರ ಹೋಗಿರುವ ಸಾಧ್ಯತೆಗಳಿರುತ್ತವೆ. ನಾನು ಒತ್ತಡಕ್ಕೆ ಒಳಗಾಗುತ್ತಿದ್ದೇನೆ ಎಂದು ಆದಷ್ಟು ಬೇಗ ತಿಳಿದುಕೊಳ್ಳುವುದು ಹೇಗೆ? ದೇಹವನ್ನು ಸೂಕ್ಷ್ಮವಾಗಿ ಗಮನಿಸುವ ಅಭ್ಯಾಸ ಬೆಳೆಸಿಕೊಳ್ಳಿ. ದೇಹದ ಹಲವಾರು ಭಾಗಗಳಲ್ಲಿ ಅಹಿತಕರ ಅನುಭವವಾಗಬಹುದು. ಎದೆಬಡಿತ ಹೆಚ್ಚುವುದು, ಮಾಂಸಖಂಡಗಳು ಬಿಗಿಯಾಗುವುದು ಮುಂತಾದವು ನೀವು ಸುರಕ್ಷಿತ ವಾತಾವರಣದಲ್ಲಿ ಇಲ್ಲ ಎಂದು ದೇಹ ನೀಡುವ ಸೂಚನೆಯಾಗಿರುತ್ತದೆ. ಹೆಚ್ಚಿನ ಜನರಿಗೆ ಹೊಟ್ಟೆ ಮತ್ತು ಕರುಳಿನ ಭಾಗದಲ್ಲಿ ಕಿರಿಕಿರಿಯ ಅನುಭವವಾಗುತ್ತದೆ. ತಕ್ಷಣ ನಿಧಾನಿಸಿ ವಿವೇಚನೆಯಿಂದ ಮುಂದುವರೆಯಿರಿ. 'ಕಣ್ಣರಿಯದಿದ್ದೊಡೇಂ ಕರುಳರಿಯದೇ?' ಎಂದು ಆದಿಕವಿ ಪಂಪ ಹೇಳಿಲ್ಲವೇ?

ಹಾಗೆಯೇ ಅವರಿಗೂ ನಿಮ್ಮ ಪ್ರಶ್ನೆಗಳಿಗೆ ಉತ್ತರಿಸದಿರುವ ಸ್ವಾತಂತ್ರ್ಯವಿದೆ ಎಂದು ನೆನಪಿಸಿಕೊಳ್ಳಿ. ತಕ್ಷಣ ಎಲ್ಲವನ್ನೂ ಹಂಚಿಕೊಂಡುಬಿಡುವುದೇ ಪ್ರೀತಿಯ ಮೊದಲ ಅಗತ್ಯವಲ್ಲ.

- ಎದುರಿಗೆ ಇರುವವರ ಮೇಲೆ ಪ್ರಭಾವ ಬೀರಬೇಕೆನ್ನುವ ಒತ್ತಡಗಳು ಮನುಷ್ಯ ಸಹಜ. ಆದರೆ ಅದಕ್ಕಾಗಿ ಸುಳ್ಳುಗಳನ್ನು ಬಳಸಬೇಡಿ. ನಂಬಿಕೆ ಸಂಬಂಧಗಳ ಅಡಿಗಲ್ಲು. ಸುಳ್ಳುಗಳ ಮೇಲೆ ಕಟ್ಟುವ ಸಂಬಂಧ ಅಡಿಪಾಯವಿರದ ಕಟ್ಟಡ. ಎಲ್ಲವನ್ನೂ ಹೇಳದಿದ್ದರೂ ತೊಂದರೆಯಿಲ್ಲ. ಆದರೆ ಹೇಳುವುದರಲ್ಲಿ ಸುಳ್ಳುಗಳನ್ನು ಸೇರಿಸುವುದು ಅಪಾಯಕರ.
- ಹುಡುಗಿಯರು ಭಾವಜೀವಿಗಳು ಎನ್ನುವುದು ಒಂದು ಸಾಮಾನ್ಯ ತಿಳಿವಳಿಕೆ. ಹುಡುಗರೂ ಕೂಡ ಹುಟ್ಟುವಾಗ ಅಷ್ಟೇ ಭಾವಜೀವಿಗಳು. ಆದರೆ ಪುರುಷ ಪ್ರಧಾನ ಚಿಂತನೆಗಳಿಂದಾಗಿ ಭಾವನೆಗಳನ್ನು ಅನುಭವಿಸುವುದು ವ್ಯಕ್ತಪಡಿಸುವುದು ದೌರ್ಬಲ್ಯ ಎನ್ನುವಂತೆ ಬೆಳೆಸಲಾಗಿರುತ್ತದೆ. ಹುಡುಗರ ಭಾವನೆಗಳು ಮಾತಿನಲ್ಲಿ ಅಲ್ಲದಿದ್ದರೂ ಕಣ್ಣಿನಲ್ಲಾದರೂ ವ್ಯಕ್ತವಾಗಿರುವುದನ್ನು ಹುಡುಗಿಯರು ಗಮನಿಸಬಹುದು.
- ಭೇಟಿಗೆ ಸಂಬಂಧಿಸಿದ ಸಾಕಷ್ಟು ವಿಚಾರಗಳನ್ನು ಮೊದಲೇ ತೀರ್ಮಾನಿಸಿಕೊಂಡರೆ ಅನಗತ್ಯ ಭಿನ್ನಾಭಿಪ್ರಾಯಗಳು ಮತ್ತು ಕಹಿ ಘಟನೆಗಳನ್ನು ತಪ್ಪಿಸಬಹುದು. ಉದಾಹರಣೆಗೆ ಯಾರು ಹೋಟೆಲ್‌ನಲ್ಲಿ ಹಣ ಪಾವತಿಸುವವರು? ಸಮಯದ ಮಿತಿಗಳೇನು? ಮುಂತಾದವು.
- ಭಿನ್ನಾಭಿಪ್ರಾಯಗಳು ಅನಿವಾರ್ಯ. ಅವು ಬಂದ ಕೂಡಲೆ ಸಂಬಂಧಗಳನ್ನು ಕಡಿದುಕೊಳ್ಳಬೇಕಿಲ್ಲ. ಬದಲಿಗೆ ಅವುಗಳನ್ನು ಗೌರವಯುತವಾಗಿ ನಿಭಾಯಿಸಲು ಸಾಧ್ಯವೇ ಎಂದು ಚರ್ಚಿಸಿ. ಸ್ನೇಹದಿಂದ ದೂರಾಗುವುದು ಅನಿವಾರ್ಯವಾದರೆ ಮನಸ್ಸನ್ನು ಕಹಿಮಾಡಿಕೊಳ್ಳದೆ ಗೌರವಯುತವಾಗಿ ಬೀಳ್ಕೊಡುವುದು ಹೇಗೆ ಎಂದು ಯೋಚಿಸಿ. ಕೆಲವೊಮ್ಮೆ ತಾತ್ಕಾಲಿಕವಾಗಿ ನೋವನ್ನು ಸಹಿಸಬೇಕಾಗಬಹುದು. ಆದರೆ ಒತ್ತಾಯ ಒತ್ತಡಗಳಿಗೆ ಮಣಿದು ನಿಮ್ಮ ಸ್ವಂತಿಕೆಯನ್ನು ಬಿಟ್ಟುಕೊಡುವುದು ಕ್ಷೇಮವಲ್ಲ.

(ಲೇಖಕರು ಆಪ್ತ ಸಮಾಲೋಚಕರು)

ಬಿಸಿಲ ಧಗೆಗೆ ಪಾನಕದ ತಂಪು

ನಳಪಾಕ

ವೇದಾವತಿ ಎಸ್. ಎಸ್.

ಖರ್ಜೂರ ಪಾನಕ

ಬೇಕಾಗುವ ಸಾಮಗ್ರಿಗಳು: ಬೀಜ ತೆಗೆದ ಖರ್ಜೂರ – 1 ಕಪ್, ಹುಣಸೆಹಣ್ಣಿನ ಗಟ್ಟಿ ರಸ – 1ಟೀ ಚಮಚ, ಉಪ್ಪು ಚಿಟಿಕೆ, ಬೆಲ್ಲ ಸಿಹಿ ಎಷ್ಟು ಬೇಕು ಅಷ್ಟು, ಕಾಳುಮೆಣಸಿನ ಪುಡಿ ಚಿಟಿಕೆ, ನೀರು ಅರ್ಧ ಲೀಟರ್.

ತಯಾರಿಸುವ ವಿಧಾನ: ಖರ್ಜೂರವನ್ನು ಸಣ್ಣಗೆ ಕತ್ತರಿಸಿ ಮಿಕ್ಸಿಯಲ್ಲಿ ನುಣ್ಣಗೆ ರುಬ್ಬಿಕೊಳ್ಳಿ. ಈ ಮಿಶ್ರಣಕ್ಕೆ ಹುಣಸೆರಸ ಮತ್ತು ಬೆಲ್ಲವನ್ನು ಸೇರಿಸಿ. ನೀರನ್ನು ಹಾಕಿ ಪುನಃ ನುಣ್ಣಗೆ ರುಬ್ಬಿಕೊಳ್ಳಿ. ಕುಡಿಯುವಾಗ ಚಿಟಿಕೆ ಕಾಳುಮೆಣಸು ಮತ್ತು ಚಿಟಿಕೆ ಉಪ್ಪನ್ನು ಹಾಕಿ ಕುಡಿಯಿರಿ. ಶಕ್ತಿವರ್ಧಕ ಪಾನಕ ಇದಾಗಿದೆ.

ಅಮೃತ ಪಾನಕ

ಬೇಕಾಗುವ ಸಾಮಗ್ರಿಗಳು: ಮಾಗಿದ (ಹಳೆಯ) ಹುಣಸೆಹಣ್ಣು – ನಿಂಬೆ ಗಾತ್ರದಷ್ಟು, ಕಾಳುಮೆಣಸಿನ ಪುಡಿ – ಚಿಟಿಕೆ, ಬೆಲ್ಲ (ಅಗತ್ಯವಿದ್ದಷ್ಟು), ಉಪ್ಪು ಚಿಟಿಕೆ.

ತಯಾರಿಸುವ ವಿಧಾನ: ಹುಣಸೆಹಣ್ಣನ್ನು ನೆನೆಸಿ ಆನಂತರ ಅದನ್ನು ಕಿವುಚಿ ಚರಟ–ರಸ ಬೇರೆ ಬೇರೆ ಮಾಡಿ. ನಿಮಗೆ ಎಷ್ಟು ಹುಳಿ ಮತ್ತು ಸಿಹಿ ಬೇಕು ಅದಕ್ಕನುಗುಣವಾಗಿ ನೀರನ್ನು ಸೇರಿಸಿ ಬೆಲ್ಲವನ್ನು ಮಿಶ್ರಣ ಮಾಡಿ. ಚಿಟಿಕೆ ಉಪ್ಪನ್ನು ಸೇರಿಸಿ. ಶೀತ ಪ್ರಕೃತಿಯವರು ಅಥವಾ ಖಾರ ಇಷ್ಟ ಪಡುವರು ಕಾಳುಮೆಣಸಿನ ಪುಡಿಯನ್ನು ಸೇರಿಸಿಕೊಳ್ಳಬಹುದು. ಇಷ್ಟು ಮಾಡಿದರೆ ಪಾನಕ ಸಿದ್ಧ. ಇದು ಪಿತ್ತಹರ, ಪಿತ್ತದ ವಾಂತಿಗೂ, ಪಿತ್ತದಿಂದ ತಲೆನೋವು ಬಂದಾಗ ಇದನ್ನು ತಯಾರಿಸಿ ಸೇವಿಸಿದರೆ ಉಪಶಮನವಾಗುತ್ತದೆ.

ಶಸ್ತ್ರಚಿಕಿತ್ಸೆ ನಂತರ ತೂಕ ಹೆಚ್ಚುವ ಸಾಧ್ಯತೆ ಇದೆಯೇ?

ಸ್ಪಂದನ

ಡಾ. ವೀಣಾ ಎಸ್. ಭಟ್

• ನನಗೆ 25ವಯಸ್ಸು. 2021 ಫೆಬ್ರವರಿಯಲ್ಲಿ ಹೃದಯದ ಶಸ್ತ್ರಚಿಕಿತ್ಸೆ ಆಯಿತು. ಅದಕ್ಕೂ ಮೊದಲು ಮೂರು ತಿಂಗಳು ನನಗೆ ಮುಟ್ಟಾಗಿರಲಿಲ್ಲ. ಶಸ್ತ್ರಚಿಕಿತ್ಸೆಯ ನಂತರ ಆಗಸ್ಟ್‌ನಲ್ಲಿ ಮುಟ್ಟಾಯಿತು. ನಂತರ ಇದುವರೆಗೂ ಮುಟ್ಟಾಗಿಲ್ಲ. ವೈದ್ಯರನ್ನ ಸಂಪರ್ಕಿಸಿದಾಗ ಹಾರ್ಮೋನ್ ಅಸಮತೋಲನ ಎಂದು ತಿಳಿಸಿದ್ದಾರೆ. ನನಗೆ ಹೃದಯದ ಶಸ್ತ್ರಚಿಕಿತ್ಸೆ ಆಗುವಾಗ 3 ಯುನಿಟ್ ರಕ್ತ ನೀಡಿದ್ದರು. ಶಸ್ತ್ರಚಿಕಿತ್ಸೆಯ ನಂತರ ನನ್ನ ತೂಕ ಹೆಚ್ಚಾಗಿ ಈಗ ನಾನು 60 ಕೆಜಿ ಇದ್ದೇನೆ. ತೂಕ ಹೆಚ್ಚಾಗಿರುವುದೇ ಏನಾದರೂ ಸಮಸ್ಯೆಯೇ?

ಹೆಸರು, ಊರು ತಿಳಿಸಿಲ್ಲ

ನಿಮ್ಮ ಎತ್ತರ ಎಷ್ಟೆಂದು ತಿಳಿಸಿಲ್ಲ. ನೀವು ನೂರವತ್ತೈದು ಸೆಂ.ಮಿ.ನಷ್ಟು ಎತ್ತರವಿದ್ದು, 60ಕೆ.ಜಿ ತೂಕವಿದ್ದರೆ ತೊಂದರೆಯಿಲ್ಲ. ಇಲ್ಲದಿದ್ದಲ್ಲಿ ನಿಮಗೆ ಹೃದಯದ ಶಸ್ತ್ರಚಿಕಿತ್ಸೆ ಆಗಿರುವುದರಿಂದ ಸಮತೂಕವನ್ನು ಕಾಯ್ದುಕೊಳ್ಳಲೇಬೇಕು. ರಕ್ತ ಹಾಕಿಸಿಕೊಳ್ಳುವುದರಿಂದ ನಿಮ್ಮ ರಕ್ತಹೀನತೆ ಸರಿಹೋಗುತ್ತದೆಯೇ ಹೊರತು ತೂಕವೇನು ಹೆಚ್ಚುವುದಿಲ್ಲ. ಅವೆರಡಕ್ಕೆ ಸಂಬಂಧವಿಲ್ಲ. ನಿಮ್ಮ ಆಹಾರಕ್ರಮ ಅಂದರೆ ಹೆಚ್ಚೆಚ್ಚು ತರಕಾರಿ, ಹಣ್ಣುಗಳು, ಬೇಳೆಕಾಳುಗಳ ಬಳಕೆ ಮಾಡಿ ಹಾಗೂ ನಿಯಮಿತವಾಗಿ ಸುಲಭದ ಕೆಲವು ವ್ಯಾಯಾಮಗಳನ್ನು ಮಾಡಿ. ಬಂಜೆತನ ಚಿಕಿತ್ಸಾ ತಜ್ಞರ ಸಲಹೆಯನ್ನು ಪಡೆದುಕೊಳ್ಳಿ. ಹೃದ್ರೋಗ ತಜ್ಞರು ನಿಮಗೆ ಮಕ್ಕಳಾಗುವುದರಿಂದ ತೊಂದರೆ ಏನೂ ಆಗುವುದಿಲ್ಲವೆಂದು ತಿಳಿಸಿದ್ದರೆ ನಿಮ್ಮ ಪ್ರಯತ್ನವನ್ನು ಮುಂದುವರೆಸಿ.



ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಕೊಬ್ಬಿನಾಂಶದ ಗಡ್ಡೆಗಳಿಗೆ ಲೈಪೋಸಕ್ಷನ್

ದೇಹದ ಮೇಲೆ ಕಾಣಿಸಿಕೊಳ್ಳುವ ಗಡ್ಡೆಗಳು ಕೆಲವೊಮ್ಮೆ ಭೀತಿ ಹುಟ್ಟಿಸುತ್ತವೆ. ಅವು ಲೈಪೋಮಾ ಗಡ್ಡೆಗಳು ಆಗಿರುವ ಸಾಧ್ಯತೆ ಹೆಚ್ಚು, ಆದರೆ ಚಿಂತಿಸುವ ಅಗತ್ಯವಿಲ್ಲ. ಲೈಪೋಮಾ ಅಂದರೆ ಚರ್ಮದ ಕೆಳಗಿರುವ ಒಂದು ಗಡ್ಡೆ. ಇದು ಕೊಬ್ಬಿನ ಕೋಶಗಳ ಅತಿಯಾದ ಬೆಳವಣಿಗೆಯಿಂದ ಉಂಟಾಗುತ್ತದೆ. ಇವುಗಳನ್ನು ಸಾಮಾನ್ಯವಾಗಿ ಹಾನಿಕರವಲ್ಲದ ಗಡ್ಡೆಗಳು ಎಂದು ಪರಿಗಣಿಸಲಾಗುತ್ತದೆ.

ಎಲ್ಲಿ ಬೆಳೆಯುತ್ತವೆ ?

ಈ ಗಡ್ಡೆ ದೇಹದ ಯಾವುದೇ ಭಾಗದಲ್ಲೂ ಬೆಳೆಯಬಹುದು. ಸಾಮಾನ್ಯವಾಗಿ ಮುಂದೋಳು, ತೋಳು, ಹೊಟ್ಟೆ, ತೊಡೆ, ಬೆನ್ನು ಮತ್ತು ಹಣೆಯ ಮೇಲೆ ಕಾಣಿಸಿಕೊಳ್ಳುತ್ತವೆ. ಲೈಪೋಮಾಗಳು ಮೃದುವಾಗಿರುತ್ತವೆ ಮತ್ತು ಅವುಗಳ ಮೇಲೆ ಒತ್ತಿದಾಗ ಚರ್ಮದ ಕೆಳಗೆ ಸ್ವಲ್ಪ ಸರಿಯಬಹುದು. ಅವುಗಳು ಸಾಮಾನ್ಯವಾಗಿ ತಿಂಗಳುಗಳು ಅಥವಾ ವರ್ಷಗಳ ಅವಧಿಯಲ್ಲಿ ನಿಧಾನವಾಗಿ ಬೆಳೆಯುತ್ತವೆ. ಸಾಮಾನ್ಯವಾಗಿ ಸುಮಾರು 2–3 ಸೆಂಟಿಮೀಟರ್ ಗಾತ್ರವನ್ನು ತಲುಪುತ್ತವೆ. ಕೆಲವೊಮ್ಮೆ, ಅವು 10 ಸೆಂ.ಮೀಗಿಂತ ಹೆಚ್ಚು ಬೆಳೆಯಬಹುದು.

ಲೈಪೋಮಾಗಳು ಸಾಮಾನ್ಯವಾಗಿ ನೋವುರಹಿತವಾಗಿರುತ್ತವೆ. ನೋಡಲು ವಿಕಾರವಾಗಿ ಕಾಣಿಸುವುದರಿಂದ ಅವುಗಳನ್ನು ತೆಗೆದುಹಾಕಬಹುದು. ಕೆಲವು ಲೈಪೋಮಾಗಳು ನೋವು ಕೊಡುತ್ತಿದ್ದರೆ ಅಥವಾ ನೋಡಲು ದೊಡ್ಡದಾಗಿದ್ದರೆ ಅವುಗಳನ್ನೂ ತೆಗೆಯಬಹುದು.

ಸೂಕ್ತ ಚಿಕಿತ್ಸೆ

ಸಾಮಾನ್ಯವಾಗಿ ಇಪ್ಪತ್ತಕ್ಕಿಂತ ಕಡಿಮೆ ಚಿಕ್ಕ ಲೈಪೋಮಗಳನ್ನು ತೆಗೆಯುವುದಿದ್ದರೆ ಅದೇ ಭಾಗದಲ್ಲಿ ಅರಿವಳಿಕೆ ಕೊಟ್ಟು ಚಿಕ್ಕ ರಂಧ್ರದಿಂದ ಅವುಗಳನ್ನು ಹೆಚ್ಚು ಕಮ್ಮಿ ದ್ರವೀಕರಿಸಿ ತೆಗೆಯಬಹುದು. ಇದರ ಕಲೆ ಕಾಣಿಸದಿರುವಷ್ಟು ಕಡಿಮೆಯಾಗಿರುತ್ತದೆ. ಚಿಕಿತ್ಸೆ ಮುಗಿದ ತಕ್ಷಣವೇ ಮನೆಗೆ ತೆರಳಬಹುದು, ದೈನಂದಿನ ಚಟುವಟಿಕೆಯಲ್ಲಿ ತೊಡಗಬಹುದು.

ಇಪ್ಪತ್ತಕ್ಕಿಂತ ಹೆಚ್ಚು ಲೈಪೋಮಗಳನ್ನು ತೆಗೆಯುವುದಿದ್ದರೆ ಪೂರ್ಣ ಅರಿವಳಿಕೆ ಕೊಟ್ಟು ವೇಸರ್ (Vaser) ಮತ್ತು ಇನ್‌ಮೋಡ್ (Inmode) ಲೈಪೋಸಕ್ಷನ್ ಪದ್ಧತಿಯಿಂದ ತೆಗೆಯಲಾಗುತ್ತದೆ. ಕೊಬ್ಬು ಗಂಟುಗಳನ್ನು ಅಲ್ಟ್ರಾಸೌಂಡ್ ವೇಸರ್ (Ultrasound Vaser) ನಿಂದ ಸಡಿಲಗೊಳಿಸಿ ಮೃದುಗೊಳಿಸಲಾಗುತ್ತದೆ. ನಂತರ ಲೈಪೋಸಕ್ಷನ್ ನಿಂದ ತೆಗೆಯಲಾಗುತ್ತದೆ. ಕೊಬ್ಬು ಗಂಟುಗಳು ದೊಡ್ಡದಾಗಿ ಚರ್ಮ ಸಡಿಲವಾಗಿದ್ದರೆ ರೇಡಿಯೋ ಫ್ರಿಕ್ವೆನ್ಸಿ ಟೆಕ್ನಾಲಜಿ ಇನ್‌ಮೋಡ್ ಎಂಬ್ರೇಸ್ (Radio Frequency Technology Inmode Embrace) ಮೂಲಕ ಬಿಗಿಗೊಳಿಸಬಹುದು. ಒಂದು ಚಿಕ್ಕ ರಂಧ್ರದ ಮುಖಾಂತರ ಚಿಕ್ಕ ನಳಿಕೆಯನ್ನು ಲೈಪೋಮಗಳಿರುವ ಜಾಗದವರೆಗೂ ಸರಿಸಿ ಅದನ್ನು ಚಿಕ್ಕ ಚಿಕ್ಕ ತುಣುಕುಗಳನ್ನಾಗಿ ಮಾಡಿ ತೆಗೆಯಲಾಗುತ್ತದೆ.

ಚಿಕಿತ್ಸೆಯ ನಂತರ ಅದೇ ದಿನ ಮನೆಗೆ ಮರಳಬಹುದು. ರಂಧ್ರಗಳು ಸುಮಾರು 5 ದಿನಗಳಲ್ಲಿ ವಾಸಿಯಾಗುತ್ತವೆ. 'ಚಿಕಿತ್ಸೆ ನೀಡಿದ ಕೆಲವೇ ಗಂಟೆಗಳಲ್ಲಿ ವ್ಯಕ್ತಿಯು ಆಸ್ಪತ್ರೆಯಿಂದ ತೆರಳಬಹುದು. ನೋವು ಕೂಡ ಅಷ್ಟಾಗಿ ಬಾಧಿಸುವುದಿಲ್ಲ. ಎಲ್ಲಾ ವಯೋಮಾನದವರೂ ಈ ಚಿಕಿತ್ಸೆ ಪಡೆದುಕೊಳ್ಳಬಹುದು' ಎಂದು ನುರಿತ ವೈದ್ಯರಾದ **ಡಾ.ಸಾಹೇಬಗೌಡ ಶೆಟ್ಟಿ** ಹೇಳುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

Dr. Shetty's Cosmetic Centre

Dr. Sahebgowda Shetty MBBS. MS. M.Ch. (Plastic Surgery)

Address : Navarang Circle, Rajajinagar, B'lore - 10.

Call / : 80500 08855 | www.drshettys.in

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಧರ್ಮದ ಬೇರು ದಯೆ, ಸತ್ಫಲ ಮತ್ತು ಸರ್ವ ಭ್ರಾತೃತ್ವ.
–ಕೆ.ಎಸ್.ನಿಸಾರ್ ಅಹಮದ್

ಉಕ್ರೇನ್ ಮೇಲೆ ರಷ್ಯಾ ಅತಿಕ್ರಮಣ ಪುಟಿನ್ ನಡೆ ಅಕ್ಷಮ್ಯ

ಉಕ್ರೇನ್ ಮೇಲೆ ದಂಡೆತ್ತಿ ಹೋಗಿರುವ ವ್ಲಾಡಿಮಿರ್ ಪುಟಿನ್ ನೇತೃತ್ವದ ರಷ್ಯಾದ ನಡೆಯನ್ನು ಯಾವುದೇ ರೀತಿಯಲ್ಲಿಯೂ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಪದೇ ಪದೇ ಬಂದು ಮಾನವ ಕುಲವನ್ನು ಕಾಡಿಸಿರುವ ಕೋವಿಡ್ ಸಾಂಕ್ರಾಮಿಕದ ಅಲೆಗಳ ಪರಿಣಾಮಗಳಿಂದ ಜಗತ್ತು ಚೇತರಿಸಿಕೊಳ್ಳಲು ಇನ್ನೂ ಬಹಳ ಕಾಲ ಬೇಕಿದೆ. ಇಂತಹ ವಿಷಮ ಸಂದರ್ಭದಲ್ಲಿ ಪುಟಿನ್ ಅವರು ಉಕ್ರೇನ್ ಮೇಲೆ ಯುದ್ಧ ಸಾರಿದ್ದಾರೆ. ಉಕ್ರೇನ್ ಮಾತ್ರವಲ್ಲ ಇಡೀ ಜಗತ್ತು ಯುದ್ಧದ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ. ಪ್ರತಿಯೊಂದು ದೇಶವೂ ಒಂದಲ್ಲ ಒಂದು ರೀತಿಯಲ್ಲಿ ಬೇರೊಂದು ದೇಶವನ್ನು ವಿವಿಧ ವಿಷಯಗಳಿಗಾಗಿ ಅವಲಂಬಿಸಿದೆ ಎಂಬುದು ಈ ಕಾಲದ ವಾಸ್ತವ. ಹಾಗಾಗಿಯೇ ಯುದ್ಧದಂತಹ ಸಂದರ್ಭವು ಎಲ್ಲ ದೇಶಗಳಿಗೂ ಕಳವಳ ಉಂಟು ಮಾಡುತ್ತದೆ. ರಷ್ಯಾ ಮತ್ತು ಉಕ್ರೇನ್ ದೇಶಗಳೆರಡೂ ಜಗತ್ತಿನ ವಿವಿಧ ದೇಶಗಳಿಗೆ ಹಲವು ಸಾಮಗ್ರಿಗಳನ್ನು ಪೂರೈಸುತ್ತವೆ. ಗೋಧಿ, ಸೂರ್ಯಕಾಂತಿ ಎಣ್ಣೆ, ಪೆಟ್ರೋಲಿಯಂ ಉತ್ಪನ್ನಗಳು, ರಕ್ಷಣಾ ಸಾಮಗ್ರಿಗಳು... ಹೀಗೆ ವಿವಿಧ ವಸ್ತುಗಳನ್ನು ಈ ದೇಶಗಳು ರಫ್ತು ಮಾಡುತ್ತವೆ.

ಸಾರ್ವಭೌಮ ದೇಶವೊಂದರ ಮೇಲೆ ಈ ರೀತಿಯ ದಾಳಿಯು ಒಪ್ಪತಕ್ಕ ವಿಷಯವೇ ಅಲ್ಲ

ರಷ್ಯಾದ ಸೇನೆಯು ಉಕ್ರೇನ್‌ನಲ್ಲಿ ಮಾಡಬಹುದಾದ ವಿವೇಕರಹಿತ ಧ್ವಂಸವು ಉಕ್ರೇನ್‌ನ ಉತ್ಪಾದಕ ಸಾಮರ್ಥ್ಯವನ್ನು ಕುಗ್ಗಿಸಬಹುದು. ಅತಿಕ್ರಮಣದ ಕಾರಣಕ್ಕಾಗಿ ರಷ್ಯಾದ ಮೇಲೆ ಹೇರಲಾಗುವ ನಿರ್ಬಂಧಗಳಿಂದಾಗಿ ಆ ದೇಶದ ರಫ್ತು ಕೂಡ ಕುಂಠಿತಗೊಳ್ಳುತ್ತದೆ. ಗೋಧಿ, ಸೂರ್ಯಕಾಂತಿ ಎಣ್ಣೆ, ಪೆಟ್ರೋಲಿಯಂ ಉತ್ಪನ್ನಗಳಂತಹ ಅಗತ್ಯ ವಸ್ತುಗಳ ಕೊರತೆ ಉಂಟಾಗಿ, ಅವುಗಳ ಬೆಲೆ ಏರಿಕೆಯಾಗಿ, ಜಗತ್ತಿನ ಎಲ್ಲೆಡೆಯೂ ಜನರ ಬದುಕು ದುರ್ಬರವಾಗುತ್ತದೆ ಎಂಬ ಅರಿವು ಯುದ್ಧ ಸಾರಿದ ಪುಟಿನ್‌ಗೆ ಇರಬೇಕಿತ್ತು. ರಷ್ಯಾ ಮತ್ತು ಉಕ್ರೇನ್ ನಡುವಣ ಸಂಘರ್ಷವು 2014ರಿಂದ ಹೆಚ್ಚುತ್ತಲೇ ಬಂದಿದೆ. ಉಕ್ರೇನ್‌ನ ಭಾಗವಾಗಿದ್ದ ಕ್ರಿಮಿಯಾದ ಮೇಲೆ 2014ರ ಮಾರ್ಚ್‌ನಲ್ಲಿ ರಷ್ಯಾ ನಿಯಂತ್ರಣ ಸಾಧಿಸಿತು. ಬಳಿಕ, ಪೂರ್ವ ಉಕ್ರೇನ್‌ನ ಡೊನೆಟ್ಸ್ಕ ಮತ್ತು ಲುಹಾನ್ಸ್ಕ ಪ್ರಾಂತ್ಯಗಳು ಸ್ವಾತಂತ್ರ್ಯ ಘೋಷಿಸಿಕೊಂಡವು. ಈ ಪ್ರದೇಶಗಳಲ್ಲಿನ ಆಂತರಿಕ ಸಂಘರ್ಷಕ್ಕೆ ರಷ್ಯಾದ ಒತ್ತಾಸೆಯೇ ಕಾರಣ ಎಂಬ ಆರೋಪ ಇದೆ. ಉಕ್ರೇನ್ ಮೇಲೆ ಸೈಬರ್ ದಾಳಿಗಳಂತೂ ಸಾಮಾನ್ಯ ಅನಿಸಿಬಿಟ್ಟಿದ್ದವು. ಸಾರ್ವಭೌಮ ದೇಶವೊಂದರ ಮೇಲೆ ಈ ರೀತಿಯ ದಾಳಿಯು ಒಪ್ಪತಕ್ಕ ವಿಷಯವೇ ಅಲ್ಲ.

2021ರ ಅಕ್ಟೋಬರ್‌ನಿಂದಲೇ ಗಡಿಯಲ್ಲಿ ಸೇನೆ ಜಮಾಯಿಸುವ ಕೆಲಸವನ್ನು ರಷ್ಯಾ ಮಾಡಿದೆ. ಯುದ್ಧದ ಅಪಾಯ ದಟ್ಟವಾಗುತ್ತಿದ್ದಂತೆಯೇ ಜರ್ಮನಿ, ಫ್ರಾನ್ಸ್ ಸೇರಿ ವಿವಿಧ ದೇಶಗಳು ಯುದ್ಧ ತಪ್ಪಿಸುವ ಪ್ರಯತ್ನ ನಡೆಸಿವೆ. ನಿರ್ಬಂಧಗಳ ಬೆದರಿಕೆಯನ್ನೂ ಹಾಕಲಾಗಿದೆ. ಆದರೆ, ಪುಟಿನ್ ಅವರು ಇದಾವುದನ್ನೂ ಲೆಕ್ಕಿಸಿಲ್ಲ. ಉಕ್ರೇನ್‌ನಲ್ಲಿರುವ ರಷ್ಯನ್ನರನ್ನು ರಕ್ಷಿಸಬೇಕು ಎಂಬುದು ಅವರು ಮುಂದಿಟ್ಟಿರುವ ಒಂದು ಕಾರಣ. 'ಉಕ್ರೇನ್ ಅನ್ನು ನ್ಯಾಟೊಕ್ಕೆ ಸೇರಿಸಿಕೊಳ್ಳಬಾರದು, ಉಕ್ರೇನ್ ಮತ್ತು ರಷ್ಯಾ ಸಮೀಪದಲ್ಲಿರುವ ಈಸ್ಟೋನಿಯಾ, ಲಿಥುವೇನಿಯಾ, ಲಾತ್ವಿಯಾ ಮತ್ತು ಪೋಲೆಂಡ್‌ನಿಂದ ನ್ಯಾಟೊ ಪಡೆಗಳನ್ನು ಕಡಿತಗೊಳಿಸಬೇಕು ಎಂಬ ಬೇಡಿಕೆಯನ್ನು ರಷ್ಯಾ 2021ರ ಡಿಸೆಂಬರ್‌ನಲ್ಲಿ ಮುಂದಿಟ್ಟಿತ್ತು. ಈ ಬೇಡಿಕೆಗಳನ್ನು ನ್ಯಾಟೊ ಮತ್ತು ಅಮೆರಿಕ ತಿರಸ್ಕರಿಸಿದ್ದವು. ಉಕ್ರೇನ್ ನ್ಯಾಟೊ ಸೇರುವುದನ್ನು ತಡೆಯುವುದೇ ಪುಟಿನ್ ಉದ್ದೇಶ. ಆದರೆ, ಸಮಸ್ಯೆಗಳಿಗೆ ಯುದ್ಧ ಪರಿಹಾರವಲ್ಲ. ಬದಲಿಗೆ, ಯುದ್ಧವೇ ದೊಡ್ಡ ಸಮಸ್ಯೆ ಮತ್ತು ಅದು ಮತ್ತೂ ಹಲವು ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಯುದ್ಧದ ಮೊದಲ ದಿನವೇ 137 ಜನರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ನೂರಾರು ಮಂದಿ ಗಾಯಗೊಂಡಿದ್ದಾರೆ. ಸಾವಿರಾರು ಮಂದಿ ದೇಶ ತೊರೆದು ನಿರಾಶ್ರಿತರಾಗಿದ್ದಾರೆ. ಸಂಘರ್ಷ ಮುಂದುವರಿದರೆ 50 ಲಕ್ಷ ಜನರು ನಿರಾಶ್ರಿತರಾಗಬಹುದು ಎಂದು ವಿಶ್ವಸಂಸ್ಥೆ ಅಂದಾಜಿಸಿದೆ. ಸಾವು-ನೋವು, ನಾಶ-ನಷ್ಟದ ವಿವೇಚನೆಯೇ ಇಲ್ಲದ ಯುದ್ಧ ಇದು. ಜಗತ್ತಿನಲ್ಲಿ ಈವರೆಗೆ ನಡೆದಿರುವ ಯಾವ ಯುದ್ಧವೂ ಅನಿವಾರ್ಯವಾಗಿರಲಿಲ್ಲ. ಮಾತುಕತೆ ಮತ್ತು ಸಂಧಾನದ ಮೂಲಕ ಪರಿಹರಿಸಲು ಸಾಧ್ಯವಿಲ್ಲದಂತಹ ಸಮಸ್ಯೆಯೂ ಇಲ್ಲ. ಉಕ್ರೇನ್ ಮೇಲೆ ರಷ್ಯಾದ ಆಕ್ರಮಣವೂ ಅನಿವಾರ್ಯ ಆಗಿರಲಿಲ್ಲ. ದುರಂತವನ್ನು ತಪ್ಪಿಸುವ ವಿವೇಕವನ್ನು ಪುಟಿನ್ ತೋರಿಲ್ಲ ಎಂಬುದು ದೊಡ್ಡ ದುರಂತ. ಯುದ್ಧವನ್ನು ತಕ್ಷಣ ನಿಲ್ಲಿಸಬೇಕು ಎಂದು ಜಗತ್ತಿನ ವಿವಿಧ ದೇಶಗಳು ಮಾಡಿರುವ ಮನವಿಗೆ ಪುಟಿನ್ ಮನ್ನಣೆ ನೀಡಬೇಕು. ಉಕ್ರೇನ್‌ನಲ್ಲಿರುವ ಭಾರತದ ನಾಗರಿಕರನ್ನು ಸುರಕ್ಷಿತವಾಗಿ ಕರೆತರಲು ಕೇಂದ್ರ ಸರ್ಕಾರ ವ್ಯವಸ್ಥೆ ಮಾಡಬೇಕು.

ದಿನದ ಟ್ವೀಟ್

ಹಿಂದೆ ಯಾರಿದ್ದಾರೆ?

ನ್ಯಾಟೊ ಸಭೆಗಳು ಮತ್ತು ಚರ್ಚೆಗಳಿಂದ ಯಾವುದೇ ಪ್ರಯೋಜನವಿಲ್ಲ. ಅವರು ಸುಮ್ಮನೆ ಕಾಲ ಕಳೆಯುತ್ತಿದ್ದಾರೆ ಅಷ್ಟೆ. ಉಕ್ರೇನ್ ಈ ಸತ್ಯವನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಮುಂದಡಿ ಇಡಬೇಕು. ದೊಡ್ಡ ದೇಶಗಳು ಉಕ್ರೇನ್ ವಿಷಯದಲ್ಲಿ ಅತ್ಯಂತ ನಿರಾಶಾದಾಯಕವಾಗಿ ವರ್ತಿಸುತ್ತಿವೆ. ಯಾರು ಆಟ ಆಡುತ್ತಿರುವವರು? ಇದು ತನಿಖೆಗೆ ಒಳಪಡಬೇಕಾದ ವಿಷಯ.

ವಿಷ್ಣುದತ್ತ ಕೃಷ್ಣದಾಸ, ಆಧ್ಯಾತ್ಮಿಕ ಸಲಹೆಗಾರ

ಕಿಡಿನುಡಿ

ನೆಹರೂ ಅವರನ್ನು ಮೋದಿ ಇನ್ನಿಲ್ಲದಂತೆ ಟೀಕಿಸಿದರು. ಆದರೆ ಅದೇ ನೆಹರೂ ಅವರ ಅಲಿಪ್ತ ವಿದೇಶಾಂಗ ನೀತಿಯನ್ನೇ ಅನುಸರಿಸುತ್ತಿದ್ದಾರೆ. ಎಲ್ಲರದ್ದೂ ಕಾಲೆಳಿತದೆ ಕಾಲ. #kaalachakra

ಸಿ.ಎಸ್.ಲಕ್ಷ್ಮೀಶ, ಶಿಕ್ಷಕ

25 ವರ್ಷಗಳ ಹಿಂದೆ

ಬುಧವಾರ, 26-2-1997

- **ಹೈಕೋರ್ಟ್ ಪೀಠ: ಸರ್ಕಾರದ ನಿಲುವು ಬದಲಿಲ್ಲ- ನಾಣಯ್ಯ**

ಬೆಂಗಳೂರು, ಫೆ. 25- ಹುಬ್ಬಳ್ಳಿ- ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಬೇಕು ಎಂಬುದು ಸರ್ಕಾರದ ಖಚಿತ ನಿಲುವಾಗಿದ್ದು, ಈ ವಿಚಾರದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸಭಾನಾಯಕರೂ ಆದ ಕಾನೂನು ಸಚಿವ ಎಂ.ಸಿ. ನಾಣಯ್ಯ ವಿಧಾನ ಪರಿಷತ್ತಿನಲ್ಲಿ ಇಂದು ಸ್ಪಷ್ಟಪಡಿಸಿದರು.

ಹೈಕೋರ್ಟ್ ಪೀಠ ಸ್ಥಾಪಿಸಲು ಅನುಮತಿ ನೀಡುವಂತೆ ಒತ್ತಾಯಿಸಲು ಪ್ರಧಾನಿ ಹಾಗೂ ಕೇಂದ್ರ ಕಾನೂನು ಸಚಿವರ ಬಳಿಗೆ ಶಾಸಕರ ನಿಯೋಗವನ್ನು ಕರೆದುಕೊಂಡು ಹೋಗಬೇಕು ಎಂಬ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿದ ನಂತರ ಸರ್ಕಾರದ ತೀರ್ಮಾನ ಪ್ರಕಟಿಸುವುದಾಗಿ ಹೇಳಿದರು.

ಪ್ರಶ್ನೋತ್ತರ ವೇಳೆಯ ನಂತರ ಶೂನ್ಯವೇಳೆಯಲ್ಲಿ ಪ್ರತಿಪಕ್ಷ ನಾಯಕ ಎಚ್.ಕೆ. ಪಾಟೀಲ್ ಅವರು ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಸಂಬಂಧಿಸಿದಂತೆ ಮಾಡಿದ ಪ್ರಸ್ತಾಪಕ್ಕೆ ನಾಣಯ್ಯ ಉತ್ತರಿಸಿದರು.

- **ಗಣಿ ಸಚಿವ ಜಯರಾಂ ರಾಜೀನಾಮೆಗೆ ಪರಿಷತ್ತಿನಲ್ಲಿ ಧರಣಿ, ಕೋಲಾಹಲ**

ಬೆಂಗಳೂರು, ಫೆ. 25- ಅಕ್ರಮ ಗಣಿಗಾರಿಕೆಯ ಬಗ್ಗೆ ತನಿಖೆ ನಡೆಸಲು ನೇಮಕವಾದ ಸದನ ಸಮಿತಿಗೆ ತಪ್ಪು ಮಾಹಿತಿ ನೀಡಿ, ಸದನ ಸಮಿತಿಯ ಮುಂದೆ ಹಾಜರಾಗದ ಗಣಿ ಮತ್ತು ಭೂ ವಿಜ್ಞಾನ ಖಾತೆಯ ಸಚಿವ ಎಸ್.ಡಿ. ಜಯರಾಂ ಅವರು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಪ್ರತಿಪಕ್ಷದ ಸದಸ್ಯರು ವಿಧಾನ ಪರಿಷತ್ತಿನಲ್ಲಿ ಇಂದು ತೀವ್ರ ವಾಗ್ಯುದ್ಧ ಹಾಗೂ ಧರಣಿ ನಡೆಸಿದರು.

ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳ ನಡುವೆ ಸಾಮರಸ್ಯ ಮೂಡಿಸಲು ಸಭಾಪತಿ ಡಿ.ಬಿ. ಕಲ್ಮಣಕರ್ ಸದನವನ್ನು ಒಂದು ಗಂಟೆ ಕಾಲ ಮುಂದೂಡಿ ನಡೆಸಿದ ಸಂಧಾನ ವಿಫಲಗೊಂಡು ಸದನವನ್ನು ನಾಳೆಗೆ ಮುಂದೂಡಬೇಕಾದಂಥ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಯಿತು.

50 ವರ್ಷಗಳ ಹಿಂದೆ

ಶನಿವಾರ, 26-2-1972

- **ರೈಲ್ವೆ ಆಸ್ತಿ ಅಪಹರಣ ತಡೆಗಟ್ಟಲು ಪ್ರತೀ ರಾಜ್ಯದಲ್ಲಿ ಸಮಿತಿಗಳ ರಚನೆ**

ಬೆಂಗಳೂರು, ಫೆ. 25- ನಗರದ ದಂಡು ಪ್ರದೇಶದ ರೈಲು ನಿಲ್ದಾಣವನ್ನು ಪುನರ್ ವಿನ್ಯಾಸಗೊಳಿಸುವ ಸುಮಾರು 11 ಲಕ್ಷ ರೂಪಾಯಿ ವೆಚ್ಚದ ಯೋಜನೆ ಪ್ರಾರಂಭವಾಯಿತು.

ಒಂದು ಶತಮಾನಕ್ಕಿಂತ ಹಳೆಯದಾದ ದಂಡು ಪ್ರದೇಶದ ರೈಲು ನಿಲ್ದಾಣದ ಅಭಿವೃದ್ಧಿ ಕಾರ್ಯ ಕೈಗೊಂಡಿರುವುದು ಇದೇ ಮೊದಲ ಬಾರಿ. ಪುನರ್‌ವಿನ್ಯಾಸ ಯೋಜನೆ ಪೂರ್ತಿಗೊಂಡಾಗ 26,600 ಚದರ ಪ್ರದೇಶದಲ್ಲಿ ಹೊಸ ನಿಲ್ದಾಣದ ಜತೆಗೆ ಅದರ ಮುಂದೆ 74 ಅಡಿ ಅಗಲವಾದ ರಸ್ತೆ, ಉದ್ಯಾನ, ಸಿಬ್ಬಂದಿಗೆ ವಸತಿ, ಪ್ರಯಾಣಿಕರಿಗೆ ಉಪಾಹಾರ ಮಂದಿರ, ವಿಶ್ರಾಂತಿ ಗೃಹ ಸೌಲಭ್ಯಗಳು ದೊರೆಯಲಿವೆ. ಸುಮಾರು ಮೂರು ಲಕ್ಷ ರೂಪಾಯಿ ವೆಚ್ಚವನ್ನು ನಗರ ಕಾರ್ಪೊರೇಷನ್ ವಹಿಸಲಿದೆ.

- **ಮುರುಗೋಡದ ಸ್ವಾಮೀಜಿ ಶಿವೈಕ್ಯ**

ಹುಬ್ಬಳ್ಳಿ, ಫೆ. 25- ಮುರುಗೋಡದ ಶ್ರೀ ಮಹಂತ ಶಿವಯೋಗಿಗಳು ಈ ದಿನ ರಾತ್ರಿ 8.15ಕ್ಕೆ ಶಿವೈಕ್ಯರಾದರು. ಅವರಿಗೆ 105 ವರ್ಷ ವಯಸ್ಸಾಗಿತ್ತು.

ಸ್ವಾಮೀಜಿಯವರಿಗೆ ರಾಜ್ಯದಾದ್ಯಂತ ಅಸಂಖ್ಯಾತ ಭಕ್ತರಿದ್ದಾರೆ.

ಸ್ವಾಮೀಜಿಯವರು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಕೇಂದ್ರವೊಂದನ್ನು ನಿರ್ಮಿಸಲು ಎರಡೂವರೆ ಲಕ್ಷ ರೂಪಾಯಿ ದಾನ ಮಾಡಿದ್ದಾರೆ.

ಮಠದ ಆವರಣದಲ್ಲಿ ನಾಳೆ ಸ್ವಾಮೀಜಿ ಅವರ ಅಂತ್ಯಕ್ರಿಯೆ ನಡೆಯುತ್ತದೆ.

ಹಿಂದೂ– ಮುಸ್ಲಿಮರು ಪರಸ್ಪರ ಒಂದು ಮುಗುಳ್ನಗೆಗೆ ಕಾಯುತ್ತಿದ್ದಾರೆ ಅಷ್ಟೆ

ಮಂತ್ರಿಯೆಂಬುವ ಮೊರೆವ ಹುಲಿ

ಅನುಸಂಧಾನ

ರವೀಂದ್ರ ಭಟ್ಟ

ಕುಮಾರವ್ಯಾಸ ಭಾರತದ ಸಭಾ ಪರ್ವದಲ್ಲಿ ಒಂದು ಪದ್ಯ ಬರುತ್ತದೆ. 'ಅರಸು ರಾಕ್ಷಸ, ಮಂತ್ರಿಯೆಂಬುವ ಮೊರೆವ ಹುಲಿ, ಪರಿವಾರ ಹದ್ದಿನ ನೆರವಿ ಬಡವರ ಬಿನ್ನಪವ ನಿನ್ನಾರು ಕೇಳುವರು, ಉರಿ ಉರಿವುತಿದೆ ದೇಶ ನಾವಿನ್ನಿರಲು ಬಾರದೆನುತ್ತ ಜನ ಬೇಸರದ ಬೇಗೆಯಲಿರದಲೇ ಭೂಪಾಲ ಕೇಳೆಂದ'. ಧರ್ಮರಾಯನಿಗೆ ನಾರದ ಮುನಿ ಪ್ರಶ್ನೆ ಕೇಳುವ ಪದ್ಯ ಇದು.

'ರಾಜನೋ ರಾಕ್ಷಸ, ಇವನ ಮಂತ್ರಿಗಳೋ ಗರ್ಜಿಸುವ ಹುಲಿಗಳು, ಇವನ ಪರಿವಾರದವರು ಹದ್ದಿನ ಗುಂಪುಗಳು, ಹೀಗಿರುವಾಗ ಬಡವರ ನೋವನ್ನು ಆಲಿಸುವವರಾದರೂ ಯಾರು, ಅವರ ನೋವಿನ ಉರಿ ಜ್ವಾಲೆಯಾಗಿ ಉರಿಯುತ್ತಿರಲು ಅವರು ಈ ದೇಶದಲ್ಲಿರಬಾರದೆಂದು ಪ್ರಜೆಗಳು ಬೇಸರದ ಬೇಗೆಯಲ್ಲಿ ಬೇಯುತ್ತಿಲ್ಲ ತಾನೆ' ಎಂದು ನಾರದರು ಯುಧಿಷ್ಠಿರನನ್ನು ಕೇಳುತ್ತಾರೆ. ಸದ್ಯಕ್ಕೆ ಕರ್ನಾಟಕದ ಪರಿಸ್ಥಿತಿಯನ್ನು ಅವಲೋಕಿಸಿದರೆ ಇಂತಹ ಒಂದು ಪ್ರಶ್ನೆ ಇಲ್ಲಿಯೂ ಪ್ರಸ್ತುತವಾಗುತ್ತಿದೆ.

ಇಲ್ಲಿಯೂ ಮಂತ್ರಿಗಳು ಹುಲಿಯಂತೆ ಗರ್ಜಿಸುತ್ತಿದ್ದಾರೆ. ಪರಿವಾರದವರು ಹದ್ದಿನಂತೆ ಮುಗಿಬೀಳುತ್ತಿದ್ದಾರೆ. ರಾಜನೋ 'ಕ್ರಿಯೆಗೆ ಪ್ರತಿಕ್ರಿಯೆ ನಡೆಯುತ್ತಿದೆ' ಎಂದು ಮಗುಂ ಆಗಿದ್ದಾರೆ. ಬಡಪಾಯಿಗಳ ನೋವನ್ನು ಆಲಿಸುವವರು ಕಾಣುತ್ತಿಲ್ಲ. ಪ್ರಜೆಗಳ ಒಡಲಿನ ಉರಿಜ್ವಾಲೆ ಪ್ರಜ್ವಲಿಸುತ್ತಿದೆ. ಅವರು ಬೇಸರದ ಬೇಗೆಯಲ್ಲಿ ಬೇಯುತ್ತಿದ್ದಾರೆ. ಮೊನ್ನೆ ಶಿವಮೊಗ್ಗದಲ್ಲಿ ಹರ್ಷ ಎಂಬ ಯುವಕನ ಹತ್ಯೆ ನಡೆಯಿತು. ಕನಸುಗಣ್ಣಿನ ಹುಡುಗನ ಕೊಲೆಯಿಂದ ಹರಿದ ರಕ್ತದ ಬಿಸಿ ಆರುವುದಕ್ಕೆ ಮೊದಲೇ ಸಚಿವ ಕೆ.ಎಸ್.ಈಶ್ವರಪ್ಪ 'ಇದು ಮುಸ್ಲಿಂ ಗೂಂಡಾಗಳ ಕೆಲಸ' ಎಂದು ತೀರ್ಪು ನೀಡಿಬಿಟ್ಟರು. ಶಿವಮೊಗ್ಗದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದ್ದರೂ ಹರ್ಷ ಅವರ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಮುಂಚೂಣಿಯಲ್ಲಿ ಸಾಗಿದರು. ಜೊತೆಗೆ ಸಂಸದ ರಾಘವೇಂದ್ರ ಕೂಡ ಇದ್ದರು. ಮೆರವಣಿಗೆ ಸಂದರ್ಭದಲ್ಲಿ ಹಿಂಸಾಚಾರವೂ ನಡೆಯಿತು. ಈ ಬಗ್ಗೆ ಕೆಲವರು ಸಚಿವರ ವಿರುದ್ಧ ದೂರು ನೀಡಿದರೂ ಅದು ದಾಖಲಾಗಲೇ ಇಲ್ಲ. ಮೆರವಣಿಗೆ ಸಂದರ್ಭದಲ್ಲಿ ಕಲ್ಲು ತೂರಾಟ, ಬೆಂಕಿ ಹಚ್ಚುವುದು ನಡೆಯುತ್ತಿದ್ದರೂ, ಮನೆಗಳ ಮೇಲೆ ದಾಳಿ ಮಾಡುತ್ತಿದ್ದರೂ ಪೊಲೀಸರು ಮೂಕಪ್ರೇಕ್ಷಕರಾಗಿದ್ದರು. ಇದು ಅರಾಜಕತೆ ಅಲ್ಲದೆ ಮತ್ತೇನು?

ಸಚಿವರಾದವರು ಬೆಂಕಿಯನ್ನು ನಂದಿಸಲು ಪ್ರಯತ್ನಿಸಬೇಕು. ಸಮಾಜದಲ್ಲಿ ಶಾಂತಿ ಸ್ಥಾಪನೆಗೆ ಮುಂದಾಗಬೇಕು. ಸೌಹಾರ್ದದ ಬೆಳಕು ಚೆಲ್ಲಬೇಕು. ಆದರೆ ಸಚಿವರೇ ಕೊಲೆಯ ರಹಸ್ಯವನ್ನು ಬಹಿರಂಗ ಮಾಡಿಬಿಟ್ಟರೆ ಪೊಲೀಸರಿಗೆ ಇನ್ನೇನು ಕೆಲಸ? 'ಸಚಿವ ಈಶ್ವರಪ್ಪ ಮಾತಿಗೆ ಯಾಕೆ ಬೆಲೆ ಕೊಡುತ್ತೀರಿ? ಅವರ ಮಿದುಳಿಗೂ ನಾಲಗೆಗೂ ಸಂಬಂಧವೇ ಇಲ್ಲ' ಎಂದು ಹೇಳುವವರೂ ಇದ್ದಾರೆ. ಸದ್ಯದ ರಾಜಕೀಯವನ್ನು ಗಮನಿಸಿದರೆ ಹಾಗೆ ಅನ್ನಿಸುವುದಿಲ್ಲ. ಈಶ್ವರಪ್ಪ ಯೋಚನೆ ಮಾಡಿಯೇ ಮಾತನಾಡುತ್ತಿದ್ದಾರೆ ಎನಿಸುತ್ತದೆ. ಅವರ ತಂಡಕ್ಕೂ ಅದು ಗೊತ್ತಿದೆ. ವಿಧಾನಸಭೆ ಚುನಾವಣೆ ಬಾಗಿಲಿಗೆ ಬಂದು ನಿಂತಿದೆ. ಈಗ ಬೊಬ್ಬೆಗೊಂದು ಕಾರಣ ಬೇಕು ಅಷ್ಟೆ. ಬೊಬ್ಬೆ ದೊಡ್ಡದಾದಷ್ಟೂ ಲಾಭ ಜಾಸ್ತಿ. ಹಿಜಾಬ್ ಗಲಾಟೆಯ ಹಿಂದಿನ ಗುಟ್ಟೂ ಇದೇ. ಚುನಾವಣೆ ಹತ್ತಿರ ಬಂದಾಗಲೆಲ್ಲಾ ನಮ್ಮ ರಾಜಕಾರಣಿಗಳು ಉಗುರಲ್ಲಿ ಹೋಗುವುದಕ್ಕೆ ಕೊಡಲಿಯನ್ನು ತೆಗೆದುಕೊಳ್ಳುತ್ತಾರೆ.

ಈಗ ಕೊಂಚ ಹಿಂದಕ್ಕೆ ಹೋಗೋಣ. ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಹೋಗಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಬಂದಾಗ ಮಂತ್ರಿಮಂಡಲದಲ್ಲಿ ಹಿರಿಯ ಸಚಿವರನ್ನು ಕೈಬಿಡಲಾಗುತ್ತದೆ ಎಂಬ ವದಂತಿ ಇತ್ತು. ಅದರಂತೆ ಕೆಲವು ಹಿರಿಯರು ಸ್ಥಾನ ಕಳೆದುಕೊಂಡರು. ಮುಖ್ಯಮಂತ್ರಿ ಸ್ಥಾನಕ್ಕೆ ಯಡಿಯೂರಪ್ಪ ರಾಜೀನಾಮೆ ನೀಡುವುದಕ್ಕೆ ಮೊದಲೇ ರಾಜ್ಯದಲ್ಲಿ ಕುರುಬರ ಮೀಸಲಾತಿ ಹೋರಾಟ ಆರಂಭವಾಗಿತ್ತು. ನಂತರ ಅದು ಜೋರಾಯಿತು. ಕುರುಬರನ್ನು ಎಸ್.ಟಿ. ಪಟ್ಟಿಗೆ ಸೇರಿಸಬೇಕು ಎಂಬ ಒತ್ತಡ ಕೇಳಿಬಂತು. ಬೊಮ್ಮಾಯಿ ನೇತೃತ್ವದ ಸಂಪುಟ ಅಸ್ತಿತ್ವಕ್ಕೆ ಬಂದ ನಂತರ ಈ ಹೋರಾಟ ತಣ್ಣಗಾಯಿತು. ಈಶ್ವರಪ್ಪ ಮಂತ್ರಿಯಾದರು.

ಈಗಲೂ ನೋಡಿ. ಮತ್ತೆ ಸಚಿವ ಸಂಪುಟ ವಿಸ್ತರಣೆಯ ಮಾತು ಕೇಳಿಬರುತ್ತಿದೆ. ಬಜೆಟ್ ಅಧಿವೇಶನದ ನಂತರ ಸಂಪುಟ ಪುನರ್‌ರಚನೆಯಾಗಬಹುದು ಎಂಬ ವದಂತಿ ಇದೆ. ಇದೇ ಸಮಯಕ್ಕೆ ಸರಿಯಾಗಿ ಈಶ್ವರಪ್ಪನವರು ಕೇಸರಿ ಧ್ವಜದ ಬಗ್ಗೆ ಮಾತನಾಡಿದರು. ಅದು ವಿವಾದವಾಯಿತು. ವಿಧಾನಮಂಡಲದ ಅಧಿವೇಶನದಲ್ಲಿ ಕೋಲಾಹಲವನ್ನೇ ಸೃಷ್ಟಿಸಿತು. ಈಶ್ವರಪ್ಪ ರಾಜೀನಾಮೆಗೆ ಕಾಂಗ್ರೆಸ್ ಪಕ್ಷ ಒತ್ತಾಯಿಸಿತು. ಸಚಿವ ಸ್ಥಾನದಿಂದ ಅವರನ್ನು ವಜಾ ಮಾಡುವಂತೆ ಅಹೋರಾತ್ರಿ ಹೋರಾಟ ನಡೆಸಿ ಕಲಾಪಕ್ಕೆ ಅಡ್ಡಿಯನ್ನುಂಟು ಮಾಡಿತು. 'ಈಗಲೇ ಕೇಸರಿ ಧ್ವಜ ಹಾರಿಸುತ್ತೇವೆ ಎಂದು ನಾನು ಹೇಳಿಲ್ಲ. 50–100 ವರ್ಷಗಳ ನಂತರ ಕೇಸರಿ ಧ್ವಜ ಹಾರಬಹುದು ಎಂದು ಹೇಳಿದ್ದೇನೆ' ಎಂದು ಅವರು ಸಮಜಾಯಿಷಿ ನೀಡಿದರು. ಅವರ ಬೆನ್ನಿಗೆ ಮುಖ್ಯಮಂತ್ರಿ ಸಹಿತ ಎಲ್ಲ ಸಚಿವರು ಮತ್ತು ಬಿಜೆಪಿ ಪಕ್ಷ ನಿಂತಿತು. ಈಗ ಈಶ್ವರಪ್ಪ ಅವರನ್ನು ಸಂಪುಟದಿಂದ ಕೈಬಿಟ್ಟರೆ ಕಾಂಗ್ರೆಸ್ ಒತ್ತಡಕ್ಕೆ ಮಣಿದಂತಾಗುತ್ತದೆ. ಅಲ್ಲಿಗೆ ಸದ್ಯಕ್ಕೆ ಈಶ್ವರಪ್ಪ ಸೇಫ್. ಶಿವಮೊಗ್ಗದಲ್ಲಿ ನಡೆದ ಹರ್ಷ ಹತ್ಯೆ ಪ್ರಕರಣವನ್ನೂ ಅವರು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿದ್ದಾರೆ ಎಂದು ಯಾರಿಗಾದರೂ ಅನಿಸಿದರೆ ಅದನ್ನು ತಪ್ಪು ಎನ್ನಲಾಗದು.



'ಯಾಕ್ರೀ ಹೀಗೆ ಬೇಕಾಬಿಟ್ಟಿ ಮಾತನಾಡುತ್ತೀರಿ' ಎಂದು ಬಿಜೆಪಿಯ ಹಿರಿಯ ಮುಖಂಡರೊಬ್ಬರು ಈಶ್ವರಪ್ಪ ಅವರನ್ನು ಕೇಳಿದರಂತೆ. ಅದಕ್ಕೆ ಅವರು 'ನಾನು ಹೀಗೆ ಮಾತನಾಡಿದರೆ ಮಾತ್ರ ಜನಕ್ಕೆ ಹಿಡಿಸತ್ತೆ. ಇಲ್ಲವಾದರೆ ಅದು ಈಶ್ವರಪ್ಪನ ಮಾತಾಗೋಲ್ಲ' ಎಂದು ಹೇಳಿದರಂತೆ. ಅವರು ಹೀಗೆಯೇ ಬಿಡುಬೀಸಾಗಿ ಮಾತನಾಡುತ್ತಲೇ ಇದ್ದಾರೆ. ಅದಕ್ಕೆ ತಡೆ ಒಡ್ಡುವ ಕೆಲಸವನ್ನು ಯಾರೂ ಮಾಡುತ್ತಿಲ್ಲ. ಅವರು ರಾಷ್ಟ್ರಧ್ವಜದ ಬಗ್ಗೆ ಮಾತನಾಡಿ, ಅದೊಂದು ವಿವಾದವಾಗಿ ವಿಧಾನಮಂಡಲದ ಕಲಾಪ ನಡೆಸಲು ಸಾಧ್ಯವಾಗದೇ ಇರುವ ಪರಿಸ್ಥಿತಿ ನಿರ್ಮಾಣವಾಗಿ ವಾರ ಕಳೆದ ನಂತರ, ಬಿಜೆಪಿ ಅಧ್ಯಕ್ಷ ನಡ್ಡಾ ಅವರು ಒಂದು ಎಚ್ಚರಿಕೆಯನ್ನು ಕೊಟ್ಟು ಸುಮ್ಮನಾದರು. ಈ ಚಾಳಿ ಬಿಜೆಪಿಗೆ ಸೀಮಿತವಲ್ಲ. ಕಾಂಗ್ರೆಸ್ ಪಕ್ಷದಲ್ಲಿಯೂ ಇಂತಹ 'ಬುದ್ಧಿ'ವಂತರಿದ್ದಾರೆ. ಹಿಜಾಬ್ ಕುರಿತಂತೆ ಶಾಸಕ ಜಮೀರ್ ಅಹಮದ್ ಅವರೂ ಕೂಗುಮಾರಿಯ ಹೇಳಿಕೆಯನ್ನೇ ನೀಡಿದ್ದರು. ತಕ್ಷಣವೇ ಎಚ್ಚೆತ್ತ ಕಾಂಗ್ರೆಸ್ ನಾಯಕರು ಅವರ ಬಾಯಿ ಮುಚ್ಚಿಸಿದರು. ಆದರೆ ಬಿಜೆಪಿಗೆ ಈಶ್ವರಪ್ಪ ಅವರನ್ನು ಸುಮ್ಮನಿರಿಸಲು ಸಾಧ್ಯವಾಗಿಲ್ಲ.

ನಮ್ಮ ಪೊಲೀಸರು ಎಷ್ಟು ಚುರುಕಾಗಿದ್ದಾರೆ ಎಂದರೆ, ನ್ಯಾಯಮೂರ್ತಿ ಬಗ್ಗೆ ನಟ ಚೇತನ್ ಅವಹೇಳನಕಾರಿ ಟ್ವೀಟ್ ಮಾಡಿದ್ದಾರೆ ಎಂಬ ಆರೋಪದ ಮೇರೆಗೆ ಸ್ವಯಂಪ್ರೇರಿತರಾಗಿ ದೂರು ದಾಖಲಿಸಿಕೊಂಡು ಅವರನ್ನು ಬಂಧಿಸಿದರು. ಅದೇ ರೀತಿಯ ಮಾತನ್ನು ಆಡಿದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಇನ್ನೂ ಅಂತಹ ಹೇಳಿಕೆಯನ್ನು ನೀಡುತ್ತಲೇ ಇದ್ದಾರೆ. 'ಭಗವಾಧ್ವಜ ನಮ್ಮ ಹೃದಯದಲ್ಲಿದೆ. ರಾಷ್ಟ್ರಧ್ವಜ ಹೊರಗಿದೆ' ಎಂದು ರವಿ ಹೇಳಿಕೆ ನೀಡುವ ಮೂಲಕ ರಾಷ್ಟ್ರಧ್ವಜದ ಬಗೆಗಿನ ತಮ್ಮ 'ಪ್ರೇಮ'ವನ್ನು ಹೊರಹಾಕಿದ್ದಾರೆ. ಕೆಂಪುಕೋಟೆಯ ಮೇಲೆ ಕೇಸರಿ ಧ್ವಜ ಒಂದಲ್ಲ ಒಂದು ದಿನ ಹಾರುತ್ತದೆ ಎಂದು ಹೇಳಿದ ಹಾಗೂ ಶಿವಮೊಗ್ಗ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಚೋದನಕಾರಿ ಮಾತುಗಳನ್ನು ಆಡಿದ ಸಚಿವ ಈಶ್ವರಪ್ಪ ವಿರುದ್ಧ ಯಾವುದೇ ಕ್ರಮಕ್ಕೆ ಮುಂದಾಗುವುದಿಲ್ಲ. 'ಕರ್ಫ್ಯೂ ಇದೆ. ಅದಕ್ಕೆ ಸುಮ್ಮನಿದ್ದೇವೆ. ಕರ್ಫ್ಯೂ ತೆಗೆಯಲಿ. ಆಗ ನಮ್ಮ ಶಕ್ತಿ ಏನೆಂದು ಗೊತ್ತಾಗುತ್ತದೆ. ಹರ್ಷ ಹತ್ಯೆಗೆ ಸೇಡು ತೀರಿಸಿಕೊಳ್ಳುತ್ತೇವೆ. ಇದು ಧರ್ಮಯುದ್ಧ' ಎಂದು ಸ್ವಾಮೀಜಿಯೊಬ್ಬರು ಬಹಿರಂಗವಾಗಿ ಹೇಳಿಕೆ ನೀಡುತ್ತಾರೆ. ಅವರ ವಿರುದ್ಧವೂ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ನಮ್ಮ ಪೊಲೀಸರು. ಸಾಮಾಜಿಕ ಜಾಲತಾಣಗಳಲ್ಲಿಯಂತೂ ದ್ವೇಷ ಕಾರುವವರು ಮಿತಿ ಮೀರಿದ್ದಾರೆ. ಯಾರ ವಿರುದ್ಧವೂ ಕ್ರಮ ಇಲ್ಲ. ಇವೆಲ್ಲದರ ಅರ್ಥ ಏನು?

80ರ ದಶಕದಲ್ಲಿ ಮೀಸಲಾತಿ ಕುರಿತಂತೆ ನಡೆದ ವಿಚಾರ ಸಂಕಿರಣದಲ್ಲಿ ಪಿ.ಲಂಕೇಶ್ ಮಾತನಾಡುತ್ತಾ 'ದಲಿತರಿಗೆ ಬೇಕಿರುವುದು ಪ್ರೀತಿಯ ಆಲಿಂಗನ. ಒಂದು ಮುಗುಳ್ನಗೆ ಅಷ್ಟೆ' ಎಂದು ಹೇಳಿದ್ದರು. ಅದೇ ಮಾತನ್ನು ಮುಸ್ಲಿಮರಿಗೂ ಅನ್ವಯಿಸಬಹುದು. ಅವರಿಗೆ ಬೇಕಿರುವುದೂ ಹಿಂದೂಗಳ ಒಂದು ಮುಗುಳ್ನಗೆ ಅಷ್ಟೆ. ಬಹುಸಂಖ್ಯಾತ ಹಿಂದೂಗಳೂ ಅದನ್ನೇ ಕಾಯುತ್ತಿದ್ದಾರೆ.

ಚುರುಮುರಿ

ಹೀಗೂ ಉಂಟೆ!

• ಬಿ.ಎನ್.ಮಲ್ಲೇಶ್

'ಪಾಪ, ಗುಬ್ಬಿ ಮೇಲೆ ಬ್ರಹ್ಮಾಸ್ತ್ರ!' ಎಂದ ದುಬ್ಬೀರ.

'ಏನಾತು? ಮತ್ತೆ ತೆಪರೇಸಿಗೆ ಪಮ್ಮಿ ಹಿಗ್ಗಾಮುಗ್ಗ ಏನಾದ್ರೂ...' ಗುಡ್ಡೆ ಮಾತನ್ನ ಅರ್ಧಕ್ಕೇ ತಡೆದ ಕೊಟ್ರೇಶಿ 'ಲೇಯ್, ಸದಾಶಿವಂಗೆ ಅದೇ ಧ್ಯಾನ... ದುಬ್ಬೀರ ಹೇಳಿದ್ದು ಉಕ್ರೇನ್ ಮೇಲೆ ರಷ್ಯಾ ದಾಳಿ ಬಗ್ಗೆ...' ಎಂದ.

'ರಷ್ಯಾ ಬ್ರಹ್ಮಾಸ್ತ್ರ ಬರೀ ಉಕ್ರೇನ್ ಮೇಲಲ್ಲಲೆ, ನಮ್ಮೇಲೂ ಬಿದ್ದೇತಿ. ಪೆಟ್ರೋಲ್ ರೇಟು ದುಬಾರಿ ಆಗ್ತತಂತೆ?' ಪರ್ಮೇಶಿಗೆ ಬೇಸರ.

'ಅದೊಂದೇ ಅಲ್ಲೋ, ಎಣ್ಣೆ ರೇಟೂ ಜಾಸ್ತಿ ಆಗ್ತತಂತೆ...' ಗುಡ್ಡೆ ತಿದ್ದಿದ.

'ಇದೊಳ್ಳೆ ಕತಿಯಾತಪ, ಅಲ್ಲೆಲ್ಲೋ ಮಳಿ ಆದ್ರೆ ನಾವಿಲ್ಲಿ ಛತ್ರಿ ಹಿಡ್ಕಾಬೇಕು. ಜಗಳ ಅವ್ರುರ್ದು, ಹೊಡ್ತ ನಮಗಾ?' ಕೊಟ್ರೇಶಿ ಪ್ರಶ್ನೆ.

'ಸಮಾಧಾನ ಮಾಡ್ಕಳೆ, ಎಣ್ಣೆ ರೇಟು ಜಾಸ್ತಿ ಮಾಡಲ್ಲ ಅಂತ ನಮ್ ಅಬ್ಕಾರಿ ಮಿನಿಸ್ಟ್ರು ಹೇಳಿದಾರೆ, ಪೇಪರ್ ಓದಿಲ್ವಾ?' ದುಬ್ಬೀರ ಸಮಾಧಾನಿಸಿದ.

'ಅದಿರ್ಲಿ, ನಮ್ ತೆಪರೇಸಿ ಮನೇಲೂ ವಾರ್ ಡಿಕ್ಲೇರ್ ಆಗೇತಂತೆ ಗೊತ್ತಾ? ಅದು ಬಗೆಹರೀಬೇಕಂದ್ರೆ ಸಾಕ್ಷಾತ್ ಮೋದಿ ಸಾಹೇಬ್ರೇ ಮಧ್ಯ ಪ್ರವೇಶಿಸ್ಬೇಕಂತೆ...' ಗುಡ್ಡೆ ಮಾತಿಗೆ ನಕ್ಕ ದುಬ್ಬೀರ, 'ಏನಪ್ಪ ಅಂಥಾದ್ದು?' ಎಂದ.

'ಏನಿಲ್ಲ, ಹೋದ ದೀಪಾವಳಿಗೆ ನೆಕ್ಲೇಸ್ ಕೊಡಿಸ್ತೀನಿ ಅಂತ ಪಮ್ಮಿಗೆ ತೆಪರ ಪ್ರಾಮಿಸ್ ಮಾಡಿದ್ನಂತೆ. ಅದು ನಮ್ ಸಂಪುಟ ವಿಸ್ತರಣೆ ಥರ ಹೊಸ ವರ್ಷಕ್ಕೆ, ಸಂಕ್ರಾಂತಿಗೆ ಅಂತ ಮುಂದ್ ಮುಂದುಕ್ಕೋತು. ಈ ಸಲ ತಲೆ ಮೇಲೆ ತಲೆ ಬೀಳ್ಲಿ, ಶಿವರಾತ್ರಿಗೆ ಮಿಸ್ ಮಾಡಲ್ಲ ಅಂದಿದ್ನಂತೆ. ಈಗ ರಷ್ಯಾ ಯುದ್ಧಕ್ಕೆ ಚಿನ್ನದ ರೇಟು ಯದ್ವಾತದ್ವಾ ಏರಿ ಕುಂತೈತಿ ಏನ್ಮಾಡ್ಲಿ ಅಂತ ಒದ್ದಾಡ್ತಿದ್ದ...'

'ಅದಕ್ಕೆ ಮೋದಿ ಸಾಹೇಬ್ರು ಏನ್ ಮಾಡ್ಬೇಕಂತೆ?'

'ಮೋದಿ ಸಾಹೇಬ್ರು ಅಲ್ಲಿ ರಷ್ಯಾಕ್ಕೆ ಬುದ್ಧಿ ಹೇಳಿ ಯುದ್ಧ ನಿಲ್ಲಿಸಿದ್ರೆ ಇಲ್ಲಿ ಚಿನ್ನದ ರೇಟು ಇಳೀತತಿ, ಪಮ್ಮಿ ಕೈಯಾಗೆ ತೆಪರ ಉಡೀಸ್ ಆಗೋದು ತಪ್ತತಿ ಅಂತ...'

'ಓ... ಹೀಗೂ ಉಂಟೆ!' ಎಂದ ಪರ್ಮೇಶಿ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಭೂಮಿಗಾಗಿ ಸಂವಿಧಾನವೇ ಬದಲು!

ಪರಿಸರಕ್ಕೆ ಆದ್ಯತೆ ನೀಡಿ ಸಂವಿಧಾನ ರೂಪಿಸುತ್ತಿದೆ ಚಿಲಿ

• ಗುರುರಾಜ್ ಎಸ್. ದಾವಣಗೆರೆ

ಲ್ಯಾಟಿನ್ ಅಮೆರಿಕದ ಅಂಗೈ ಅಗಲದ ದೇಶ ಚಿಲಿ. ಆದರೆ ಅದರ ಯೋಚನೆ ಯಾರೂ ಊಹಿಸದಷ್ಟು ದೊಡ್ಡದು ಮತ್ತು ಉದಾತ್ತವಾದದ್ದು. ಭೂಮಿಯ ವಾಯುಗುಣ ಎದುರಿಸುತ್ತಿರುವ ಬಿಕ್ಕಟ್ಟು ಮತ್ತು ಕ್ಲೈಮೇಟ್ ಎಮರ್ಜೆನ್ಸಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ತನ್ನ ನೂತನ ಸಂವಿಧಾನದಲ್ಲಿ ರಾಷ್ಟ್ರೀಯತೆ, ದೇಶಪ್ರೇಮಗಳನ್ನೂ ಮೀರಿ ಪರಿಸರವನ್ನೇ ಪ್ರಧಾನವಾಗಿಸಿಕೊಳ್ಳ ಹೊರಟಿರುವ ವಿಶ್ವದ ಪ್ರಪ್ರಥಮ ದೇಶ ಎಂಬ ಹೆಗ್ಗಳಿಕೆ ಈ 'ಚಿಲಿ'ಯದ್ದು.

ಅದು 1980. ಸರ್ವಾಧಿಕಾರಿ ಅಗಸ್ಟೊ ಪಿನೊಚೆ ಖಾಸಗಿ ವಲಯಕ್ಕೆ ಮಣೆ ಹಾಕುವ ಸಂವಿಧಾನ ರಚಿಸಿ ಎಲ್ಲರಿಂದಲೂ ಬಲವಂತವಾಗಿ ಒಪ್ಪಿಸಿದ. ದೇಶದ ಪ್ರತಿಯೊಂದು ವ್ಯವಸ್ಥೆಯೂ ಖಾಸಗಿಯವರ ಕೈಯಲ್ಲಿತ್ತು. ಕುಡಿಯುವ, ಬಳಸುವ ನೀರನ್ನೂ ಖಾಸಗಿ ಸ್ವತ್ತನ್ನಾಗಿಸಿದ್ದ ಅತಿರೇಕಕ್ಕೆ ಸಂವಿಧಾನ ಮಣೆಹಾಕಿತ್ತು.

ಮೂಲಭೂತ ಹಕ್ಕುಗಳಿಗೆ ಅರ್ಥವೇ ಇರಲಿಲ್ಲ. ಕಾರ್ಪೊರೇಟ್ ಕಂಪನಿಗಳು ನೀರಿನ ಪೂರೈಕೆ- ಸರಬರಾಜಿನ ಉಸ್ತುವಾರಿ ಹೊತ್ತಿದ್ದವು. ನೈಸರ್ಗಿಕ ಸಂಪನ್ಮೂಲಗಳೆಲ್ಲ ಖಾಸಗೀಕರಣಗೊಂಡಿದ್ದವು. ಹೊಸ ಶತಮಾನದ ಪವರ್‌ಹೌಸ್ ಎಂದೇ ಕರೆಸಿಕೊಂಡಿರುವ 'ಲೀಥಿಯಂ'ನ ಗಣಿಗಳೂ ಖಾಸಗಿಯವರ ಒಡೆತನದಲ್ಲಿದ್ದವು. ನಿಮಗೆ ತಿಳಿದಿರಲಿ, ವಿಶ್ವದಲ್ಲೇ ಅತಿ ಹೆಚ್ಚು ಲೀಥಿಯಂ ಗಣಿಗಳಿರುವುದು ಚಿಲಿಯಲ್ಲಿಯೆ!

ಖಾಸಗೀಕರಣವು ಚಿಲಿಗೆ ವರದಾನವಾಗಿಯೇ ಇತ್ತು. ರಾಷ್ಟ್ರೀಯ ಸಂಪತ್ತು ವರ್ಷದಿಂದ ವರ್ಷಕ್ಕೆ ವೃದ್ಧಿಯಾಗುತ್ತಲೇ ಇತ್ತು. ಆದರೆ ಅದು ಸಮಾನವಾಗಿ ಹಂಚಲ್ಪಟ್ಟಿರಲಿಲ್ಲ. ಬಹುತೇಕ ಕಡೆ ಆಗುವಂತೆ ಶ್ರೀಮಂತರ ಸಂಪತ್ತು ನೂರ್ಮಡಿಯಾದರೆ, ಇತರರು ಪಾತಾಳಕ್ಕೆ ಕುಸಿದಿದ್ದರು. ಅಸಮಾನತೆ ಹೆಚ್ಚುತ್ತಲೇ ಹೋಯಿತು. ಮೂವತ್ತೆಂಟು ವರ್ಷ ಸುಮ್ಮನೇ ಸಹಿಸಿಕೊಂಡಿದ್ದ ಜನ 2019ರಲ್ಲಿ ವ್ಯವಸ್ಥೆಯ ವಿರುದ್ಧ ದೊಡ್ಡ ರೀತಿಯಲ್ಲಿ ತಿರುಗಿಬಿದ್ದರು. ದೇಶದುದ್ದಕ್ಕೂ ಪ್ರತಿಭಟನೆ, ಹರತಾಳಗಳು ನಡೆದವು. ಖಾಸಗೀಕರಣಕ್ಕೆ ಒತ್ತು ನೀಡುವ ಸಂವಿಧಾನ ನಮಗೆ ಬೇಡ, ಅದನ್ನು ಕಿತ್ತೊಗೆಯಿರಿ ಎಂಬುದು ಆಗ್ರಹವಾಗಿತ್ತು.

ಕಳೆದ ಜುಲೈನಲ್ಲಿ ಸಂವಿಧಾನ ಬದಲಾವಣೆಗೆ ಒಪ್ಪಿದ ಆಡಳಿತ, ಅದನ್ನು ರೂಪಿಸಲು 155 ಸದಸ್ಯರಿರುವ ಸಮಿತಿಯೊಂದನ್ನು ರಚಿಸಿತು. ಅದರಲ್ಲಿ ಅರ್ಧ ಸೀಟುಗಳಿಗೆ ಮಹಿಳೆಯರು ಮತ್ತು ಮೂಲ ನಿವಾಸಿಗಳೇ ಆಯ್ಕೆಯಾದರು. ಈಗ ಅವರೆಲ್ಲ ಸೇರಿ ನೈಸರ್ಗಿಕ ಸಂಪನ್ಮೂಲಗಳನ್ನು ಖಾಸಗಿ ಕಪಿಮುಷ್ಟಿಗಳಿಂದ ಬಿಡಿಸುವ ಸಂವಿಧಾನ ರೂಪಿಸಬೇಕಿದೆ. ಅದಕ್ಕಾಗಿ ಎರಡು ಮುಖ್ಯ ಬದಲಾವಣೆ ಮಾಡಿ, ನೈಸರ್ಗಿಕ ಸಂಪನ್ಮೂಲಗಳ ಒಡೆತನ ಮತ್ತು ನಿರ್ವಹಣೆಗೆ ಸರಿಯಾದ ಸೂತ್ರ ಹೊಸೆಯಬೇಕಿದೆ.

ಇದುವರೆಗೂ ಮೂಲಭೂತ ಹಕ್ಕಿನಿಂದ ಹೊರಗಿದ್ದ ನೀರಿನ ಲಭ್ಯತೆಯನ್ನು ಮೂಲಭೂತ ಹಕ್ಕನ್ನಾಗಿಸುವುದು, ಗಣಿಗಾರಿಕೆಯನ್ನು ನಿಯಂತ್ರಿಸುವುದು ಮತ್ತು ಮನುಷ್ಯನ ಉಳಿವಿಗಾಗಿ ಎಷ್ಟರಮಟ್ಟಿಗಿನ ನೈಸರ್ಗಿಕ ಸಂಪನ್ಮೂಲ ಬಳಕೆ ಮಾಡುವುದು ಎಂಬುದನ್ನು ಸಮಿತಿ ನಿರ್ಧರಿಸಬೇಕಿದೆ. ಇಂಥ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಸ್ಥಳೀಯ ಸಮುದಾಯಗಳಿಗೆ ಏನೆಲ್ಲ ಅಧಿಕಾರವಿರಬೇಕು ಎಂಬುದರ ಬಗ್ಗೆ ತೀವ್ರತರದ ಚರ್ಚೆಗಳಾಗುತ್ತಿವೆ. ವಿಶೇಷವೆಂದರೆ, ಸಮಿತಿಯ ಸಭೆಗಳಲ್ಲಿ ಗಣಿ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟು ಜನರಿಗೆ ವಿಶೇಷ ಗೌರವ ನೀಡಲಾಗಿದೆ.

ಉಪ್ಪಿನ ರಾಡಿಯಿಂದ ಲೀಥಿಯಂ ಅನ್ನು ಬೇರ್ಪಡಿಸಿದ ನಂತರ ಅದನ್ನೇ ನೀರಿನಂತೆ ಉಪಯೋಗಿಸಬೇಕೆಂಬುದು ಹೊಸ ಸಮಿತಿಯ ವಾದ. ಆದರೆ ಗಣಿ ಮಾಲೀಕರು ಗಣಿಯಿಂದ ಏಳುವ ಬಿಸಿಯನ್ನು ನಿಯಂತ್ರಿಸಲು ಶುದ್ಧವಾದ ಜನಬಳಕೆಯ ನೀರನ್ನೇ ಬಳಸಿ ನೈಸರ್ಗಿಕ ನೀರಿನ ಮೂಲಗಳ ಮೇಲೆ ಭಾರಿ ಒತ್ತಡ ಸೃಷ್ಟಿಸುತ್ತಿದ್ದಾರೆ. ಇದನ್ನು ತಡೆಯಲೇಬೇಕು ಎಂದಿರುವ ಹೊಸ ಸಂವಿಧಾನ ರಚನಾ ಸಮಿತಿಯು ಮಿನರಲ್‌ಯುಕ್ತ ಉಪ್ಪಿನ ರಾಡಿಯನ್ನು ನೀರು ಎಂದು ಘೋಷಿಸುವ ಎಲ್ಲ ಸಾಧ್ಯತೆಗಳಿವೆ. ಹಾಗಾದಲ್ಲಿ ಅಪಾರ ಪ್ರಮಾಣದ ಲೀಥಿಯಂ ಗಣಿಗಳಿರುವ ಚಿಲಿಯಲ್ಲಿ ನಿಸರ್ಗ ಸಮತೋಲನಕ್ಕೆ ಸರಿಹೊಂದುವಂತೆ ಪರಿಸರಸ್ನೇಹಿ ಗಣಿಗಾರಿಕೆ ಮಾಡಬಹುದು. ಲೀಥಿಯಂ ಬೇರ್ಪಡಿಸಿದ ನಂತರ ಉಳಿಯುವ ದ್ರವವನ್ನೇ ತಂಪಾಗಿಸಿ ನೀರಿನಂತೆ ಬಳಸಿದರೆ ಲಭ್ಯವಿರುವ ಕುಡಿಯುವ ನೀರಿನ ಮೂಲಗಳ ಮೇಲಿನ ಒತ್ತಡ ಕಡಿಮೆಯಾಗಲಿದೆ. ಈ ಮಧ್ಯೆ ಅಮೆರಿಕ, ಯುರೋಪ್ ಲಕ್ಷಾಂತರ ಎಲೆಕ್ಟ್ರಿಕ್ ವಾಹನ ತಯಾರಿಸಿ ರಸ್ತೆಗಿಳಿಸುವ ಬೃಹತ್ ಯೋಜನೆ ಹಾಕಿಕೊಂಡಿವೆ. ಇದು ಲೀಥಿಯಂನ ಬೃಹತ್ ದಾಸ್ತಾನು ಹೊಂದಿರುವ ಚಿಲಿಗೆ ಭಾರಿ ಆರ್ಥಿಕ ಲಾಭ ತರಲಿದೆ. ಎಲೆಕ್ಟ್ರಿಕ್ ವಾಹನಕ್ಕೆ ಬೇಕಾದ ಇಂಧನ ತುಂಬಿಡುವ ಬ್ಯಾಟರಿ ಲೀಥಿಯಂನದ್ದೇ ಆಗಿರುತ್ತದೆ.

ಕಳೆದ ಡಿಸೆಂಬರ್‌ನಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ 35 ವರ್ಷದ ಚಳವಳಿಕಾರ ಗೇಬ್ರಿಯಲ್ ಬೋರಿಕ್, ಈಗಿರುವ ಸಂಪತ್ತಿನ ಹಂಚಿಕೆಯ ಅಸಮಾನತೆಯನ್ನು ಸರಿಮಾಡುವುದೇ ತಮ್ಮ ಆದ್ಯತೆ ಎಂದಿದ್ದಾರೆ. ಲೀಥಿಯಂ ಗಣಿಗಾರಿಕೆಯನ್ನು ಖಾಸಗಿಯಿಂದ ಹೊರತಾಗಿಸಿ ಸಾರ್ವಜನಿಕ ವಲಯಕ್ಕೆ ತರುವುದು ಅವರ ಸದ್ಯದ ಗುರಿ. ಇದರಿಂದ ಬೊಕ್ಕಸಕ್ಕೆ ಭಾರಿ ಆದಾಯ ಬರುತ್ತದೆ. ಆದರೆ ಒಂದು ಟನ್ ಲೀಥಿಯಂ ಹೊರತೆಗೆದಾಗ 16 ಟನ್ ಇಂಗಾಲದ ಡೈ ಆಕ್ಸೈಡ್ ವಾತಾವರಣ ಸೇರುತ್ತದೆ. 'ಪರಿಸರವೇ ಮೊದಲು' ಎಂದು ಸಂವಿಧಾನ ರೂಪಿಸುತ್ತಿರುವ ಚಿಲಿ, ಗಣಿಗಾರಿಕೆಯ ಈ ಸಮಸ್ಯೆಯನ್ನು ಹೇಗೆ ನಿಭಾಯಿಸುತ್ತದೆ ಮತ್ತು ಸಂವಿಧಾನದ ಹಸಿರು ಆಶಯವನ್ನು ಸಾಕಾರಗೊಳಿಸುತ್ತದೆ ಎಂಬುದನ್ನು ತಿಳಿಯಲು ಇಡೀ ವಿಶ್ವವೇ ಕಾಯುತ್ತಿದೆ.

ವಾಚಕರ ವಾಣಿ

ಬಜೆಟ್: ದುಡಿಮೆಗೆ ಉತ್ತೇಜನ ಸಿಗಲಿ

ಮುಂಬರುವ ರಾಜ್ಯ ಬಜೆಟ್‌ನಲ್ಲಿ ಉಚಿತ ಕೊಡುಗೆಗಳು ಮತ್ತು ಜನಪ್ರಿಯ ಯೋಜನೆಗಳಿಗಿಂತ ಜನರನ್ನು ಸ್ವಾವಲಂಬಿಯಾಗಿಸುವಂತಹ ಮತ್ತು ದುಡಿಮೆಗೆ ಪ್ರೋತ್ಸಾಹ ನೀಡುವಂತಹ ಯೋಜನೆಗಳನ್ನು ಪ್ರಕಟಿಸುವುದು ಒಳಿತು. ಸರ್ಕಾರದ ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಬೇಕು. ಉತ್ಪಾದಕತೆ ಹೆಚ್ಚಿಸಲು ನೆರವಾಗುವಂತಹ ಯೋಜನೆಗಳಿಗೆ ಅನುದಾನ ಒದಗಿಸಬೇಕು. ಯೋಜನೆಗಳ ಜಾರಿಯಲ್ಲಾಗುವ ಲೋಪವನ್ನು ಗುರುತಿಸಿ ಸರಿಪಡಿಸುವತ್ತ ಚಿತ್ತ ಹರಿಯಲಿ.

ಅಪೂರ್ಣವಾಗಿರುವ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಿದ ನಂತರವಷ್ಟೇ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಗ್ರಾಮೀಣ ಭಾಗಗಳಲ್ಲಿ ವಿದ್ಯುತ್, ಶುದ್ಧ ಕುಡಿಯುವ ನೀರು, ರಸ್ತೆ ಮೊದಲಾದ ಮೂಲ ಸೌಲಭ್ಯಗಳನ್ನು ಒದಗಿಸಬೇಕು. ಸ್ವ ಉದ್ಯೋಗಿಗಳ ಸಂಖ್ಯೆ ಹೆಚ್ಚಾಗುವಂತೆ ನೋಡಿಕೊಳ್ಳಬೇಕು. ಹೆಚ್ಚುತ್ತಿರುವ ಸೈಬರ್ ಅಪರಾಧಗಳನ್ನು ತಡೆಗಟ್ಟಲು ಪ್ರತೀ ನಗರ, ಪಟ್ಟಣದಲ್ಲಿ ವಿಶೇಷ ತರಬೇತಿ ಹೊಂದಿದ ಸಿಬ್ಬಂದಿಯನ್ನು ಒಳಗೊಂಡ ಪ್ರತ್ಯೇಕ ತನಿಖಾ ವಿಭಾಗ ರಚಿಸಬೇಕು. ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರ ನೀಡುವ ಮೂಲಕ ಭ್ರಷ್ಟಾಚಾರ ತಡೆಗೆ ದಿಟ್ಟ ಹೆಜ್ಜೆ ಇಡಬೇಕು. ಕನ್ನಡ ಪುಸ್ತಕ ಸಂಸ್ಕೃತಿಯ ಬೆಳವಣಿಗೆಗೆ ಉತ್ತೇಜನ ನೀಡಬೇಕು.

ಉದಯ ಮ. ಯಂಡಿಗೇರಿ, ಧಾರವಾಡ

ಮಹಿಳಾ ಜಯಂತಿ ಆಚರಣೆ ಯಾಕಿಲ್ಲ?

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಈ ವರ್ಷದಿಂದ ಹೆಚ್ಚುವರಿಯಾಗಿ ಐವರ ಜಯಂತಿ ಆಚರಿಸುವ ನಿರ್ಧಾರ ಪ್ರಕಟಿಸಿದ್ದಾರೆ. ಸಂತೋಷ, ಆದರೆ ಈ ಜಯಂತಿ ಆಚರಣೆಗಳಲ್ಲಿ ಯಾವೊಬ್ಬ ಮಹಿಳೆಯ ಜಯಂತಿಯೂ ಇಲ್ಲದಿರುವುದು ವಿಷಾದನೀಯ. ಬದಲಾವಣೆಯ ಹರಿಕಾರನಾಗಬೇಕೆಂಬ ಉತ್ಸಾಹದಲ್ಲಿರುವ ಕಸಾಪ ಅಧ್ಯಕ್ಷರಿಗೂ ಕನ್ನಡ ನಾಡು ನುಡಿಗಾಗಿ ದುಡಿದ ಒಬ್ಬ ಸಾಧಕಿಯ ನೆನಪೂ ಆಗಲಿಲ್ಲವೇ?! ಕೇವಲ ಬಾಯಿಮಾತಿನ ಸಮಾನತೆಯಲ್ಲೇ ತೃಪ್ತಿಪಟ್ಟುಕೊಂಡು, ಸಾಧನೆಯ ಶಿಖರವನ್ನೇರಿದ್ದರೂ ಮೂಲೆಗುಂಪಾಗಿರುವ ಮಹಿಳೆಯರಿಗೆ ನ್ಯಾಯ ಸಿಗುವುದಾದರೂ ಯಾವಾಗ?

ಸುಮಾ ರಮೇಶ್, ಬೆಂಗಳೂರು

ಕಲಿಕಾ ಚೇತರಿಕೆ ಯಶಸ್ವಿಗೊಳಿಸಬೇಕಿದೆ

ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ 2021- 22ನೇ ಸಾಲಿನ ಶೈಕ್ಷಣಿಕ ವರ್ಷವನ್ನು ಇದೇ ಏಪ್ರಿಲ್ 9ಕ್ಕೆ ಮುಕ್ತಾಯಗೊಳಿಸಿ, ಬೇಸಿಗೆ ರಜೆ ನೀಡಿ ಮೇ 16ರಿಂದ ಮುಂದಿನ ಶೈಕ್ಷಣಿಕ ವರ್ಷ ಪುನರಾರಂಭ ಮಾಡಲು ಸರ್ಕಾರ ನಿರ್ಧರಿಸಿದೆ. ಬೇಸಿಗೆಯ ಅವಧಿಯಲ್ಲಿ ಮಕ್ಕಳು ಬಿಸಿಲಿನ ತಾಪಮಾನದಿಂದ ಅನಾರೋಗ್ಯಕ್ಕೆ ಒಳಪಡುವ ಸಂಭವ ಹೆಚ್ಚಾಗಿರುವುದರಿಂದ ಈ ಕ್ರಮ ಸೂಕ್ತವಾಗಿದೆ. ಅಲ್ಲದೆ 'ಕಲಿಕಾ ಚೇತರಿಕೆ' (ಸೇತುಬಂಧ) ಕಾರ್ಯಕ್ರಮ ಆಯೋಜಿಸಿ ಮಕ್ಕಳ ಕಲಿಕಾ ಪುನರ್ಮನನಕ್ಕೆ ಒಳ್ಳೆಯ ಮಾರ್ಗ ರೂಪಿಸಿದೆ. ಈ ಕಾರ್ಯಕ್ರಮವನ್ನು ರಾಜ್ಯದ ಎಲ್ಲ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಅಳವಡಿಸಿಕೊಂಡು, ಯೋಜನೆಯನ್ನು ಯಶಸ್ವಿಗೊಳಿಸುವುದು ಶಾಲೆಗಳ ಜವಾಬ್ದಾರಿಯಾಗಿದೆ.

ಅಶ್ವಿನಿ ಎಸ್. ಅಂಗಡಿ, ಬಾದಾಮಿ

ಕಲಿತದ್ದು ದೇಶದ್ರೋಹಿ ಕೃತ್ಯ ಎಸಗಲೆಂದೇ?

ಅಹಮದಾಬಾದ್ ಸರಣಿ ಬಾಂಬ್ ಸ್ಫೋಟದ ಅಪರಾಧಿಗಳ ಶೈಕ್ಷಣಿಕ ವಿವರ ನೋಡಿದರೆ ಆಶ್ಚರ್ಯ ಹಾಗೂ ದಿಗ್ಭ್ರಮೆಯಾಗುತ್ತದೆ. ಈ ಬಗ್ಗೆ ಯಾರೋ ಮಾಹಿತಿ ನೀಡಿದ್ದಲ್ಲ, ಸ್ವತಃ ನ್ಯಾಯಾಲಯವೇ ಅವರ ಹಿನ್ನೆಲೆಯನ್ನು ತಿಳಿಸಿದೆ. ಈ ದೇಶದ್ರೋಹಿ ಅಪರಾಧಿಗಳಲ್ಲಿ ಕೆಲವರು ವೈದ್ಯರು, ಎಂಜಿನಿಯರ್, ಪ್ರೊಫೆಸರ್‌ಗಳಾಗಿದ್ದಾರೆ. ಈ ಅಪರಾಧಿಗಳು ಹೀಗೆ ಉನ್ನತ ಶಿಕ್ಷಣ ಪಡೆದಿದ್ದು ಹಾಗೂ ಉನ್ನತ ಕೌಶಲ ಹೊಂದಿದ್ದು ಇಂತಹ ದೇಶದ್ರೋಹಿ ಕೃತ್ಯ ಎಸಗಲೆಂದೇ?

ಶಿಕ್ಷಣದಿಂದ ಸಮಾಜ, ದೇಶ ಸುಧಾರಿಸಬೇಕಿತ್ತು. ಅದರ ಬದಲು ಸಮಾಜವನ್ನು, ದೇಶವನ್ನು ಅಧಃಪತನಕ್ಕೆ ಕೊಂಡೊಯ್ಯುತ್ತಿರುವ ಇಂತಹವರಿಗೆ ಶಿಕ್ಷೆ ವಿಧಿಸಿ ನ್ಯಾಯಾಲಯ ಸರಿಯಾದ ಕೆಲಸ ಮಾಡಿದೆ. ಇಂತಹ ದ್ರೋಹಿಗಳನ್ನು ವಿದ್ಯಾವಂತರೆಂದು ಕರೆಯುವುದಕ್ಕಿಂತ ಬರೀ ಸಾಕ್ಷರ ಅವಿದ್ಯಾವಂತರೆಂದು ಕರೆಯಬೇಕು.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಕದನದ ಬಿಸಿ ವಿದ್ಯಾರ್ಥಿಗಳಿಗೆ ತಟ್ಟದಿರಲಿ

ಭಾರತದಲ್ಲಿ ವೈದ್ಯಕೀಯ ಶಿಕ್ಷಣ ದುಬಾರಿ. 'ನೀಟ್'ನಲ್ಲಿ ಕನಿಷ್ಠ ಶೇ 90ರಷ್ಟು ಅಂಕ ಪಡೆದವರಿಗೂ ಸರ್ಕಾರಿ ಸೀಟು ಲಭ್ಯವಾಗುವುದು ಕಷ್ಟವಿದೆ. ಇನ್ನು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಶುಲ್ಕ ಅತ್ಯಂತ ದುಬಾರಿಯಾಗಿದೆ. ಇದರ ಪ್ರಯೋಜನವನ್ನು ಹಳೆಯ ಸೋವಿಯತ್ ದೇಶಗಳಾದ ರಷ್ಯಾ, ಉಕ್ರೇನ್, ಜಾರ್ಜಿಯಾ, ಬೆಲಾರಸ್, ಉಜ್ಬೇಕಿಸ್ತಾನ, ಆರ್ಮೇನಿಯಾ, ಕಜಕಸ್ತಾನ್ ಮುಂತಾದ ದೇಶಗಳು ಪಡೆದುಕೊಳ್ಳಲು ಆರಂಭಿಸಿದವು.

ಈ ದೇಶಗಳ ವೈದ್ಯಕೀಯ ಕಾಲೇಜುಗಳಲ್ಲಿ ಎಂಬಿಬಿಎಸ್ ವ್ಯಾಸಂಗ 5-6 ವರ್ಷಗಳಾಗಿದ್ದು, ಹಾಸ್ಟೆಲ್-ಊಟೋಪಚಾರದ ವ್ಯವಸ್ಥೆ ಇರುತ್ತದೆ. ಯಾವುದೇ ಭಾರತೀಯ ವಿದ್ಯಾರ್ಥಿಗೆ ಅಲ್ಲಿ ಶಿಕ್ಷಣ ಪಡೆಯುವುದೆಂದರೆ ಅದೊಂದು ಹೆಮ್ಮೆಯ ಸಂಗತಿ. ಪಿಯು ಪರೀಕ್ಷೆಗಳಲ್ಲಿ ಶೇ 50ರಷ್ಟು ಅಂಕ ಪಡೆದವರಿಗೂ ಅಲ್ಲಿ ಪ್ರವೇಶ ಇದೆ. ₹ 15 ಲಕ್ಷದಿಂದ 35 ಲಕ್ಷದವರೆಗೆ ಅಲ್ಲಿಯ ಮೆಡಿಕಲ್ ಕಾಲೇಜುಗಳು ಶುಲ್ಕ ಪಡೆಯುತ್ತವೆ. ಅದರಲ್ಲಿ ಊಟ, ವಸತಿ ಸೌಲಭ್ಯವೂ ಇರುತ್ತದೆ. ಹೊರ ದೇಶಗಳಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುವ ಇಚ್ಛೆಯುಳ್ಳ ವಿದ್ಯಾರ್ಥಿಗಳಿಗೆ ಇವು ತುಂಬಾ ಆಶಾದಾಯಕ ಸಂಗತಿಗಳು. ಅದಕ್ಕಾಗಿ ರಷ್ಯಾ ಮತ್ತು ಉಕ್ರೇನ್‌ನಲ್ಲಿ ಅಂದಾಜು ಹತ್ತು ಸಾವಿರ ಭಾರತೀಯ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರುವ ಅಂದಾಜಿದೆ. ಹಳೆಯ ಎಲ್ಲ ಸೋವಿಯತ್ ರಾಷ್ಟ್ರಗಳಲ್ಲಿ ಅಂದಾಜು 25 ಸಾವಿರದಿಂದ 30 ಸಾವಿರ ಭಾರತೀಯ ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದಾರೆ. ಅದೇನೇ ಇದ್ದರೂ ರಷ್ಯಾ ಮತ್ತು ಉಕ್ರೇನ್ ಯುದ್ಧದಿಂದಾಗಿ, ಅಲ್ಲಿ ಕಲಿಯುತ್ತಿರುವ ಭಾರತೀಯ ವಿದ್ಯಾರ್ಥಿಗಳು ತೊಂದರೆ ಅನುಭವಿಸದೆ ಸುಖವಾಗಿ ನಮ್ಮ ದೇಶಕ್ಕೆ ವಾಪಸಾಗುವಂತಾಗಲಿ.

ಚಂದ್ರಕಾಂತ ನಾಮಧಾರಿ, ಅಂಕೋಲಾ, ಉತ್ತರ ಕನ್ನಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶಾಸಕರು, ಸಚಿವರ ವೇತನ ಹೆಚ್ಚಳ ಸರಿಯಾದ ನಡೆಯೇ?

ಮೃಷ್ಟಾನ್ನದವರಿಗೇಕೆ ಭಿಕ್ಷಾನ್ನದ ತಹತಹ?

• ರಾಜಾರಾಂ ತಲ್ಲೂರು

ಯಾವುದೇ ಶಾಸನ ರಚನೆಯ ವೇಳೆ, ಅದರ ಉದ್ದೇಶ ಮತ್ತು ಕಾರಣಗಳನ್ನು ಸದನಕ್ಕೆ ವಿವರಿಸುವುದು ಸರ್ಕಾರದ ಕರ್ತವ್ಯ. ಶಾಸಕರ, ಸಚಿವರ ಸಂಬಳ-ಭತ್ಯೆಗಳನ್ನು ಹೆಚ್ಚಿಸುವಾಗಲೆಲ್ಲ, ಸದನದಲ್ಲಿ ಆ ಕುರಿತು ಮಸೂದೆ ಮಂಡಿಸುವಾಗ ಸಾಮಾನ್ಯವಾಗಿ ಕೇಳಿಸುತ್ತಾ ಬಂದಿರುವ ಒಂದು ಕಾರಣ ಎಂದರೆ, 'ಜೀವನ ವೆಚ್ಚದಲ್ಲಿ ಗಣನೀಯ ಹೆಚ್ಚಳ'. ಈ ಬಾರಿ ಕೂಡ ಇದೇ ಕಾರಣ ಬಳಕೆಯಾಗಿದ್ದು, ಸಂಸದೀಯ ವ್ಯವಹಾರ ಸಚಿವರು, '2015ರಿಂದ ಈಚೆಗೆ ಶಾಸಕರು ಮತ್ತು ಸಚಿವರ ವೇತನ ಮತ್ತು ಭತ್ಯೆ ಪರಿಷ್ಕರಣೆ ಆಗಿಲ್ಲ ಮತ್ತು ಈ ಅವಧಿಯಲ್ಲಿ ಎಲ್ಲ ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗಿದೆ, ಸಾಕಷ್ಟು ಶಾಸಕರು ಸಂಕಷ್ಟ ಅನುಭವಿಸಿದ್ದಾರೆ' ಎಂದು ಸದನದಲ್ಲಿ ಹೇಳಿದ್ದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಒಂದು ಆದರ್ಶ ರಾಜ್ಯದಲ್ಲಿ, ಪ್ರಾಮಾಣಿಕ ಜನಪ್ರತಿನಿಧಿಗಳು ಇರುವ ಸನ್ನಿವೇಶವಿದ್ದರೆ, ಜೀವನ ವೆಚ್ಚದಲ್ಲಿ ಹೆಚ್ಚಳ ಆದಾಗ, ಜನಸೇವೆಯಲ್ಲಿ ವ್ಯಸ್ತರಿರುವವರಿಗೆ ಅದರಿಂದ ಹೊರೆಯಾಗುವುದು ಸಹಜ. ಅದನ್ನು ಭರಿಸಬೇಕಾದುದು ಖಂಡಿತಕ್ಕೂ ರಾಜ್ಯದ ಬೊಕ್ಕಸದ ಕರ್ತವ್ಯ. ನಮ್ಮಲ್ಲಿ ಪರಿಸ್ಥಿತಿ ಹೀಗಿದೆಯೆ?

2018ರ ವಿಧಾನಸಭಾ ಚುನಾವಣೆಯಲ್ಲಿ ಆರಿಸಿಬಂದಿರುವ 224 ಶಾಸಕರ ಪೈಕಿ 215 ಮಂದಿ (ಅಂದರೆ ಶೇ 97ರಷ್ಟು) ಕೋಟ್ಯಧಿಪತಿಗಳು ಎಂದು ಕೆಇಡಬ್ಲ್ಯು ಮತ್ತು ಎಡಿಆರ್ ವಿಶ್ಲೇಷಣೆ ಹೇಳುತ್ತಿದೆ. ಅಭ್ಯರ್ಥಿ ಉಮೇದುವಾರಿಕೆ ಸಲ್ಲಿಸುವಾಗ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಪ್ರಮಾಣಪತ್ರಗಳಿಂದ ಆರಿಸಿ ತೆಗೆಯಲಾದ ಅಂಕಿ-ಸಂಖ್ಯೆಗಳಿವು. ಈ ವಿಶ್ಲೇಷಣೆಯ ಪ್ರಕಾರ, ಕರ್ನಾಟಕದ ಒಬ್ಬ ಶಾಸಕನ ಸರಾಸರಿ ಸಂಪತ್ತು ₹34.59 ಕೋಟಿ!

ವಾಸ್ತವ ಹೀಗಿರುವಾಗ, ಕೋಟಿಗಳಲ್ಲಿ ತೂಗುವ ಈ ಜನಗಳು ಕೆಲವೇ ಸಾವಿರ ರೂಪಾಯಿಗಳ ಆಸೆಗೆ ಸದನದಲ್ಲಿ ತಮ್ಮ ಸಂಬಳವನ್ನು ಶೇ 50ರ ತನಕ ಹೆಚ್ಚಿಸಿಕೊಳ್ಳುತ್ತಿರುವುದು ಬಹಳ ಶೋಚನೀಯ ಸ್ಥಿತಿ. ಮೃಷ್ಟಾನ್ನ ಉಣ್ಣುವವರಿಗೆ ಈ ಭಿಕ್ಷಾನ್ನದ ತಹತಹ ಏಕೆ? ಹೀಗೆ ಸಂಬಳ ಹೆಚ್ಚಿಸಿಕೊಳ್ಳುತ್ತಿರುವ ಈ ಜನಪ್ರತಿನಿಧಿಗಳು ತಮಗೆ ಬೇರಾವುದೇ ಮೂಲದಿಂದ ವರಮಾನ ಇಲ್ಲ ಎಂದು ಖಚಿತಪಡಿಸಬಲ್ಲರೆ? ಜನಪ್ರತಿನಿಧಿಗಳಿಗೆ ಶೇ 10ರಿಂದ ಶೇ 40ರತನಕ ಕಮಿಷನ್ ನೀಡಿ ಕಾಮಗಾರಿಗಳನ್ನು ಪಡೆಯಲಾಗುತ್ತಿದೆ ಎಂದು ಗುತ್ತಿಗೆದಾರರು ಇತ್ತೀಚೆಗೆ ಬಹಿರಂಗವಾಗಿ ಹೇಳಿಕೊಂಡರೂ, ಏನೂ ಮಾಡಲಾಗದ ಸಾರ್ವಜನಿಕ ಬದುಕು ರಾಜ್ಯದ್ದು. ಈಗ ಅದೇ ಜನಪ್ರತಿನಿಧಿಗಳು ಪಕ್ಷಭೇದ ಮರೆತು, ಯಾವುದೇ ಚರ್ಚೆ ಇಲ್ಲದೆ ಕೆಲವೇ ನಿಮಿಷಗಳಲ್ಲಿ, ರಾಜ್ಯದ ಬೊಕ್ಕಸದ ಮೇಲೆ ಪರಿಣಾಮ ಬೀರಬಲ್ಲ ಮಸೂದೆಯೊಂದನ್ನು ಜಾರಿ ಮಾಡಿಕೊಂಡಿದ್ದಾರೆ. ಸಂವಿಧಾನದ ಗೌರವವನ್ನು ಎತ್ತಿ ಹಿಡಿಯಬೇಕಾದ ಸದನಗಳ ಸ್ಪೀಕರ್‌ಗಳು ಅದಕ್ಕೆ ಕಣ್ಣುಮುಚ್ಚಿ ಹಾದಿ ಮಾಡಿಕೊಟ್ಟಿದ್ದಾರೆ. ಈ ಸನ್ನಿವೇಶದಲ್ಲಿ ರಾಜ್ಯದ ಜನತೆಯದು ಕೇವಲ ಅಸಹಾಯಕತೆ. ಇದು ಪ್ರಜಾತಂತ್ರದ ಅಪಹಾಸ್ಯ ಮತ್ತು ಸಂವಿಧಾನಕ್ಕೆ ಮಾಡಿದ ಅಪಚಾರ ಎನ್ನದೇ ವಿಧಿಯಿಲ್ಲ.



ಕೈಯಲ್ಲಿ ಧಂಡಿಯಾಗಿ ಕಾಸಿದ್ದು, ಹೀಗೆ ಸಂಬಳ-ಭತ್ಯೆ ಜಾಸ್ತಿ ಮಾಡಿಕೊಂಡರೆ ಅದಕ್ಕೆ ಆಕ್ಷೇಪ ಹೇಳುವುದು ಕಷ್ಟ. ಆದರೆ ಇದು ಹೊಟ್ಟೆಗೆ ಹಿಟ್ಟಿಲ್ಲದೆ ಇರುವುದು ಗೊತ್ತಿದ್ದೂ, ಕೇವಲ ತಮ್ಮ ಜುಟ್ಟಿಗೆ ಮಲ್ಲಿಗೆ ಏರಿಸಿಕೊಳ್ಳುವ ಕೆಲಸ. ರಾಜ್ಯದ ಹಣಕಾಸು ಜವಾಬ್ದಾರಿಗಳ ಕಾಯ್ದೆಯ ಪ್ರಕಾರ, ರಾಜ್ಯದ ಬಜೆಟ್ ಹಣಕಾಸಿನ ಕೊರತೆ ಶೇ 3ರಷ್ಟನ್ನು ಮೀರುವಂತಿಲ್ಲ. ಆದರೆ 20-21 ಸಾಲಿನ ಪರಿಷ್ಕೃತ ಹಣಕಾಸು ಕೊರತೆ ಅದನ್ನು ಮೀರಿ, ಶೇ 3.5ರ ಆಸುಪಾಸಿನಲ್ಲಿದೆ

ಸಂಬಳ ಕಡಿತ ಕೂಡ ಮಾಡಿಕೊಂಡಿದ್ದರು!: ಜನಪ್ರತಿನಿಧಿಗಳು ತಮ್ಮ ಸಂಬಳ ತಾವೇ ಜಾಸ್ತಿ ಮಾಡಿಕೊಳ್ಳುವ ಈ ಪರಿಪಾಟ ಇದೇನೂ ಹೊಸದಲ್ಲ. 1957ರಲ್ಲಿ ಜಾರಿಗೆ ಬಂದ ಈ 'ಕರ್ನಾಟಕ ವಿಧಾನ ಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956' ಕಾಯ್ದೆಯು ಶಾಸಕರ ಸಂಬಳ, ಪಿಂಚಣಿ ಮತ್ತು ಭತ್ಯೆ ಹೆಚ್ಚಳಗಳಿಗೆ ಸಂಬಂಧಿಸಿದಂತೆ ಇಲ್ಲಿಯ, ತನಕ 43 ತಿದ್ದುಪಡಿಗಳನ್ನು ಮತ್ತು ಸಚಿವರ, ಸದನದ ಸ್ಪೀಕರ್‌ಗಳ ಸಂಬಳ ಹಾಗೂ ಭತ್ಯೆ ಹೆಚ್ಚಳಗಳಿಗೆ ಸಂಬಂಧಿಸಿದಂತೆ 16 ತಿದ್ದುಪಡಿಗಳನ್ನು ಕಂಡಿದೆ. 65 ವರ್ಷಗಳ ಇತಿಹಾಸ ಇರುವ ಈ ಕಾಯ್ದೆಗೆ ಒಂದು ಬಾರಿ ಮಾತ್ರ (ಅದೂ ತಾತ್ಕಾಲಿಕವಾಗಿ) ಸಂಬಳ ಹಾಗೂ ಭತ್ಯೆಗಳನ್ನು ಕಡಿತಗೊಳಿಸುವ ತಿದ್ದುಪಡಿ ನಡೆದಿದೆ. ಅದು ಜಾರಿಗೊಂಡದ್ದು 2020ರ ಅಕ್ಟೋಬರ್ ತಿಂಗಳಿನಲ್ಲಿ; ಕೋವಿಡ್ ಫಲಶ್ರುತಿಯಾಗಿ. ಸುಗ್ರೀವಾಜ್ಞೆಯ ಮೂಲಕ ಜಾರಿಗೊಂಡ ಈ ತಿದ್ದುಪಡಿಯಲ್ಲಿ, 2020ರ ಏಪ್ರಿಲ್ ಒಂದರಿಂದ ಒಂದು ವರ್ಷದ ಅವಧಿಗೆ ವಿಧಾನಮಂಡಲದ ಎಲ್ಲರ ಸಂಬಳ-ಭತ್ಯೆಗಳನ್ನು ಶೇ 30ರಷ್ಟು ಕಡಿತಗೊಳಿಸಲಾಗಿತ್ತು.

ಭಾರಿ ಪ್ರಚಾರದೊಂದಿಗೆ ಹೀಗೆ ಕಡಿತಗೊಳಿಸುವಾಗಲೂ ಅದು ಅರೆಕಾಸಿನ ಮಜ್ಜಿಗೆ ಅನ್ನಿಸಿತ್ತು. 'ಕೋವಿಡ್ ಸಾಂಕ್ರಾಮಿಕದಿಂದ ಉಂಟಾಗಬಹುದಾದ ಸನ್ನಿವೇಶವನ್ನು ನಿಭಾಯಿಸಲು, ತುರ್ತು ಅಗತ್ಯಗಳನ್ನು ಪೂರೈಸಲು ಈ ಕಡಿತ ಮಾಡಲಾಗುತ್ತಿದೆ ಎಂದು ತಿದ್ದುಪಡಿಯಲ್ಲಿ ಹೇಳಲಾಗಿತ್ತು. ಆದರೆ, ಇಂತಹದೊಂದು ಕ್ರಮದಿಂದ ಸರ್ಕಾರ ಉಳಿಸಿದ್ದು, ಕೇವಲ ₹15.9 ಕೋಟಿ. ಇದು ₹2,37,893 ಕೋಟಿ ಗಾತ್ರದ ಕರ್ನಾಟಕದ ವಾರ್ಷಿಕ ಬಜೆಟ್ ವೆಚ್ಚಕ್ಕೆ ಹೋಲಿಸಿದರೆ, ಅದರ ಕೇವಲ ಶೇ 0.007ರಷ್ಟು ಭಾಗ ಮಾತ್ರ! ಮುಂದೆಂದಾದರೂ ಕೋವಿಡ್ ಕಾಲದಲ್ಲಿ ನಡೆದ ಹಗರಣಗಳ ಲೆಕ್ಕ ತೆಗೆದರೆ, ಇದೆಂತಹ ಕ್ಷುಲ್ಲಕ ನಾಟಕ ಎಂಬುದು ಬಹಿರಂಗಗೊಳ್ಳಬಹುದು.

ಅಗತ್ಯ ಇರುವಲ್ಲಿ ಕೊಟ್ಟರೆ?: ಕೈಯಲ್ಲಿ ಧಂಡಿಯಾಗಿ ಕಾಸಿದ್ದು, ಹೀಗೆ ಸಂಬಳ-ಭತ್ಯೆ ಜಾಸ್ತಿ ಮಾಡಿಕೊಂಡರೆ ಅದಕ್ಕೆ ಆಕ್ಷೇಪ ಹೇಳುವುದು ಕಷ್ಟ. ಆದರೆ ಇದು ಹೊಟ್ಟೆಗೆ ಹಿಟ್ಟಿಲ್ಲದೆ ಇರುವುದು ಗೊತ್ತಿದ್ದೂ, ಕೇವಲ ತಮ್ಮ ಜುಟ್ಟಿಗೆ ಮಲ್ಲಿಗೆ ಏರಿಸಿಕೊಳ್ಳುವ ಕೆಲಸ. ರಾಜ್ಯದ ಹಣಕಾಸು ಜವಾಬ್ದಾರಿಗಳ ಕಾಯ್ದೆಯ ಪ್ರಕಾರ, ರಾಜ್ಯದ ಬಜೆಟ್ ಹಣಕಾಸಿನ ಕೊರತೆ ಶೇ 3ರಷ್ಟನ್ನು ಮೀರುವಂತಿಲ್ಲ. ಆದರೆ 20-21ನೇ ಸಾಲಿನ ಪರಿಷ್ಕೃತ ಹಣಕಾಸು ಕೊರತೆ ಅದನ್ನು ಮೀರಿ, ಶೇ 3.5ರ ಆಸುಪಾಸಿನಲ್ಲಿದೆ. ಸರ್ಕಾರದ ಹಣಕಾಸಿನ ಭಾಧ್ಯತೆಗಳು 2021-22ನೇ ಸಾಲಿಗೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ 26.9ರ ಸಮೀಪ ತಲುಪಿದೆ. ರಾಜ್ಯದ ಸಾಲ 2019-20ರಲ್ಲಿ ₹50,459 ಕೋಟಿಗಳಿದ್ದದ್ದು 2020-21ನೇ ಸಾಲಿಗೆ ₹70,672 ಕೋಟಿಗಳಿಗೆ ಏರಿದ್ದು, ಶೇ 33ರಷ್ಟು ಹೆಚ್ಚಳ ಕಂಡಿದೆ.

ಒಂದು ರಾಜ್ಯ ಸರ್ಕಾರದ ಸಾಲದ ಮರುಪಾವತಿ ಪ್ರಮಾಣವು ಆ ರಾಜ್ಯದ ಆದಾಯದ ಶೇ 10ರಷ್ಟನ್ನು ಮೀರದಿರುವುದು ಆರೋಗ್ಯಕರ ಸ್ಥಿತಿ ಎಂದು ರಿಸರ್ವ್ ಬ್ಯಾಂಕ್ ಹೇಳಿದ್ದರೆ, ಕರ್ನಾಟಕದ 21-22ನೇ ಸಾಲಿನ ಬಡ್ಡಿ ಪಾವತಿಯು ರಾಜ್ಯ ಸರ್ಕಾರದ ಆದಾಯದ ಶೇ 16ರಷ್ಟಾಗಿದೆ ಎಂದು ರಾಜ್ಯಗಳ ಹಣಕಾಸು ಸ್ಥಿತಿಯ ಬಗ್ಗೆ ಅಧ್ಯಯನ ನಡೆಸಿದ ಪಿಆರ್‌ಎಸ್ ಕಳೆದ ವರ್ಷದ ಅಂತ್ಯದಲ್ಲಿ ವಿಶ್ಲೇಷಿಸಿದೆ.

ಇದಕ್ಕಿಂತ ಆತಂಕಕಾರಿ ಎಂದರೆ, ಸರ್ಕಾರಿ ಸೊತ್ತುಗಳ ಖಾಸಗೀಕರಣದ ಮೂಲಕ ಬಂದ ಹಣವೂ ಇಂತಹ ಗುಂಡಿ ಮುಚ್ಚಲು ಬಳಕೆ ಆಗುತ್ತಿರುವುದು. 2021-22ನೇ ಸಾಲಿಗೆ, ಕೋವಿಡ್ ಆತಂಕದ ನಿರ್ವಹಣೆಗೆ ಸಂಪನ್ಮೂಲ ಕ್ರೋಡೀಕರಿಸಲು ಕರ್ನಾಟಕದಲ್ಲಿ ಸರ್ಕಾರಿ ಭೂಮಿಗಳ ಖಾಸಗೀಕರಣದಿಂದ (ಮಾರಾಟ ಅಥವಾ ದೀರ್ಘಕಾಲಿಕ ಗುತ್ತಿಗೆ) ₹36 ಕೋಟಿಗಳನ್ನು ಸ್ವೀಕರಿಸಲಾಗಿದೆ (ಆಧಾರ: ಪಿಆರ್‌ಎಸ್ ವಿಶ್ಲೇಷಣೆ). ಇವೆಲ್ಲವೂ ಬೊಟ್ಟುಮಾಡುತ್ತಿರುವುದು ರಾಜ್ಯದ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ ಎಂಬುದರ ಕಡೆಗೇ.

ಕೋವಿಡ್ ಕಾಲದಲ್ಲಿ ಜನಸಾಮಾನ್ಯರ ಹಸಿವು ತಣಿಸಿದ್ದ ನರೇಗಾ ಯೋಜನೆಯಡಿ ಜನರಿಗೆ ಕೂಲಿ ನೀಡಲು ವಿಳಂಬ ಆಗುತ್ತಿದೆ, ಕೋವಿಡ್ ಕರ್ತವ್ಯದಲ್ಲಿರುವ ಹಲವು ರಾಜ್ಯ ಸರ್ಕಾರಿ ಸಿಬ್ಬಂದಿಗಳ ವೇತನ, ಭತ್ಯೆಗಳು ವಿಳಂಬವಾಗುತ್ತಿರುವ ಬಗ್ಗೆ ವರದಿಗಳು ಕಾಣಿಸಿಕೊಳ್ಳುತ್ತಿವೆ. ಅಗತ್ಯ ಯೋಜನೆಗಳು ಮತ್ತು ಕಾರ್ಯಕ್ರಮಗಳಿಗೆ ಹಣಕಾಸಿನ ಹೊಂದಿಕೆಯಲ್ಲಿ ವಿಳಂಬ ಆಗುತ್ತಿದೆ. ಇದೆಲ್ಲದರ ಜೊತೆ, ಸರ್ಕಾರದ ಆದಾಯದಲ್ಲಿ ಸತತವಾಗಿ ಇಳಿತ ಕಾಣಿಸಿಕೊಳ್ಳುತ್ತಿದೆ. ಕೋವಿಡ್ ಬಳಿಕ ಸರ್ಕಾರದ ವರಮಾನ ಮತ್ತಷ್ಟು ಕುಸಿದಿದೆ. ಹೀಗೆ ಎಲ್ಲರೂ ಕೈ-ಬಾಯಿ ನೋಡುವ ಸನ್ನಿವೇಶ ಎದುರಿರುವಾಗ ಒಂದು ಶಾಸಕಾಂಗ ವ್ಯವಸ್ಥೆ, ತನ್ನನ್ನು ಯಾವುದೇ ಚರ್ಚೆಯ ನಿಕಷಕ್ಕೆ ಒಡ್ಡಿಕೊಳ್ಳದೆ ತನ್ನ ಸಂಬಳವನ್ನು ಹೆಚ್ಚಿಸಿಕೊಳ್ಳುವುದು ತೀರಾ ಅನೈತಿಕವೆನ್ನಿಸುತ್ತದೆ.

ಲೇಖಕ: ಸಾಮಾಜಿಕ ವಿಶ್ಲೇಷಕ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 55

ಬ್ರಹ್ಮ ವಿಷ್ಣು ರುದ್ರರೇ ಹಣೆಪಟ್ಟೆಗಳು

ಈಗ ಸೂತಮುನಿ ಭಸ್ಮಮಾಡುವ ವಿಧಾನವನ್ನು ತಿಳಿಸುತ್ತಾನೆ. 'ಅಘೋರೇಭ್ಯೋ' ಎಂಬ ಶಿವಮಂತ್ರದಿಂದ ಬಿಲ್ವವೃಕ್ಷದ ಕಾಷ್ಠವನ್ನು ಸುಡಬೇಕು. ಅದರಿಂದ ಹೊಮ್ಮುವ ಅಗ್ನಿಗೆ 'ಶಿವಾಗ್ನಿ' ಎಂದು ಹೆಸರು. ಅದರಿಂದಾದ ಭಸ್ಮವು ಶಿವಾಗ್ನಿ ಭಸ್ಮವೆನಿಸುವುದು. ಹಸುವಿನ ಸಗಣಿ, ಶಮೀ, ಅಶ್ವತ್ಥ, ಮುತ್ತಗ, ಆಲ, ಆರಗ್ವಧ, ಬಿಲ್ವಗಳ ಕಾಷ್ಠವನ್ನು ಶಿವಾಗ್ನಿಯಿಂದ ಸುಡಬೇಕು. ಈ ಭಸ್ಮವೇ 'ಶಿವಾಗ್ನಿಜಭಸ್ಮ'. ದರ್ಭೆಯಿಂದ ಹೊತ್ತಿಸಿದ ಅಗ್ನಿಯಲ್ಲಿ ಸೌದೆಗಳನ್ನು 'ಅಘೋರೇಭ್ಯೋ' ಎಂಬ ಶಿವಮಂತ್ರವನ್ನುಚ್ಚರಿಸಿ ಭಸ್ಮಮಾಡಬೇಕು. ಅದನ್ನು ಚೆನ್ನಾಗಿ ಬಟ್ಟೆಯಿಂದ ಶೋಧಿಸಿ ಹೊಸ ಮಡಕೆಯಲ್ಲಿರಿಸಬೇಕು.

ಭಸ್ಮವೆಂದರೆ ದೀಪ್ತಿ(ಪ್ರಕಾಶ)ವನ್ನುಂಟುಮಾಡುವ, ಜ್ಞಾನವನ್ನುಂಟು ಮಾಡುವ, ಪೂಜಿಸಲರ್ಹವಾದುದು ಎಂದರ್ಥ ಎಂದು ಈಶ್ವರನು ಹೇಳಿರುವನು. ಲೋಕದಲ್ಲಿ ರಾಜನು ತನ್ನ ದೇಶದಲ್ಲಿ ಪ್ರಜೆಗಳಿಂದ ಸಾರವಾದ ಕಂದಾಯವನ್ನು ತೆಗೆದುಕೊಳ್ಳುವಂತೆ, ಮನುಷ್ಯರು ಸಸ್ಯ-ಕಬ್ಬು ಮುಂತಾದುವುಗಳಿಂದ ಸಾರವನ್ನು ತೆಗೆದುಕೊಳ್ಳುವಂತೆ, ಜಠರಾಗ್ನಿಯು ಪಚನಮಾಡಿ ದೇಹವನ್ನು ಪೋಷಿಸಿದಂತೆ, ಪರಮೇಶ್ವರನೂ ಪ್ರಳಯಕಾಲ ದಲ್ಲಿ ಪ್ರಪಂಚವನ್ನು ಸುಟ್ಟು ಭಸ್ಮಸಾರವನ್ನು ಸ್ವೀಕರಿಸುತ್ತಾನೆ. ಹೀಗೆ ತಾನು ಸೃಷ್ಟಿಸಿದ ಜಗತ್ತನ್ನು ತನ್ನೊಳಗೆ ಆವಹಿಸಿಕೊಳ್ಳುವ ಮೂಲಕ ಶಿವ ಬ್ರಹ್ಮಾಂಡರೂಪಿಯಾಗಿದ್ದಾನೆ. ಆಕಾಶದ ಸಾರದಿಂದ ಅವನ ಕೇಶವಾದರೆ, ವಾಯುವಿನ ಸಾರದಿಂದ ಮುಖವಾಯಿತು. ಅಗ್ನಿಯ ಸಾರದಿಂದ ಹೃದಯ, ಜಲಸಾರದಿಂದ ಕಟ, ಭೂಮಿ ಸಾರಸ್ವರೂಪದಿಂದ ಮೊಳಕಾಲು ಆಯಿತು. ಬ್ರಹ್ಮ, ವಿಷ್ಣು, ರುದ್ರರ ಸಾರವೇ ತ್ರಿಪುಂಡ್ರ; ಹಣೆಯಲ್ಲಿನ ಮೂರು ಭಸ್ಮದ ಪಟ್ಟೆಗಳು. ತಿಲಕದ ರೂಪದಿಂದ ಲಲಾಟಮಧ್ಯದಲ್ಲಿ ಮಹೇಶ್ವರನಿರುವನು.

ಶಿವನನ್ನು ವಶೀಕರಣಮಾಡಿಕೊಳ್ಳುವವರು ಯಾರೂ ಇಲ್ಲ. ಆದುದರಿಂದಲೇ ಅವನಿಗೆ ಶಿವ(ವಶೀ)ನೆಂದು ಹೆಸರು. ಶಿವಶಬ್ದದ ಮೊದಲ ಅಕ್ಷರ 'ಶ' ಎಂದರೆ ಸುಖ-ಆನಂದ ಎಂದರ್ಥ. 'ಈ' ಎಂದರೆ ಪುರುಷ ಎಂದರ್ಥ. 'ವ'ಕಾರಕ್ಕೆ ಶಕ್ತಿ ಮತ್ತು 'ಅ'ಕಾರಕ್ಕೆ ಅಮೃತ ಎಂದರ್ಥ. ಅಂದರೆ 'ಶಿವ' ಎಂಬ ಶಬ್ದವು ಆನಂದರೂಪ ಮತ್ತು ಸುಖಸ್ವರೂಪವಾದ ಪುರುಷ ಪರಮಾತ್ಮ, ಆದುದರಿಂದ ತಾನೂ ಆ ಶಿವಸ್ವರೂಪವೆಂದು (ಸೋಹಂಭಾವೇನ) ಶಿವನನ್ನು ಪೂಜಿಸಬೇಕು. ಪೂಜೆಯ ಕಾಲದಲ್ಲಿ ಭಸ್ಮವನ್ನು ನೀರಿನಿಂದ ಕಲಸಿ ಹಚ್ಚಬೇಕು. ಮಿಕ್ಕಕಾಲದಲ್ಲಿ ಹಾಗೆಯೇ ಹಚ್ಚಬೇಕು. ಹಗಲಲ್ಲಿಯಾಗಲಿ, ರಾತ್ರಿಯಾಗಲಿ, ಸ್ತ್ರೀ-ಪುರುಷರು ಪೂಜೆಯ ಕಾಲದಲ್ಲಿ ನೀರಿನಿಂದ ಭಸ್ಮವನ್ನು ಕಲಸಿ, ಮೂರು ಪುಂಡ್ರಗಳಾಗಿಯೇ ಹಚ್ಚಿಕೊಳ್ಳಬೇಕು. ಭಸ್ಮವನ್ನು ನೀರಿನಿಂದ ಕಲಸಿ ಹಣೆ ಮುಂತಾದ ಕಡೆ ಮೂರು ಪಟ್ಟೆಗಳನ್ನು ಹಚ್ಚಿಕೊಂಡು ಪೂಜೆಮಾಡಿದರೆ, ಶಿವಪೂಜೆಯ ಸಂಪೂರ್ಣಫಲವು ಲಭಿಸುವುದು. ಶಿವಪಂಚಾಕ್ಷರಮಂತ್ರದಿಂದ ಭಸ್ಮವನ್ನು ಧರಿಸಿದವರು 'ಶಿವಾಶ್ರಮಿ' ಎಂಬ ಹೆಸರು ಪಡೆವರು. ಪೂಜೆ, ಜಪ ಮೊದಲಾದ ಶಿವನ ವ್ರತಾನುಷ್ಠಾನದಲ್ಲಿ ನಿರತನಾದವರು ಮೃತಾಶೌಚ ಮತ್ತು ಜಾತಾಶೌಚಗಳಲ್ಲಿ ಹಣೆಯ ಮೇಲೆ ಶುಭ್ರವಾದ ಭಸ್ಮವನ್ನೂ, ಮಣ್ಣಿನ ತಿಲಕವನ್ನೂ ಇಡಬೇಕು.

ಶಿವಸ್ವರೂಪನಾದ ಗುರುವು ಶ್ರದ್ಧಾಭಕ್ತಿಯಿಂದಿರುವ ಶಿಷ್ಯರಿಗೆ ಸಾತ್ವಿಕ, ರಾಜಸ, ತಾಮಸಗುಣಗಳನ್ನು ಹೋಗಲಾಡಿಸಿ ಶಿವಸ್ವರೂಪವನ್ನು ಬೋಧಿಸುತ್ತಾನೆ. ಆದುದರಿಂದ ಗುರುವಿನ ಶರೀರವೇ ಗುರುಲಿಂಗವು. ಗುರುವಿನ ಸೇವೆಯೇ ಗುರುಲಿಂಗದ ಪೂಜೆಯು. ಗುರುಪೂಜೆಯೇ ಪರಮಾತ್ಮನಾದ ಶಿವನ ಪೂಜೆಯು. ಗುರು ಹೇಳಿದುದನ್ನು ಶರೀರ, ಮನಸ್ಸು, ವಾಕ್ಕು ಎಂಬ ತ್ರಿಕರಣಗಳಿಂದ ಶುದ್ಧನಾಗಿ ನಿರ್ವಹಿಸುವವನೆ ತ್ರಿಕರಣಶುದ್ಧನಾದ ಶಿಷ್ಯ. ಗುರುವಿನ ಉಚ್ಛಿಷ್ಟವೂ ಶಿವನ ಶೇಷವಾಗಿದೆ. ಶಿವಭಕ್ತರಾದ ಶಿಷ್ಯರು ಗುರು ತಿಂದುಳಿದ ಅನ್ನ-ನೀರನ್ನು ಭಕ್ತಿಯಿಂದ ಸ್ವೀಕರಿಸಬೇಕು.

ಗುರುವಿಗೆ ಶಿಷ್ಯತ್ವವುಳ್ಳವನಾದವನು ಪುತ್ರ ಸದೃಶನಾಗಿರುತ್ತಾನೆ. ಅದು ಹೇಗೆಂದರೆ, ತಂದೆಯಂತೆ ಗುರುವೂ ನಾಲಿಗೆ ಎಂಬ ಲಿಂಗದಿಂದ ಮಂತ್ರವೆಂಬ ರೇತಸ್ಸನ್ನು ಶಿಷ್ಯನ ಕಿವಿ ಎಂಬ ಯೋನಿಯಲ್ಲಿ ನಿಷೇಕಿಸಿರುತ್ತಾನೆ. ಜನಕನಾದ ತಂದೆಯು ಪುತ್ರನನ್ನು ಸಂಸಾರ ಬಂಧದಲ್ಲಿರಿಸಿದರೆ, ಬೋಧಕನಾದ ಗುರು ಜ್ಞಾನ ತುಂಬಿ ಸಂಸಾರಬಂಧದಿಂದ ಮುಕ್ತನನ್ನಾಗಿಸುತ್ತಾನೆ. ಅಂದರೆ ಶಿಷ್ಯನ ಜೀವನ ಉದ್ಧಾರ ಮಾಡುತ್ತಾನೆ. ಇದಕ್ಕಾಗಿ ಶಿಷ್ಯರು ಜ್ಞಾನಗುರುವನ್ನಾಶ್ರಯಿಸಿ ತಮ್ಮ ಅಜ್ಞಾನವನ್ನು ಕಳೆದುಕೊಳ್ಳಬೇಕು. ಅಜ್ಞಾನವನ್ನು ಕಳೆಯಲು ವಿಶೇಷವಾಗಿ ತಿಳಿದಿರುವ ಸಮರ್ಥನಾದ ಆತ್ಮಜ್ಞಾನಗುರುವನ್ನೇ ಆರಿಸಿಕೊಳ್ಳಬೇಕು ಎನ್ನುತ್ತಾನೆ ಸೂತಮುನಿ.

ಶಾಸಕರ ಸಮಸ್ಯೆ ಹೇಳಿದರೆ ನಂಬುವವರಿಲ್ಲ

• ಎನ್. ರವಿಕುಮಾರ್

ಶಾಸಕರ ವೇತನ ಮತ್ತು ಭತ್ಯೆಯನ್ನು ಹೆಚ್ಚಿಸುವ ಸರ್ಕಾರದ ನಿರ್ಧಾರ ಹಾಗೂ ಮಸೂದೆಗೆ ಅನುಮೋದನೆ ಕೊಟ್ಟಿರುವ ವಿಧಾನಮಂಡಲದ ಉಭಯಸದನಗಳ ತೀರ್ಮಾನದ ಕುರಿತಾಗಿ ಸಾರ್ವಜನಿಕ ವಲಯದಲ್ಲಿ ಚರ್ಚೆಗಳು ಶುರುವಾಗಿವೆ. 'ಶಾಸಕರಿಗೇನು ಕಡಿಮೆ; ಬೇಕಾದಷ್ಟು ಗಂಟು ಸಿಗುತ್ತದೆ' ಎಂಬ ತಪ್ಪು ಅಭಿಪ್ರಾಯವೂ ಇದರ ಹಿಂದೆ ಇದ್ದೀತು. ವಾಸ್ತವ ಮಾತ್ರ ಹಾಗಿಲ್ಲ. ಬೆರಳೆಣಿಕೆಯ ಮಂದಿಯ 'ಶ್ರೀಮಂತಿಕೆ'ಯನ್ನು ಕಂಡು, ಎಲ್ಲ ಜನಪ್ರತಿನಿಧಿಗಳನ್ನೂ ಅದೇ ತಕ್ಕಡಿಯಲ್ಲಿ ತೂಗುವುದು ಸಮಂಜಸವೂ ಅಲ್ಲ, ನ್ಯಾಯಯುತವೂ ಅಲ್ಲ.

ಕೋವಿಡ್ ಸಂಕಷ್ಟ ಕಾಲದಲ್ಲಿ ಏರಿಕೆ ಬೇಕಿತ್ತೇ ಎಂಬ ಮತ್ತೊಂದು ಆಯಾಮದ ಚರ್ಚೆಯೂ ಇದೆ. ಕೋವಿಡ್‌ನಿಂದ ಜೀವನವೇ ನಲುಗಿ, ಬಸವಳಿದು ಹೋದ ಜನರ ಬಾಳಿನ ಗೋಳು ಶಾಸಕರಿಗೆ ಅರ್ಥವಾಗದ್ದಲ್ಲ. ಸದನಕ್ಕೆ ಬಂದಾಗಷ್ಟೇ ಶಾಸನ ರೂಪಿಸುವ, ಜನರ ಕಷ್ಟಗಳಿಗೆ ಧ್ವನಿಯಾಗುವ ಅಧಿಕಾರ ಹೊಂದಿರುವ ಶಾಸಕರು ಕೂಡ ಸಮಾಜದಲ್ಲಿ ಮಾಮೂಲು ಮನುಷ್ಯರು. ಕೋವಿಡ್ ಸಂಕಷ್ಟಕ್ಕೆ ಸಿಕ್ಕಿಬಿದ್ದು ತೊಂದರೆ ಅನುಭವಿಸಿದವರಲ್ಲಿ ಶಾಸಕರೂ ಇದ್ದಾರೆ ಎಂಬುದನ್ನು ಮರೆಯಬಾರದು.

ಮೂಳೆ-ಮಾಂಸಗಳಿಂದ ರೂಪುಗೊಂಡಿರುವ ಮನುಷ್ಯರಿಗೆ ಇರುವ ಸಂಕಟಗಳು, ಯಾತನೆಗಳು, ಗೋಳುಗಳು ಶಾಸಕರಿಗೂ ಇವೆ. ಅವರಿಗೂ ವೈಯಕ್ತಿಕ ಕುಟುಂಬದ ಜತೆಗೆ, ಸಮಾಜವೆಂಬ, ಮತ ಹಾಕಿ ಗೆಲ್ಲಿಸಿದ ಜಾತಿ-ಭೇದವಿಲ್ಲದ- ಧರ್ಮದ ಹಂಗಿಲ್ಲದ ಬೃಹತ್ ಕುಟುಂಬವೂ ಇವೆ. ಅವರ ನೋವುಗಳಿಗೆ ಧ್ವನಿಯಾಗಬೇಕಾದ, ಕಷ್ಟಕಾಲದಲ್ಲಿ ನೆರವಿಗೆ ನಿಲ್ಲಬೇಕಾದ ಅನಿವಾರ್ಯವೂ ಶಾಸಕರ ಹೆಗಲಿನಲ್ಲಿ ಇರುತ್ತದೆ. ನಿತ್ಯದ ವೆಚ್ಚಗಳಿಗೆ ವೇತನ-ಭತ್ಯೆಯನ್ನೇ ನೆಚ್ಚಿಕೊಂಡ ಶಾಸಕರ ಸಂಖ್ಯೆಯೂ ದೊಡ್ಡದಿದೆ. ₹2.37 ಲಕ್ಷ ಕೋಟಿ ಆಯವ್ಯಯ ಹೊಂದಿರುವ ಕರ್ನಾಟಕದಂತಹ ದೊಡ್ಡ ರಾಜ್ಯದಲ್ಲಿ ವೇತನ ಹೆಚ್ಚಳದಿಂದ ಆಗುವ ಹೆಚ್ಚುವರಿ ಹೊರೆ ವರ್ಷಕ್ಕೆ ₹92.40 ಕೋಟಿಯಷ್ಟಿದೆ. ಬೃಹತ್ ಮೊತ್ತದ ಬಜೆಟ್‌ನಲ್ಲಿ ಇದೊಂದು ಮರಳಿನ ಕಣವಷ್ಟೇ ಎಂದರೆ ಅದೇನೂ ಅತಿಶಯೋಕ್ತಿಯಾಗಲಾರದು.

ಈ ಹಿನ್ನೆಲೆಯನ್ನಿಟ್ಟುಕೊಂಡು ಪರ್ಯಾಲೋಚಿಸಿದರೆ, ಕರ್ನಾಟಕ ವಿಧಾನಮಂಡಲದವರ ಸಂಬಳಗಳು, ನಿವೃತ್ತಿ ವೇತನ ಮತ್ತು ಭತ್ಯೆಗಳ ಮಸೂದೆ-2022 ಕ್ಕೆ ಅನುಮೋದನೆ ನೀಡಿರುವುದು ಅಪರಾಧವೇನಲ್ಲ. ವೇತನವನ್ನೇ ನೆಚ್ಚಿಕೊಂಡ ಶಾಸಕರ ಪರವಾಗಿ ಸರ್ಕಾರಕ್ಕೆ, ಸದನಕ್ಕೆ ಧನ್ಯವಾದಗಳನ್ನು ಹೇಳಲೇಬೇಕು.

ಉಭಯ ಸದನಗಳ ಸದಸ್ಯರಿಗೆ ತಮ್ಮದೇ ಆದ ಖರ್ಚು-ವೆಚ್ಚ ಇದ್ದೇ ಇರುತ್ತದೆ. ಶಾಸಕರೆಂದರೆ ಅವರಿಗೆಲ್ಲ ಸಂಬಳ ಜಾಸ್ತಿ, ಸಾಕಷ್ಟು ದುಡ್ಡು-ಆಸ್ತಿ ಇರುತ್ತದೆ ಎಂಬ ಭಾವನೆಯನ್ನು ಬಿತ್ತಲಾಗಿದೆ. ಜನರಿಗೂ ಇದೇ ಅಭಿಪ್ರಾಯ ಇದ್ದೀತು.

ಸಾರ್ವಜನಿಕ ಜೀವನದಲ್ಲಿ ನಮ್ಮ ಶಾಸಕರುಗಳಿಗಿಂತಲೂ ಹೆಚ್ಚಿನ ಸಂಬಳ ಪಡೆಯುವ ದೊಡ್ಡ ಅಧಿಕಾರಿ ವರ್ಗವಿದೆ. ನಾವು ಪ್ರಶ್ನೆ ಮಾಡುವುದಿಲ್ಲ. ಗ್ರಾಮ ಪಂಚಾಯಿತಿ ಸದಸ್ಯರ ಗೌರವಧನ ಹೆಚ್ಚಳಗೊಳಿಸಿದ್ದೇವೆ. ಸರ್ಕಾರಿ ನೌಕರರ ವೇತನ ಮತ್ತು ಭತ್ಯೆ ಹೆಚ್ಚಳಗೊಳಿಸಿದ್ದೇವೆ. ಶಾಸಕರು ಅನ್ನುವುದು ಸೇವೆ ಮಾಡುವ ಜವಾಬ್ದಾರಿಯುತ ಸ್ಥಾನವಾಗಿದೆ ವಿನಃ ಲಾಭದಾಯಕ ಹುದ್ದೆ ಅಲ್ಲ

ಆದರೆ ನಿಜವಾಗಿಯೂ ಸರ್ಕಾರ ನೀಡುವ ವೇತನ, ಗೌರವಧನ, ಇತರೆ ಭತ್ಯೆಗಳು ನಮ್ಮೆಲ್ಲ ಶಾಸಕರಿಗೆ ಸಾಕಾಗುವುದಿಲ್ಲ.

ಉದಾಹರಣೆಗೆ ಮನೆ ಬಾಡಿಗೆ ಸೇರಿದಂತೆ ಅನೇಕ ಖರ್ಚುಗಳು ಇವೆ. ಚುನಾವಣೆಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಗ್ರಾಮ ಪಂಚಾಯಿತಿ, ಪುರಸಭೆ, ಪಟ್ಟಣ ಪಂಚಾಯಿತಿ, ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ, ಲೋಕಸಭೆಯ ಜತೆಗೆ ಇತರೆ ಸಂಘ-ಸಂಸ್ಥೆಗಳ, ರೋಟರಿ, ಕ್ಲಬ್ ಚುನಾವಣೆಗಳ ನಿರ್ವಹಣೆಯ ಹೊಣೆಯೂ ಶಾಸಕರ ಹೆಗಲಿಗೇರುವುದು ಉಂಟು. ರಾಜಕೀಯದಲ್ಲಿ ಉಳಿಯಬೇಕಾದರೆ ಈ ಚುನಾವಣೆಗಳ ಮೇಲೆ ನಿಗಾ ಇರಿಸಿ, ತಮ್ಮ ಹಿತೈಷಿಗಳ ಹಿತ ಕಾಪಾಡುವುದು, ಪಕ್ಷದ ಸಂಘಟನೆಯನ್ನು ಬಲಪಡಿಸುವ ಕಾಯಕದಲ್ಲೂ ನಿರತರಾಗಬೇಕಾಗುತ್ತದೆ. ನಾವು ನಂಬಿಕೊಂಡು ಪಾಲಿಸುತ್ತಿರುವ ಸಂಸದೀಯ ಪ್ರಜಾಸತ್ತೆಯಲ್ಲಿ ಚುನಾವಣೆಗಳಲ್ಲಿ ಭಾಗೀದಾರರಾಗುವುದು ಅನಿವಾರ್ಯ ಕೂಡ.

ಇದರ ಜತೆಗೇ, ಪ್ರತಿವರ್ಷ ಕ್ಷೇತ್ರದಾದ್ಯಂತ ಗಣಪತಿ ಪ್ರತಿಷ್ಠಾಪನೆಗೆ, ಅನೇಕ ಉತ್ಸವಗಳಿಗೆ, ದೇವರ ಜಾತ್ರೆಗಳು, ರಾಜ್ಯೋತ್ಸವ, ವಿವಿಧ ಸಮುದಾಯ, ಧರ್ಮೀಯರ ಸಾಂಸ್ಕೃತಿಕ ಆಚರಣೆಗಳು, ಎಲ್ಲ ಹಬ್ಬಗಳಿಗೆ ದೇಣಿಗೆ ನೀಡುವ ಖರ್ಚನ್ನೂ ಭರಿಸಬೇಕಾಗುತ್ತದೆ. ಅಲ್ಲದೇ ಸಂಘ-ಸಂಸ್ಥೆಗಳು ಆಯೋಜಿಸುವ ಕ್ರೀಡಾಕೂಟಗಳಿಗೆ ಪ್ರಾಯೋಜಕತ್ವ ನೀಡುವ ಖರ್ಚಿದೆ. ಇವೆಲ್ಲವನ್ನೂ ನಿಭಾಯಿಸಿಕೊಂಡು, ಜನರ ಪ್ರೀತಿಯನ್ನೂ ಉಳಿಸಿಕೊಂಡು, ರಾಜಕಾರಣದಲ್ಲೂ ಮುಂದುವರಿಯಬೇಕಾದರೆ ವೇತನವನ್ನೇ ನಂಬಿಕೊಂಡವರಿಗೆ ಈಗ ನೀಡುತ್ತಿರುವ ವೇತನ ಹಾಸಲು-ಹೊದಿಯಲು ಕೂಡ ಸಾಕಾಗದು.

ನಮ್ಮ ಕ್ಷೇತ್ರದ ರಾಜಕೀಯ ಸಮಾರಂಭ, ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳ ಖರ್ಚು, ಅನೇಕ ಸಾಮಾಜಿಕ ಹೋರಾಟಗಳು, ಕುಟುಂಬದ ವೈದ್ಯಕೀಯ ಚಿಕಿತ್ಸೆ, ನಮ್ಮ ಕಚೇರಿ ನಿರ್ವಹಣೆಗೆ, ರಾಜ್ಯದಾದ್ಯಂತ ಪಕ್ಷದ ಪ್ರವಾಸಗಳು ಹಾಗೂ ಕ್ಷೇತ್ರದ ಸರ್ಕಾರಿ ಕಾರ್ಯಕ್ರಮಗಳ ಪ್ರವಾಸಗಳನ್ನು ಕೈಗೊಳ್ಳುವುದು, ಪ್ರವಾಸದ ಸಂದರ್ಭದಲ್ಲಿ ಹೊಟೇಲ್‌ಗಳಲ್ಲಿ ವಾಸ್ತವ್ಯ ಹೂಡುವುದು ಸೇರಿದಂತೆ ಇತರೆ ಖರ್ಚುಗಳನ್ನು ಯಾರಿಗೂ ಹೊರೆ ಮಾಡಲಾಗದು. ಇವೆಲ್ಲವನ್ನೂ ನಾವೇ ಭರಿಸುತ್ತೇವೆ.

ಅಲ್ಲದೇ ಕ್ಷೇತ್ರದ ಜನರ ಸಾವು-ನೋವುಗಳಿಗೆ ಭೇಟಿ, ಸಾಂತ್ವನ, ಜನರ ಮದುವೆ ಸಮಾರಂಭಗಳು, ಧಾರ್ಮಿಕ ಕಾರ್ಯಕ್ರಮ, ಜಾತ್ರೆಗಳಲ್ಲಿ ಭಾಗವಹಿಸುವಿಕೆ, ಜನರ ಕಷ್ಟಕ್ಕೆ ಆರ್ಥಿಕ ಸಹಾಯ ಹೀಗೆ ಅನೇಕ ರೀತಿಯಲ್ಲಿ ಖರ್ಚು-ವೆಚ್ಚಗಳಿರುತ್ತದೆ.

ಅಲ್ಲದೇ ಒಂದೆಡೆ ಕೊರೊನಾ ಸೋಂಕಿನ ಹಾವಳಿ, ಬೆಲೆ ಏರಿಕೆ ಮತ್ತು ತೈಲ ಬೆಲೆ ಏರಿಕೆಯು ತಂದಿಟ್ಟ ಅನೇಕ ಸಮಸ್ಯೆಗಳು ಶಾಸಕರಾದ ನಮಗೂ ಇವೆ. ಆದರೆ ನಾವು ಏನೂ ಹೇಳುವ ಹಾಗಿಲ್ಲ, ಹೇಳಿದರೂ ಅದನ್ನು ನಂಬುವ ಸ್ಥಿತಿ ಜನರಿಗಿಲ್ಲ.

ಸಾರ್ವಜನಿಕ ಜೀವನದಲ್ಲಿ ನಮ್ಮ ಶಾಸಕರುಗಳಿಗಿಂತಲೂ ಹೆಚ್ಚಿನ ಸಂಬಳ ಪಡೆಯುವ ದೊಡ್ಡ ಅಧಿಕಾರಿ ವರ್ಗವಿದೆ. ನಾವು ಪ್ರಶ್ನೆ ಮಾಡುವುದಿಲ್ಲ. ಗ್ರಾಮ ಪಂಚಾಯಿತಿ ಸದಸ್ಯರ ಗೌರವಧನ ಹೆಚ್ಚಳಗೊಳಿಸಿದ್ದೇವೆ. ಸರ್ಕಾರಿ ನೌಕರರ ವೇತನ ಮತ್ತು ಭತ್ಯೆ ಹೆಚ್ಚಳಗೊಳಿಸಿದ್ದೇವೆ. ಶಾಸಕರು ಅನ್ನುವುದು ಸೇವೆ ಮಾಡುವ ಜವಾಬ್ದಾರಿಯುತ ಸ್ಥಾನವಾಗಿದೆ ವಿನಃ ಲಾಭದಾಯಕ ಹುದ್ದೆ ಅಲ್ಲ.

ಇಂದಿನ ದಿನಮಾನಗಳಲ್ಲಿ ಚುನಾವಣೆ ಹಾಗೂ ಸಾರ್ವಜನಿಕ ವೆಚ್ಚವು ವಿಪರೀತವಿದೆ. ಹೀಗಾಗಿ ನಮ್ಮ ಸರ್ಕಾರ ಉಭಯ ಮಂಡಲಗಳಲ್ಲಿ ಚರ್ಚೆ ಮಾಡದೇ ಈ ವಿಧೇಯಕ ಅಂಗೀಕಾರ ಪಡೆದಿದೆ. ಈ ಹಿಂದೆ ಕೋವಿಡ್ ಸಂದರ್ಭದಲ್ಲೂ ನಮ್ಮ ಶಾಸಕರುಗಳ ವೇತನ ಶೇ 25ರಷ್ಟು ಕಡಿತಗೊಳಿಸಿತ್ತು ಹಾಗೂ ಅನುದಾನವನ್ನು ಕೂಡ ಕೋವಿಡ್ ನಿರ್ವಹಣೆ ಕೆಲಸಕ್ಕೆ ಬಳಕೆಗೆ ಅವಕಾಶ ನೀಡಿದ್ದೆವು. ವೇತನವನ್ನು ಹೆಚ್ಚಿಸಿರುವ ಸರ್ಕಾರದ ನಡೆಯನ್ನು ಸಾರ್ವಜನಿಕರು ಅನ್ಯಥಾ ಭಾವಿಸಬಾರದು. ನಮ್ಮ ಕಷ್ಟವನ್ನೂ ಅರಿಯಬೇಕೆಂದು ವಿನಮ್ರವಾಗಿ ಕೇಳಿಕೊಳ್ಳುವೆ.

ಲೇಖಕ: ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ

ಪದಬಂಧ 4881

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಬೇರೆಡೆಗೆ ಹೋಗದಂತೆ ತಡೆಯುವಿಕೆ (5)
4.ವಾಕ್ಯದೊಳಗಿರುವ ಮುಪ್ಪು! (3)
5.ಅತ್ಯಂತ ಶ್ರೇಷ್ಠವಾದದ್ದನ್ನು ಹೀಗೆನ್ನಿ (3)
6.ನೋವಿನ ವಿರುದ್ಧ ಪದ (3)
8.ಹತ್ತಿರದಲ್ಲೇ ಪ್ರತ್ಯಕ್ಷನಾಗಿರುವ ಶಿವ! (2)
9.ಠರಾವು ಮಂಡಿಸುವಾಗಿನ ದಿಗ್ಭ್ರಮೆ! (2)
11.ನೀರಿನಲ್ಲಿ ಹುಟ್ಟಿದುದು (3)
14.ಉಗುರಿನ ತುದಿ (3)
15.ದೈವದಲ್ಲಿ ನಂಬಿಕೆಯುಳ್ಳವನು (3)
16.ನೀರಿನಿಂದಾದ ಅನಿಲ (5)

ಮೇಲಿಂದ ಕೆಳಕ್ಕೆ

1.ಸ್ಥಾನ ಕಳೆದುಕೊಂಡವನು (4)
2.ಬರದಲ್ಲಿ ಜಂಬಗಾರ ಬಂದಿರುವನಲ್ಲಾ! (5)
3.ತೆರ ನೀಡುವವನ ಪರವಾಗಿರುವ ಈ ದಡ್ಡ! (3)
4.ವಿಷ್ಣುವಿನ ಐದನೆಯ ಅವತಾರ (3)
7.ಲೀಲಾಜಾಲವಾಗಿ ನಡೆದ ಏಲಂ! (3)
8.ಹಿಂದಿಯವನ ಸಾವಿರ ನಡುಮನೆಯಲ್ಲಿದೆಯೇ? (3)
9.ವಿರಾಜಮಾನವಾಗಿರುವ ಚಕ್ರವರ್ತಿ (5)
10.ವಿಚಾರಕ್ಕೆ ಸಂಬಂಧಿಸಿದ್ದು (4)
12.ಜನರ ಹತ್ತಿರವಿರುವ ತಂದೆ (3)
13.ಅಜದ ಹತ್ತಿರವಿರುವ ಅಣ್ಣ ಕಾಣುವನೇ? (3)

4880ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸತ್ಯಾಗ್ರಹಿ 3.ತೊಡಪು 5.ನವಾಬ 7.ಛಳುಕು 8.ವಿಶ್ವಾಸಘಾತ 11.ರುಮಾಲು 12.ನಡುಕ 15.ಗುದಾಮು 16.ಜನ್ಮಾಂತರ

ಮೇಲಿಂದ ಕೆಳಕ್ಕೆ: 1.ಸದನ 2.ಹಿಮ 3.ತೊಡಕು 4.ಪುದುವಟ್ಟು 6.ಬಸವಿ 7.ಛಡಸವಾಲು 9.ತಲ್ಲೀನ 10.ಹುಸಿನಗು 11.ರುಸುಮು 13.ಕಮ್ಮಾರ 14.ಬೀಜ

ಸುಡೊಕು 5267

	7	9			3		8	
				8				9
8	1		2	6		7		
	8			2		1		5
	9	2	8		5			
5				3			2	
9		7	5					6
	5			7		9	4	
	3		6		1		7	2

5266 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಫೆಬ್ರುವರಿ 26, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಕುಂಭ ಮಾಸದ 14 ನೇ ದಿನ ತಿಥಿ: (ಮಾಘ ಕೃಷ್ಣ) ದಶಮಿ ಗಂ. 10-40 ನಕ್ಷತ್ರ: ಮೂಲಾ ಗಂ. 10-32 ಯೋಗ: ಸಿದ್ಧಿ ಗಂ. 20-51, ಕರಣ: ವಿಷ್ಟಿ ಗಂ. 10-40. ರಾಹುಕಾಲ : ಬೆಳಿಗ್ಗೆ 09:00 – 10:30
ಸೂರ್ಯೋದಯ : 06-52 ಸೂರ್ಯಾಸ್ತ : 06-35 ಮುಸ್ಲಿಂ ದಿನಾಂಕ : 24 ರಜಬ್
ದಿನ ವಿಶೇಷ : ವಿಜಯ ಏಕಾದಶಿ(ಸ್ಮಾರ್ತ), ಸ್ವಾಮಿ ದಯಾನಂದಸರಸ್ವತಿಯವರ ಜನ್ಮದಿನ ಅದೃಷ್ಟ ಸಂಖ್ಯೆ: 3, 8

ಮೇಷ: ಧಾರ್ಮಿಕ ಆಚರಣೆಯ ಬಗ್ಗೆ ಆಸಕ್ತಿ ಮೂಡಲಿದೆ. ನೀರಿಗೆ ಸಂಬಂಧಿಸಿದ ಸಮಸ್ಯೆಗಳು ನಿವಾರಣೆಗೊಳ್ಳುವ ಹಂತಕ್ಕೆ ಬರಲಿದೆ. ಶಿಕ್ಷಕ ವೃತ್ತಿಯನ್ನು ನಡೆಸಿ ವಿದ್ಯಾದಾನ ಮಾಡುವವರಿಗೆ ಗೌರವಾದರ ದೊರೆಯಲಿದೆ.

ವೃಷಭ: ಆರ್ಥಿಕ ವಂಚನೆಯಾಗುವ ಲಕ್ಷಣಗಳಿದೆ. ಭೂಮಿ ಅಥವಾ ವಾಹನ ಖರೀದಿಯಲ್ಲಿ ಮೋಸ ಹೋಗುವ ಅದರಲ್ಲೂ ದಾಖಲೆಗಳ ವಿಚಾರದಲ್ಲಿ ವ್ಯತ್ಯಾಸ ಆಗಬಹುದು. ಅಕ್ಕ ತಂಗಿಯರ ಆಸೆ ಈಡೇರಿಸುವ ಪ್ರಯತ್ನ ನಿಮ್ಮದಾಗುವುದು.

ಮಿಥುನ: ಆಟಿಕೆಗಳ ಮಾರಾಟದವರಿಗೆ ಉತ್ತಮ ಮಾರಾಟ ಹಾಗೂ ಲಾಭ ಸಿದ್ಧಿಸುತ್ತದೆ. ಗಾರ್ಮೆಂಟ್ಸ್ ಕೆಲಸಗಾರರಿಗೆ ಬಹಳ ದಿನಗಳ ಬಳಿಕ ವೇತನ ಹೆಚ್ಚುವುದರಿಂದ ಸಂತಸವಿರುವುದು. ಮದುವೆ ಕೆಲಸಗಳಿಂದಾಗಿ ಓಡಾಟ.

ಕರ್ಕಾಟಕ: ಪ್ರಮುಖ ಕೆಲಸಗಳಿಗೆ ಪೂರ್ವತಯಾರಿ ಮಾಡಿಕೊಳ್ಳುವುದು ಅಗತ್ಯ. ಮಡದಿಯ ಆರೋಗ್ಯದಲ್ಲಿ ಕಾಳಜಿ ವಹಿಸಿ. ಪಿತ್ರಾರ್ಜಿತವಾದ ಕೃಷಿ ಪ್ರದೇಶಗಳ ಮಾರಾಟವು ನಿಮ್ಮ ಹಿರಿಯರ ಮನಸ್ಸನ್ನು ನೋಯಿಸಲಿದೆ.

ಸಿಂಹ: ಬುದ್ಧಿಮಟ್ಟ ಸ್ಥಿಮಿತವಿಲ್ಲದೆ ದುರಾಲೋಚನೆಗಳು ಬರಬಹುದು, ತಿಳಿದೂ ತಪ್ಪುಗಳನ್ನು ಮಾಡದಿರಿ. ಕಾರ್ಮಿಕರ ಬೇಜವಾಬ್ದಾರಿತನಕ್ಕೆ ನೀವು ಬಲಿಯಾಗುವ ಸಂಭವ. ಮಾತೃವರ್ಗದವರಲ್ಲಿ ಮಂಗಳಕಾರ್ಯ ಜರುಗಲಿದೆ.

ಕನ್ಯಾ: ಪತ್ನಿಯ ತವರಿನ ಕಡೆಯಿಂದ ಅನಿರೀಕ್ಷಿತವಾಗಿ ಆಸ್ತಿ ಲಭ್ಯವಾಗುವುದು. ಮಗನ ಮುಖ್ಯ ವಿಷಯದಲ್ಲಿ ಪ್ರಗತಿ ಇದ್ದು ಶುಭವಾರ್ತೆ ಕೇಳುವಿರಿ. ಸುಬ್ರಮಣ್ಯ-ಸ್ವಾಮಿ ಪ್ರಾರ್ಥನೆಯಿಂದ ಎಲ್ಲಾ ಕೆಲಸಕಾರ್ಯ ಯಶಸ್ಸು ದೊರೆಯುವುದು.

ತುಲಾ: ಹಿರಿಯರ ಜೊತೆಯಲ್ಲಿ ತೀರ್ಥಯಾತ್ರೆ ಪಾಲ್ಗೊಂಡು ದೇವರ ದರ್ಶನ ಮಾಡುವುದರಿಂದ ಮನಸ್ಸಿಗೆ ನೆಮ್ಮದಿ. ಭೋಗ ವಸ್ತುವಿನ ಖರೀದಿಯ ಅವಕಾಶವು ಈ ದಿನ ನಿಮ್ಮದಾಗಲಿದೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ.

ವೃಶ್ಚಿಕ: ಸ್ನೇಹಿತರ ಸಲಹೆ ಸಹಕಾರದಿಂದ ಪ್ರಾರಂಭಿಸಿದ ವ್ಯವಹಾರದಲ್ಲಿ ಒಳ್ಳೆಯ ಫಲಿತಾಂಶವನ್ನು ಎದುರು ನೋಡಬಹುದು. ರಬ್ಬರ್, ಪ್ಲಾಸ್ಟಿಕ್ ವಸ್ತುಗಳ ತಯಾರಿಕೆಯ ವ್ಯವಹಾರದಲ್ಲಿರುವವರಿಗೆ ಏಳಿಗೆ ಕಂಡು ನೆಮ್ಮದಿ.

ಧನು: ಕಟ್ಟಡ ನಿರ್ಮಾಣ ಹಾಗೂ ಬೃಹತ್ ತಯಾರಿಕಾ ಉದ್ಯಮಿಗಳಿಗೆ ಕಾರ್ಮಿಕರ ಕೊರತೆ ಎದ್ದು ಕಾಣಲಿದೆ. ವೈದ್ಯರಿಗೆ ಆಶ್ಚರ್ಯಕರ ಘಟನೆ ನಡೆದು ದೇವರಿದ್ದಾನೆ ಎಂಬ ನಂಬಿಕೆ ಅನುಭವಕ್ಕೆ ಬರುವಂತಾಗುವುದು.

ಮಕರ: ದೂರ ಸಂಚಾರದಲ್ಲಿ ವೃಥಾ ಖರ್ಚುಗಳಿದ್ದರೂ ಸಂತೋಷ ಇರಲಿದೆ. ಆರ್ಥಿಕವಾಗಿ ನಿಮ್ಮ ಆದಾಯ ಯಾವುದೇ ರೀತಿಯ ಏರಿಳಿತಗಳಿಲ್ಲದೆ ಸಮನಾಗಿರುವುದು. ಚಾಲಕ ವೃತ್ತಿ ನಡೆಸುವವರು ಈ ದಿನ ಜಾಗ್ರತರಾಗಿರಿ.

ಕುಂಭ: ದಾಂಪತ್ಯ ಜೀವನದಲ್ಲಿ ತಾಳ್ಮೆ-ಸಮಾದಾನದಿಂದ ಮುಂದುವರಿಯುವುದರಿಂದ ಮನೆಯಲ್ಲಿ ಸುಖ-ಶಾಂತಿ ದೊರಕುವುದು. ಚಾಣಕ್ಷ ಬುದ್ಧಿಯಿಂದ ಸಮಸ್ಯೆಗಳನ್ನು ಶೀಘ್ರದಲ್ಲಿ ಪರಿಹಾರ ಮಾಡಿಕೊಳ್ಳುವ ಪ್ರಯತ್ನ ಮಾಡಿ.

ಮೀನ: ಯಾರೋ ಮಾಡಿದ ತಪ್ಪುಗಳಿಗೆ ಅಧಿಕಾರಿಗಳ ಜೊತೆಯಲ್ಲಿ ನೀವೂ ಸಂಕಷ್ಟಕ್ಕೆ ಸಿಲುಕುವ ಸನ್ನಿವೇಶಗಳಿರಬಹುದು. ದೇಹದಲ್ಲಿ ವಾತ ಅಧಿಕವಾಗಿ ಕೈ-ಕಾಲು ನೋವು ಕಾಣಿಸಿಕೊಳ್ಳಬಹುದು.

ರಷ್ಯಾ-ಉಕ್ರೇನ್ ಸಮರಾಂಗಣ

ಉಕ್ರೇನ್‌ನಿಂದ ನಿರ್ಗಮಿಸಲು ಸ್ಲೊವಾಕಿಯದ ಉಬ್ಲ ಬಳಿ ಗಡಿ ದಾಟುತ್ತಿರುವ ಮಹಿಳೆಯರು, ಮಕ್ಕಳು (ಮೊದಲ ಚಿತ್ರ). ಉಕ್ರೇನ್‌ನ ಕೀವ್ ನಗರದಲ್ಲಿ ರಷ್ಯಾ ಸೇನೆಯ ದಾಳಿಯಿಂದಾಗಿ ತೀವ್ರವಾಗಿ ಹಾನಿಗೊಂಡಿರುವ ಕಟ್ಟಡದ ಎದುರು ಬಾಲಕಿಯೊಬ್ಬಳು ಕುಳಿತಿರುವುದು – ಎಎಫ್‌ಪಿ, ರಾಯಿಟರ್ಸ್ ಚಿತ್ರಗಳು

ರಷ್ಯಾ ದಾಳಿಗೆ ನೆಲೆ ಕಳೆದುಕೊಂಡ ಸಾವಿರಾರು ಮಂದಿ ನಾಗರಿಕರು; ಹೊರ ಬರಲು ಪರದಾಟ

ಪ್ರವಾಹದಂತೆ ಉಕ್ರೇನ್ ನಿರಾಶ್ರಿತರ ವಲಸೆ

ಮೆಡಿಕಾ, ಪೋಲೆಂಡ್,ಬುಕಾರೆಸ್ಟ್ (ರಾಯಿಟರ್ಸ್): ರಷ್ಯಾ ಉಕ್ರೇನ್ ಮೇಲೆ ಆಕ್ರಮಣ ಆರಂಭಿಸುತ್ತಿದ್ದಂತೆಯೇ ಉಕ್ರೇನ್ ಪ್ರಜೆಗಳು ಮತ್ತು ಉಕ್ರೇನ್‌ನಲ್ಲಿ ಶಿಕ್ಷಣ, ಉದ್ಯೋಗ ನಿಮಿತ್ತ ನೆಲೆಸಿದ್ದ ವಿದೇಶಿ ಪ್ರಜೆಗಳು ಜೀವ ಉಳಿಸಿಕೊಳ್ಳಲು ಸಾವಿರಾರು ಸಂಖ್ಯೆಯಲ್ಲಿ ಪ್ರವಾಹದಂತೆ ವಲಸೆ ಆರಂಭಿಸಿದ್ದಾರೆ.

ಎರಡನೆಯ ಮಹಾಯುದ್ಧದ ನಂತರ ಯುರೋಪಿನಲ್ಲಿ ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರದ ಮೇಲೆ ನಡೆಸಿದ ಅತಿದೊಡ್ಡ ದಾಳಿಗೆ ಬೆಚ್ಚಿಬಿದ್ದಿರುವ 44 ದಶಲಕ್ಷ ಜನರಿರುವ ಉಕ್ರೇನ್ ಜನಸಂಖ್ಯೆಯಲ್ಲಿ ಹಲವು ಜನರು ನೆಲೆ ಕಳೆದುಕೊಂಡು ಮಧ್ಯ ಯುರೋಪ್ ರಾಷ್ಟ್ರಗಳತ್ತ ವಲಸೆ ಆರಂಭಿಸಿದ್ದಾರೆ.

ಉಕ್ರೇನ್‌ಗೆ ಹೊಂದಿಕೊಂಡಿರುವ ನ್ಯಾಟೊ ರಾಷ್ಟ್ರಗಳು ನಿರಾಶ್ರಿತರಿಗೆ ಪ್ರವೇಶ ನೀಡಲು ಗಡಿಯಲ್ಲಿ ಸ್ವಾಗತ ಕೇಂದ್ರಗಳನ್ನು ತೆರೆದಿವೆ.

ಪೋಲೆಂಡ್, ಹಂಗೇರಿ, ಸ್ಲೊವಾಕಿಯಾ ಹಾಗೂ ರೊಮೇನಿಯಾ ದೇಶಗಳು ಉಕ್ರೇನ್ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಲು ಮತ್ತು ಅಗತ್ಯ ಆರೋಗ್ಯ ಸೇವೆ ಒದಗಿಸಲು ವ್ಯವಸ್ಥೆ ಮಾಡಿಕೊಂಡಿವೆ.

ಉಕ್ರೇನ್‌ನಲ್ಲಿ ಯುದ್ಧದಿಂದ ಗಾಯಗೊಂಡವರಿಗೆ ಚಿಕಿತ್ಸೆ ನೀಡಲು ಪೋಲೆಂಡ್ ವೈದ್ಯಕೀಯ ಸೌಲಭ್ಯವುಳ್ಳ ರೈಲನ್ನು ಸಜ್ಜಾಗಿರಿಸಿದೆ. ಗಾಯಾಳುಗಳನ್ನು ದಾಖಲಿಸಿಕೊಳ್ಳಲು 1,230 ಆಸ್ಪತ್ರೆಗಳನ್ನು ಪಟ್ಟಿ ಮಾಡಿದೆ. ಪೋಲಿಷ್ ಸೈನ್ಯವು ಕೆಲವು ಆರೋಗ್ಯ ಘಟಕಗಳ ಸನ್ನದ್ಧತೆಯ ಮಟ್ಟವನ್ನು ಹೆಚ್ಚಿಸಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಉಕ್ರೇನ್‌ನಿಂದ 10 ಲಕ್ಷ ನಿರಾಶ್ರಿತರು ಯುರೋಪ್ ರಾಷ್ಟ್ರಗಳಿಗೆ ವಲಸೆ ಬರಲಿದ್ದಾರೆ ಎಂದು ಅಂದಾಜಿಸಿರುವ ಜರ್ಮನಿ, ಉಕ್ರೇನ್ ಗಡಿಯಲ್ಲಿರುವ ದೇಶಗಳಿಗೆ ಮಾನವೀಯ ನೆರವನ್ನು ಚಾಚಿದೆ. ಬಲ್ಗೇರಿಯಾ, ರೊಮೇನಿಯಾ, ಹಂಗೇರಿ ಕೂಡ ತಮ್ಮ ಗಡಿಗಳನ್ನು ಉಕ್ರೇನ್ ನಿರಾಶ್ರಿತರಿಗೆ ತೆರೆದಿವೆ.

ಉಕ್ರೇನ್ ಖಾರ್ಕಿವ್ ವಿಶ್ವವಿದ್ಯಾಲಯದ ಬೇಸ್‌ಮೆಂಟ್‌ನಲ್ಲಿ ರಕ್ಷಣೆ ಪಡೆದಿರುವ ವಿದ್ಯಾರ್ಥಿಗಳು – ಚಿತ್ರ/ಚೈತ್ರಾ ಸಂಶಿ

ನೆಲಮಾಳಿಗೆಯಲ್ಲಿ 400 ವಿದ್ಯಾರ್ಥಿಗಳು

ವಾಷಿಂಗ್ಟನ್ (ಪಿಟಿಐ): ಉಕ್ರೇನ್‌ನ ಸುಮಿ ನಗರದಲ್ಲಿನ ನೆಲಮಾಳಿಗೆಯೊಂದರಲ್ಲಿ ಭಾರತದ 400 ವಿದ್ಯಾರ್ಥಿಗಳು ಆಶ್ರಯ ಪಡೆದಿದ್ದಾರೆ. ಅವರೆಲ್ಲ ಭಾರತಕ್ಕೆ ಹಿಂತಿರುಗಲು ಸಹಾಯ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಉಕ್ರೇನ್‌ನ ಈಶಾನ್ಯ ಭಾಗದಲ್ಲಿರುವ ಸುಮಿ ನಗರ, ರಷ್ಯಾ ಗಡಿಯಿಂದ ಸುಮಾರು 50 ಮೈಲುಗಳಷ್ಟು ದೂರದಲ್ಲಿದೆ. ಈ ನಗರದ ಮೇಯರ್ ಗುರುವಾರ (ಆಕ್ರಮಣ ಆರಂಭವಾದ ದಿನ) ರಷ್ಯಾ ಪಡೆಗಳಿಗೆ ಶರಣಾಗಿದ್ದಾರೆ.

ಸದ್ಯ ನೆಲಮಾಳಿಗೆಯಲ್ಲಿ ಆಶ್ರಯ ಪಡೆದಿರುವ ಬಹುತೇಕ ವಿದ್ಯಾರ್ಥಿಗಳು ಸುಮಿ ಸ್ಟೇಟ್ ಯುನಿವರ್ಸಿಟಿಯಲ್ಲಿ ವ್ಯಾಸಂಗ ಮಾಡುತ್ತಿರುವವರಾಗಿದ್ದು, ಸ್ಫೋಟದ ಶಬ್ದ ನಿರಂತರವಾಗಿ ಕೇಳುತ್ತಿರುವುದಾಗಿ ಆತಂಕ ವ್ಯಕ್ತಪಡಿಸಿದ್ದಾರೆ.

ನೆಲಮಾಳಿಗೆಯಿಂದ ವಿಡಿಯೊ ತುಣುಕು ಹಂಚಿಕೊಂಡಿರುವ ಲಲಿತ್ ಕುಮಾರ್ ಎಂಬ ವಿದ್ಯಾರ್ಥಿ, 'ನಾವು ಉಳಿದುಕೊಂಡಿರುವ ವಿದ್ಯಾರ್ಥಿನಿಲಯದ ನೆಲಮಾಳಿಗೆಯಲ್ಲೇ ನಾವೆಲ್ಲರೂ ಅಡಗಿಕೊಂಡಿದ್ದೇವೆ. ಇಲ್ಲೇ ಇದ್ದರೆ, ಬದುಕುಳಿಯುತ್ತೇವೆಯೇ ಎಂಬುದು ಗೊತ್ತಿಲ್ಲ. ಉಕ್ರೇನ್‌ನ ಪೂರ್ವಭಾಗದಿಂದ ಕೂಡಲೇ ನಮ್ಮನ್ನು ಸ್ಥಳಾಂತರಿಸುವಂತೆ ಭಾರತ ಸರ್ಕಾರವನ್ನು ಕೇಳಿಕೊಳ್ಳುತ್ತೇವೆ' ಎಂದು ಮನವಿ ಮಾಡಿದ್ದಾರೆ.

'ನಮ್ಮ ತವರಿಗೆ (ಭಾರತಕ್ಕೆ) ಹಿಂತಿರುಗುವುದು ಅಸಾಧ್ಯ. ಇಲ್ಲಿ ಸೇನಾಡಳಿತ ಜಾರಿಯಲ್ಲಿದೆ. ಹೊರಗೆ ಹೋಗಲಾಗದು. ಬಸ್, ಕಾರುಗಳು ಅಥವಾ ಖಾಸಗಿ ವಾಹನಗಳ ಸಂಚಾರಕ್ಕೆ ಅನುಮತಿ ಇಲ್ಲ. ಎಟಿಎಂಗಳು ಮತ್ತು ಸೂಪರ್ ಮಾರ್ಕೆಟ್‌ಗಳೂ ಬಂದ್ ಆಗಿವೆ' ಎಂದೂ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಭಾರತೀಯರಿಗೆ ಶಿಬಿರ ಸ್ಥಾಪನೆ

ನವದೆಹಲಿ/ಬೆಂಗಳೂರು: ಉಕ್ರೇನ್‌ನಿಂದ ಅತಂತ್ರ ಭಾರತೀಯರಿಗೆ ದೇಶಕ್ಕೆ ಮರಳಲು ನೆರವಾಗಲು ವಿದೇಶಾಂಗ ಸಚಿವಾಲಯವು ಪಶ್ಚಿಮ ಉಕ್ರೇನ್‌ನ ಲಿವ್ ಮತ್ತು ಚೆರ್ನಿವ್ಟ್ಸಿಯಲ್ಲಿ ಕ್ಯಾಂಪ್ ಸ್ಥಾಪಿಸಿದೆ.

ಶುಕ್ರವಾರ ಕ್ಯಾಂಪ್ ಸ್ಥಾಪಿಸಿದ್ದು ಇಲ್ಲಿರುವ ಸಿಬ್ಬಂದಿ ಅತಂತ್ರ ಭಾರತೀಯರಿಗೆ ಹಂಗರಿ, ರೊಮೇನಿಯಾ, ಪೋಲೆಂಡ್‌ಗೆ ತೆರಳಲು ನೆರವು ನೀಡುವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಸುರಕ್ಷತೆಗೆ ಆದ್ಯತೆ: ಉಕ್ರೇನ್‌ನಲ್ಲಿ ಸಿಲುಕಿರುವ ಕರ್ನಾಟಕದ ವಿದ್ಯಾರ್ಥಿಗಳನ್ನು ಕರೆತರುವ ನಿಟ್ಟಿನಲ್ಲಿ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ಜತೆ ಚರ್ಚಿಸಿರುವುದಾಗಿ ಕೌಶಲಾಭಿವೃದ್ಧಿ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದ್ದಾರೆ.

ರಾಜತಾಂತ್ರಿಕ ಮಾರ್ಗ ಉತ್ತಮ

ನವದೆಹಲಿ (ಪಿಟಿಐ): ರಷ್ಯಾ ವಿದೇಶಾಂಗ ಸಚಿವ ಸೆರ್ಗೆ ಲವ್ರೊವ್ ಮತ್ತು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟೋನಿ ಬ್ಲಿಂಕೆನ್ ಜೊತೆ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ದೂರವಾಣಿ ಮೂಲಕ ಪ್ರತ್ಯೇಕ ಮಾತುಕತೆ ನಡೆಸಿದ್ದು, ಉಕ್ರೇನ್ ಬಿಕ್ಕಟ್ಟು ಶಮನಕ್ಕೆ ರಾಜತಾಂತ್ರಿಕತೆ ಮತ್ತು ಮಾತುಕತೆ ಅತ್ಯುತ್ತಮ ಮಾರ್ಗಗಳು ಎಂದು ಒತ್ತಿ ಹೇಳಿದ್ದಾರೆ.

'ರಷ್ಯಾ ವಿದೇಶಾಂಗ ಸಚಿವ ಸೆರ್ಗೆ ಲವ್ರೊವ್ ಜೊತೆ ಉಕ್ರೇನ್ ಬೆಳವಣಿಗೆ ಕುರಿತಂತೆ ಮಾತುಕತೆ ನಡೆಸಿದೆ. ರಾಜತಾಂತ್ರಿಕತೆ ಮತ್ತು ಮಾತುಕತೆ ಬಿಕ್ಕಟ್ಟು ಶಮನಕ್ಕೆ ಅತ್ಯುತ್ತಮ ಮಾರ್ಗಗಳೆಂದು ಒತ್ತಿ ಹೇಳಿದ್ದೇನೆ' ಎಂದು ಅವರು ಟ್ವೀಟ್ ಮೂಲಕ ಮಾಹಿತಿ ನೀಡಿದ್ದಾರೆ.

ಸೈಬರ್ ಭದ್ರತೆಗೆ ಮನವಿ

ರಷ್ಯಾ ದಾಳಿಯ ವಿರುದ್ಧ ರಕ್ಷಣೆಗೆ ತನ್ನ ಸೈಬರ್ ಭದ್ರತಾ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ನೆರವು ನೀಡುವಂತೆ ದಕ್ಷಿಣ ಕೊರಿಯಾಕ್ಕೆ ಉಕ್ರೇನ್ ಮನವಿ ಮಾಡಿದೆ.

ದೇಶದ ಸರ್ಕಾರಿ ಇಲಾಖೆಗಳ ವೆಬ್‌ಸೈಟ್‌ಗಳು ರಷ್ಯಾದ ಸೈಬರ್ ದಾಳಿಯಿಂದ ಬಳಲುತ್ತಿವೆ ಎಂದು ದಕ್ಷಿಣ ಕೊರಿಯಾಕ್ಕೆ ಉಕ್ರೇನ್ ರಾಯಭಾರಿಯಾಗಿರುವ ಡಿಮಿಟ್ರೋ ಪೊನೊಮರೆಂಕೊ ಹೇಳಿದರು.

ಉಕ್ರೇನ್‌ನಲ್ಲಿ 346 ಕನ್ನಡಿಗರು

ಬೆಂಗಳೂರು: ಉಕ್ರೇನ್ ದೇಶದಲ್ಲಿ ಸಿಲುಕಿರುವ ಕನ್ನಡಿಗರಲ್ಲಿ ಬೆಂಗಳೂರಿನವರ ಸಂಖ್ಯೆಯೇ ಹೆಚ್ಚು. ಈವರೆಗೆ ಸಂಗ್ರಹವಾಗಿರುವ ಮಾಹಿತಿ ಪ್ರಕಾರ, 346 ಕನ್ನಡಿಗರು ಅಲ್ಲಿ ಸಿಲುಕಿದ್ದಾರೆ. ಅವರಲ್ಲಿ 115 ಮಂದಿ ಬೆಂಗಳೂರಿನವರು.

ಮೈಸೂರು ಜಿಲ್ಲೆಯ 30, ವಿಜಯಪುರದ 24, ಬಾಗಲಕೋಟೆಯ 22, ತುಮಕೂರಿನ 16, ಹಾವೇರಿಯ 14, ದಾವಣಗೆರೆಯ 12, ಚಿಕ್ಕಮಗಳೂರು, ಹಾಸನ, ರಾಯಚೂರು ಜಿಲ್ಲೆಗಳ ತಲಾ 10, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳ ತಲಾ ಒಂಬತ್ತು, ಬಳ್ಳಾರಿ ಮತ್ತು ಧಾರವಾಡ, ಉಡುಪಿಯ ತಲಾ ಆರು, ಗದಗ, ಕಲಬುರಗಿಯ ತಲಾ ಐದು, ಚಾಮರಾಜನಗರ, ಕೋಲಾರ, ಮಂಡ್ಯದ ತಲಾ ನಾಲ್ಕು, ಬೀದರ್, ಚಿತ್ರದುರ್ಗ, ಶಿವಮೊಗ್ಗದ ತಲಾ ಮೂರು, ರಾಮನಗರ, ಉತ್ತರ ಕನ್ನಡದ ತಲಾ ಎರಡು, ಬೆಂಗಳೂರು ಗ್ರಾಮಾಂತರ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ತಲಾ ಒಬ್ಬರು ಉಕ್ರೇನ್‌ನಲ್ಲಿ ಸಿಲುಕಿದ್ದಾರೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮಾಹಿತಿ ನೀಡಿದೆ.

ಉಕ್ರೇನ್ ಬಿಕ್ಕಟ್ಟು: ದಿನದ ಬೆಳವಣಿಗೆ

- ರಾಜಧಾನಿ ಕೀವ್‌ನಲ್ಲಿ ನಾಗರಿಕರನ್ನು ಗುರಿಯಾಗಿಸಿಕೊಂಡು ರಷ್ಯಾ ಕ್ಷಿಪಣಿ ದಾಳಿ ನಡೆಸಿದೆ ಎಂದು ಉಕ್ರೇನ್ ಆರೋಪ
- ಮಾತುಕತೆಗೆ ಬರುವಂತೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್‌ಗೆ ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಝೆಲೆನ್‌ಸ್ಕಿ ಮನವಿ. ಆದರೂ, 'ಉಕ್ರೇನ್‌ಗೆ ಉಳಿದಿರುವುದು ನೀವು ಮಾತ್ರ' ಎಂದು ಝೆಲೆನ್‌ಸ್ಕಿ ಭದ್ರತಾ ಪಡೆಗಳಿಗೆ ಸಂದೇಶ ರವಾನೆ.
- ಉಕ್ರೇನ್ ಸೇನೆ ಶಸ್ತ್ರ ಕೆಳಗಿಳಿಸಿದರೆ ಮಾತುಕತೆಗೆ ಸಿದ್ಧವಿರುವುದಾಗಿ ರಷ್ಯಾ ಘೋಷಣೆ.
- ಉಕ್ರೇನ್‌ನ ಕೇಂದ್ರ ಬ್ಯಾಂಕ್ ರಷ್ಯಾ ಮತ್ತು ಬೆಲಾರಸ್‌ನಲ್ಲಿರುವ ತನ್ನ ಶಾಖೆಗಳಿಗೆ ಹಣ ಪಾವತಿ ಮತ್ತು ಎರಡೂ ರಾಷ್ಟ್ರಗಳ ಕರೆನ್ಸಿಗಳ ವ್ಯವಹಾರವನ್ನು ಶುಕ್ರವಾರದಿಂದಲೇ ನಿಷೇಧ
- ರಷ್ಯಾ ಬೆಂಬಲಿತ ಪ್ರತ್ಯೇಕತಾವಾದಿ ನಾಯಕರು ತಮ್ಮ ಸೇನಾ ಪಡೆಗಳೊಂದಿಗೆ ಶೀಘ್ರದಲ್ಲೇ ಉಕ್ರೇನ್‌ನ ಡೊನೆಟ್ಸ್ಕ್ ಮತ್ತು ಲುಹಾನ್ಸ್ಕ್ ಪ್ರದೇಶಗಳ ಗಡಿ ದಾಟಿ ಮುಂದುವರಿಯುವ ಯೋಜನೆ ಹೊಂದಿರುವುದಾಗಿ ರಷ್ಯಾದ ಸುದ್ದಿ ಸಂಸ್ಥೆಗಳು ವರದಿ ಮಾಡಿವೆ.
- ರಷ್ಯಾ ಆಕ್ರಮಣದ ನಂತರ ತನ್ನ ಪೂರ್ವ ಪಾರ್ಶ್ವ ಬಲಪಡಿಸಲು ಜರ್ಮನಿ ಸೇನಾ ಪಡೆಗಳು, ವಾಯು ರಕ್ಷಣಾ ವ್ಯವಸ್ಥೆ ಮತ್ತು ಯುದ್ಧ ಹಡಗುಗಳನ್ನು ನ್ಯಾಟೊ ದೇಶಗಳಿಗೆ ಕಳುಹಿಸಲು ಯೋಜಿಸಿದೆ ಎಂದು ಜರ್ಮನಿಯ ನಿಯತಕಾಲಿಕೆ 'ಡೆರ್ ಸ್ಪೀಗೆಲ್' ಶುಕ್ರವಾರ ಸುದ್ದಿ ಮೂಲ ಉಲ್ಲೇಖಿಸದೆ ವರದಿ ಮಾಡಿದೆ.
- ಉಕ್ರೇನ್‌ನಿಂದ ವಲಸೆ ಬರುತ್ತಿರುವ ಇರಾನ್ ಅಥವಾ ಭಾರತದಂತಹ ತೃತೀಯ ರಾಷ್ಟ್ರಗಳ ನಾಗರಿಕರಿಗೆ ವೀಸಾ ಇಲ್ಲದೆ ಪ್ರವೇಶಿಸಲು ಹಂಗೇರಿ ಮಾನವೀಯ ನೆಲೆಗಟ್ಟಿನಲ್ಲಿ ಅವಕಾಶ ಕಲ್ಪಿಸಿದೆ.
- ರಷ್ಯಾದ ಮಿಲಿಟರಿ ಆಕ್ರಮಣದಿಂದಾಗಿ ಸ್ಪೇನ್ ತನ್ನ ರಾಯಭಾರಿ ಮತ್ತು ರಾಜತಾಂತ್ರಿಕ ಸಿಬ್ಬಂದಿ ಸೇರಿ ಸುಮಾರು 100 ಪ್ರಜೆಗಳನ್ನು ಉಕ್ರೇನ್‌ನಿಂದ ಸ್ಥಳಾಂತರಿಸಿದೆ.
- ನೆರೆಯ ಸಿರಿಯಾದಲ್ಲಿ ರಷ್ಯಾ ಪಡೆಗಳು ಬೀಡುಬಿಟ್ಟಿರುವಾಗ, ಅಮೆರಿಕಕ್ಕೂ ನೆಚ್ಚಿನ ಮಿತ್ರನಾಗಿ, ಹಿಂದಿನ ಸೋವಿಯತ್ ಒಕ್ಕೂಟದಿಂದಲೂ ರಷ್ಯಾ ಜತೆಗೆ ಸಂಬಂಧ ಕಾಯ್ದುಕೊಂಡಿರುವ ಇಸ್ರೇಲ್, ಉಕ್ರೇನ್ ಬಿಕ್ಕಟ್ಟಿನಲ್ಲಿ 'ಸೂಕ್ಷ್ಮ ಸಮತೋಲನದ' ನಡೆ ಅನುಸರಿಸಿದೆ.
- ಪಾಶ್ಚಾತ್ಯ ದೇಶಗಳ ದೌರ್ಬಲ್ಯಗಳನ್ನು ಅರಿತು ಪ್ರತೀಕಾರದ ನಿರ್ಬಂಧಗಳನ್ನು ಸಿದ್ಧಪಡಿಸಲಾಗಿದೆ ಎಂದು ರಷ್ಯಾದ ಮೇಲ್ಮನೆ ಸ್ಪೀಕರ್ ವ್ಯಾಲೆಂಟಿನಾ ಮ್ಯಾಟ್ವಿಯೆಂಕೊ ಹೇಳಿರುವುದಾಗಿ ಅಲ್ಲಿನ 'ಟಾಸ್' ಸುದ್ದಿಸಂಸ್ಥೆ ವರದಿ ಮಾಡಿದೆ.
- ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿರುವ 40 ಮಂದಿ ಭಾರತೀಯ ವೈದ್ಯಕೀಯ ವಿದ್ಯಾರ್ಥಿಗಳು ಸ್ವದೇಶಕ್ಕೆ ಮರಳಲು ಪೋಲೆಂಡ್ ಗಡಿಯತ್ತ 8 ಕಿ.ಮೀ. ನಡೆದುಕೊಂಡು ಪಯಣ.

ಕೀವ್ ನಗರದಲ್ಲಿ ನೆಲಕ್ಕುರುಳಿರುವ ವಿಮಾನದ ಅವಶೇಷಗಳನ್ನು ಉಕ್ರೇನ್ ಸೇನೆಯ ಯೋಧರೊಬ್ಬರು ಪರಿಶೀಲಿಸಿದರು. –ಎ.ಪಿ ಚಿತ್ರ

ಭಾರತೀಯರ ರಕ್ಷಣೆಗೆ ನಿಯೋಜಿಸಿರುವ ತಂಡಗಳ ಸಂಪರ್ಕ ವಿವರ			
ಹಂಗೇರಿಯಾದ ಝಹೋನಿ ಗಡಿಯಲ್ಲಿರುವ ತಂಡ			
ಎಸ್. ರಾಮ್ಜಿ	+917395983990 +36305199944 ವಾಟ್ಸ್‌ಆ್ಯಪ್		
ಅಂಕುರ್	ವಾಟ್ಸ್‌ಆ್ಯಪ್ 36308644597		
ಮೋನಿತ್ ನಾಗ್ಪಾಲ್	+36302286566, ವಾಟ್ಸ್‌ಆ್ಯಪ್ +918950493059		
ಪೋಲೆಂಡ್‌ನ ಕ್ರಾಕೋವಿಕ್ ಭೂ ಗಡಿಯಲ್ಲಿರುವ ತಂಡ			
ಪಂಕಜ್ ಗಾರ್ಗ್	+48660460814/ +48606700105		
ಸ್ಲೋವಾಕ್ ಗಣರಾಜ್ಯದ ವೈಸ್ನೆ ನೆಮಕೆ ಭೂ ಗಡಿಯಲ್ಲಿರುವ ತಂಡ			
ಮನೋಜ್ ಕುಮಾರ್	+421908025212		
ಇವಾನ್ ಕೊಜಿಂಕಾ	+421908458724		
ರೊಮೇನಿಯಾದ ಸುಸೇವಾ ಭೂ ಗಡಿಯಲ್ಲಿರುವ ತಂಡ			
ಗೌಸ್ಟುಲ್ ಅನ್ಸಾರಿ	+40731347728	ಆಂಡ್ರಾ ಹಾರ್ಲೋನೊವ್	+40763528454
ಉದ್ದೇಶ ಪ್ರಿಯದರ್ಶಿ	+40724382287	ಮಾರಿಯಸ್ ಸಿಮಾ	+40722220823

ರಾಜಧಾನಿಗೆ ರಷ್ಯಾ ದಾಳಿ

ಒಂದನೇ ಪುಟದಿಂದ

'ನಮ್ಮ ಜತೆಗೆ ಹೋರಾಡಲು ಯಾರಿದ್ದಾರೆ? ಯಾರೂ ಕಾಣಿಸುತ್ತಿಲ್ಲ' ಎಂದೂ ಝೆಲೆನ್‌ಸ್ಕಿ ಹೇಳಿದ್ದಾರೆ.

ರಷ್ಯಾದ ಮೇಲೆ ಹಲವು ನಿರ್ಬಂಧಗಳನ್ನು ಹೇರುವುದಕ್ಕೆ ಮಾತ್ರ ಅಮೆರಿಕದ ನೆರವು ಸೀಮಿತವಾಗಿದೆ. ಅಮೆರಿಕದ ಸೇನೆಯು ಉಕ್ರೇನ್‌ನಲ್ಲಿ ಯುದ್ಧ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಉಕ್ರೇನ್‌ಗೆ ಸೇನೆ ಕಳುಹಿಸುವುದಿಲ್ಲ ಎಂದು ನ್ಯಾಟೊ ಕೂಡ ದೃಢಪಡಿಸಿದೆ.

ಕೀವ್‌ನ ಉತ್ತರದ ಜಿಲ್ಲೆ ಒಬ್ಲೊನ್‌ಸ್ಕಿಯನ್ನು ರಷ್ಯಾ ಸೈನಿಕರು ಧ್ವಂಸ ಮಾಡಿದ್ದಾರೆ. ಈ ಪ್ರದೇಶದಲ್ಲಿ ಗುಂಡು ಹಾರಾಟ, ಸ್ಫೋಟದ ಸದ್ದು ಕೇಳಿದೆ. ಜನರು ಸುರಕ್ಷಿತ ಸ್ಥಳಗಳಿಗೆ ಓಡಿದ್ದಾರೆ. ನಾಗರಿಕ ದಿರಿಸಿನಲ್ಲಿದ್ದ ವ್ಯಕ್ತಿಯ ಮೃತದೇಹವು ನಗರದ ಪಾದಚಾರಿ ಮಾರ್ಗದಲ್ಲಿ ಪತ್ತೆಯಾಗಿದೆ. ಒಬ್ಬ ವ್ಯಕ್ತಿಯ ಕಾರು ಶಸ್ತ್ರಸಜ್ಜಿತ ಯುದ್ಧ ವಾಹನಕ್ಕೆ ಸಿಲುಕಿ ಅಪ್ಪಚ್ಚಿಯಾಗಿದೆ. ನಗರವು ಜನರೇ ಇಲ್ಲದೆ ಬಿಕೋ ಎಂದಿದೆ.

ಉಕ್ರೇನ್ ಅನ್ನು ಶೋಷಣೆಯಿಂದ ರಕ್ಷಿಸುವುದು ರಷ್ಯಾದ ಉದ್ದೇಶ. ನಾಗರಿಕರ ಮೇಲೆ ದಾಳಿ ನಡೆಸಿಲ್ಲ ಎಂದು ರಷ್ಯಾ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಹೇಳಿದ್ದಾರೆ.

ಶರಣಾದರೆ ತಕ್ಷಣ ಮಾತುಕತೆ: ರಷ್ಯಾ

ಉಕ್ರೇನ್‌ನ ಸೇನೆಯು ಶರಣಾದರೆ ಮಾತುಕತೆಗೆ ಸಿದ್ಧ ಎಂದು ರಷ್ಯಾದ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಹೇಳಿದ್ದಾರೆ.

'ನಮ್ಮ ಕರೆಗೆ ಉಕ್ರೇನ್ ಓಗೊಟ್ಟು, ಶಸ್ತ್ರಾಸ್ತ್ರ ಕೆಳಗಿಟ್ಟ ಬಳಿಕದ ಯಾವುದೇ ಕ್ಷಣದಲ್ಲಿ ನಾವು ಮಾತುಕತೆಗೆ ಸಿದ್ಧ ಇದ್ದೇವೆ' ಎಂದು ಲಾವ್ರೊವ್ ಹೇಳಿದ್ದಾರೆ. ಈ ಕಾರ್ಯಾಚರಣೆಯ ಉದ್ದೇಶವನ್ನು ಬಹಿರಂಗವಾಗಿಯೇ ಪ್ರಕಟಿಸಲಾಗಿದೆ. ಉಕ್ರೇನ್‌ಗೆ ಸೇನೆ ಇಲ್ಲದಂತೆ ಮಾಡುವುದು ಮತ್ತು ನಾಜಿಮುಕ್ತ ಮಾಡುವುದು ಕಾರ್ಯಾಚರಣೆಯ ಉದ್ದೇಶ ಎಂದು ಅವರು ಹೇಳಿದ್ದಾರೆ.

ಸರ್ಕಾರ ಪದಚ್ಯುತಗೊಳಿಸಿ: ಪುಟಿನ್

ಉಕ್ರೇನ್ ನಾಯಕತ್ವವನ್ನು ಪದಚ್ಯುತಗೊಳಿಸುವಂತೆ ಅಲ್ಲಿನ ಸೇನೆಗೆ ಪುಟಿನ್ ಕರೆ ಕೊಟ್ಟಿದ್ದಾರೆ. ಉಕ್ರೇನ್ ನಾಯಕತ್ವವನ್ನು 'ಭಯೋತ್ಪಾದಕರು, ಡ್ರಗ್ ವ್ಯಸನಿಗಳು ಮತ್ತು ನವ ನಾಜಿಗಳು' ಎಂದು ಕರೆದಿದ್ದಾರೆ. ಉಕ್ರೇನ್ ಸೇನೆಯನ್ನು ಉದ್ದೇಶಿಸಿ ಪುಟಿನ್ 'ಅಧಿಕಾರ ನಿಮ್ಮ ಕೈಗೆ ತೆಗೆದುಕೊಳ್ಳಿ' ಎಂದು ಸೈನಿಕರಿಗೆ ಕರೆ ಕೊಟ್ಟಿದ್ದಾರೆ.

ಉಕ್ರೇನ್ ಮೇಲಿನ ದಾಳಿಯನ್ನು ವಿರೋಧಿಸಿ ಮಾಸ್ಕೊದಲ್ಲಿ ಪ್ರತಿಭಟನೆ ನಡೆಸಿದ ಮಹಿಳೆಯೊಬ್ಬರನ್ನು ಪೊಲೀಸರು ವಶಕ್ಕೆ ಪಡೆದರು –ಎಎಫ್‌ಪಿ ಚಿತ್ರ

ರಷ್ಯಾ: ಪ್ರತಿಭಟನಾಕಾರರ ಬಂಧನ

ಜಿನಿವಾ (ಎಎಫ್‌ಪಿ): ಉಕ್ರೇನ್ ಮೇಲೆ ನಡೆದಿರುವ ದಾಳಿಯನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ ಸುಮಾರು 1,800ಕ್ಕೂ ಹೆಚ್ಚು ಜನರನ್ನು ರಷ್ಯಾ ಬಂಧಿಸಿರುವುದನ್ನು ವಿಶ್ವಸಂಸ್ಥೆ ಶುಕ್ರವಾರ ಖಂಡಿಸಿದ್ದು ಪ್ರತಿಭಟನಾಕಾರರನ್ನು ತಕ್ಷಣ ಬಿಡುಗಡೆಗೊಳಿಸುವಂತೆ ಒತ್ತಾಯಿಸಿದೆ. 'ಅಭಿವ್ಯಕ್ತಿ ಸ್ವಾತಂತ್ರ್ಯ ಚಲಾಯಿಸುವ ಜನರನ್ನು ಬಂಧಿಸಿರುವುದು ಸ್ವಾತಂತ್ರ್ಯದ ಮೇಲಿನ ಅತಿಕ್ರಮಣ.ಎಲ್ಲರನ್ನೂಬಿಡುಗಡೆ ಮಾಡಬೇಕು' ಎಂದು ವಿಶ್ವಸಂಸ್ಥೆ ಅಧಿಕಾರಿ ರವೀನಾ ಶಾಮದಾಸಾನಿ ಆಗ್ರಹಿಸಿದ್ದಾರೆ.

'ರಷ್ಯಾಪರ ನಿಂತರೆ ಬಾಂಧವ್ಯ ಕಡಿತ'

ವಾಷಿಂಗ್ಟನ್ (ಪಿಟಿಐ): ಉಕ್ರೇನ್ ಮೇಲಿನ ರಷ್ಯಾದ ಆಕ್ರಮಣವನ್ನು ಸಮರ್ಥಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದಿರುವ ಅಮೆರಿಕ ಅಧ್ಯಕ್ಷ ಜೋ ಬೈಡನ್, ಈ ಕೃತ್ಯದಲ್ಲಿ ರಷ್ಯಾವನ್ನು ಬೆಂಬಲಿಸುವ ಅಥವಾ ಅಮೆರಿಕದೊಂದಿಗೆ ನಿಲ್ಲದ ದೇಶಗಳು ನಮ್ಮ ಬಾಂಧವ್ಯವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ.

ಭಯ ಮತ್ತು ದಬ್ಬಾಳಿಕೆಗಳಿಗಿಂತ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಮಾನವ ಘನತೆಯೇ ಹೆಚ್ಚು ಬಲಿಷ್ಠ ಎಂದು ಬೈಡನ್ ಶ್ವೇತಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.'ಉಕ್ರೇನ್ ವಿರುದ್ಧ ರಷ್ಯಾದ ಮುಖವಾಡದಂತೆ ನಿಲ್ಲುವ ರಾಷ್ಟ್ರಗಳು ನಮ್ಮೊಂದಿಗೆ ಸಂಬಂಧವನ್ನು ಕಳೆದುಕೊಳ್ಳುತ್ತವೆ' ಎಂದ ರು.

ರಕ್ಷಣೆಗೆ ಭಾರತೀಯರ ಮೊರೆ

ನವದೆಹಲಿ: 'ಸಾಧ್ಯವಾದಷ್ಟು ಬೇಗ ನಮ್ಮನ್ನು ಕಾಪಾಡಿ...' ಇದು ಪಶ್ಚಿಮ ಉಕ್ರೇನ್‌ನ ಇವಾನೊ-ಫ್ರಾಂಕಿವ್ಸ್ಕ್ ಪಟ್ಟಣದಲ್ಲಿ ಸಿಲುಕಿಕೊಂಡಿರುವ ಭಾರತೀಯ ವಿದ್ಯಾರ್ಥಿ ಸಾಯನ್ ಚೌಧರಿ ಎಂಬುವವರು ಮಾಡಿರುವ ಟ್ವೀಟ್. ಕ್ಷಿಪಣಿ ದಾಳಿಯಿಂದಾಗಿ ದಟ್ಟ ಹೊಗೆ ಎದ್ದಿರುವ ದೃಶ್ಯವನ್ನೊಳಗೊಂಡ ವಿಡಿಯೊವನ್ನೂ ಅವರು ಟ್ವೀಟ್ ಜೊತೆ ಹಂಚಿಕೊಂಡಿದ್ದಾರೆ.

'ಭಾರತ ಸರ್ಕಾರ ನಮ್ಮನ್ನು ರಕ್ಷಣೆ ಮಾಡಬಹುದೆಂಬ ದೃಢ ವಿಶ್ವಾಸವಿದೆ' ಎಂದೂ ಉಕ್ರೇನ್‌ನಲ್ಲಿ ವೈದ್ಯ ವಿದ್ಯಾರ್ಥಿಯಾಗಿರುವ ಕೋಲ್ಕತ್ತದ ಸಾಯನ್ ಹೇಳಿದ್ದಾರೆ.

'ಏನು ಮಾಡಬೇಕೆಂದು ನಮಗೆ ತೋಚುತ್ತಿಲ್ಲ. ನಾವೆಲ್ಲ ಭಯಭೀತರಾಗಿದ್ದೇವೆ' ಎಂದು ದೀಪಾ ಜಯಶಂಕರ್ ಎಂಬುವವರು ಟ್ವೀಟ್ ಮೂಲಕ ಆತಂಕ ವ್ಯಕ್ತಪಡಿಸಿದ್ದಾರೆ.

'ಉಕ್ರೇನ್: ವಿದ್ಯಾರ್ಥಿಗಳ ಪ್ರಯಾಣ ಖರ್ಚು ಸರ್ಕಾರವೇ ಭರಿಸಲಿದೆ'

ಚೆನ್ನೈ: ಉಕ್ರೇನ್‌ನಲ್ಲಿ ಸಿಲುಕಿರುವ ತಮಿಳುನಾಡಿನ 5,000 ವಿದ್ಯಾರ್ಥಿಗಳ ಪ್ರಯಾಣದ ಖರ್ಚನ್ನು ಭರಿಸುವುದಾಗಿ ತಮಿಳುನಾಡು ಶುಕ್ರವಾರ ಘೋಷಿಸಿದೆ.

'ಯುದ್ಧ ಪೀಡಿತ ಉಕ್ರೇನ್‌ನಲ್ಲಿ 5,000 ವಿದ್ಯಾರ್ಥಿಗಳು ಸೇರಿದಂತೆ ತಮಿಳುನಾಡು ಮೂಲದ ಹಲವರು ಸಿಲುಕಿದ್ದಾರೆ. ಅವರ ನೆರವಿಗಾಗಿ ತಮಿಳುನಾಡು ಸರ್ಕಾರ ಗುರುವಾರ ಸಹಾಯವಾಣಿ ಆರಂಭಿಸಿದೆ. 'ವಿಮಾನ ಟಿಕೆಟ್ ದರದಿಂದ ಚಿಂತೆಗೀಡಾಗಿರುವ ಪೋಷಕರಿಗೆ ನೆರವು ಒದಗಿಸಲು ಕೈಗೊಳ್ಳಲಾಗಿದೆ ಎಂದು ತಿಳಿಸಲಾಗಿದೆ. ವಿಮಾನ ಪ್ರಯಾಣ ದರವು ದುಬಾರಿಯಾಗಿದ್ದರಿಂದ, ಶಿಕ್ಷಣ ಸಂಸ್ಥೆಗಳು ಆನ್‌ಲೈನ್ ತರಗತಿ ನಡೆಸುವ ನಿಲುವು ಪ್ರಕಟಿಸದ ಕಾರಣ ವಿದ್ಯಾರ್ಥಿಗಳು ಉಕ್ರೇನ್‌ನಲ್ಲೇ ಉಳಿದಿದ್ದರು

ಉಕ್ರೇನ್‌ನಲ್ಲಿ ವೈದ್ಯಕೀಯ ಶಿಕ್ಷಣ ಅಗ್ಗ!

- ಕೆ.ಎಸ್.ಗಿರೀಶ

ಮೈಸೂರು: ಭಾರತಕ್ಕಿಂತ ತೀರಾ ಅಗ್ಗದ ವೆಚ್ಚದಲ್ಲಿ ವೈದ್ಯಕೀಯ ಶಿಕ್ಷಣ ದೊರೆಯುತ್ತದೆ ಎಂಬ ಕಾರಣಕ್ಕೆ ದೇಶದ ಬಹಳಷ್ಟು ವಿದ್ಯಾರ್ಥಿಗಳು ಉಕ್ರೇನ್ ದೇಶಕ್ಕೆ ಹೋಗುತ್ತಾರೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಆ ದೇಶದಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾರೆ.

ಅಲ್ಲಿನ ವೈದ್ಯಕೀಯ ಶಿಕ್ಷಣದ ಶುಲ್ಕವು, ಇಲ್ಲಿನ ಸಾಮಾನ್ಯ ದರ್ಜೆಯ ವೈದ್ಯಕೀಯ ಕಾಲೇಜುಗಳ ಶುಲ್ಕಕ್ಕಿಂತಲೂ ಕಡಿಮೆ. ಇಲ್ಲಿನ ಪ್ರತಿಷ್ಠಿತ ಕಾಲೇಜು

ಗಳ ಒಂದು ವರ್ಷದ ಶುಲ್ಕ ಹಾಗೂ ವಂತಿಗೆಯಲ್ಲಿ ಇಡೀ ವೈದ್ಯಕೀಯ ಶಿಕ್ಷಣವನ್ನೇ ಅಲ್ಲಿ ಪೂರ್ಣಗೊಳಿಸಬಹುದು!

ಅಲ್ಲಿ ಏಕರೂಪದ ಶುಲ್ಕವಿಲ್ಲ.



ಚಂದನ್

ಪ್ರತಿ ವಿಶ್ವವಿದ್ಯಾಲಯದಲ್ಲೂ ಭಿನ್ನ. ಹಲವು ವೆಬ್‌ಸೈಟ್‌ಗಳಲ್ಲೂ ಹಲವು ರಿಯಾಯಿತಿಗಳನ್ನು ನೀಡುವ ಮೂಲಕ ವಿದ್ಯಾರ್ಥಿಗಳನ್ನು ಸೆಳೆಯಲಾಗುತ್ತಿದೆ. ಉಕ್ರೇನ್‌ನ 15ಕ್ಕೂ ಹೆಚ್ಚು ವೈದ್ಯಕೀಯ ವಿಶ್ವವಿದ್ಯಾಲಯಗಳ ಪೈಕಿ, ಬಹುತೇಕ ಜಾಗತಿಕ ಮನ್ನಣೆ ಗಳಿಸಿವೆ. ಅಲ್ಲಿ ಶಿಕ್ಷಣ ಪಡೆಯುವುದೂ ಪ್ರತಿಷ್ಠೆಯ ವಿಷಯ ಎನಿಸಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ, ಉಕ್ರೇನ್‌ನ ಬಿಕೊನೊವಿನಿಯನ್ ವಿಶ್ವವಿದ್ಯಾಲಯದ ವಿದ್ಯಾರ್ಥಿ, ಕೆ.ಆರ್.ನಗರ ಮೂಲದ ಚಂದನ್, 'ಭಾರತದಲ್ಲಿ ಖಾಸಗಿ ಕಾಲೇಜುಗಳ ಕೋಟಾದಡಿ ಆಗುವ ವೆಚ್ಚಕ್ಕಿಂತ ಅರ್ಧದಷ್ಟು ಕಡಿಮೆ ವೆಚ್ಚದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯಬಹುದು. ಹಾಗಾಗಿ, ನೀಟ್ ಪರೀಕ್ಷೆಯಲ್ಲಿ ಸರ್ಕಾರಿ ಕೋಟಾದಡಿ ಅವಕಾಶ ದೊರೆಯದವರು ಹೆಚ್ಚಿನ ಸಂಖ್ಯೆಯಲ್ಲಿ ಉಕ್ರೇನ್‌ನಲ್ಲಿ ಶಿಕ್ಷಣ ಪಡೆಯುತ್ತಾರೆ' ಎಂದರು.

'ಒಟ್ಟು ಆರು ವರ್ಷದ ವೈದ್ಯಕೀಯ ಶಿಕ್ಷಣ ಕೋರ್ಸಿಗೆ ₹ 30 ಲಕ್ಷ ವೆಚ್ಚವಾಗುತ್ತದೆ. ಭಾರತದಲ್ಲಾದರೆ ₹ 70 ಲಕ್ಷ ಬೇಕಾಗುತ್ತದೆ' ಎಂದರು.

'ಶಿಕ್ಷಣ ಅಗ್ಗ ಎಂದಷ್ಟೇ ಅಲ್ಲ, ಉತ್ತಮ ಗುಣಮಟ್ಟದ ಶಿಕ್ಷಣವೂ ದೊರಕುತ್ತದೆ ಎಂಬ ಕಾರಣಕ್ಕೂ ಉಕ್ರೇನ್ ವಿದ್ಯಾರ್ಥಿಗಳನ್ನು ಸೆಳೆಯುತ್ತಿದೆ. ಭಾರತದಲ್ಲಿ ಪ್ರತಿ ತರಗತಿಯಲ್ಲಿ ಸರಾಸರಿ 50 ವಿದ್ಯಾರ್ಥಿಗಳಿದ್ದರೆ, ಅಲ್ಲಿ 14 ಮಂದಿಗಷ್ಟೇ ಪಾಠ ನಡೆಯುವುದರಿಂದ ಪ್ರತಿಯೊಬ್ಬರ ಮೇಲೂ ವೈಯಕ್ತಿಕವಾಗಿ ನಿಗಾ ಇಡಲು ಉಪನ್ಯಾಸಕರಿಗೆ ಸಾಧ್ಯವಾಗುತ್ತದೆ' ಎಂದು ವಿವರಿಸಿದರು.

ಉಕ್ರೇನ್‌ನಲ್ಲಿ ವೈದ್ಯಕೀಯ ವಿದ್ಯಾರ್ಥಿನಿಯಾಗಿರುವ ಕೀರ್ತನಾ ತಂದೆ, ಹಾಸನದ ನಿವಾಸಿ ಚಿನ್ನಪ್ಪಗೌಡರೂ ಇದೇ ಅಭಿಪ್ರಾಯವನ್ನು ಧ್ವನಿಸಿದರು.

'ಪ್ರತಿ ವರ್ಷ ಗರಿಷ್ಠ ₹ 13 ಲಕ್ಷ ವ್ಯಯಿಸಿದರೆ ಅತ್ಯುತ್ತಮ ವೈದ್ಯಕೀಯ ಶಿಕ್ಷಣವನ್ನೇ ಪಡೆಯಬಹುದು. ಮೊದಲ ವರ್ಷ ಉಚಿತ ಹಾಸ್ಟೆಲ್ ಸೌಲಭ್ಯವಿದ್ದು, ನಂತರ ಅಪಾರ್ಟ್‌ಮೆಂಟ್‌ನಲ್ಲಿರಬೇಕಾಗುತ್ತದೆ. ಐದಾರು ವಿದ್ಯಾರ್ಥಿಗಳು ಒಂದೇ ಕಡೆ ವಾಸಿಸುವ ಮೂಲಕ ಬಾಡಿಗೆ ಹಣವನ್ನೂ ಉಳಿಸಬಹುದು. ಊಟಕ್ಕೆ ತಿಂಗಳಿಗೆ ಗರಿಷ್ಠ ₹ 5 ಸಾವಿರ ಖರ್ಚಾಗುತ್ತದೆ. ಹಾಗಾಗಿ ಹೆಚ್ಚಿನವರು ಉಕ್ರೇನಿಗೆ ಹೋಗುತ್ತಾರೆ. ನಾನೂ ಮಗಳನ್ನು ಕಳಿಸಿರುವೆ' ಎಂದು ಚಾಮರಾಜನಗರ ಜಿಲ್ಲೆಯ ಹನೂರಿನ ಪೋಷಕರೊಬ್ಬರು ತಿಳಿಸಿದರು.

ಪ್ರಜಾವಾಣಿ ವಿಶೇಷ

'ಭಾರತದ ಖಾಸಗಿ ಕಾಲೇಜುಗಳ ಮ್ಯಾನೇಜ್‌ಮೆಂಟ್ ಕೋಟಾದ ಪ್ರವೇಶ ಶುಲ್ಕಕ್ಕಿಂತಲೂ ಅಗ್ಗದ ದರದಲ್ಲಿ ಉಕ್ರೇನ್ ಮಾತ್ರವಲ್ಲದೆ, ಫಿಲಿಪೀನ್ಸ್, ಉಜ್ಬೇಕಿಸ್ತಾನ, ಮಾಲ್ಡೀವ್ಸ್‌ನಲ್ಲೂ ವೈದ್ಯಕೀಯ ಶಿಕ್ಷಣ ದೊರೆಯುತ್ತದೆ' ಎಂದು ಕೆ.ಆರ್.ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ ಡಾ.ರಾಜೇಶ್ ಹೇಳಿದರು.

ವಿದ್ಯಾರ್ಥಿಗಳು ಸ್ವದೇಶಕ್ಕೆ: ಪಾಲಕರಲ್ಲಿ ಹರ್ಷ

ಮುಂಡರಗಿ: ಉಕ್ರೇನ್ ದೇಶದಲ್ಲಿರುವ ಗದಗ ಜಿಲ್ಲೆಯ ಮುಂಡರಗಿ ಪಟ್ಟಣದ ವಿದ್ಯಾರ್ಥಿ ಮಹಾಗಣಪತಿ ಬಿಳಿಮಗ್ಗದ ಹಾಗೂ ಅವರ ಹಲವು ಸ್ನೇಹಿತರು ಸ್ವದೇಶಕ್ಕೆ ಮರಳುತ್ತಿದ್ದಾರೆ. ಕಳೆದ ಎರಡು ದಿನಗಳಿಂದ ಆತಂಕದಲ್ಲಿದ್ದ ಅವರ ಪಾಲಕರು ನಿಟ್ಟುಸಿರು ಬಿಡುವಂತಾಗಿದೆ.

ರಷ್ಯಾ ದಾಳಿಯಿಂದ ಉಕ್ರೇನ್ ರಾಜಧಾನಿ ಕೀವ್ ಸೇರಿದಂತೆ ದೇಶದ ಬಹುತೇಕ ವಿಮಾನ ನಿಲ್ದಾಣಗಳು ರಷ್ಯಾ ವಶವಾಗಿವೆ ಮತ್ತು ಕೆಲವು ವಿಮಾನ ನಿಲ್ದಾಣಗಳು ಧ್ವಂಸಗೊಂಡಿವೆ. ಹೀಗಾಗಿ ಅಲ್ಲಿ ಸಿಲುಕಿಕೊಂಡಿರುವ ವಿದ್ಯಾರ್ಥಿಗಳು ಹಾಗೂ ಭಾರತೀಯ ನಾಗರಿಕರು ವಿಮಾನ ಮಾರ್ಗವಾಗಿ ಸ್ವದೇಶಕ್ಕೆ ಬರಲು ಪರದಾಡುವಂತಾಗಿತ್ತು.

ಉಕ್ರೇನ್ ದೇಶದ ಚರ್ನಿವಿಸ್ಸಿ ಪಟ್ಟಣದಲ್ಲಿರುವ ವಿದ್ಯಾರ್ಥಿ ಮಹಾಗಣಪತಿ ಹಾಗೂ ಅವರ ಸ್ನೇಹಿತರನ್ನು ಬಸ್ ಮೂಲಕ ಶುಕ್ರವಾರ ರಾತ್ರಿ ಉಕ್ರೇನ್ ದೇಶದ ಪಕ್ಕದಲ್ಲಿರುವ ರುಮೇನಿಯಾ ದೇಶಕ್ಕೆ ಕರೆತರಲಾಗುತ್ತದೆ. ಕೆಲವು ವಿದ್ಯಾರ್ಥಿಗಳನ್ನು ಹತ್ತಿರದ ಪೋಲಂಡ್, ಹಂಗೇರಿ ಹಾಗೂ ಮತ್ತಿತರ ದೇಶಗಳ ಮಾರ್ಗವಾಗಿ ಕರೆತರುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಅಲ್ಲಿಂದ ಎಲ್ಲ ವಿದ್ಯಾರ್ಥಿಗಳನ್ನು ಭಾರತ ದೇಶಕ್ಕೆ ಕಳುಹಿಸಲಾಗುತ್ತಿದೆ ಎಂದು ಉಕ್ರೇನ್ ಲ್ಲಿರುವ ಮಹಾಗಣಪತಿಯು ಮಾಹಿತಿ ನೀಡಿದ್ದಾರೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಚರ್ನಿವಿಸ್ಸಿಯಲ್ಲಿರುವ ಎಲ್ಲ ವಿದ್ಯಾರ್ಥಿಗಳು ಭಾನುವಾರ ಅಥವಾ ಸೋಮವಾರ ಮುಂಜಾನೆ ಸ್ವದೇಶಕ್ಕೆ ಬರಲಿದ್ದಾರೆ.

ಬಂಕರ್‌ನಲ್ಲಿ ಯುವತಿಗೆ ಆಶ್ರಯ

ಕಲಬುರಗಿ: ಉಕ್ರೇನ್ ದೇಶದ ಕೀವ್ ನಗರದಲ್ಲಿ ಸಿಲುಕಿರುವ ಕಲಬುರಗಿಯ ವೈದ್ಯ ವಿದ್ಯಾರ್ಥಿನಿ ಜೀವಿತಾ ಶಿಂಧೆ ಅವರು, ಶುಕ್ರವಾರ ಬಂಕರ್‌ನಲ್ಲಿ ಆಶ್ರಯ ಪಡೆದಿದ್ದಾರೆ.

ಜೀವಿತಾ ಶಿಂಧೆ

'ಕೀವ್ ನಗರದ ಮೇಲೆ ರಷ್ಯಾ ದಾಳಿ ಶುಕ್ರವಾರ ಹೆಚ್ಚಾಗಿದ್ದರಿಂದ ಬಹಳಷ್ಟು ಜನ ಸುರಕ್ಷತೆಗಾಗಿ ಬಂಕರ್ ಸೇರಿದ್ದು, ನಾನೂ ಅಲ್ಲೇ ಇದ್ದೇನೆ. ಈ ನಗರದ ಬಹಳಷ್ಟು ಅಪಾರ್ಟ್‌ಮೆಂಟ್ ಕೆಳಗೆ ಹಾಗೂ ಆಯಕಟ್ಟಿನ ಸ್ಥಳಗಳಲ್ಲಿ ದೊಡ್ಡ ಬಂಕರ್‌ಗಳಿವೆ. ಬಾಂಬ್ ದಾಳಿ ನಡೆದರೆ ಅಲ್ಲಿ ಸಾಕಷ್ಟು ಜನ ರಕ್ಷಣೆ ಪಡೆಯಬಹುದು ಎಂಬ ಮುಂದಾಲೋಚನೆಯಿಂದ ಇವುಗಳನ್ನು ಮಾಡಲಾಗಿದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ. 'ಸದ್ಯಕ್ಕೆ ಇಲ್ಲಿ ಇಂಟರ್‌ನೆಟ್ ಸಂಪರ್ಕ, ಫೋನ್ ನೆಟ್‌ವರ್ಕ್ ಸಿಗುತ್ತಿಲ್ಲ. ಆಗೊಮ್ಮೆ ಈಗೊಮ್ಮೆ ಮೆಸೇಜ್ ಹೋಗುತ್ತಿವೆ' ಎಂದು ತಿಳಿಸಿದರು.

ಜೀವಿತಾ ಅವರು ಕೀವ್ ನಗರದಲ್ಲಿ ಎಂಬಿಬಿಎಸ್ 7ನೇ ಸೆಮಿಸ್ಟರ್ ಓದುತ್ತಿದ್ದಾರೆ. ಕಲಬುರಗಿಯ ಇನ್ನೊಬ್ಬ ವೈದ್ಯ ವಿದ್ಯಾರ್ಥಿ ಮಲ್ಲಿನಾಥ ಗುಬ್ಬೇವಾಡ ಅವರ ಪುತ್ರ ಪ್ರಜ್ವಲ್‌ಕುಮಾರ್ ಉಕ್ರೇನ್ ದೇಶದ ಪೆಟ್ರೊಮೊಯ್ಯಾ ನಗರದಲ್ಲಿ ಎಂಬಿಬಿಎಸ್ ಮಾಡುತ್ತಿದ್ದಾರೆ.

ಹಿಜಾಬ್–ಕೇಸರಿ ಶಾಲು ವಿವಾದ: ಸುಪ್ರೀಂ ಕೋರ್ಟ್ ವಕೀಲ ಸುಭಾಷ್ ಝಾ ವಾದ

‘ಭಾರತ ಇಸ್ಲಾಮೀಕರಣಗೊಳಿಸುವ ಹುನ್ನಾರ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹೈಕೋರ್ಟ್‌ನಲ್ಲಿ ಪ್ರತಿಧ್ವನಿಸಿದ ಹರ್ಷ ಕೊಲೆ
- ಮುಸ್ಲಿಂ ಸಂಘಟನೆಗಳಿಗೆ ಹರಿದು ಬರುತ್ತಿರುವ ವಿದೇಶಿ ಹಣ

ಬೆಂಗಳೂರು: ‘ಹಿಜಾಬ್, ಗಡ್ಡ ಅಥವಾ ಬುರ್ಖಾದ ವಿಚಾರಗಳ ತಗಾದೆಯನ್ನು ನಮ್ಮ ನ್ಯಾಯಾಲಯಗಳು ಎಷ್ಟು ವರ್ಷಗಳವರೆಗೆ ವಿಚಾರಣೆ ನಡೆಸುತ್ತಿರಬೇಕು’ ಎಂದು ಸುಪ್ರೀಂಕೋರ್ಟ್ ವಕೀಲ ಸುಭಾಷ್ ಝಾ ಅವರು ಹೈಕೋರ್ಟ್ ಅನ್ನು ಪ್ರಶ್ನಿಸಿದರು.

ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಮುಂಬೈನ ವಕೀಲ ಘನಶ್ಯಾಮ ಉಪಾಧ್ಯಾಯ ಸಲ್ಲಿಸಿದ್ದ ಅರ್ಜಿಯ ಪರವಾಗಿ ಶುಕ್ರವಾರ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಮೂವರು ಸದಸ್ಯರ ಸಾಂವಿಧಾನಿಕ ಪೀಠದ ಮುಂದೆ ವಾದ ಮಂಡಿಸಿದ ಅವರು, ‘ಹಿಜಾಬ್, ಗಡ್ಡ, ಬುರ್ಖಾ ಸಮಸ್ಯೆ ಇವತ್ತು ನಿನ್ನೆಯದಾಗಿ ಉಳಿದಿಲ್ಲ. ದೇಶದ ವಿವಿಧ ಹೈಕೋರ್ಟ್‌ಗಳಲ್ಲಿ ಈ ರೀತಿಯ ಅರ್ಜಿಗಳು ಆಗಾಗ್ಗೆ ಒಂದಿಲ್ಲೊಂದು ತಕರಾರು ಮೂಲಕ ದಾಖಲಾಗುತ್ತಲೇ ಇರುತ್ತವೆ. ಇಂತಹ ಅರ್ಜಿಗಳ ವಿಚಾರಣೆ ನಡೆಸುವುದರಿಂದ ಕೋರ್ಟ್‌ಗಳ ಅಮೂಲ್ಯ ಸಮಯ ವ್ಯರ್ಥವಾಗುತ್ತಿದೆ. ಈ ರೀತಿಯ ಅರ್ಜಿಗಳನ್ನು ದಾಖಲಿಸುತ್ತಿರುವುದರ ಹಿಂದೆ ಬಹುದೊಡ್ಡ ಷಡ್ಯಂತ್ರವೇ ಕೆಲಸ ಮಾಡುತ್ತಿದೆ’ ಎಂದು ಆರೋಪಿಸಿದರು.

‘ಅರ್ಜಿದಾರ ಹುಡುಗಿಯರು ಮೊದಲು ಹಿಜಾಬ್ ಧರಿಸಿರಲಿಲ್ಲ ಎಂಬುದನ್ನು ದಾಖಲೆಯಲ್ಲಿರುವ ಚಿತ್ರಗಳು ಸಾಬೀತುಪಡಿಸುತ್ತಿವೆ. ಆದರೆ, ಈಗ ಏಕಾಏಕಿ ಒಂದರ ಹಿಂದೆ ಒಂದರಂತೆ ಅವರು ರಿಟ್ ಅರ್ಜಿಗಳನ್ನು ಸಲ್ಲಿಸಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಪ್ರಕರಣಗಳಲ್ಲಿ ದುಬಾರಿ ಶುಲ್ಕ ಪಡೆಯುವ ಹಿರಿಯ ವಕೀಲರು ವಾದ ಮಂಡಿಸುತ್ತಿದ್ದಾರೆ. ಇದೆಲ್ಲಾ ಈ ಬಡ ಹುಡುಗಿಯರಿಗೆ ಹೇಗೆ ಸಾಧ್ಯವಾಗಿದೆ’ ಎಂದು ಝಾ ಪ್ರಶ್ನಿಸಿದರು.

‘ಧರ್ಮದ ಸಿದ್ಧಾಂತಗಳನ್ನು ಅಕ್ಷರಶಃ ಅನುಸರಿಸಲು ಸಾಧ್ಯವಿಲ್ಲ. 1,400 ವರ್ಷಗಳ ಹಿಂದೆ ಯಾವ ರೀತಿಯ ಆಚರಣೆ ಇತ್ತು ಎಂಬುದನ್ನು 2022 ರಲ್ಲೂ ಅನ್ವಯಿಸಬೇಕು ಎನ್ನುವುದು ಕಾರ್ಯ ಸಾಧುವಲ್ಲ. ಇವತ್ತು ಇಸ್ಲಾಂ ಜನ್ಮತಳೆದಿರುವ ಸೌದಿ ಅರೇಬಿಯಾದ ನೆಲದಲ್ಲಿ ಅಲ್ಲಿನ ರಾಜಕುಮಾರನೇ ಮಹಿಳೆಯರ ಸಬಲೀಕರಣದ ಬಗ್ಗೆ ಮಾತನಾಡುತ್ತಿದ್ದಾರೆ. ಇದನ್ನೆಲ್ಲಾ ಇಲ್ಲಿನವರು ನೆನಪಿಡಬೇಕು. ಮೊದಲು ದೇಶದ ಕಾನೂನನ್ನು ಅನುಸರಿಸಬೇಕು’ ಎಂದು ಪ್ರತಿಪಾದಿಸಿದರು.

ವಿದೇಶಿ ದುಡ್ಡು: ‘ಭಾರತವನ್ನು ಇಸ್ಲಾಮೀಕರಣಗೊಳಿಸುವ ಪ್ರಯತ್ನಕ್ಕೆ ಸೌದಿ ಅರೇಬಿಯಾದಿಂದ ದೊಡ್ಡ ಪ್ರಮಾಣದ ಹಣಸಹಾಯ ಇಲ್ಲಿನ ವಿವಿಧ ಮುಸ್ಲಿಂ ಸಂಘಟನೆಗಳಿಗೆ ಹರಿದು ಬರುತ್ತಿದೆ. ಪಿಎಫ್ಐ, ಎಸ್‌ಐಒ, ಜಮಾತ್ ಇ ಇಸ್ಲಾಮಿ ಸಂಸ್ಥೆಗಳು ಸೌದಿ ವಿಶ್ವವಿದ್ಯಾಲಯಗಳಿಂದ ಧನಸಹಾಯ ಪಡೆಯುತ್ತಿವೆ. ಈ ಸಂಘಟನೆಗಳನ್ನು ಸರ್ಕಾರ ನಿಷೇಧ ಮಾಡಿದರೆ ಮರುದಿನವೇ ಅವು ಮತ್ತೊಂದು ಹೆಸರಿನಲ್ಲಿ ಜೀವಪಡೆದು ತಮ್ಮ ಕಾನೂನುಬಾಹಿರ ಚಟುವಟಿಕೆ ನಡೆಸುತ್ತಿವೆ’ ಎಂದರು.

‘ಕರ್ನಾಟಕದಲ್ಲಿ ಹುಟ್ಟಿರುವ ಈ ವಿವಾದ ಈಗ ಇಡೀ ದೇಶಾದ್ಯಂತ ಹರಡಿದೆ. ಇಷ್ಟೊಂದು ದೊಡ್ಡ ಪ್ರಮಾಣದ ಆಂದೋಲನವನ್ನು ಇವರೆಲ್ಲಾ ರಾತ್ರೋರಾತ್ರಿ ಆಯೋಜಿಸಲು ಸಾಧ್ಯವಿಲ್ಲ. ಈ ಸಂಘರ್ಷದಲ್ಲಿ ಶಿವಮೊಗ್ಗದಲ್ಲಿನ ಹರ್ಷ ಎಂಬ ಯುವಕನ ಹತ್ಯೆಯಾಗಿದೆ. ಇದರ ಹಿಂದೆ ಸಿಎಫ್ಐ ಸಂಘಟನೆಯಿದೆ. ಹಾಗಾಗಿ, ಇಂತಹ ಮುಸ್ಲಿಂ ಸಂಘಟನೆಗಳ ವಿರುದ್ಧ ಸಿಬಿಐ ಅಥವಾ ಎನ್‌ಐಎ ತನಿಖೆಗೆ ನಿರ್ದೇಶಿಸಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ನಿಮ್ಮ ಆರೋಪಕ್ಕೆ ಏನಾದರೂ ಸಾಕ್ಷ್ಯಗಳನ್ನು ಇಲ್ಲಿ ಸಾದರಪಡಿಸಿದ್ದೀರಾ’ ಎಂದು ಪ್ರಶ್ನಿಸಿತು. ಇದಕ್ಕೆ ಝಾ,‘ಆಂಧ್ರದ ವಿನೋದ್ ಅಣ್ಣಾ ಎಂಬಾತ ವಿಡಿಯೊಗಳನ್ನು ಬಿಡುಗಡೆ ಮಾಡಿದ್ದಾನೆ. ಜೊತೆಗೆ ಅಯ್ಯರ್ ಎಂಬವರು ಪಾಪಿ ಸಂಘಟನೆಗಳ ವಿವರ ನೀಡಿದ್ದಾರೆ. ಒಂದು ಸಂಘಟನೆಯನ್ನು ನಿಷೇಧಿಸಿದರೆ, ಅವು ಇನ್ನೊಂದು ಹೆಸರಿನಲ್ಲಿ ಉದಯವಾಗುತ್ತವೆ’ ಎಂದರು. ಅರ್ಜಿದಾರರ ಮನವಿಯನ್ನು ಪರಿಗಣಿಸುವುದಾಗಿ ನ್ಯಾಯಪೀಠ ತಿಳಿಸಿತು.

ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ಹಿಜಾಬ್ ನಿರ್ಬಂಧ ವಿವಾದಕ್ಕೆ ಸಂಬಂಧಿಸಿದ ಎಲ್ಲ ರಿಟ್ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ಮೂವರು ಸದಸ್ಯರ ನ್ಯಾಯಪೀಠ ಪೂರ್ಣಗೊಳಿಸಿದ್ದು, ತೀರ್ಪು ಕಾಯ್ದಿರಿಸಿರುವುದಾಗಿ ಆದೇಶಿಸಿದೆ. ‘ಉಳಿದಂತೆ ಏನಾದರೂ ವಾದ ಮಂಡಿಸುವುದಿದ್ದರೆ ಲಿಖಿತ ರೂಪದಲ್ಲಿ ಸಲ್ಲಿಸಿ’ ಎಂದು ಉಭಯ ಪಕ್ಷಗಳ ಪರ ವಕೀಲರಿಗೆ ತಿಳಿಸಿದೆ.

ಮಾಧ್ಯಮ ನಿರ್ಬಂಧ: ಅರ್ಜಿ ವಜಾ

‘ಹಿಜಾಬ್ ಧರಿಸಿ ಶಾಲೆಗೆ ಬರುವ ವಿದ್ಯಾರ್ಥಿನಿಯರನ್ನು ಬೆನ್ನಟ್ಟಿ ವರದಿ ಮಾಡುತ್ತಿರುವ ಮಾಧ್ಯಮಗಳ ಮೇಲೆ ನಿರ್ಬಂಧ ವಿಧಿಸಬೇಕು’ ಎಂದು ಕೋರಲಾದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ನ್ಯಾಯಪೀಠ ತಿರಸ್ಕರಿಸಿತು.

ರಥೋತ್ಸವ ವಿಜಯನಗರ ಜಿಲ್ಲೆಯ ಕೊಟ್ಟೂರಿನ ಆರಾಧ್ಯದೈವ ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವ ಅಪಾರ ಭಕ್ತರ ನಡುವೆ ಶುಕ್ರವಾರ ಸಂಜೆ ಸಂಪನ್ನಗೊಂಡಿತು

ಪ್ರಜಾವಾಣಿ ಚಿತ್ರ: ಎ.ಎಂ. ಸೋಮಶೇಖರಯ್ಯ

ಗಾನಸೌರಭ ಯಕ್ಷಗಾನ ಶಾಲೆಗೆ ಪ್ರಶಸ್ತಿ

ಉಡುಪಿ: ಅಂಬಲಪಾಡಿ ದೇವಳದ ಧರ್ಮದರ್ಶಿ ನಿ.ಬೀ.ಅಣ್ಣಾಜಿ ಬಲ್ಲಾಳರ ಹೆಸರಿನಲ್ಲಿ ಅವರ ಪುತ್ರ ಡಾ.ನಿ.ಬೀ. ವಿಜಯ ಬಲ್ಲಾಳ ಅವರು ಕೊಡಮಾಡುವ ‘ನಿಡಂಬೂರು ಬೀಡು ಬಲ್ಲಾಳ ಪ್ರಶಸ್ತಿ’ಗೆ ಬೆಂಗಳೂರಿನ ಗಾನ ಸೌರಭ ಯಕ್ಷಗಾನ ಶಾಲೆ ಆಯ್ಕೆಯಾಗಿದೆ.

‘ಮೂವತ್ತು ವರ್ಷ ವಿವಿಧ ಮೇಳಗಳಲ್ಲಿ ಕಲಾವಿದರಾಗಿದ್ದ ಶಿವ ಕುಮಾರ್ ಬೇಗಾರ್ ಗಾನಸೌರಭ ಯಕ್ಷಗಾನ ಶಾಲೆ ಸ್ಥಾಪಿಸಿದ್ದಾರೆ’ ಎಂದು ಸಂಸ್ಥೆಯ ಅಧ್ಯಕ್ಷ ಕೆ.ಅಜಿತ್ ಕುಮಾರ್, ಕಾರ್ಯದರ್ಶಿ ಸುನಿಲ್ ಕುಮಾರ್ ತಿಳಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಅಭಿನವ ಬೀChi ಗಂಗಾವತಿ ಪ್ರಾಣೇಶ್ ಅವರೊಂದಿಗೆ ನಗೆ ಮಾತು

ಸೆಲೆಬ್ರಿಟಿ LIVE ಬೆಳಿಗ್ಗೆ 11ರಿಂದ 12

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ. ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್.
ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ

ಹರ್ಷ ಹತ್ಯೆಗೆ ಬಳಸಿದ್ದ ಎರಡೂ ಕಾರುಗಳು ಜಪ್ತಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಬಜರಂಗದಳದ ಕಾರ್ಯಕರ್ತ ಹರ್ಷ ಹತ್ಯೆಗೆ ಬಳಸಿದ್ದ ಎರಡು ಕಾರುಗಳನ್ನು ತನಿಖಾ ತಂಡ ಶುಕ್ರವಾರ ಜಪ್ತಿ ಮಾಡಿದೆ.

ಹಂತಕರು ಹತ್ಯೆ ಮಾಡುವ ಮೊದಲು ಒಂದು ಕಾರು, ನಂತರ ಅಲ್ಲಿಂದ ಪರಾರಿಯಾಗಲು ಮತ್ತೊಂದು ಕಾರು ಬಳಸಿರುವುದು ತನಿಖೆಯಿಂದ ದೃಢಪಟ್ಟಿದೆ. ಜಾರ್ಖಂಡ್ ರಾಜ್ಯದಲ್ಲಿ ನೋಂದಣಿಯಾದ ಸಂಖ್ಯಾಫಲಕ ಇರುವ ಬಿಳಿ ಬಣ್ಣದ ಸ್ವಿಫ್ಟ್ ಕಾರನ್ನು ಹಾಗೂ ಬೆಂಗಳೂರಿನ ಕೆಂಗೇರಿಯ ನೋಂದಣಿ ವಿಳಾಸ ಹೊಂದಿರುವ ಕೆಂಪು ಬಣ್ಣದ ಹುಂಡೈ ಐ–20 ಕಾರನ್ನು ಬಳಸಿದ್ದಾರೆ.

ಹತ್ಯೆಯ ದಿನ ಅಂದರೆ ಫೆ.20ರ ಬೆಳಿಗ್ಗೆ ಹರಿತವಾದ ಮೂರು ಲಾಂಗ್‌ಗಳನ್ನು ಭದ್ರಾವತಿಯ ಕುಲುಮೆಯೊಂದರಲ್ಲಿ ಸಿದ್ಧಪಡಿಸಿರುವುದು ಪತ್ತೆಯಾಗಿದೆ. ಅಂದು ಬೆಳಿಗ್ಗೆಯಿಂದಲೇ ಸೀಗೆಹಟ್ಟಿ ಬಳಿ ಕಾರಿನಲ್ಲಿ ಕುಳಿತ ಆರೋಪಿಗಳು ಹರ್ಷ ಅವರ ಚಲನವಲನದ ಮೇಲೆ ನಿಗಾ ಇರಿಸಿದ್ದರು. ರಾತ್ರಿ ಹೋಟೆಲ್‌ಗೆ ಬಂದಿದ್ದ ಸಮಯದಲ್ಲಿ ಹತ್ಯೆ ಮಾಡಿದ್ದಾರೆ ಎನ್ನುವುದು ತನಿಖೆಯಲ್ಲಿ ಖಚಿತವಾಗಿದೆ. ‘ಆರೋಪಿಗಳಲ್ಲಿ ಒಬ್ಬ ಹಳೆಯ ಕಾರುಗಳ ಮಾರಾಟದ ವ್ಯವಹಾರ ನಡೆಸುತ್ತಿದ್ದು, ಮಾರಾಟಕ್ಕೆ ಗ್ರಾಹಕರು ನೀಡಿದ ಕಾರುಗಳನ್ನು ಕೃತ್ಯಕ್ಕೆ ಬಳಸಿರಬಹುದು ಎಂಬ ಸಂಶಯವಿದೆ’ ಎಂದು ತನಿಖಾಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

11 ದಿನ ಪೊಲೀಸ್ ವಶಕ್ಕೆ: ಪೊಲೀಸರ ಮನವಿಯ ಮೇರೆಗೆ ನ್ಯಾಯಾಲಯವು ಶುಕ್ರವಾರ 10 ಆರೋಪಿಗಳನ್ನು ಹೆಚ್ಚಿನ ವಿಚಾರಣೆಗಾಗಿ 11 ದಿನಗಳ ಕಾಲ ಮತ್ತೆ ಪೊಲೀಸ್ ವಶಕ್ಕೆ ನೀಡಿದೆ.

ಸಂಜೆ 4ರ ವರೆಗಷ್ಟೇ ಕರ್ಫ್ಯೂ ಸಡಿಲಿಕೆ; ರಜೆ ಮುಂದುವರಿಕೆ

ಹರ್ಷ ಹತ್ಯೆಯ ನಂತರ ಉದ್ವಿಗ್ನಗೊಂಡಿದ್ದ ಶಿವಮೊಗ್ಗ ನಗರ ಸಹಜ ಸ್ಥಿತಿಗೆ ಮರಳಿದ್ದು, ಫೆ.26ರ ಬೆಳಿಗ್ಗೆ 6ರಿಂದ ಸಂಜೆ 4ರವರೆಗೆ ಕರ್ಫ್ಯೂ ಸಡಿಸಲಾಗಿದೆ.

26ರಿಂದ ಶಾಲಾ–ಕಾಲೇಜು ತೆರೆಯಲು ಶುಕ್ರವಾರ ಆದೇಶ ಹೊರಡಿಸಿದ್ದ ಜಿಲ್ಲಾಧಿಕಾರಿ ಆರ್. ಸೆಲ್ವಮಣಿ ದಿಢೀರನೆ ನಿರ್ಧಾರ ಬದಲಿಸಿದ್ದು, ಶನಿವಾರವೂ ರಜೆ ಘೋಷಿಸಿದ್ದಾರೆ.

₹ 1 ಕೋಟಿ ದಾಟಿದ ನೆರವು: ಮೃತ ಹರ್ಷ ಅವರ ಕುಟುಂಬಕ್ಕೆ ಅಪಾರ ಪ್ರಮಾಣದಲ್ಲಿ ನೆರವು ಹರಿದುಬರುತ್ತಿದೆ. ಶುಕ್ರವಾರ ಸಚಿವ ಮುರುಗೇಶ್ ನಿರಾಣಿ, ವಿಧಾನಪರಿಷತ್ ಸದಸ್ಯರಾದ ಎಸ್.ರುದ್ರೇಗೌಡ, ಡಿ.ಎಸ್. ಅರುಣ್, ಆದಿಚುಂಚನಗಿರಿ ಪ್ರಸನ್ನನಾಥ ಸ್ವಾಮೀಜಿ, ಹಂಪಿ ಗಾಯತ್ರಿ ಪೀಠದ ದಯಾನಂದಪುರಿ ಸ್ವಾಮೀಜಿ, ದೊಡ್ಡಬಳ್ಳಾಪುರದ ಬಸವದೇವರ ಮಠದ ನಿಶ್ಚಲ ದೇಶೀಕೇಂದ್ರ ಶ್ರೀ ಮತ್ತಿತರರು ಧನಸಹಾಯ ಮಾಡಿದರು. ಇಲ್ಲಿಯವರೆಗೆ ಹರ್ಷ ಅವರ ತಾಯಿ ಪದ್ಮಾ ಖಾತೆಗೆ ಜಮೆಯಾದ ಹಣ ₹ 1 ಕೋಟಿ ದಾಟಿದೆ. ನೆರವಿನ ಸ್ವಲ್ಪ ಪಾಲನ್ನು ಗಲಭೆಯಲ್ಲಿ ಗಾಯಗೊಂಡ ಹಿಂದೂ ಕಾರ್ಯಕರ್ತರ ಚಿಕಿತ್ಸೆಗೆ ವಿನಿಯೋಗಿಸಲಾಗುವುದು ಎಂದು ಸಹೋದರಿ ಅಶ್ವಿನಿ ಮಾಹಿತಿ ನೀಡಿದರು.

ಕೆಪಿಎಸ್‌ಸಿ: ಕೆಎಎಸ್ ಅಧಿಕಾರಿಗಳ ಸ್ಥಾನಪಲ್ಲಟ

ಬೆಂಗಳೂರು: 1998ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿಯಲ್ಲಿ ಮೂಲ ಆಯ್ಕೆಪಟ್ಟಿಯಂತೆ ತಹಶೀಲ್ದಾರ್ ಹುದ್ದೆಗೆ ನೇಮಕಗೊಂಡು ಕೆಎಎಸ್ ಅಧಿಕಾರಿಗಳಾಗಿ ಬಡ್ತಿ ಹೊಂದಿದ್ದ ಏಳು ಅಧಿಕಾರಿಗಳನ್ನು ಪರಿಷ್ಕೃತ ಆಯ್ಕೆಪಟ್ಟಿಯ ಅನುಸಾರ ಸ್ಥಾನಪಲ್ಲಟಗೊಳಿಸಿ ಗುರುವಾರ ಆದೇಶ ಹೊರಡಿಸಲಾಗಿದೆ.

ಈ ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್, ಪರಿಷ್ಕೃತ ಆಯ್ಕೆಪಟ್ಟಿಯ ಪ್ರಕಾರ ಅಧಿಕಾರಿಗಳ ಸ್ಥಾನಪಲ್ಲಟಕ್ಕೆ ಆದೇಶಿಸಿತ್ತು. 2021ರ ಜನವರಿ 30ರಂದು ಪ್ರಕಟಿಸಿರುವ ಪರಿಷ್ಕೃತ ಆಯ್ಕೆಪಟ್ಟಿಯಲ್ಲಿರುವಂತೆ ಈ ಅಧಿಕಾರಿಗಳನ್ನು ಸ್ಥಾನಪಲ್ಲಟ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಕಾರ್ಯದರ್ಶಿ ಹುದ್ದೆಯಲ್ಲಿರುವ ಹಿರಿಯ ಶ್ರೇಣಿಯ ಕೆಎಎಸ್ ಅಧಿಕಾರಿ ರೇಖಾ ಟಿ. ಅವರಿಗೆ ರಾಜ್ಯ ಲೆಕ್ಕಪತ್ರ ಇಲಾಖೆಯ ಉಪ ಆಯುಕ್ತರ ಹುದ್ದೆ, ಇ– ಆಡಳಿತ ಇಲಾಖೆಯ ಯೋಜನಾ ವ್ಯವಸ್ಥಾಪಕರ ಹುದ್ದೆಯಲ್ಲಿರುವ ಹಿರಿಯ ಶ್ರೇಣಿಯ ಕೆಎಎಸ್ ಅಧಿಕಾರಿ ರಶ್ಮಿ ಜಿ. ಅವರಿಗೆ ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತರ ಹುದ್ದೆ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಪ್ರಧಾನ ವ್ಯವಸ್ಥಾಪಕರ ಹುದ್ದೆಯಲ್ಲಿರುವ ಹಿರಿಯ ಶ್ರೇಣಿಯ ಕೆಎಎಸ್ ಅಧಿಕಾರಿ ಶಾರದಾ ಕೋಲಕಾರ ಅವರಿಗೆ ಅಬಕಾರಿ ಇಲಾಖೆಯ ಡಿವೈಎಸ್‌ಪಿ ಹುದ್ದೆ ನೀಡಲಾಗಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಹಾಸನ ವಿಶೇಷ ಭೂಸ್ವಾಧೀನಾಧಿಕಾರಿ ಹುದ್ದೆಯಲ್ಲಿರುವ ಹಿರಿಯ ಶ್ರೇಣಿ ಕೆಎಎಸ್ ಅಧಿಕಾರಿ ಮಂಜುನಾಥ್ ಜಿ.ಎನ್. ಅವರಿಗೆ ರಾಜ್ಯ ಲೆಕ್ಕಪತ್ರ ಇಲಾಖೆಯ ಉಪ ಆಯುಕ್ತರ ಹುದ್ದೆ, ಬಾಗಲಕೋಟೆ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿರುವ ಹಿರಿಯ ಶ್ರೇಣಿ ಕೆಎಎಸ್ ಅಧಿಕಾರಿ ಮಹಾದೇವ್ ಎ. ಮುರಗಿಗೆ ಸಹಕಾರ ಇಲಾಖೆಯ ಸಹಾಯಕ ರಿಜಿಸ್ಟ್ರಾರ್ ಹುದ್ದೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವಿಶೇಷ ಭೂಸ್ವಾಧೀನಾಧಿಕಾರಿ ಜಿ.ಎಚ್. ನಾಗಹನುಮಯ್ಯ ಮತ್ತು ಕಿರಿಯ ಶ್ರೇಣಿಯ ಕೆಎಎಸ್ ಅಧಿಕಾರಿ ಇಸ್ಮಾಯಿಲ್ ಸಾಬ್ ಶಿರಹಟ್ಟಿ ಅವರಿಗೆ ರಾಜ್ಯ ಲೆಕ್ಕಪತ್ರ ಇಲಾಖೆಯ ಸಹಾಯಕ ಆಯುಕ್ತರ ಹುದ್ದೆ ನೀಡಿ ಆದೇಶಿಸಲಾಗಿದೆ.

1998, 1999 ಮತ್ತು 2004ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆದಿತ್ತು. ಈ ಮೂರು ವರ್ಷಗಳಲ್ಲಿ ನಡೆದ ನೇಮಕಾತಿಯ ಪಟ್ಟಿಗಳನ್ನು ಪರಿಷ್ಕರಿಸುವಂತೆ ನ್ಯಾಯಾಲಯ ಆದೇಶಿಸಿತ್ತು. 1998ನೇ ಸಾಲಿನ ಅಧಿಕಾರಿಗಳನ್ನು ಕೆಎಎಸ್ ವೃಂದದ ಹುದ್ದೆಗಳಿಂದ ಬಿಡುಗಡೆಗೊಳಿಸಿ, ಇತರ ಹುದ್ದೆಗಳನ್ನು ನೀಡಲಾಗಿದೆ. 1999 ಮತ್ತು 2004ನೇ ಸಾಲಿನ ನೇಮಕಾತಿಗೆ ಸಂಬಂಧಿಸಿದಂತೆ ಈ ಪ್ರಕ್ರಿಯೆ ಬಾಕಿ ಇದೆ.

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಗರ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ಶುಕ್ರವಾರ ‘ವಿಧಾನಸೌಧ ಚಲೊ’ ಪ್ರತಿಭಟನಾ ಮೆರವಣಿಗೆ ನಡೆಯಿತು – ಪ್ರಜಾವಾಣಿ ಚಿತ್ರ

ಹಣ ಮೀಸಲಿಡಲು ಒತ್ತಾಯ: ವಿಧಾನಸೌಧ ಚಲೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಲಿತ ಸಮುದಾಯಗಳ ಜನಸಂಖ್ಯೆಗೆ ತಕ್ಕಂತೆ ಬಜೆಟ್‌ನಲ್ಲಿ ಹಣ ಮೀಸಲಿಡಬೇಕು. ಯೋಜನೆಗಳ ಸಮರ್ಪಕ ಜಾರಿಗೆ ಗಮನ ಹರಿಸಬೇಕು’ ಎಂದು ಒತ್ತಾಯಿಸಿ ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಯಿತು.

ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ‘ವಿಧಾನಸೌಧ ಚಲೊ’ ಪ್ರತಿಭಟನಾ ಮೆರವಣಿಗೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನಕಾರರು ಪಾಲ್ಗೊಂಡಿದ್ದರು.

ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಪ್ರತಿಭಟನಾ ಮೆರವಣಿಗೆ ಸಾಗಿತು. ಉದ್ಯಾನ ಬಳಿಯೇ ಪ್ರತಿಭಟನಕಾರರನ್ನು ಪೊಲೀಸರು ತಡೆದರು. ಅಲ್ಲಿಯೇ ಬಹಿರಂಗ ಸಭೆ ನಡೆಸಿದ ಪ್ರತಿಭಟನಕಾರರು, ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.

‘ಸಂವಿಧಾನದ ಆಶಯದಂತೆ ರಾಜ್ಯದಲ್ಲಿ ದಲಿತರ ಅಭಿವೃದ್ಧಿಗೆ ಸರ್ಕಾರ ಗಮನ ಹರಿಸಬೇಕು. ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಹಣ ಮೀಸಲಿಡಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ದಲಿತರಿಗಾಗಿ ಇಂತಿಷ್ಟು ಹಣ ನಿಗದಿಪಡಿಸಿ 32 ಇಲಾಖೆಗೆ ಕಳುಹಿಸುತ್ತಾರೆ. ಆದರೆ, ಆ ಹಣ ಸಮರ್ಪಕವಾಗಿ ಉಪಯೋಗವಾಗುತ್ತಿಲ್ಲ. ಕುಡಿಯುವ ನೀರು, ಭೂಮಿ, ವಸತಿ ಹಾಗೂ ಉದ್ಯೋಗಕ್ಕೆ ಆದ್ಯತೆ ನೀಡಿ ಯೋಜನೆಗಳನ್ನು ಜಾರಿಗೆ ತರಬೇಕು’ ಎಂದೂ ಒತ್ತಾಯಿಸಿದರು.

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ವಿಭಾಗ ಕಲಬುರಗಿ

ದೂರವಾಣಿ : 08472 –220196 www.midnglb@rediffmail.com.

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–3/ಕೆ.ಡಬ್ಲ್ಯೂ–4/2021–22/4364 ದಿನಾಂಕ: 25–02–2022

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ– 4) ::

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2021–22ನೇ ಸಾಲಿನ 4702 ಪ್ರಧಾನ ಕಾಮಗಾರಿಗಳು ಆಣೆಕಟ್ಟು ಪಿಕಪ್ ಬಂದಾರ ಯೋಜನೆ ಅಡಿ ಕಾಮಗಾರಿಗಳಿಗಾಗಿ ಇ–ಟೆಂಡರ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : ಕನಿಷ್ಠ ರೂ. 879,60,980.54 ಗರಿಷ್ಠ ರೂ. 888,38,836.11, 3) ಗುತ್ತಿಗೆದಾರರ ಅರ್ಹತೆ ವಿವರ : 1ನೇ ದರ್ಜೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ. ಇ–ಪ್ರೊಕ್ಯೂರಮೆಂಟನಂತೆ, ಕನಿಷ್ಠ ರೂ. 13,19,500.00, ಗರಿಷ್ಠ ರೂ. 13,32,600.00, 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: 04–03–2022 ಬೆಳಿಗ್ಗೆ 11.00 ಗಂಟೆಯ ವರೆಗೆ, 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : 05–03–2022 ಸಾಯಂಕಾಲ 5.30 ಗಂಟೆಯ ವರೆಗೆ, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 07–03–2022 ಬೆಳಿಗ್ಗೆ 11.00 ಗಂಟೆಗೆ, 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : 09–03–2022 ಬೆಳಿಗ್ಗೆ 11.00 ಗಂಟೆಗೆ, 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ, 10) ಅಂತರಜಾಲ ತಾಣದ ವಿಳಾಸ : www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/1154/ಎಂ.ಸಿ.&ಎ/2021–22

ಕರ್ನಾಟಕ ಸರ್ಕಾರ

ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಆಸ್ಪತ್ರೆ, ಬೆಳಗಾವಿ
ಸ್ವಾಯತ್ತ ಸಂಸ್ಥೆ
ಡಾ. ಬಿ. ಆರ್. ಅಂಬೇಡ್ಕರ ರಸ್ತೆ, ಬೆಳಗಾವಿ–590 001

Website: https://bimsbelgaum.karnataka.gov.in/ E.Mail: belgaum.bims@gmail.com

No. BIMS/MEW/TENDER/EQP/CR-60/2021-22 DATED: 25-02-2022

SHORT TERM TENDER NOTIFICATION (ಅಲ್ಪಾವಧಿ ಟೆಂಡರ್) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

ಮುಖ್ಯ ಆಡಳಿತಾಧಿಕಾರಿಗಳು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಬೆಳಗಾವಿ ಇಲ್ಲಿಗೆ Hospital Equipments & Accessories, B.I.M.S BELAGAVI ಒದಗಿಸಲು ಈ ಕೆಳ ಕಾಣಿಸಿದಂತೆ ಕೆ.ಟಿ.ಪಿ.ಪಿ. ನಿಯಮಾವಳಿ 1999 & 2000 ಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ–ಟೆಂಡರ್ ಮೂಲಕ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ.

Sl. No.	Tender Notification	Description of Tender	Tender Value (Approximate) (Rs. In Lakhs)	Downloading of Tender Document
1	No.BIMS/MEW/TENDER/EQP/ CR-60/2021-22 D: 26-02-2022	Hospital Equipments & Accessories, B.I.M.S BELAGAVI	Rs. 82.00 Lakhs	26/02/2022

ಇ–ಪ್ರೊಕ್ಯೂರಮೇಮಟ್‌ನಲ್ಲಿ ನೊಂದಾಯಿಸಿದ ಟೆಂಡರದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ https://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ನಿರ್ದೇಶಕರು, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಇವರನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಟೆಂಡರನ್ನು ಸ್ವೀಕರಿಸುವ ಅಧಿಕಾರಿಗಳು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/–ಮುಖ್ಯ ಆಡಳಿತಾಧಿಕಾರಿಗಳು
ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಬೆಳಗಾವಿ.

DIPR/BGM/RO-NO-1644/MCA/2021-22

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ
ಜಿಲ್ಲಾ ಶಸ್ತ್ರಚಿಕಿತ್ಸಕರ ಕಾರ್ಯಾಲಯ, ಜಿಲ್ಲಾ ಆಸ್ಪತ್ರೆ, ವಿಜಯಪುರ

ದೂರವಾಣಿ ಸಂಖ್ಯೆ: 08352–270009, ಇ–ಮೇಲ್: dsbijapur@gmail.com

ಸಂಖ್ಯೆ: ಜಿಆವಿ/ಟೆಂಡರ್/2021–22/1649 ದಿನಾಂಕ:24.02.2022

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆಗಳು

ವಿಷಯ: ವಿಜಯಪುರ ಜಿಲ್ಲಾ ಆಸ್ಪತ್ರೆಯ ವಿವಿಧ ಕಾರ್ಯಗಳ ಟೆಂಡರ್‌ಗಳನ್ನು ಆಹ್ವಾನಿಸುವ ಕುರಿತು.
ವಿಜಯಪುರ ಜಿಲ್ಲಾ ಆಸ್ಪತ್ರೆಗೆ 2022–23 ನೇ ಸಾಲಿಗಾಗಿ, ಆಸ್ಪತ್ರೆಯ ವಿವಿಧ ಕಾರ್ಯಗಳ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಗಿನಂತೆ ಆಹ್ವಾನಿಸಲಾಗಿದೆ.

ಅ.ನಂ	ಟೆಂಡರ್ ವಿವರ	ಇ.ಎಂ.ಡಿ ಮೊತ್ತ	ಟೆಂಡರ್ ನಂಬರ	ಷರಾ
ಟೆಂಡರ್ ಪ್ರಕಟಣೆ ಸಂಖ್ಯೆ: ಜಿಆವಿ/ನಾನ ಕ್ಲಿ.ಸೇ/ಟೆಂಡರ್/57/2021–22 ದಿನಾಂಕ: 23.02.2022				
1	2022–23 ನೇ ಸಾಲಿಗೆ ಜಿಲ್ಲಾ ಆಸ್ಪತ್ರೆ ವಿಜಯಪುರಕ್ಕೆ ಹೊರಗುತ್ತಿಗೆಯ ಆಧಾರದ ಮೇಲೆ “53” ಕೆಲಸಗಾರರ ನಾನ್–ಕ್ಲಿನಿಕಲ್ ಸೇವಾ ಸೌಲಭ್ಯದ ನಿರ್ವಹಣೆ ಮಾಡುವದು.	ರೂ. 40,00,000/–	DHV/Non-Clinical/57/2021-22/ Call-2	ದ್ವಿ–ಲಕೋಟೆ
ಟೆಂಡರ್ ಪ್ರಕಟಣೆ ಸಂಖ್ಯೆ: RTPCR/Lab/Tender/74/2021-22 ದಿನಾಂಕ: 23.02.2022				
2	2022–23 ನೇ ಸಾಲಿಗೆ Lab Chemicals & Miscellaneous for District Hospital Vijayapur.	ರೂ. 2,00,000/–	DHFWS/21-22/IND/5396 CALL-2	ದ್ವಿ–ಲಕೋಟೆ

ಹೆಚ್ಚಿನ ವಿವರಗಳನ್ನು www.eproc.karnataka.gov.inನ ವೆಬ್‌ಸೈಟಿನಲ್ಲಿ ಮೇಲಿನ ಟೆಂಡರ್ ನಂಬರಗಳ ಪ್ರಕಾರ ಪಡೆಯಬಹುದು.

ವಾಸಾಸಂಇ/ವಿಜಯಪುರ/554/ಎಂಸಿಎ/2021–22 ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು,ವಿಜಯಪುರ.

रजिस्ट्री सं. डी.एल.- 33004/99 REGD. No. D. L.-33004/99

भारत का राजपत्र
The Gazette of India

सी.जी.-डी.एल.-अ.-16022022-233524
CG-DL-E-16022022-233524
असाधारण
EXTRAORDINARY
भाग II—खण्ड 3—उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

सं. 698] नई दिल्ली, बुधवार, फरवरी 16, 2022/माघ 27, 1943
No. 698] NEW DELHI, WEDNESDAY, FEBRUARY 16, 2022/MAGHA 27, 1943

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 16ನೇ ಫೆಬ್ರವರಿ 2022

ಎಸ್.ಓ. ನಂ.718 (ಇ).–ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿನ ವಿವರಿಸಿರುವ ಜಮೀನುಗಳನ್ನು **ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ (ಬಿ.ಸಿ ರೋಡ್–ಕೊಟ್ಟಿಗೆಹಾರ ಸೆಕ್ಷನ್) ರಾಷ್ಟ್ರೀಯ ಹೆದ್ದಾರಿ ನಂ.73 ರಲ್ಲಿ ಕಿ.ಮೀ. 20.150 ರಿಂದ ಕಿ.ಮೀ.40.00 ರವರೆಗೆ ರಸ್ತೆ ನಿರ್ಮಾಣ,** (ಅಗಲೀಕರಣ, ನಾಲ್ಕು ಪಥ ಇತ್ಯಾದಿ), ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಚಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (1) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿತ್ತು.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು **ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು–73, ಪಿ.ಡಬ್ಲ್ಯು.ಡಿ ಆವರಣ, ಕೆ.ಆರ್. ವೃತ್ತ, ಬೆಂಗಳೂರು–01,** ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರರವರ ಕಚೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದಲ್ಲಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ (ಬಿ.ಸಿ. ರೋಡ್–ಕೊಟ್ಟಿಗೆಹಾರ ಸೆಕ್ಷನ್) ರಾಷ್ಟ್ರೀಯ ಹೆದ್ದಾರಿ ನಂ.73ರಲ್ಲಿ ಕಿ.ಮೀ. 20.150 ರಿಂದ ಕಿ.ಮೀ.40.00 ರವರೆಗೆ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ದಕ್ಷಿಣ ಕನ್ನಡ

ಕ್ರ. ಸಂ.	ಸರ್ವೆ / ಫ್ಲಾಟ್ ನಂಬರ್	ಜಮೀನಿನ ತಹರೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಮಾಪನದಲ್ಲಿ) (ಚ.ಮೀ. ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2	3	4	5	6
ತಾಲ್ಲೂಕು: ಬಂಟ್ವಾಳ					
ಗ್ರಾಮ: ಬಂಟ್ವಾಳ					
1	119/6ಎ2	ಖಾಸಗಿ	ಖುಷ್ಕಿ	101.0000000	0.0101000
2	121/30ಬಿ	ಸಾಮಾನ್ಯ (ಖಾಸಗಿ/ಸರ್ಕಾರಿ)	ಖುಷ್ಕಿ	283.0000000	0.0283000
3	158/2	ಖಾಸಗಿ	ತರಿ/ಎನ್‌ಎಕೆ	200.0000000	0.0200000
4	177/24	ಖಾಸಗಿ	ಪ್ಲಾಂಟೇಶನ್	100.0000000	0.0100000
5	28/1	ಖಾಸಗಿ	ಎನ್‌ಎಕೆ	25.0000000	0.0025000
ಗ್ರಾಮ: ಕಾವಳಮೂಡೂರು					
1	4/14	ಖಾಸಗಿ	ಪ್ಲಾಂಟೇಶನ್	100.0000000	0.0100000
2	4/2	ಖಾಸಗಿ	ಪ್ಲಾಂಟೇಶನ್	50.0000000	0.0050000
3	4/6	ಖಾಸಗಿ	ಪ್ಲಾಂಟೇಶನ್	50.0000000	0.0050000
ಗ್ರಾಮ: ಕಾವಳಪಡೂರು					
1	105/3A1ಬಿ	ಖಾಸಗಿ	ಖುಷ್ಕಿ	80.0000000	0.0080000
2	105/3ಎ2	ಸಾಮಾನ್ಯ (ಸರ್ಕಾರಿ/ಖಾಸಗಿ)	ಖುಷ್ಕಿ	75.0000000	0.0075000
3	105/3ಬಿ1	ಖಾಸಗಿ	ಪ್ಲಾಂಟೇಶನ್/ಎನ್‌ಎಕೆ	125.0000000	0.0125000
4	50/4ಎ	ಖಾಸಗಿ	ಪ್ಲಾಂಟೇಶನ್	75.0000000	0.0075000
5	50/4ಬಿ	ಖಾಸಗಿ	ಪ್ಲಾಂಟೇಶನ್	1,400.0000000	0.1400000
ಗ್ರಾಮ: ನಾವೂರು					
1	75/7ಎ	ಖಾಸಗಿ	ತರಿ	50.0000000	0.0050000
2	75/7ಬಿ	ಖಾಸಗಿ	ತರಿ	250.0000000	0.0250000
3	79/24	ಖಾಸಗಿ	ತರಿ/ಎನ್‌ಎಕೆ	350.0000000	0.0350000
4	79/25ಎ	ಖಾಸಗಿ	ತರಿ	200.0000000	0.0200000
5	79/32ಎ	ಖಾಸಗಿ	ಪ್ಲಾಂಟೇಶನ್	400.0000000	0.0400000
6	79/7	ಖಾಸಗಿ	ಪ್ಲಾಂಟೇಶನ್	200.0000000	0.0200000
7	84/1	ಖಾಸಗಿ	ತರಿ	350.0000000	0.0350000
8	84/17	ಖಾಸಗಿ	ಎನ್‌ಎಕೆ	250.0000000	0.0250000
9	88/11	ಖಾಸಗಿ	ಎನ್‌ಎಕೆ	75.0000000	0.0075000
			ಒಟ್ಟು	4,789.0000	0.4789

[ಎಫ್.ನಂ. 12037/30/2017–ಕೆಎನ್‌ಟಿ(ವಲಯ–4)3ಎ]
ರಾಜೇಶ್ ಗುಪ್ತ, ನಿರ್ದೇಶಕರು

ಮುಂಬೈ ಧಾರಣೆ

ಶೇಂಗಾ

25-2-2022

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9950-10000
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	8500-8600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1520)
ಒಂದು ವಾರದ ಡೆಲಿವರಿ	1475 (1515)
ಸೋಯಾ ಕಚ್ಚಾ	1470 (1490)
ಪಾಮ್ ವಾರದ ಡೆಲಿವರಿ	1393 (1418)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1460)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,475 (52,350)
ಬೆಳ್ಳಿ ಕೆ.ಜಿ 65,200 (68,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

‘ಭಾರತ–ರಷ್ಯಾ ದ್ವಿಪಕ್ಷೀಯ ಪಾವತಿ ವ್ಯವಸ್ಥೆಗೆ ಅಡ್ಡಿ ಇಲ್ಲ’

ನವದೆಹಲಿ (ಪಿಟಿಐ): ರಷ್ಯಾದ ಮೇಲೆ ಐರೋಪ್ಯ ಒಕ್ಕೂಟ ವಿಧಿಸಿರುವ ಆರ್ಥಿಕ ನಿರ್ಬಂಧದಿಂದಾಗಿ ಭಾರತ ಮತ್ತು ರಷ್ಯಾ ನಡುವಿನ ದ್ವಿಪಕ್ಷೀಯ ಪಾವತಿ ವ್ಯವಸ್ಥೆಯ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆ ಇಲ್ಲ ಎಂದು ಮೂಲಗಳು ಹೇಳಿವೆ.

ಭಾರತ ಮತ್ತು ರಷ್ಯಾ ದ್ವಿಪಕ್ಷೀಯ ಪಾವತಿಯು ಭಾರತದ ರೂಪಾಯಿ ಮೂಲಕವೇ ಆಗುತ್ತಿದೆ. ಆಮದು ಮತ್ತು ರಫ್ತು ವಹಿವಾಟು ನಡೆಯುವಾಗ ರೂಪಾಯಿಯಲ್ಲಿಯೇ ಹಣ ಪಾವತಿಸುವುದು ಮತ್ತು ಸ್ವೀಕರಿಸುವುದು ನಡೆಯುತ್ತಿದೆ. ಹೀಗಾಗಿ ವಿನಿಮಯ ದರದಲ್ಲಿ ಆಗುವ ಏರಿಳಿತವನ್ನು ಹೊರತುಪಡಿಸಿದರೆ, ಪಾವತಿಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆ ಆಗಲಾರದು ಎಂದು ತಿಳಿಸಿವೆ.

ಭಾರತಕ್ಕೆ ರಕ್ಷಣಾ ಸಾಮಗ್ರಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆ ಮಾಡುವ ದೇಶಗಳಲ್ಲಿ ರಷ್ಯಾ ಕೂಡ ಒಂದಾಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಉಭಯ ದೇಶಗಳ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವು ₹ 70,500 ಕೋಟಿಯಷ್ಟಿದೆ. 2020–21ರಲ್ಲಿ ₹ 60,750 ಕೋಟಿಯಷ್ಟು ಇತ್ತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,248
ಇಂದಿನ ಅಂತ್ಯ	16,658
▲	415
ದಿನದ ಗರಿಷ್ಠ	16,748

ವಿನಿಮಯ ದರ

$ ಡಾಲರ್	75.33
£ ಪೌಂಡ್	101.21
€ ಯುರೊ	84.57
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹390
12 ಮೊಟ್ಟೆಗೆ	₹58

ಮೈಸೂರು

100 ಮೊಟ್ಟೆಗೆ	₹395

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1470 (1510)
ಸೋಯಾ (ರಿಫೈನ್ಡ್)	₹1475 (1500)
ಸೂರ್ಯಕಾಂತಿ (ರಿಫೈನ್ಡ್)	₹1520 (1520)
ಪಾಮೋಲಿನ್	₹1395 (1420)

ಹಿಮಾಲಯದ ಯೋಗಿಯ ಸಲಹೆ ಮೇರೆಗೆ ಬಡ್ತಿ

ಎನ್‌ಎಸ್‌ಇ ಪ್ರಕರಣ: ಸುಬ್ರಮಣಿಯನ್ ಬಂಧನ

ನವದೆಹಲಿ (ಪಿಟಿಐ): ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ಮಾಜಿ ಗ್ರೂಪ್ ಆಪರೇಟಿಂಗ್ ಆಫೀಸರ್ ಆನಂದ ಸುಬ್ರಮಣಿಯನ್ ಅವರನ್ನು ಕೇಂದ್ರೀಯ ತನಿಖಾ ದಳ (ಸಿಬಿಐ) ಬಂಧಿಸಿದೆ.

ಷೇರುಗಳನ್ನು ತ್ವರಿತವಾಗಿ ಖರೀದಿಸಲು ಹಾಗೂ ಮಾರಾಟ ಮಾಡಲು ವರ್ತಕರಿಗೆ ಅವಕಾಶ ಕಲ್ಪಿಸುವ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಂಡ ಆರೋಪಕ್ಕೆ ಸಂಬಂಧಿಸಿದಂತೆ ಈ ಬಂಧನ ಆಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಈಚೆಗೆ ನೀಡಿದ ಆದೇಶದಲ್ಲಿ ಎನ್‌ಎಸ್‌ಇ ಸಿಇಒ (ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ) ಆಗಿದ್ದ ಚಿತ್ರಾ ರಾಮಕೃಷ್ಣ ಮತ್ತು ಹಿಮಾಲಯದ ಯೋಗಿಯೊಬ್ಬರ ನಡುವಿನ ಸಂಬಂಧದ ಕುರಿತು ಉಲ್ಲೇಖಿಸಿದೆ. ಆ ಆದೇಶದಲ್ಲಿ ಇರುವ ಹೊಸ ವಿಷಯಗಳನ್ನು ಪರಿಗಣಿಸಿ, ಬಂಧನ ಆಗಿದೆ ಎಂದು ಸಿಬಿಐ ಹೇಳಿದೆ.

ಸುಬ್ರಮಣಿಯನ್ ಅವರನ್ನು ಗುರುವಾರ ರಾತ್ರಿ ಚೆನ್ನೈನಲ್ಲಿ ವಶಕ್ಕೆ ಪಡೆಯಲಾಗಿದೆ. ಸುಬ್ರಮಣಿಯನ್ ಅವರನ್ನು ಕೆಲವು ದಿನಗಳಿಂದ ಸಿಬಿಐ ವಿಚಾರಣೆಗೆ ಒಳಪಡಿಸಿತ್ತು. ಆದರೆ, ಅವರು ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡುತ್ತಿರಲಿಲ್ಲ. ಈ ಕಾರಣಕ್ಕಾಗಿ ಅವರನ್ನು ಬಂಧಿಸಿ, ವಿಚಾರಣೆ ನಡೆಸಲು ಸಿಬಿಐ ಅಧಿಕಾರಿಗಳು ತೀರ್ಮಾನಿಸಿದರು.

ಸುಬ್ರಮಣಿಯನ್ ಅವರನ್ನು ದೆಹಲಿಗೆ ಕರೆತಂದು ವಿಶೇಷ ನ್ಯಾಯಾಲಯದ ಎದುರು ಹಾಜರುಪಡಿಸಲಾಯಿತು. ನ್ಯಾಯಾಲಯವು ಅವರನ್ನು ಮಾರ್ಚ್ 6ರವರೆಗೆ ಸಿಬಿಐ ವಶಕ್ಕೆ ಒಪ್ಪಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮುಖ್ಯಾಂಶಗಳು

- ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸದ ಸುಬ್ರಮಣಿಯನ್
- ಚಿತ್ರಾ ಆಡಳಿತ ಅವಧಿಯಲ್ಲಿ ನೇಮಕ, ಬಡ್ತಿ
- ಮಾರ್ಚ್ 6ರವರೆಗೆ ಸಿಬಿಐ ವಶಕ್ಕೆ ಒಪ್ಪಿಸಿದ ನ್ಯಾಯಾಲಯ



ಲೆಕ್ಕಪರಿಶೋಧನಾ ವರದಿಯೊಂದು ಸುಬ್ರಮಣಿಯನ್ ಅವರೇ ‘ಹಿಮಾಲಯದ ಯೋಗಿ’ ಎಂದು ಹೇಳಿತ್ತು. ಆದರೆ, ಇದನ್ನು ಸೆಬಿ ಫೆಬ್ರುವರಿ 11ರಂದು ಹೊರಡಿಸಿದ ಆದೇಶದಲ್ಲಿ ಅಲ್ಲಗಳೆದಿದೆ.

ಚಿತ್ರಾ ಅವರು ಸುಬ್ರಮಣಿಯನ್ ಅವರನ್ನು ತಮ್ಮ ಸಲಹೆಗಾರ ಆಗಿ 2013ರಲ್ಲಿ ನೇಮಕ ಮಾಡಿದ್ದರು. ನಂತರ ಅವರಿಗೆ ಜಿಒಒ ಆಗಿ ಬಡ್ತಿ ನೀಡಲಾಗಿತ್ತು. ಸುಬ್ರಮಣಿಯನ್ ಅವರ ನೇಮಕ ಹಾಗೂ ಅವರಿಗೆ ಬಡ್ತಿ ನೀಡಿದ್ದರ ಹಿಂದೆ ‘ಹಿಮಾಲಯದ ಯೋಗಿ’ಯ ಸಲಹೆ ಕೆಲಸ ಮಾಡಿತ್ತು ಎಂಬ ಆರೋಪ ಇದೆ.

ಸುದ್ದಿ 2 ನಿಮಿಷ

ಚಿನ್ನದ ದರ ₹ 1,660ರಷ್ಟು ಇಳಿಕೆ

ಬೆಂಗಳೂರು: ಐರೋಪ್ಯ ಒಕ್ಕೂಟವು ರಷ್ಯಾದ ಮೇಲೆ ಕಠಿಣ ಆರ್ಥಿಕ ನಿರ್ಬಂಧ ಹೇರಿರುವುದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಶುಕ್ರವಾರ ಚಿನ್ನ, ಬೆಳ್ಳಿ ದರ ಇಳಿಕೆ ಕಂಡಿತು. ಇದರಿಂದಾಗಿ ದೇಶಿ ಚಿನಿವಾರ ಪೇಟೆಗಳಲ್ಲಿಯೂ ಚಿನ್ನ, ಬೆಳ್ಳಿ ದರ ಕಡಿಮೆ ಆಯಿತು.

ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರ ₹ 1,660ರಷ್ಟು ಕಡಿಮೆ ಆಗಿ ₹ 52,280ಕ್ಕೆ ತಲುಪಿತು. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,900ರಷ್ಟು ಕಡಿಮೆ ಆಗಿ ₹ 67,100ಕ್ಕೆ ತಲುಪಿದೆ ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘ ತಿಳಿಸಿದೆ.

ದೆಹಲಿಯಲ್ಲಿ ಚಿನ್ನದ ದರ ₹ 1,274ರಷ್ಟು ಕಡಿಮೆ ಆಗಿದ್ದು 10 ಗ್ರಾಂಗೆ ₹ 50,913ಕ್ಕೆ ಇಳಿಕೆ ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 2,219ರಷ್ಟು ಇಳಿಕೆ ಆಗಿ ₹ 64,809ರಂತೆ ಮಾರಾಟ ಆಗಿದೆ.

ಕಂದು ಜಿಗಿಹುಳು ಹತೋಟಿಗೆ ಡಿಸ್ಟ್ರಪ್ಟರ್

ಬೆಂಗಳೂರು: ಭತ್ತದ ಬೆಳೆಯಲ್ಲಿ ಕಂದು ಜಿಗಿಹುಳುವಿನ ಹತೋಟಿಗಾಗಿ ಡಿಸ್ಟ್ರಪ್ಟರ್ ಎನ್ನುವ ಹೊಸ ಕೀಟನಾಶಕವನ್ನು ಪಿ.ಐ. ಇಂಡಸ್ಟ್ರೀಸ್ ಲಿಮಿಟೆಡ್ ಬಿಡುಗಡೆ ಮಾಡಿದೆ.

ಬೆಂಗಳೂರಿನಲ್ಲಿ ನಡೆದ ರಾಜ್ಯ ಕ್ರಿಮಿನಾಶಕ ಮಾರಾಟಗಾರರು ಮತ್ತು ವಿತರಕರ ಸಮಾರಂಭದಲ್ಲಿ ಈ ಉತ್ಪನ್ನ ಬಿಡುಗಡೆ ಮಾಡಲಾಗಿದೆ.

ಈ ಕೀಟನಾಶಕವು ಭತ್ತದ ಬೆಳೆಯಲ್ಲಿ ಕಾಣಿಸಿಕೊಳ್ಳುವ ಕಂದು ಜಿಗಿಹುಳುವನ್ನು ಪರಿಣಾಮಕಾರಿ ಆಗಿ ನಿಯಂತ್ರಿಸುತ್ತದೆ ಎಂದು ಕಂಪನಿಯ ಮಾರುಕಟ್ಟೆ ಮುಖ್ಯಸ್ಥ ದುಷ್ಯಂತ್ ಸೂದ್ ಹೇಳಿದರು.

ಕೀಟನಾಶಕಗಳ ಸುರಕ್ಷಿತ ಬಳಕೆ ಕುರಿತು ಮಾರಾಟ ವ್ಯವಸ್ಥಾಪಕ ರಮೇಶ್ ವಿವರ ನೀಡಿದರು. ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಪ್ರಶಾಂತ ಹೆಗಡೆ, ಪ್ರಧಾನ ವಾಣಿಜ್ಯ ಅಧಿಕಾರಿ ಗೌರವ್ ಕಾಟಿಯಾಲ್ ಮತ್ತಿತರರು ಸಮಾರಂಭದಲ್ಲಿ ಇದ್ದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊ ಮಾದವರು 16,600- 62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 9035363706, 9035364696

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ- 15000 to 28000 ಸಂಪರ್ಕಿಸಿರಿ 8904879948/ 8904879491

Marketing & Sales

'ಆಹಾರ ಉತ್ಪನ್ನಗಳನ್ನು ಮಾರಾಟ ಮಾಡಲು ತುರ್ತಾಗಿ ಅಗತ್ಯವಿರುವ ಮಾರಾಟಗಾರರು ಬೇಕಾಗಿದ್ದಾರೆ. 40 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು ಮತ್ತು ದಕ್ಷಿಣ ಬೆಂಗಳೂರಿನಲ್ಲಿ ಮತ್ತು ಸುತ್ತಮುತ್ತ ವಾಸಿಸುತ್ತಿರಬೇಕು. ಆಕರ್ಷಕ ಸಂಬಳ ಮತ್ತು ಪ್ರೋತ್ಸಾಹ. ಸಂಪರ್ಕಿಸಿ: 8660499891 / 8296741193''.

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ವಯಸ್ಸಾದವರನ್ನು,ವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಮಹಿಳೆಯರು, ಯುವಕರು ಬೇಕಾಗಿದ್ದಾರೆ. ತಕ್ಷಣ ವಸತಿಯೂಟದೊಂದಿಗೆ ಸಂಬಳ 16,000 - 23,000. 6366324863, 9663196788

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building — **Mysore**

HOTEL & Lodging for Sale/ Lease. 70,000 Rent Coming Property in Heart of the City, Krishna Vilasa Road, Mysuru. Interested Contact: 9880777894, 6361096776

Flat — **Mysore**

GOVIANU LUXURIA, High end Luxury Flats in Mysore, Zoo Road, near Mysore-Mall, Rera-003588, www.govianu.com. 8103990990

House — **Peenya**

T. DASARAHALLI 1350Sqft East Facing Earning 54000 rent Ramesh Road Malleswaram Tailoring Society land 1.08 Cr Contact 7760080110

Residential/ Commercial — **Peenya**

T. DASARAHALLI 1350 Sqft East Facing Earning 54000 rent Ramesh Road Malleswaram Tailoring Society land 1.08 Cr Contact 7760080110

ರೆಂಟಲ್ ಪ್ರಾಪರ್ಟೀಸ್

Accommodation Wanted — **Commercial**

ಬಾಡಿಗೆ ಕಟ್ಟಡ ಬೇಕಾಗಿದೆ. ಬೆಂಗಳೂರಿನಾದ್ಯಂತ ಬಾಡಿಗೆಗಳಲ್ಲಿ ಹಾಸ್ಟೆಲ್‌ಗಳು/ ಪಿಜಿಗಳು (ಚಾಲನೆಯಲ್ಲಿರುವ /ಹೊಸದು) ನಡೆಸಲು ಕಟ್ಟಡವನ್ನು ಹುಡುಕುತ್ತಿದ್ದೇವೆ. Ph : 8217404681

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಚೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ

Business Offers — **Franchise**

PMS COMPANY is inviting Franchise for every pincode in Bangalore and Karnataka for Real estate Agents. For more details Contact: 9342335589..or you can visit our office at Church Street, St.Mark's Road, Bangalore.

ಸಾರ್ವಜನಿಕ ಪ್ರಕಟಣೆ

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ NABARD NATIONAL BANK FOR AGRICULTURE AND RURAL DEVELOPMENT

ನಬಾರ್ಡ್, ಕರ್ನಾಟಕ ಪ್ರಾದೇಶಿಕ ಕಚೇರಿ, 46 ಕೆ.ಜಿ.ರಸ್ತೆ, ಬೆಂಗಳೂರು – 560009 ಇವರಿಗೆ ಬಾಡಿಗೆ ಕಾರುಗಳಿಗಾಗಿ ಟೆಂಡರ್ ಆಹ್ವಾನ ಪ್ರಕಟಣೆ

ನಬಾರ್ಡ್, ಕರ್ನಾಟಕ ಪ್ರಾದೇಶಿಕ ಕಚೇರಿ, ಇವರು ಟೆಂಡರ್‌ನಲ್ಲಿರುವ ಷರತ್ತು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ಅರ್ಹ ಬಿಡ್‌ದಾರರಿಂದ ಕ್ಯಾಪ್ಟನ್ಡ್ ಕಾಮಗಾರಿಗಾಗಿ (ಅಂದಾಜು ವೆಚ್ಚ: ವಾರ್ಷಿಕ ರೂ.20 ಲಕ್ಷ) ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಸಂಪೂರ್ಣ ಭರ್ತಿ ಮಾಡಿ ಮೊಹರು ಹಾಕಿದ ಬಿಡ್‌ಗಳನ್ನು 17.03.2022 ರಂದು 15:00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ಆಸಕ್ತಿಯುಳ್ಳ ಗುತ್ತಿಗೆದಾರರು/ ಸಂಸ್ಥೆಗಳು ನಮ್ಮ ವೆಬ್‌ಸೈಟ್ www.nabard.org ನಿಂದ ಮತ್ತು ಸೆಂಟ್ರಲ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಂಪರ್ಕಿಸಬೇಕಾದ ವಿಳಾಸ : ಸಿಜಿಎಂ, ನಬಾರ್ಡ್, ಕರ್ನಾಟಕ ಪ್ರಾದೇಶಿಕ ಕಚೇರಿ, 46, ಕೆಂಪೇಗೌಡ ರಸ್ತೆ, ಬೆಂಗಳೂರು – 560 009 ಫೋನ್ : 080-22076554/564. ಇ–ಮೇಲ್: dpsp.bangalore@nabard.org

ಭವಿಷ್ಯ

Astrology

'ವಿಶ್ವಖ್ಯಾತಿಯ ದಕ್ಷಿಣಕನ್ನಡ' ಕೇರಳಿಯ ದೈವಸಂಭೂತ ಜ್ಯೋತಿಷ್ಯ,ವಾಸ್ತುಗುರು ಶ್ರೀದೇವಾನಂದನ್ ರವರಿಂದ ಜೀವನದ ಸರ್ವತೋಮುಖ ಅಭಿವೃದ್ಧಿ,ಸುಖಶಾಂತಿ, ನೆಮ್ಮದಿಗಾಗಿ,ಸರ್ವಮನಇಚ್ಛೆ, ಮಹಾವಶೀಕರಣ,ಆಕರ್ಷಣಾ, ಸಂಮೋಹನ ಮತ್ತು ಶತ್ರು ಸಂಬಂಧಿತ,ದುಷ್ಟಶಕ್ತಿ ಮಾಯಾವಿಗಳ ಇಂದೇ ಪರಿಹಾರಕ್ಕಾಗಿ.9845005009

ಬ್ರಹ್ಮಜ್ಞಾನ ಪಂಡಿತ ಶಂಕರ್ ಗುರೂಜಿ ಪ್ರಖ್ಯಾತ ವಾಸ್ತು ಜ್ಯೋತಿಷ್ಯರು ಪ್ರೀತಿಯಲ್ಲಿ ನಂಬಿ ಮೋಸ ಸ್ತ್ರೀ ಪುರುಷ ಗುಪ್ತ ಸಮಸ್ಯೆ ಶತ್ರುಕಾಟ ಆಸ್ತಿಯಲ್ಲಿ ಕಿರಿಕಿರಿ ಪ್ರಯೋಗ ನಿಮ್ಮ ಜೀವನದ ಯಾವುದೇ ಕಠಿಣ ಹಾಗೂ ಗುಪ್ತ ಸಮಸ್ಯೆಗಳಿಗೆ ಸಂಪರ್ಕಿಸಿ 9845167316

ಪ್ರವಾಸ

Travel

23.03.2022,19.04.2022, 18.05.2022 ಶ್ರೀಲಂಕಾ 8ದಿನಗಳು.18.03.2022, 12.04.2022, 11:05.2022 ಕಾಶಿ,ಗಯಾ,ಅಯೋಧ್ಯ 7ದಿನಗಳು. 20.03.2022, 03.04.2022 ಗುಜರಾತ್ 8ದಿನಗಳು.21.03.2022, 12.04.2022, 27.04.2022, 23.05.2022 ಶಿಮ್ಲಾ, ಕುಲುಮನಾಲಿ 7ದಿನಗಳು. 11.03.2022, 19.04.2022 ದೆಹಲಿ, ಆಗ್ರಾ,ಜೈಪುರ, 6ದಿನಗಳು. 18.03.2022,22.04.2022, 16.05.2022 ರಾಮೇಶ್ವರ, ಕನ್ಯಾಕುಮಾರಿ 5ದಿನಗಳು. ಮಲೆನಾಡು ಪ್ರವಾಸ 3ದಿನಗಳು. ಇದಲ್ಲದೆ ಕಸ್ಟಮೈಸ್ ಫ್ಯಾಮಿಲಿ ಪ್ರವಾಸ ಹಾಗೂ ಇತರ ಫ್ಯಾಮಿಲಿ ಪ್ರವಾಸಗಳಿಗಾಗಿ ವಿಚಾರಿಸಿ: ಜೈನ್ ಟ್ರಾವೆಲ್ಸ್ ಬೆಂಗಳೂರು-03. 9448402248, 7022547922, 9342483417

18.04.2022, 11ದಿನಗಳ ಕಾಶಿಯಾತ್ರೆ. 07.04.2022, 11ದಿನಗಳ ನೇಪಾಳ. ಪೊಖ್ರಾ, ಮುಕ್ತಿನಾಥ್,ಕಾಶಿ. 21.04.2022, 12ದಿನಗಳ ವೈಷ್ಣೊದೇವಿ, ಕುಲುಮನಾಲಿ, ಪಂಚಶಕ್ತಿಪೀಠಗಳು. 04.05.2022,18.05.2022, 15ದಿನಗಳ ಚಾರ್‌ಧಾಮ್‌ಯಾತ್ರೆ. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್, ತ್ಯಾಗರಾಜನಗರ, ಬೆಂಗಳೂರು-70. 9342287551, 8050629305

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5ದಿನಗಳು. 04.03.2022 ತಿರುನ್ನಲ್ಲಾರ್, ಶನಿದೇವರ ದರ್ಶನ,ನವಗ್ರಹ ದರ್ಶನ,ತಂಜಾವೂರು, ಕುಂಭಕೋಣಂ, ಚಿದಂಬರಂ, ಶ್ರೀರಂಗಂ, ವಲಾಂಗಿಣೆ ಇತ್ಯಾದಿ 18ಕ್ಷೇತ್ರಗಳು. 9448390735

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 17/03/22 ನೇಪಾಳ, ಮುಕ್ತಿನಾಥ್, ಕಾಶಿ. 12/05/22 ಚಾರ್ಧಾಮ್, ಕೇದಾರನಾಥ,ಬದ್ರಿನಾಥ್. 140/04/22 ವೈಷ್ಣೋದೇವಿ, ಕುಲು, ಮನಾಲಿ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

BOOK YOUR CLASSIFIEDS ADVERTISEMENT

PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಐವಿಎಫ್‌ಆರ್‌ಟಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿದೇಶಿಯರ ವಲಸೆ ವೀಸಾ ನೋಂದಣಿ ಟ್ರ್ಯಾಕಿಂಗ್ (ಐವಿಎಫ್‌ಆರ್‌ಟಿ) ಯೋಜನೆಯನ್ನು ಐದು ವರ್ಷಗಳ ಅವಧಿಗೆ ಮುಂದುವರಿಸಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ಅಂದಾಜು ₹ 1,364.88 ಕೋಟಿ ವೆಚ್ಚದ ಈ ಯೋಜನೆಯು 2021ರ ಏಪ್ರಿಲ್ 1ರಿಂದ ಪೂರ್ವಾನ್ವಯದೊಂದಿಗೆ, 2026ರ ಮಾರ್ಚ್ 31ರವರೆಗಿನ ಐದು ವರ್ಷಗಳ ಅವಧಿಗೆ ಜಾರಿಯಲ್ಲಿರಲಿದೆ.

‘ಕೋವಿಡ್: ನಿರ್ಬಂಧ ತೆರವುಗೊಳಿಸಿ’

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್–19ರ ಪ್ರಕರಣಗಳು ಕಡಿಮೆ ಯಾಗುತ್ತಿರುವುದರಿಂದ ನೈಟ್ ಕರ್ಫ್ಯೂ ಸೇರಿದಂತೆ ಸಾಮಾಜಿಕ, ಕ್ರೀಡಾ, ಮನರಂಜನೆ, ಶೈಕ್ಷಣಿಕ ಧಾರ್ಮಿಕ ಕಾರ್ಯಕ್ರಮ ಮೇಲಿನ ಕೋವಿಡ್ ನಿರ್ಬಂಧಗಳನ್ನು ತೆರವುಗೊಳಿಸ ಬಹುದು ಎಂದು ಕೇಂದ್ರ ಸರ್ಕಾರವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ತಿಳಿಸಿದೆ. ಈ ಕುರಿತು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಮಾರ್ಗಸೂಚಿ ಹೊರಡಿಸಿದ್ದಾರೆ.

ಜಾಗತಿಕ ಷೇರುಪೇಟೆಗಳ ಗಳಿಕೆ: ರೂಪಾಯಿ ವೃದ್ಧಿ

ಸೆನ್ಸೆಕ್ಸ್ 1,328 ಅಂಶ ಚೇತರಿಕೆ

ಮುಂಬೈ (ಪಿಟಿಐ): ಗುರುವಾರದ ವಹಿವಾಟಿನಲ್ಲಿ ಭಾರಿ ಕುಸಿತ ಕಂಡಿದ್ದ ದೇಶಿ ಷೇರುಪೇಟೆಗಳು ಶುಕ್ರವಾರ ಚೇತರಿಕೆಯ ಹಾದಿಗೆ ಮರಳಿದವು. ಶೇಕಡ 2.5ರವರೆಗೂ ಏರಿಕೆ ಕಂಡವು.

ಐರೋಪ್ಯ ಒಕ್ಕೂಟವು ರಷ್ಯಾದ ಮೇಲೆ ಕಠಿಣ ಆರ್ಥಿಕ ನಿರ್ಬಂಧ ಹೇರಿರುವುದರಿಂದ ಜಾಗತಿಕ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದು, ದೇಶಿ ಷೇರುಪೇಟೆಗಳಲ್ಲಿಯೂ ಅದರ ಪ್ರಭಾವ ಕಂಡುಬಂದಿತು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಹೆಚ್ಚಳವೂ ಸೂಚ್ಯಂಕದ ಏರಿಕೆಗೆ ಕಾರಣವಾಯಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಏಳು ದಿನಗಳ ಇಳಿಮುಖ ಹಾದಿಯಿಂದ ಗುರುವಾರ ಹೊರಬಂದಿತು. 1,328 ಅಂಶ ಜಿಗಿತ ಕಂಡು 55,858 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 410 ಅಂಶ ಹೆಚ್ಚಾಗಿ 16,658 ಅಂಶಗಳಿಗೆ ತಲುಪಿತು.

‘ಅಮೆರಿಕದ ಮಾರುಕಟ್ಟೆ ಚೇತರಿಕೆ ಕಂಡಿದ್ದರಿಂದಾಗಿ ಏಷ್ಯಾದ ಮಾರುಕಟ್ಟೆಗಳಲ್ಲಿಯೂ ಉತ್ತಮ ವಹಿವಾಟು ನಡೆಯಿತು. ಹೀಗಿದ್ದರೂ ರಷ್ಯಾ–ಉಕ್ರೇನ್ ಯುದ್ಧದ ಬೆಳವಣಿಗೆಯನ್ನು ಆಧರಿಸಿ ವಹಿವಾಟು ಚಂಚಲವಾಗಿಯೇ ಇರಲಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

‘ಜಾಗತಿಕ ಬಿಕ್ಕಟ್ಟು ಉಲ್ಬಣಿಸಿದರೆ ಅದರಿಂದ ಕಚ್ಚಾ ತೈಲ ಮತ್ತು ಸರಕುಗಳ ಬೆಲೆಗಳ ಮೇಲೆ ಪರಿಣಾಮ ಉಂಟಾಗಲಿದೆ. ಒಂದೊಮ್ಮೆ ಕಚ್ಚಾ ತೈಲ ದರವು ಬ್ಯಾರಲ್‌ಗೆ 100 ಡಾಲರ್‌ಗಿಂತ ಹೆಚ್ಚಿನ ಮಟ್ಟದಲ್ಲಿಯೇ ಇದ್ದರೆ, ಅದರಿಂದಾಗಿ ಹಣದುಬ್ಬರ ಹೆಚ್ಚಾಗಲಿದೆ. ಚಾಲ್ತಿ ಖಾತೆ ಕೊರತೆ ಮೇಲೆ ಪರಿಣಾಮ ಉಂಟಾಗಲಿದೆ. ಈ ಮೂಲಕ ಆರ್ಥಿಕತೆ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುವ ಸಾಧ್ಯತೆ ಇದೆ’ ಎಂದು ಜೂಲಿಯಸ್ ಬೇರ್‌ನ ಕಾರ್ಯನಿರ್ವಾಹಕ ನಿರ್ದೇಶಕ ನಿತಿನ್ ರಹೇಜಾ ತಿಳಿಸಿದ್ದಾರೆ.

ರೂಪಾಯಿ ಮೌಲ್ಯ ವೃದ್ಧಿ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 27 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 75.33ರಂತೆ ವಿನಿಮಯಗೊಂಡಿತು. ಗುರುವಾರದ ವಹಿವಾಟಿನಲ್ಲಿ 99 ಪೈಸೆಗಳಷ್ಟು ಇಳಿಕೆ ಕಂಡಿತ್ತು.

ಸಂಪತ್ತು ₹ 7.72 ಲಕ್ಷ ಕೋಟಿ ಹೆಚ್ಚಳ

ಷೇರುಪೇಟೆಯಲ್ಲಿ ನಡೆದ ಸಕಾರಾತ್ಮಕ ವಹಿವಾಟಿನಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ಶುಕ್ರವಾರ ₹ 7.72 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ. ಇದರಿಂದ ಮುಂಬೈ ಷೇರುಪೇಟೆಯ ಬಂಡವಾಳ ಮೌಲ್ಯ ₹ 242.24 ಲಕ್ಷ ಕೋಟಿಗೆ ತಲುಪಿದೆ. ಗುರುವಾರದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯ ₹ 13.44 ಲಕ್ಷ ಕೋಟಿಯಷ್ಟು ಕರಗಿತ್ತು.

ಅಮೆರಿಕ: ‘ಸುಪ್ರೀಂ’ ನ್ಯಾಯಮೂರ್ತಿಯಾಗಿ ಕಪ್ಪು ವರ್ಣೀಯ ಮಹಿಳೆ ನೇಮಕ

ವಾಷಿಂಗ್ಟನ್ (ಎಎಫ್‌ಪಿ): ಕಪ್ಪು ವರ್ಣೀಯ ಮಹಿಳೆ ಕೆತಂಜಿ ಬ್ರೌನ್ ಜಾಕ್ಸನ್ ಅವರನ್ನು ಅಮೆರಿಕದ ಇತಿಹಾಸದಲ್ಲಿಯೇ ಮೊದಲ ಬಾರಿಗೆ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕ ಮಾಡಿ ಅಧ್ಯಕ್ಷ ಜೋ ಬೈಡನ್ ಅವರು ಆದೇಶ ಹೊರಡಿಸಿದ್ದಾರೆ.

ಕೆತಂಜಿ ಬ್ರೌನ್ ಜಾಕ್ಸನ್

‘ಕೆತಂಜಿ ಅವರನ್ನು ನಾಮಕರಣ ಮಾಡಲು ನನಗೆ ಹೆಮ್ಮೆಯಾಗುತ್ತಿದೆ. ಇವರು, ಕಾನೂನು ಅರಿವುಳ್ಳ ದೇಶದ ಪ್ರತಿಭಾನ್ವಿತೆಯಾಗಿದ್ದಾರೆ’ ಎಂದು ಬೈಡನ್ ಹೇಳಿದ್ದಾರೆ.

‘ಅಧಿಕಾರಿಗಳ ವೇತನ ಸಮಿತಿ’ ರಚನೆಗೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ನೌಕರರಿಗೆ ಸರಿಸಮಾನವಾದ ವೇತನ ಜಾರಿಗೊಳಿಸಲು ‘ಅಧಿಕಾರಿಗಳ ವೇತನ ಸಮಿತಿ’ಯೊಂದನ್ನು ರಚಿಸುವಂತೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿಯೋಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದೆ.

ಮುಂಬರುವ ಬಜೆಟ್‌ನಲ್ಲಿ ಇದನ್ನು ಪ್ರಕಟಿಸುವಂತೆ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ನೇತೃತ್ವದ ನಿಯೋಗ ಬೊಮ್ಮಾಯಿ ಅವರನ್ನು ಒತ್ತಾಯಿಸಿದೆ. ಕೇಂದ್ರ ಸರ್ಕಾರಿ ನೌಕರರಿಗೆ ಸರಿ ಸಮಾನವಾದ ವೇತನ ಶ್ರೇಣಿ ಮತ್ತು ಭತ್ಯೆಗಳನ್ನು ರಾಜ್ಯ ಸರ್ಕಾರಿ ನೌಕರರಿಗೆ ನೀಡಿದರೆ ಸರ್ಕಾರಕ್ಕೆ ₹10,656 ಕೋಟಿ ಹೆಚ್ಚುವರಿಯಾಗಿ ಬೇಕಾಗುತ್ತದೆ. ಈಗ ಖಾಲಿ ಇರುವ ಹುದ್ದೆಗಳಿಂದಾಗಿ ಸರ್ಕಾರಕ್ಕೆ ವರ್ಷಕ್ಕೆ ಸುಮಾರು ₹8,531 ಕೋಟಿ ಉಳಿತಾಯವಾಗುತ್ತಿದೆ. ಸರ್ಕಾರಕ್ಕೆ ಹೆಚ್ಚುವರಿಯಾಗಿ ₹2,125 ಕೋಟಿ ಬೇಕಾಗಬಹುದು ಎಂದು ಷಡಾಕ್ಷರಿ ಅವರು ಮುಖ್ಯಮಂತ್ರಿಯವರಿಗೆ ಮನವರಿಕೆ ಮಾಡಿದರು.

ರಾಷ್ಟ್ರದ ಜಿಎಸ್‌ಡಿಪಿ ಅವಲೋಕಿಸಿದರೆ ರಾಜ್ಯವು ಆರ್ಥಿಕ ಬೆಳವಣಿಗೆಯಲ್ಲಿ ರಾಷ್ಟ್ರದಲ್ಲೇ 6ನೇ ಸ್ಥಾನದಲ್ಲಿದೆ. ಇದರಲ್ಲಿ ರಾಜ್ಯ ಸರ್ಕಾರಿ ನೌಕರರ ಸೇವೆ ಮತ್ತು ಪಾತ್ರ ಮುಖ್ಯವಾಗಿದೆ. ಒಟ್ಟು 28 ರಾಜ್ಯಗಳಲ್ಲಿ ಕೇಂದ್ರ ಮಾದರಿಯ ವೇತನ ಪದ್ಧತಿ ಜಾರಿಯಲ್ಲಿದೆ ಎಂದು ತಿಳಿಸಿದ್ದಾರೆ.

ಕೇಂದ್ರವು 2016 ರಲ್ಲಿ 7 ನೇ ವೇತನ ಆಯೋಗದ ಶಿಫಾರಸುಗಳನ್ನು ಆಧರಿಸಿ ತನ್ನ ನೌಕರರ ವೇತನ ಮತ್ತು ಭತ್ಯೆಗಳನ್ನು ಪರಿಷ್ಕರಿಸಿದೆ. ರಾಜ್ಯದಲ್ಲಿ 2016ರಲ್ಲಿ ವೇತನ ಆಯೋಗ ರಚಿಸದೇ ಒಂದು ವರ್ಷ ತಡವಾಗಿ ಅಂದರೆ 2017 ರಲ್ಲಿ 6 ನೇ ವೇತನ ಆಯೋಗವನ್ನು ರಚಿಸಲಾಯಿತು. ಆಯೋಗ ನೀಡಿದ ಶಿಫಾರಸು ಆಧರಿಸಿ 2017 ರ ಜುಲೈನಿಂದ ಅನ್ವಯಿಸಿ, 2018 ರ ಏಪ್ರಿಲ್ 1 ರಿಂದ ಆರ್ಥಿಕ ಲಾಭ ದೊರೆಯುವಂತೆ ವೇತನ, ಭತ್ಯೆ ಪರಿಷ್ಕರಿಸಲಾಗಿತ್ತು. ಇದರಲ್ಲಿ ಕೇಂದ್ರ ಮಾದರಿ ವೇತನ ಬೇಡಿಕೆ ಪರಿಗಣಿಸಿರಲಿಲ್ಲ ಎಂದು ಹೇಳಿದ್ದಾರೆ.

ಅಂಕಿ-ಅಂಶಗಳು

6.10 ಕೋಟಿ — ರಾಜ್ಯದ ಜನಸಂಖ್ಯೆ

7.63 ಲಕ್ಷ — ಮಂಜೂರಾದ ಹುದ್ದೆಗಳು

5,12,720 — ಭರ್ತಿಯಾಗಿರುವ ಹುದ್ದೆಗಳು

2,50,363 — ಖಾಲಿ ಇರುವ ಹುದ್ದೆಗಳು

ಕ್ರಿಪ್ಟೊ ಕರೆನ್ಸಿ: ಕೇಂದ್ರದ ಸ್ಪಷ್ಟನೆಗೆ ‘ಸುಪ್ರೀಂ’ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಟ್ ಕಾಯಿನ್ ಸೇರಿದಂತೆ ಎಲ್ಲ ರೀತಿಯ ಕ್ರಿಪ್ಟೊ ಕರೆನ್ಸಿಗಳ ಚಾಲನೆಯ ಮೇಲೆ ಇದುವರೆಗೂ ದೇಶದಲ್ಲಿ ನಿಯಂತ್ರಣ ಅಥವಾ ನಿಷೇಧ ಇಲ್ಲದ್ದರಿಂದ ಈ ಕುರಿತ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಕ್ರಿಪ್ಟೊ ಕರೆನ್ಸಿಗಳ ಕುರಿತು ಕೇಂದ್ರದ ಸ್ಪಷ್ಟನೆಗೆ ನಿರ್ದೇಶನ ಕೋರಿ ಅಜಯ್ ಭಾರದ್ವಾಜ್ ಎಂಬುವವರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಸೂರ್ಯಕಾಂತ್ ಅವರಿದ್ದ ಪೀಠವು, ಕೂಡಲೇ ಕೇಂದ್ರದ ನಿಲುವನ್ನು ಸ್ಪಷ್ಟಪಡಿಸುವಂತೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರಿಗೆ ಸೂಚಿಸಿತು.

‘ಬಿಟ್ ಕಾಯಿನ್ ಹೊಂದುವುದು ಅಕ್ರಮವೇ ಎಂಬುದನ್ನು ಸ್ಪಷ್ಟಪಡಿಸಿ’ ಎಂಬ ಪೀಠದ ಸೂಚನೆಗೆ ಪ್ರತಿಕ್ರಿಯಿಸಿದ ಭಾಟಿ, ಒಟ್ಟು 87,000 ಬಿಟ್ ಕಾಯಿನ್‌ಗಳನ್ನು ವಶಪಡಿಸಿಕೊಂಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಅನೇಕ ವಿಧದಲ್ಲಿ ವಿಚಾರಣೆ ನಡೆಸಿದರೂ, ಆರೋಪಿಯು ತನಿಖೆಗೆ ಸಹಕರಿಸುತ್ತಿಲ್ಲ. ಈ ಕುರಿತು ಸ್ಪಷ್ಟಪಡಿಸಲು ಸಮಯಾವಕಾಶ ಬೇಕು ಎಂದು ಕೋರಿದರು.

ಜಾರಿ ನಿರ್ದೇಶನಾಲಯವು ಕಳೆದ ವರ್ಷದ ಜುಲೈನಲ್ಲಿ ಕೇಂದ್ರಕ್ಕೆ ಕ್ರಿಪ್ಟೋ ಕರೆನ್ಸಿ ಸ್ಥಿತಿಗತಿಯ ವರದಿಯನ್ನು ಸಲ್ಲಿಸಿದೆ ಎಂದು ಅವರು ಪೀಠಕ್ಕೆ ವಿವರಿಸಿದರು.

ತನಿಖಾಧಿಕಾರಿಗೆ ಸಹಕಾರ ನೀಡುವಂತೆ ಆರೋಪಿಗಳಿಗೆ ನಿರ್ದೇಶಕ ನೀಡಬೇಕು. ವಿಚಾರಣಾ ವರದಿಯನ್ನು 4 ವಾರಗಳೊಳಗೆ ಸಂಗ್ರಹಿಸಿ ಸಲ್ಲಿಸಲು ಹೇಳಿತಲ್ಲದೆ, ನಂತರವಷ್ಟೇ ಮುಂದಿನ ವಿಚಾರಣೆ ನಿಗದಿಪಡಿಸುವುದಾಗಿ ತಿಳಿಸಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ — ಸಕಲೇಶಪುರ

ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	525

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-44500
ಹಳತು	46000-53000
ಪುತ್ತೂರು	
ಕೋಕ	11000-26000
ಹೊಸತು	27500-45000

ಕುಮಟ	
ಚಿಪ್ಪು	24019-29019
ಕೋಕ	13599-25019
ಹಳೆಚಾಲಿ	46019-48279
ಹೊಸಚಾಲಿ	25569-39599
ಸಿದ್ದಾಪುರ	
ಬಿಳಿಗೋಟು	22689-32689
ಚಾಲಿ	45399-45399
ಕೋಕ	19699-26882
ಹೊಸಚಾಲಿ	34099-40098
ಕೆಂಪುಗೋಟು	25669-32889
ರಾಶಿ	44099-46789
ತಟ್ಟಿಬೆಟ್ಟೆ	36889-44809

ಶಿರಸಿ	
ಬೆಟ್ಟೆ	37018-45099
ಬಿಳಿಗೋಟು	21599-31869
ಚಾಲಿ	31099-41239
ರಾಶಿ	31599-46699
ಯಲ್ಲಾಪುರ	
ಬಿಳಿಗೋಟು	26899-33089
ಕೋಕ	18899-30599
ಹಳೆಚಾಲಿ	43501-47110
ಹೊಸಚಾಲಿ	33510-40819
ಕೆಂಪುಗೋಟು	28109-36010
ರಾಶಿ	45899-52699
ತಟ್ಟಿಬೆಟ್ಟೆ	37199-45299

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15800	15800	15900	237.90 ಸೆಂಟ್ಸ್
ಎಸಿ	7560	7500	8100	
ಆರ್‌ಪಿ	8000	8000	8200	ಲಂಡನ್
ಆರ್‌ಸಿ	4030	3900	4000	2179 ಡಾಲರ್ಸ್

ರಣಜಿ ಕ್ರಿಕೆಟ್: ಮನೀಷ್ ಪಾಂಡೆ ಬಳಗಕ್ಕೆ ಮೊದಲ ಇನಿಂಗ್ಸ್ ಮುನ್ನಡೆ; ಕುಸಿದ ಜಮ್ಮು–ಕಾಶ್ಮೀರ

ಜಯದ ಕನಸು ಮೂಡಿಸಿದ ಪ್ರಸಿದ್ಧ

ಚೆನ್ನೈ: ಕರ್ನಾಟಕದ ಪ್ರಸಿದ್ಧ ಕೃಷ್ಣ ಸ್ವಿಂಗ್ ದಾಳಿಯ ಮುಂದೆ ಜಮ್ಮು–ಕಾಶ್ಮೀರ ತಂಡವು ದೂಳೀಪಟವಾಯಿತು. ಐಐಟಿ ಕೆಮ್‌ಪ್ಲಾಸ್ಟ್ ಮೈದಾನದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎರಡನೇ ಪಂದ್ಯದಲ್ಲಿ ಮನೀಷ್ ಪಾಂಡೆ ಬಳಗವು ಮೊದಲ ಇನಿಂಗ್ಸ್‌ನಲ್ಲಿ ಭಾರಿ ಮುನ್ನಡೆ ಗಳಿಸಿತು. ಜಯದ ಕನಸು ಅರಳಿತು.

ಕರುಣ್ ನಾಯರ್ ಅಮೋಘ ಶತಕದ ಬಲದಿಂದ ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 103.1 ಓವರ್‌ಗಳಲ್ಲಿ 302 ರನ್ ಗಳಿಸಿತು. ಶುಕ್ರವಾರ ಮಧ್ಯಾಹ್ನ ಇನಿಂಗ್ಸ್ ಆರಂಭಿಸಿದ ಜಮ್ಮು–ಕಾಶ್ಮೀರ ತಂಡವು ಪ್ರಸಿದ್ಧಕೃಷ್ಣ (12–1–35–6) ದಾಳಿಯ ಮುಂದೆ ಕೇವಲ 93 ರನ್‌ಗಳಿಗೆ ಕುಸಿಯಿತು.

2ನೇ ಇನಿಂಗ್ಸ್ ಆರಂಭಿಸಿರುವ ಕರ್ನಾಟಕ ತಂಡವು ದಿನದಾಟದ ಕೊನೆಗೆ 42 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 128 ರನ್ ಗಳಿಸಿದೆ. ಕರುಣ್ ನಾಯರ್ (ಬ್ಯಾಟಿಂಗ್ 10) ಮತ್ತು ಕೆ.ವಿ. ಸಿದ್ಧಾರ್ಥ್ (ಬ್ಯಾಟಿಂಗ್ 1) ಕ್ರೀಸ್‌ನಲ್ಲಿದ್ದಾರೆ. ಒಟ್ಟು 337 ರನ್‌ಗಳ ಮುನ್ನಡೆಯನ್ನು ಕರ್ನಾಟಕ ಗಳಿಸಿದೆ.

ಮೊದಲ ದಿನವಾದ ಗುರುವಾರ ಕರ್ನಾಟಕ ತಂಡವು 90 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 268 ರನ್ ಗಳಿಸಿತ್ತು. 152 ರನ್ ಗಳಿಸಿ ಕ್ರೀಸ್‌ನಲ್ಲಿದ್ದ ಕರುಣ್, ಎರಡನೇ ದಿನದ ಬೆಳಿಗ್ಗೆ ತಮ್ಮ ಮೊತ್ತಕ್ಕೆ ಮತ್ತೆ 23 ರನ್‌ಗಳನ್ನು ಸೇರಿಸಿದರು. ತಂಡದ ಮೊತ್ತವು 300ರ ಗಡಿ ದಾಟಲು ಕಾರಣರಾದರು. ಪರ್ವೇಜ್ ರಸೂಲ್ ಎಸೆತದಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದ ಕರುಣ್ ಪೆವಿಲಿಯನ್ ಸೇರಿದರು.

ಉತ್ತಮ ಆರಂಭದ ನಂತರ ಕುಸಿತ: ಕಾಶ್ಮೀರ ತಂಡದ ಆರಂಭಿಕ ಜೋಡಿ ಕಮ್ರನ್ ಇಕ್ಬಾಲ್ (35; 45ಎ) ಮತ್ತು ಜತಿನ್ ವಾಧ್ವಾನ್ (25; 36ಎ)ಮೊದಲ ವಿಕೆಟ್ ಜೊತೆಯಾಟದಲ್ಲಿ 55 ರನ್ ಸೇರಿಸಿದರು. 12 ಓವರ್‌ಗಳವರೆಗೆ ವಿಕೆಟ್‌ಪತನವಾಗದಂತೆನೋಡಿಕೊಂಡರು.

ಆದರೆ, ನಂತರದ 17.5 ಓವರ್‌ಗಳಲ್ಲಿ ಕಾಶ್ಮೀರ ತಂಡದ ಹತ್ತು ವಿಕೆಟ್‌ಗಳು ಉರುಳಿದವು. 13ನೇ ಓವರ್‌ನಲ್ಲಿ ಜತೀನ್ ವಿಕೆಟ್ ಗಳಿಸಿದ ಪ್ರಸಿದ್ಧಕೃಷ್ಣ, ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ವಿಕೆಟ್‌ಗಳನ್ನು ಕಬಳಿ ಸಿದರು. ಅವರಿಗೆ ಉತ್ತಮ ಜೊತೆ ನೀಡಿದ ಯುವಪ್ರತಿಭೆ ವಿದ್ಯಾಧರ್ ಪಾಟೀಲ ಎರಡು ವಿಕೆಟ್ ಗಳಿಸಿದರು. ಸ್ಪಿನ್ನರ್ ಶ್ರೇಯಸ್ ಗೋಪಾಲ್ ಮತ್ತು ಕೃಷ್ಣಪ್ಪ ಗೌತಮ್ ತಲಾ ಒಂದು ವಿಕೆಟ್ ಪಡೆದರು.

ಸಮರ್ಥ್–ದೇವದತ್ತ ಮಿಂಚು: ಫಾಲೋಆನ್ ಹೇರುವ ಅವಕಾಶ ಇದ್ದರೂ ಕರ್ನಾಟಕ, 2ನೇ ಇನಿಂಗ್ಸ್ ಬ್ಯಾಟಿಂಗ್ ಮಾಡಲು ನಿರ್ಧರಿಸಿತು. ದೇವದತ್ತ ಪಡಿಕ್ಕಲ್ ಕೊನೆಗೂ ಇಲ್ಲಿ ರನ್ ಗಳಿಸುವಲ್ಲಿ ಯಶಸ್ವಿ ಯಾದರು. 1 ರನ್ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡರು. ಆದರೆ, ಸಮರ್ಥ್ ಅವರೊಂದಿಗಿನ ಜೊತೆಯಾಟದಲ್ಲಿ 106 ರನ್ ಗಳಿಸಿದರು. ಅಬಿದ್ ಮುಷ್ತಾಕ್ ಹಾಕಿದ 32ನೇ ಓವರ್‌ನಲ್ಲಿ ದೇವದತ್ತ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಇನ್ನೊಂದೆಡೆ ತಾಳ್ಮೆಯಿಂದ ಆಡುತ್ತಿದ್ದ ಸಮರ್ಥ್ (62; 106ಎ) ಅರ್ಧಶತಕ ಹೊಡೆದರು. 40ನೇ ಓವರ್‌ನಲ್ಲಿ ಅಬಿದ್ ಬೌಲಿಂಗ್‌ನಲ್ಲಿ ಸಮರ್ಥ್ ಕಣ್ತಪ್ಪಿಸಿದ ಎಸೆತವು ಸ್ಟಂಪ್ ಎಗರಿಸಿತು. ಚೆಂದದ ಆಟಕ್ಕೆ ತೆರೆಬಿತ್ತು.

ಸ್ಕೋರ್ ಕಾರ್ಡ್

ಕರ್ನಾಟಕ ಮೊದಲ ಇನಿಂಗ್ಸ್ 302 (103.1 ಓವರ್) (ಗುರುವಾರ 90 ಓವರ್‌ಗಳಲ್ಲಿ 8ಕ್ಕೆ 268)
ಕರುಣ್ ಎಲ್‌ಬಿಡಬ್ಲ್ಯು ರಸೂಲ್ 175 (311ಎ, 4X24, 6X1), ವಿದ್ಯಾಧರ್ ಎಲ್‌ಬಿಡಬ್ಲ್ಯು ರಸೂಲ್ 11 (33ಎ, 4X1, 6X1), ಪ್ರಸಿದ್ಧ ಔಟಾಗದೆ 0 (2ಎ)
ಇತರೆ (ಲೆಗ್‌ಬೈ 1, ವೈಡ್ 2) 3
ವಿಕೆಟ್ ಪತನ: 9–295 (ಕರುಣ್ ನಾಯರ್, 101.4), 10–302 (ವಿದ್ಯಾಧರ್ ಪಾಟೀಲ)
ಬೌಲಿಂಗ್: ಅಕೀಬ್ ನಬಿ 22–5–58–1, ಮುಜ್ತಾಬಾ ಯೂಸುಫ್ 16–2–52–2, ಉಮ್ರಾನ್ ಮಲಿಕ್ 12–1–35–2, ಅಬಿದ್ ಮುಷ್ತಾಕ್ 17–5–64–0, ಪರ್ವೇಜ್ ರಸೂಲ್ 30.1–11–60–4, ಅಬ್ದುಲ್ ಸಮದ್ 6–0–32–1

ಜಮ್ಮು–ಕಾಶ್ಮೀರ ಮೊದಲ ಇನಿಂಗ್ಸ್ 93 (29.5 ಓವರ್)
ಇಕ್ಬಾಲ್ ಎಲ್‌ಬಿಡಬ್ಲ್ಯು ಪ್ರಸಿದ್ಧ 35 (45ಎ, 4X1, 6X1), ಜತಿನ್ ಸಿ ಶರತ್ ಬಿ ಪ್ರಸಿದ್ಧ 25 (36ಎ, 4X5), ಪಂಡಿರ್ ಸಿ ದೇವದತ್ತ ಬಿ ಪ್ರಸಿದ್ಧ 5 (15ಎ, 4X1), ಇಯಾನ್ ದೇವ್ ಸಿ ಶರತ್ ಬಿ ಗೋಪಾಲ್ 0 (3ಎ), ಸಮದ್ ಸಿ ಶರತ್ ಬಿ ಪ್ರಸಿದ್ಧ 3 (10ಎ), ರಸೂಲ್ ಸಿ ಸಮರ್ಥ್ ಬಿ ಪ್ರಸಿದ್ಧ 1 (6ಎ), ಫಾಜಿಲ್ ಸಿ ಪಾಂಡೆ ಬಿ ಪ್ರಸಿದ್ಧ 2 (5ಎ), ಅಬಿದ್ ಸಿ ಶರತ್ ಬಿ ವಿದ್ಯಾಧರ್ 10 (25 ಎ, 4X1), ಅಕೀಬ್ ಸಿ ಕರುಣ್ ಬಿ ವಿದ್ಯಾಧರ್ 2 (21ಎ), ಮುಜ್ತಾಬಾ ಔಟಾಗದೆ 5 (9ಎ, 4X1), ಉಮ್ರಾನ್ ಸಿ ಸುಚಿತ್ (ಬದಲಿ) ಬಿ ಗೌತಮ್ 4 (4ಎ, 4X1
ಇತರೆ (ಲೆಗ್‌ಬೈ 1) 1
ವಿಕೆಟ್ ಪತನ: 1-55 (ಜತಿನ್ ವಾಧ್ವಾನ್, 12.1), 2-61 (ಶುಭಂ ಪಂಡಿರ್, 14.6), 3-62 (ಇಯಾನ್ ದೇವ್ ಸಿಂಗ್, 15.5), 4-66 (ಕಮ್ರಾನ್ ಇಕ್ಬಾಲ್, 16.4), 5-68 (ಪರ್ವೇಜ್ ರಸೂಲ್, 18.1), 6-70 (ಫಾಜಿಲ್ ರಶೀದ್, 18.6), 7-75 (ಅಬ್ದುಲ್ ಸಮದ್, 20.4), 8-79 (ಅಕೀಬ್ ನಬಿ, 26.6), 9-84 (ಅಬಿದ್ ಮುಷ್ತಾಕ್, 28.3), 10-93 (ಉಮ್ರಾನ್ ಮಲಿಕ್, 29.5).
ಬೌಲಿಂಗ್: ಪ್ರಸಿದ್ಧ ಕೃಷ್ಣ 12–1–35–6, ರೋನಿತ್ ಮೋರೆ 4.1–1–14–0, ಶ್ರೇಯಸ್ ಗೋಪಾಲ್ 9.5–2–28–1, ವಿದ್ಯಾಧರ್ ಪಾಟೀಲ 3–1–10–2, ಕೃಷ್ಣಪ್ಪ ಗೌತಮ್ 0.5–0–5–1

ಕರ್ನಾಟಕ ಎರಡನೇ ಇನಿಂಗ್ಸ್ 2ಕ್ಕೆ 128 (42 ಓವರ್)
ಸಮರ್ಥ್ ಬಿ ಅಬಿದ್ 62 (106ಎ, 4X9), ದೇವದತ್ತ ಎಲ್‌ಬಿಡಬ್ಲ್ಯು ಅಬಿದ್ 49 (100ಎ, 4X5), ಕರುಣ್ ಬ್ಯಾಟಿಂಗ್ 10 (40ಎ), ಸಿದ್ಧಾರ್ಥ್ ಬ್ಯಾಟಿಂಗ್ 1 (6ಎ)
ಇತರೆ (ಬೈ 1, ಲೆಗ್‌ಬೈ 5) 6
ವಿಕೆಟ್ ಪತನ: 1–106 (ದೇವದತ್ತ ಪಡಿಕ್ಕಲ್, 31.1), 2–125 (ರವಿಕುಮಾರ್ ಸಮರ್ಥ್, 39.4)
ಬೌಲಿಂಗ್: ಮುಜ್ತಾಬಾ ಯೂಸುಫ್ 6–0–26–0, ಪರ್ವೇಜ್ ರಸೂಲ್ 17–5–34–0, ಅಕೀಬ್ ನಬಿ 3–0–10–0, ಅಬಿದ್ ಮುಷ್ತಾಕ್ 11–1–24–2, ಅಬ್ದುಲ್ ಸಮದ್ 5–0–28–0

ಐಎಸ್‌ಎಲ್ ಟೂರ್ನಿ: ಜೆಎಫ್‌ಸಿ ಜಯಭೇರಿ

ಫತೋರ್ಡ: ಸಂಘಟಿತ ಆಟವಾಡಿದ ಜೆಮ್ಷೆಡ್‌ಪುರ ಎಫ್‌ಸಿ (ಜೆಎಫ್‌ಸಿ) ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ 3–2ರಿಂದ ನಾರ್ತ್ ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು ಸೋಲಿಸಿತು. ವಿಜೇತ ತಂಡದ ಪರ ಸಿಮಿನ್ಲೆನ್ ಡಂಗೆಲ್ (35ನೇ ನಿಮಿಷ), ಗ್ರೇಗ್ ಸ್ಟೀವರ್ಟ್ (59ನೇ ನಿ.) ಮತ್ತು ಜೋರ್ಡಾನ್ ಮರೆ (84ನೇ ನಿ.) ಗೋಲು ದಾಖಲಿಸಿದರು.

ನಾರ್ತ್‌ಈಸ್ಟ್ ತಂಡದ ಲಾಲ್ದನ್‌ಮಾವಿಯಾ ರಾಲ್ಟೆ (66ನೇ ನಿ.) ಮತ್ತು ಮಾರ್ಸೆಲೊ ಪೆರೆರಾ (67ನೇ ನಿ.) ಗೋಲು ಹೊಡೆದರು.

ವಾಸ್ಕೊದಲ್ಲಿ ಶನಿವಾರ ನಡೆಯಲಿರುವ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ಮತ್ತು ಚೆನ್ನೈಯಿನ್ ಎಫ್‌ಸಿ ತಂಡಗಳು ಸೆಣಸಲಿವೆ.

ಮತ್ತೊಂದು ಪಂದ್ಯದಲ್ಲಿ ಮುಂಬೈ ಸಿಟಿ ಎಫ್‌ಸಿ ತಂಡ ಎಫ್‌ಸಿ ಗೋವಾವನ್ನು ಎದುರಿಸಲಿದೆ.

ಸ್ಟ್ಯಾಂಡ್	ಬೆಲೆ (₹) ದಿನವೊಂದಕ್ಕೆ	
ಗ್ರ್ಯಾಂಡ್ ಟೆರೆಸ್	1,250	ಗೇಟ್ 18, ಕ್ವೀನ್ಸ್ ರಸ್ತೆ (ಆನ್‌ಲೈನ್ ಮಾರಾಟ ಮಾತ್ರ. www.ksca.cricket)
ಪಿ ಕಾರ್ಪೊರೇಟ್	1,500	
ಪೆವಿಲಿಯನ್ ಟೆರೆಸ್	2,000	
ಪಿ2 ಸ್ಟ್ಯಾಂಡ್	2,500	
ಇ ಎಕ್ಸಿಕ್ಯೂಟಿವ್, ಎನ್ ಸ್ಟ್ಯಾಂಡ್	750	ಗೇಟ್ 19, ಕ್ವೀನ್ಸ್ ರಸ್ತೆ (ಕೌಂಟರ್‌ನಲ್ಲಿ ಮಾತ್ರ ಲಭ್ಯ)
ಡಿ ಕಾರ್ಪೊರೇಟ್, ಎ ಸ್ಟ್ಯಾಂಡ್, ಬಿ ಲೋವರ್, ಬಿ ಅಪ್ಪರ್	500	
ಜಿ ಅಪ್ಪರ್/ಜಿ ಲೋವರ್ 1 ಮತ್ತು ಜಿ ಲೋವರ್ 2	100	ಗೇಟ್ 2, ಕಬ್ಬನ್ ರಸ್ತೆ (ಕೌಂಟರ್‌ನಲ್ಲಿ ಮಾತ್ರ ಲಭ್ಯ)

ಟೆಸ್ಟ್: ಟಿಕೆಟ್ ಮಾರಾಟ ಮಾ. 1ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮುಂದಿನ ತಿಂಗಳು ನಡೆಯಲಿರುವ ಪಿಂಕ್‌ಬಾಲ್ ಕ್ರಿಕೆಟ್ ಟೆಸ್ಟ್ ಪಂದ್ಯದ ಟಿಕೆಟ್‌ಗಳ ಮಾರಾಟವನ್ನು ಮಾರ್ಚ್ 1ರಿಂದ ಆರಂಭಿಸಲಾಗುತ್ತಿದೆ.

ಮಾರ್ಚ್ 12 ರಿಂದ 16ರವರೆಗೆ ಪಂದ್ಯ ನಡೆಯಲಿದೆ. ಪ್ರತಿದಿನ 2 ರಿಂದ ರಾತ್ರಿ 9ಗಂಟೆಯವರೆಗೆ ಆಯೋಜನೆಗೊಳ್ಳಲಿದೆ. ಬೆಂಗಳೂರಿನಲ್ಲಿ ಇದೇ ಮೊದಲ ಸಲ ಹೊನಲು ಬೆಳಕಿನ ಟೆಸ್ಟ್ ಆಯೋಜನೆಯಾಗುತ್ತಿದೆ.

'ವಿವಿಧ ಮುಖಬೆಲೆಯ ಟಿಕೆಟ್‌ಗಳು ಆನ್‌ಲೈನ್ (www.ksca.cricket)ನಲ್ಲಿ ಲಭ್ಯವಾಗಲಿವೆ. ಮೈದಾನದ ಕೌಂಟರ್‌ನಲ್ಲಿ ಮಾರ್ಚ್ 6ರಿಂದ 16ರವರೆಗೆ ಟಿಕೆಟ್‌ಗಳು ಮಾರಾಟವಾಗಲಿವೆ. ಆನ್‌ಲೈನ್ ಮಾರಾಟಕ್ಕಾಗಿ ಪೇಟಿಎಮ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ವಕ್ತಾರ ವಿನಯ್ ಮೃತ್ಯುಂಜಯ ತಿಳಿಸಿದ್ದಾರೆ.

ಗಣೇಶ್ ಸತೀಶ್‌ಗೆ ದ್ವಿಶತಕ ಸಂಭ್ರಮ

ಸುಲ್ತಾನಪುರ, ಹರಿಯಾಣ (ಪಿಟಿಐ): ವಿದರ್ಭ ತಂಡದಲ್ಲಿ ಆಡುವ ಕನ್ನಡಿಗ ಗಣೇಶ್ ಸತೀಶ್ ಮಹಾರಾಷ್ಟ್ರ ಎದುರಿನ ರಣಜಿ ಪಂದ್ಯದಲ್ಲಿ ದ್ವಿಶತಕ ಗಳಿಸಿದರು.

ಇಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನ ಸತೀಶ್ (275; 483 ಎಸೆತ) ದ್ವಿಶತಕದ ಬಲದಿಂದ ವಿದರ್ಭದ ತಂಡವು 5 ವಿಕೆಟ್‌ಗಳಿಗೆ 569 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಮೊದಲ ದಿನ ಶತಕ ಪೂರೈಸಿದ್ದ ಗಣೇಶ್ ಎರಡನೇ ದಿನವೂ ಅಮೋಘ ಆಟವಾಡಿದರು. ಅವರು ಒಟ್ಟು 33 ಬೌಂಡರಿಗಳು ಮತ್ತು ಐದು ಸಿಕ್ಸರ್‌ಗಳನ್ನು ಸಿಡಿಸಿದರು.

ಸಂಕ್ಷಿಪ್ತ ಸ್ಕೋರು: ವಿದರ್ಭ 5ಕ್ಕೆ569 ಡಿಕ್ಲೇರ್ಡ್ (ಗಣೇಶ್ ಸತೀಶ್ 275, ಅಕ್ಷಯ್ ವಾಡಕರ್ ಔಟಾಗದೆ 145, ಮುಖೇಶ್ ಚೌಧರಿ 101ಕ್ಕೆ3, ಸತ್ಯಜೀತ್ ಬಚಾವ್ 134ಕ್ಕೆ2), ಮಹಾರಾಷ್ಟ್ರ : 11.2 ಓವರ್‌ಗಳಲ್ಲಿ 1 ವಿಕೆಟ್‌ಗೆ 46 (ಪವನ್ ಶಾ ಬ್ಯಾಟಿಂಗ್ 24).

ಮುಂಬೈ ಎದುರು ಗೋವಾಕ್ಕೆ ಮುನ್ನಡೆ: ಅಹಮದಾಬಾದ್: ದೇಶಿ ಕ್ರಿಕೆಟ್‌ನ ಬಲಿಷ್ಠ ತಂಡ ಮುಂಬೈ ಎದುರು ಸಾಧಾರಣ ತಂಡವಾದ ಗೋವಾ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತು.

ಇಲ್ಲಿ ನಡೆಯುತ್ತಿರುವ ರಣಜಿ ಪಂದ್ಯದಲ್ಲಿ ಶುಕ್ರವಾರ ಗೋವಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 104.4 ಓವರ್‌ಗಳಲ್ಲಿ 327 ರನ್ ಗಳಿಸಿತು. ಗುರುವಾರ ಮುಂಬೈ ತಂಡವು 52.4 ಓವರ್‌ಗಳಲ್ಲಿ 163 ರನ್ ಗಳಿಸಿ ಆಲೌಟ್ ಆಗಿತ್ತು. ಇದರೊಂದಿಗೆ 164 ರನ್‌ಗಳ ಮುನ್ನಡೆಯನ್ನು ಗೋವಾ ಗಳಿಸಿತು. ಎರಡನೇ ಇನಿಂಗ್ಸ್ ಆರಂಭಿಸಿರುವ ಮುಂಬೈ ತಂಡವು 16 ಓವರ್‌ಗಳಲ್ಲಿ 1 ವಿಕೆಟ್‌ಗೆ 57 ರನ್ ಗಳಿಸಿತು.

ಸರಣಿ ವಶದತ್ತ ರೋಹಿತ್ ಪಡೆ ಚಿತ್ತ

ಭಾರತ–ಶ್ರೀಲಂಕಾ ಎರಡನೇ ಟಿ20 ಪಂದ್ಯ ಇಂದು

ಧರ್ಮಶಾಲಾ(ಪಿಟಿಐ): ಲಖನೌನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಇಶಾನ್ ಕಿಶನ್ ಮತ್ತು ಶ್ರೇಯಸ್ ಅಯ್ಯರ್ ತಮಗೆ ಸಿಕ್ಕ ಅವಕಾಶದಲ್ಲಿ ಸಾಮರ್ಥ್ಯ ಸಾಬೀತುಪಡಿಸಿದರು.

ಇಬ್ಬರೂ ಬ್ಯಾಟರ್‌ಗಳ ಅಬ್ಬರದ ಅರ್ಧಶತಕಗಳ ಬಲದಿಂದ ಶ್ರೀಲಂಕಾ ಎದುರಿನ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಭಾರತ ಜಯಭೇರಿ ಬಾರಿಸಿದೆ. ಶನಿವಾರ ಹಿಮಾಚಲಪ್ರದೇಶ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆಯಲಿರುವ ಎರಡನೇ ಪಂದ್ಯವನ್ನೂ ಗೆದ್ದು ಸರಣಿ ಕೈವಶ ಮಾಡಿಕೊಳ್ಳುವ ವಿಶ್ವಾಸದಲ್ಲಿದೆ.

ಸತತ 2 ದಿನಗಳಲ್ಲಿ ಪಂದ್ಯಗಳು ಇರುವುದರಿಂದ ಕೆಲವು ಆಟಗಾರರಿಗೆ ವಿಶ್ರಾಂತಿ ಮತ್ತು ಯುವಪ್ರತಿಭೆಗಳಿಗೆ ಅವಕಾಶ ಸಿಗುವ ನಿರೀಕ್ಷೆ ಇದೆ. ಮಾರ್ಚ್ 4ರಿಂದ ಆರಂಭವಾಗುವ ಟೆಸ್ಟ್ ಸರಣಿಯಲ್ಲಿ ಆಡುವ ಪ್ರಮುಖ ಆಟಗಾರರಿಗೆ ಇಲ್ಲಿ ವಿಶ್ರಾಂತಿ ನೀಡುವ ಸಾಧ್ಯತೆ ಹೆಚ್ಚಿದೆ. ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜ ಅವರಿಗೂ ಕ್ರಮಾಂಕದಲ್ಲಿ ಬಡ್ತಿ ನೀಡುವುದು ಖಚಿತವಾಗಿದೆ.

'ಅವರ ಅನುಭವ ಮತ್ತು ಪ್ರತಿಭೆಯಿಂದ ಬಹಳಷ್ಟು ನಿರೀಕ್ಷೆಗಳಿವೆ. ಅವರು ಇನ್ನೂ ಮೇಲಿನ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಬೇಕು. ಹೆಚ್ಚು ರನ್ ಗಳಿಸಬೇಕು. ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಭಾರತ ತಂಡಕ್ಕೆ ಅವರಿಂದ ಬಹಳಷ್ಟು ಉತ್ತಮ ಕಾಣಿಕೆ ಲಭಿಸಲಿದೆ' ಎಂದು ರೋಹಿತ್, ಜಡೇಜ ಕುರಿತು ವಿಶ್ವಾಸ ವ್ಯಕ್ತಪಡಿಸಿದರು. ಲಖನೌ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ದೀಪಕ್ ಹೂಡಾ ವಿಕೆಟ್ ಗಳಿಸುವಲ್ಲಿ ಸಫಲರಾಗಿರಲಿಲ್ಲ. ಆದರೆ ಅವರಿಗೆ ಮತ್ತೊಂದು ಅವಕಾಶ ಸಿಗುವುದು ಖಚಿತ. ಅವರೊಂದಿಗೆ ವೆಂಕಟೇಶ್ ಅಯ್ಯರ್, ಹರ್ಷಲ್ ಪಟೇಲ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಕೂಡ ಆಡುವುದು ಬಹುತೇಕ ಖಚಿತ.

ಶ್ರೇಯಸ್ ಅಯ್ಯರ್

ಆದರೆ ಪ್ರವಾಸಿ ಬಳಗವು ಸರಣಿಯಲ್ಲಿ ಜಯದ ಆಸೆ ಉಳಿಸಿಕೊಳ್ಳಬೇಕಾದರೆ ಈ ಪಂದ್ಯದಲ್ಲಿ ಗೆಲ್ಲಲೇಬೇಕು. ಅನುಭವದ ಕೊರತೆ ಇರುವ ಲಂಕಾ ಬೌಲರ್‌ಗಳು ಶಿಸ್ತಿನ ದಾಳಿ ನಡೆಸುವ ಅನಿವಾರ್ಯತೆ ಇದೆ. ಆತಿಥೇಯರ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಲು ವಿಶೇಷ ತಂತ್ರಗಾರಿಕೆ ರೂಪಿಸುವ ಒತ್ತಡದಲ್ಲಿ ನಾಯಕ ದಸನ್ ಶನಕಾ ಕೂಡ ಇದ್ದಾರೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಹಾಕಿ: ಭಾರತಕ್ಕೆ ಸ್ಪೇನ್ ಸವಾಲು

ಭುವನೇಶ್ವರ (ಪಿಟಿಐ): ಸ್ಥಿರ ಸಾಮರ್ಥ್ಯದ ಸವಾಲು ಎದುರಿಸುತ್ತಿರುವ ಭಾರತ ಪುರುಷ ಮತ್ತು ಮಹಿಳಾ ತಂಡಗಳು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ ಶನಿವಾರ ಸ್ಪೇನ್ ತಂಡಗಳಿಗೆ ಮುಖಾಮುಖಿಯಾಗಲಿವೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ವಿಜೇತ ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ಪುರುಷರ ತಂಡವು, ಪ್ರೊ ಲೀಗ್‌ನಲ್ಲಿ ಭರ್ಜರಿ ಆರಂಭ ಮಾಡಿತ್ತು. ಮೊದಲ ಹಣಾಹಣಿಯಲ್ಲಿ ಫ್ರಾನ್ಸ್ ತಂಡವನ್ನು 5–0ಯಿಂದ ಮಣಿಸಿದ್ದ ತಂಡವು ಬಳಿಕ ಅದೇ ತಂಡದ ಎದುರು 2–5ರಿಂದ ಎಡವಿತ್ತು. ನಂತರ ದಕ್ಷಿಣ ಆಫ್ರಿಕಾ ಎದುರು ನಡೆದ ಎರಡೂ ಪಂದ್ಯಗಳಲ್ಲಿ 10–2ರಿಂದ ಜಯ ಸಾಧಿಸಿತ್ತು. ದಕ್ಷಿಣ ಆಫ್ರಿಕಾದ ಪೊಚೆಫ್‌ಸ್ಟ್ರೂಮ್‌ನಲ್ಲಿ ನಡೆದಿದ್ದವು. ಸ್ಪೇನ್ ತಂಡವು ಮೊದಲ ಎರಡು ಲೆಗ್‌ಗಳಲ್ಲಿ 1–6 ಹಾಗೂ 2–3ರಿಂದ ಇಂಗ್ಲೆಂಡ್‌ಗೆ ಮಣಿದಿತ್ತು.

ಆತ್ಮವಿಶ್ವಾಸದಲ್ಲಿ ಸವಿತಾ ಪಡೆ: ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಮೊದಲ ಬಾರಿ ಆಡುತ್ತಿರುವ ಸವಿತಾ ಪೂನಿಯಾ ನೇತೃತ್ವದ ಭಾರತ ಮಹಿಳಾ ತಂಡವು ಮೊದಲ ಎರಡು ಲೆಗ್‌ನ ಪಂದ್ಯಗಳಲ್ಲಿ ಚೀನಾ ತಂಡವನ್ನು 7–1 ಮತ್ತು 2–1ರಿಂದ ಪರಾಭವಗೊಳಿಸಿತ್ತು. ಈ ಪಂದ್ಯದಲ್ಲಿ ಸ್ಪೇನ್‌ಅನ್ನು ಮಣಿಸುವ ವಿಶ್ವಾಸದಲ್ಲಿ ತಂಡವಿದೆ.

ಪುರುಷರ ಪಂದ್ಯ ಆರಂಭ: ಸಂಜೆ 5 ಗಂಟೆ
ಮಹಿಳೆಯರ ಪಂದ್ಯ: ರಾತ್ರಿ 7.30

ಸಹಾ ಪ್ರಕರಣ: ತನಿಖೆಗೆ ಸಮಿತಿ ರಚನೆ

ನವದೆಹಲಿ(ಪಿಟಿಐ): ಸಂದರ್ಶನ ನೀಡಲು ಒಪ್ಪದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ವೃದ್ಧಿಮಾನ್ ಸಹಾ ಅವರಿಗೆ ಪತ್ರಕರ್ತರೊಬ್ಬರು ಬೆದರಿಕೆ ಹಾಕಿರುವ ಕುರಿತು ತನಿಖೆ ನಡೆಸಲು ಬಿಸಿಸಿಐ ಮೂರು ಸದಸ್ಯರ ಸಮಿತಿಯನ್ನು ರಚಿಸಿದೆ.

ಫೆಬ್ರವರಿ 23ರಂದು ಈ ಕುರಿತು ಸರಣಿ ಟ್ವೀಟ್ ಮಾಡಿದ್ದ ಸಹಾ ಅವರು ಪತ್ರಕರ್ತನ ಹೆಸರನ್ನು ಹೇಳಲು ಆರಂಭದಲ್ಲಿ ನಿರಾಕರಿಸಿದ್ದರು. ಈಗ ಅವರು ಪತ್ರಕರ್ತನ ಗುರುತನ್ನು ಬಹಿರಂಗಪಡಿಸಲು ಸಿದ್ಧರಾಗಿದ್ದಾರೆ ಮತ್ತು ತನಿಖೆಗೆ ಒಪ್ಪಿಗೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

'ಮೂರು ಸದಸ್ಯರ ಸಮಿತಿಯು ಬಿಸಿಸಿಐ ಉಪಾಧ್ಯಕ್ಷ ಶ್ರೀ ರಾಜೀವ್ ಶುಕ್ಲಾ, ಬಿಸಿಸಿಐ ಖಜಾಂಚಿ ಅರುಣ್ ಸಿಂಗ್ ಧುಮಾಲ್ ಮತ್ತು ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಸದಸ್ಯ ಶ್ರೀ ಪ್ರಭತೇಜ್ ಸಿಂಗ್ ಭಾಟಿಯಾ ಅವರನ್ನು ಒಳಗೊಂಡಿದೆ' ಎಂದು ಬಿಸಿಸಿಐ ಹೇಳಿದೆ.

ವೃದ್ಧಿಮಾನ್ ಸಹಾ– ಎಎಫ್‌ಪಿ ಚಿತ್ರ

ಬಾಕ್ಸಿಂಗ್: ಅರುಂಧತಿ, ಪರ್ವೀನ್‌ಗೆ ನಿರಾಸೆ

ನವದೆಹಲಿ (ಪಿಟಿಐ): ಯೂತ್ ವಿಶ್ವ ಚಾಂಪಿಯನ್, ಭಾರತದ ಅರುಂಧತಿ ಚೌಧರಿ ಮತ್ತು ಪರ್ವೀನ್ ಅವರು ಸ್ಟ್ರಾಂಡ್‌ಜಾ ಮೆಮೊರಿಯಲ್ ಬಾಕ್ಸಿಂಗ್ ಟೂರ್ನಿಯ ಕ್ವಾರ್ಟರ್‌ಫೈನಲ್‌ಗಳಲ್ಲಿ ಸೋಲನುಭವಿಸಿದರು.

ಬಲ್ಗೇರಿಯಾದ ಸೋಫಿಯಾದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮಹಿಳೆಯರ 70 ಕೆಜಿ ವಿಭಾಗದಲ್ಲಿ ಕಣಕ್ಕಿಳಿದಿದ್ದ ಅರುಂಧತಿ ಗುರುವಾರ 1–4ರಿಂದ ಒಲಿಂಪಿಕ್ ಚಾಂಪಿಯನ್, ಟರ್ಕಿಯ ಬುಸೆನಾಜ್ ಸುರ್ಮೆನೆಲಿ ಎದುರು ಎಡವಿದರು. ಪರ್ವೀನ್ (63 ಕೆಜಿ) 2–3ರಿಂದ ರಷ್ಯಾದ ನತಾಲಿಯ ಸಿಚುಗೊವಾ ಅವರಿಗೆ ಮಣಿದರು.

ಕಾಮನ್‌ವೆಲ್ತ್ ಗೇಮ್ಸ್‌ಗೆ ಮೀರಾಬಾಯಿ

ಸಿಂಗಪುರ್ (ಪಿಟಿಐ): ಭಾರತದ ಮೀರಾಬಾಯಿ ಚಾನು ಸಿಂಗಪುರ್ ಅಂತರರಾಷ್ಟ್ರೀಯ ವೇಟ್‌ಲಿಫ್ಟಿಂಗ್‌ನಲ್ಲಿ ಚಿನ್ನದ ಪದಕ ಜಯಿಸಿದರು. ಇದರೊಂದಿಗೆ ಇದೇ ವರ್ಷ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಲು ಅರ್ಹತೆ ಗಿಟ್ಟಿಸಿದರು.

ಶುಕ್ರವಾರ ನಡೆದ ವೇಟ್‌ಲಿಫ್ಟಿಂಗ್‌ನಲ್ಲಿ 55 ಕೆಜಿ ವಿಭಾಗದಲ್ಲಿ ಅವರು ಸ್ಪರ್ಧಿಸಿದರು. ಅವರು ಒಟ್ಟು 191ಕೆಜಿ (86 ಕೆಜಿ + 105ಕೆಜಿ) ಭಾರ ಎತ್ತಿದರು. ಪ್ರಥಮ ಸ್ಥಾನ ಗಳಿಸಿದರು.

ಆಸ್ಟ್ರೇಲಿಯಾದ ಜೆಸಿಕಾ ಸೆವಾಸ್ಟೆಂಕೊ 167 ಕೆಜಿ ಭಾರ ಎತ್ತಿ ಬೆಳ್ಳಿ ಪದಕ ಪಡೆದರು. ಮಲೇಷ್ಯಾದ ಎಲಿ ಕೆಸಾಂದ್ರಾ ಇಂಗಲ್‌ಬರ್ಟ್ 165 ಕೆಜಿ ಭಾರ ಎತ್ತಿ ಕಂಚಿನ ಪದಕಕ್ಕೆ ಕೊರಳೊಡ್ಡಿದರು.

ಭಾರತದ ಸಂಕೇತ್ ಸಾಗರ್, ರಿಶಿಕಾಂತ್ ಸಿಂಗ್ ಮತ್ತು ಬಿಂದಿಯಾರಾಣಿ ದೇವಿ ಕೂಡ ಕಾಮನ್‌ವೆಲ್ತ್ ಕೂಟಕ್ಕೆ ಅರ್ಹತೆ ಪಡೆದರು.

ಮೀರಾಬಾಯಿ ಚಾನು ಅವರು ಹೋದ ವರ್ಷ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

27 ವರ್ಷದ ಮಣಿಪುರದ ಮೀರಾಬಾಯಿ ಇದೇ ಮೊದಲ ಬಾರಿಗೆ 55 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದಾರೆ. ಈ ಮೊದಲು ಅವರು 49 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದರು.

ಫುಟ್‌ಬಾಲ್: ಮಾಡರ್ನ್ ಗರ್ಲ್ಸ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟವಾಡಿದ ಮಾಡರ್ನ್ ಗರ್ಲ್ಸ್ ತಂಡದವರು ಕೆಎಸ್‌ಎಫ್‌ಎ 'ಎ' ಡಿವಿಷನ್ ಮಹಿಳಾ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದರು.

ಶುಕ್ರವಾರ ನಡೆದ ಪಂದ್ಯದಲ್ಲಿ 4–0ಯಿಂದ ಸಾಯಿ ಸ್ಪೋರ್ಟ್ಸ್ ಅಕಾಡೆಮಿ ತಂಡವನ್ನು ಸೋಲಿಸಿತು. ವಿಜೇತ ತಂಡದ ಜಿಯಾ ಜೋರಾ (15ನೇ ನಿಮಿಷ), ಎಂ.ಪ್ರಿಯದರ್ಶಿನಿ (47ನೇ ನಿ.), ಮೈತ್ರೇಯಿ ಪಾಲಸಮುದ್ರಂ (64ನೇ ನಿ.) ಗೋಲು ದಾಖಲಿಸಿದರು. ಎದುರಾಳಿ ತಂಡದ ಶ್ವೇತಾ ಆರ್. (70 + 1ನೇ ನಿ.) ಅವರು ಉಡುಗೊರೆ ಗೋಲು ನೀಡಿದರು.

ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ 3–0ರಿಂದ ಪಾಸ್ ಎಫ್‌ಸಿಯನ್ನು ಮಣಿಸಿತು.

ಶನಿವಾರ ನಡೆಯುವ ಪಂದ್ಯದಲ್ಲಿ ರೂಟ್ಸ್ ಎಫ್‌ಸಿ ತಂಡವು ಪಿಂಕ್ ಪ್ಯಾಂಥರ್ಸ್ ಎದುರು ಸೆಣಸಲಿದೆ.

ದೇಶದಲ್ಲಿ ಫುಟ್‌ಬಾಲ್ ಒಲವು ಅಪಾರ: ಜೋಸ್

ಬೆಂಗಳೂರು: ಭಾರತದಲ್ಲಿ ಫುಟ್‌ಬಾಲ್ ಕುರಿತು ಹೆಚ್ಚಿನ ಒಲವು ಇದೆ. ನಿರೀಕ್ಷೆಗೂ ಮೀರಿ ಇಲ್ಲಿಯ ಕ್ರೀಡಾಭಿಮಾನಿಗಳು ನಮಗೆ ಸ್ಪಂದಿಸುತ್ತಿದ್ದಾರೆ ಎಂದು ಲಾಲಿಗಾ ಫುಟ್‌ಬಾಲ್ ಸಂಸ್ಥೆಯ ಭಾರತ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಜೋಸ್ ಆಂಟೊನಿಯೊ ಸ್ಯಾಚಾಜಾ ಹೇಳಿದ್ದಾರೆ.

ಲಾಲಿಗಾ ಫುಟ್‌ಬಾಲ್ ಸಂಸ್ಥೆಯು ದೇಶದಲ್ಲಿ ಪದಾರ್ಪಣೆ ಮಾಡಿ ಐದು ವರ್ಷಗಳು ಕಳೆದಿವೆ. ಈ ಸಂಭ್ರಮಾಚರಣೆಗಾಗಿ ಉದ್ಯಾನನಗರಿಯಲ್ಲಿ ಶುಕ್ರವಾರ ಆಯೋಜಿಸಿದ್ದ ಮೊದಲ ಆವೃತ್ತಿಯ 'ಲಾಲಿಗಾ ಎಕ್ಸ್‌ಟ್ರಾ ಟೈಮ್ ಇಂಡಿಯಾ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'2017ರಲ್ಲಿ ನಮ್ಮ ಮೊದಲ ಕಚೇರಿ ಭಾರತದಲ್ಲಿ ಆರಂಭವಾಯಿತು. ಅಂದಿನಿಂದ ದೇಶದಲ್ಲಿ ಅಭಿಮಾನಿಗಳು ಹೆಚ್ಚಿನ ಪ್ರೀತಿ ತೋರಿದ್ದಾರೆ. ಅವರ ಅಭಿಮಾನದಿಂದ ಇನ್ನಷ್ಟು ಕೊಡುಗೆಗಳನ್ನು ನೀಡಲು ನಾವು ಉತ್ಸುಕರಾಗಿದ್ದೇವೆ' ಎಂದರು.

ಲಾಲಿಗಾ ಫುಟ್‌ಬಾಲ್ ಸಂಸ್ಥೆಯ ಭಾಗೀದಾರರಾದ ಪುಮಾ ಇಂಡಿಯಾದ ನಿರ್ದೇಶಕ ಅಮಿತ್ ಪ್ರಭು, ಹೀರೊ ವೈರ್ಡ್‌ನ ಬ್ರ್ಯಾಂಡ್ ಕಮ್ಯುನಿಕೇಷನ್ ನಿರ್ದೇಶಕಿ ಆರುಷಿ ಅವಸ್ಥಿ, ಅನಂತಪುರ ಸ್ಪೋರ್ಟ್ಸ್ ಅಕಾಡೆಮಿಯ ನಿರ್ದೇಶಕ ಸಾಯಿ ಕೃಷ್ಣ ಪುಲ್ಲೂರು ಕಾರ್ಯಕ್ರಮದಲ್ಲಿದ್ದರು.

ವಾಲಿಬಾಲ್: ಫೈನಲ್‌ಗೆ ಕೋಲ್ಕತ್ತ ಥಂಡರ್‌ಬೋಲ್ಟ್ಸ್

ಹೈದರಾಬಾದ್: ರೋಚಕ ಹಣಾಹಣಿಯಲ್ಲಿ ಕೋಲ್ಕತ್ತ ಥಂಡರ್‌ಬೋಲ್ಟ್ಸ್ ತಂಡವು ಕ್ಯಾಲಿಕಟ್ ಹೀರೋಸ್ ತಂಡವನ್ನು ಸೋಲಿಸಿ ಪ್ರೈಮ್ ವಾಲಿಬಾಲ್ ಲೀಗ್‌ನ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿತು.

ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಕೋಲ್ಕತ್ತ 16-14, 15-10, 17-15ರಿಂದ ಜಯ ಸಾಧಿಸಿತು. ವಿಜೇತ ತಂಡದ ನಾಯಕ ವಿನೀತ್ ಕುಮಾರ್ ಪಂದ್ಯಶ್ರೇಷ್ಠ ಆಟಗಾರ ಗೌರವ ಪಡೆದರು.

ಭಾನುವಾರ ನಡೆಯುವ ಫೈನಲ್‌ನಲ್ಲಿ ಅಹಮದಾಬಾದ್ ಡಿಫೆಂಡರ್ಸ್ ತಂಡವನ್ನು ಕೋಲ್ಕತ್ತ ಎದುರಿಸಲಿದೆ.

ಫುಟ್‌ಬಾಲ್ ಆಟಗಾರ ಕಾಂತರಾಜ್ ನಿಧನ

ಕಾಂತರಾಜ್

ಬೆಂಗಳೂರು: ಕರ್ನಾಟಕ ರಾಜ್ಯ ತಂಡದ ನಾಯಕರಾಗಿದ್ದ ಫುಟ್‌ಬಾಲ್ ಪಟು ಎ. ಕಾಂತರಾಜ್ (75) ಹೊಸಕೋಟೆಯ ನಿವಾಸದಲ್ಲಿ ಶುಕ್ರವಾರ ಬೆಳಿಗ್ಗೆ ನಿಧನರಾದರು. ಅವರಿಗೆ ಪತ್ನಿ ಹಾಗೂ ಮೂವರು ಪುತ್ರರು ಇದ್ದಾರೆ.

ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್‌ನ (ಐಟಿಐ) ಉದ್ಯೋಗಿಯಾಗಿದ್ದ ಕಾಂತರಾಜ್ ಆ ಸಂಸ್ಥೆಯ ಫುಟ್‌ಬಾಲ್ ತಂಡದ ನಾಯಕರಾಗಿದ್ದರು. ಡಿಫೆಂಡರ್ ಆಗಿದ್ದ ಅವರು ಅಂತರ ಸಂಸ್ಥೆಗಳ ಪಂದ್ಯಗಳಲ್ಲಿ ಅಮೋಘ ಸಾಧನೆ ಮಾಡಿದ್ದರು. ಹೀಗಾಗಿ ರಾಜ್ಯ ತಂಡಕ್ಕೆ ಆಯ್ಕೆಯಾಗಿದ್ದರು. 1970ರಲ್ಲಿ ಕೇರಳದ ಕೊಲ್ಲಂನಲ್ಲಿ ನಡೆದ ದಕ್ಷಿಣ ಪೆಂಟಾಂಗುಲರ್ ಟೂರ್ನಿಯಲ್ಲಿ ತಂಡ ಸೆಮಿಫೈನಲ್ ಪ್ರವೇಶಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದರು.

ಶನಿವಾರ ಬೆಳಿಗ್ಗೆ 11 ಗಂಟೆಗೆ ಹೊಸಕೋಟೆಯಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ರಾಜ್ಯ ಫುಟ್‌ಬಾಲ್ ಸಂಸ್ಥೆ ತಿಳಿಸಿದೆ.

ಪ್ರಶಸ್ತಿ ಗೆದ್ದ ಸಂಭ್ರಮದಲ್ಲಿ ದಬಂಗ್ ಡೆಲ್ಲಿ ತಂಡ. ಈ ಸಂದರ್ಭದಲ್ಲಿ ಶಾಸಕ ಅರವಿಂದ ಲಿಂಬಾವಳಿ, ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ, ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಕೆ.ಗೋವಿಂದರಾಜ್, ಮಶಾಲ್ ಸ್ಪೋರ್ಟ್ಸ್ ಸಿಇಒ ಅನುಪಮ್ ಗೋಸ್ವಾಮಿ, ರಾಜ್ಯಪಾಲ್ ಥಾವರ್‌ಚಂದ್ ಗೆಹಲೋತ್ ಮುಂತಾದವರು ಇದ್ದರು.

ಪ್ರೊ ಕಬಡ್ಡಿ: ಪಟ್ನಾಗೆ ನಿರಾಸೆ; ಜೋಗಿಂದರ್ ಬಳಗಕ್ಕೆ ರೋಚಕ ಜಯ

ದಬಂಗ್ ಡೆಲ್ಲಿ ಚಾಂಪಿಯನ್

• ವಿಕ್ರಂ ಕಾಂತಿಕೆರೆ

ಬೆಂಗಳೂರು: ರೋಚಕ ಹಣಾಹಣಿಯಲ್ಲಿ ಮೂರು ಬಾರಿಯ ಚಾಂಪಿಯನ್ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿದ ದಬಂಗ್ ಡೆಲ್ಲಿ ತಂಡ ಪ್ರೊ ಕಬಡ್ಡಿ ಲೀಗ್‌ನ ಎಂಟನೇ ಆವೃತ್ತಿಯ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿತು.

ವೈಟ್‌ಫೀಲ್ಡ್‌ನಲ್ಲಿರುವ ಹೋಟೆಲ್ ಶೆರಟನ್ ಗ್ರ್ಯಾಂಡ್‌ನಲ್ಲಿ ಶುಕ್ರವಾರ ರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ ಡೆಲ್ಲಿ 37-36ರಲ್ಲಿ ಜಯ ಗಳಿಸಿತು. ಡೆಲ್ಲಿ ತಂಡಕ್ಕೆ ಇದು ಮೊದಲ ಪ್ರಶಸ್ತಿ. ಉಭಯ ತಂಡಗಳು ಆರಂಭದಲ್ಲಿ ಎಚ್ಚರಿಕೆಯ ಆಟವಾಡಿದವು. ಟ್ಯಾಕ್ಲಿಂಗ್ ಮಾಡಿ ಅಪಾಯಕ್ಕೆ ಸಿಲುಕಲು ಮುಂದಾಗದ ತಂಡಗಳು ರೇಡಿಂಗ್ ಮೂಲಕವೇ ಪಾಯಿಂಟ್‌ಗ ಗಳಿಸುತ್ತ ಸಾಗಿದವು. ಡೆಲ್ಲಿ ಪರವಾಗಿ 'ಎಕ್ಸ್‌ಪ್ರೆಸ್' ಖ್ಯಾತಿಯ ನವೀನ್ ಪದೇ ಪದೇ ಎದುರಾಳಿ ಪಾಳಯಕ್ಕೆ ನುಗ್ಗಿ ಪಾಯಿಂಟ್‌ಗಳೊಂದಿಗೆ ವಾಪಸಾದರು.

ಪಟ್ನಾ ತಂಡವು ಸಚಿನ್, ಗುಮಾನ್ ಸಿಂಗ್ ಮತ್ತು ಪ್ರಶಾಂತ್ ರೈ ಮೂಲಕ ಪಾಯಿಂಟ್‌ಗಳನ್ನು ಗಳಿಸಿತು. ಹೀಗಾಗಿ 3-3, 4-4 ಮತ್ತು 5-5ರಲ್ಲಿ ಪಂದ್ಯ ಸಾಗಿತು. ಈ ಸಂದರ್ಭದಲ್ಲಿ ಇರಾನ್ ಆಟಗಾರ ಮೊಹಮ್ಮದ್ರೇಜಾ ಚಿಯಾನೆ ಅವರು ನವೀನ್ ಅವರನ್ನು ಟ್ಯಾಕಲ್ ಮಾಡಿ ಪಂದ್ಯಕ್ಕೆ ತಿರುವು ನೀಡಿದರು. ಅಲ್ಲಿಂದ ಡೆಲ್ಲಿ ಪಾಳಯ ಖಾಲಿಯಾಗುತ್ತ ಸಾಗಿತು. 11ನೇ ನಿಮಿಷದಲ್ಲಿ ಕಣದಲ್ಲಿ ಉಳಿದಿದ್ದ ಏಕೈಕ ಆಟಗಾರ ಸಂದೀಪ್ ನರ್ವಾಲ್ ರೇಡಿಂಗ್ ವೇಳೆ ಸ್ವತಃ ಪ್ರಮಾದ ಎಸಗಿ ಹೊರಹೋದರು. ಆಲ್‌ಔಟ್ ಆದ ಡೆಲ್ಲಿ 9-12ರ ಹಿನ್ನಡೆಗೆ ಒಳಗಾಯಿತು. ನಂತರ ಚೇತರಿಸಿಕೊಂಡ ತಂಡ ಪ್ರಥಮಾರ್ಧದ ಮುಕ್ತಾಯಕ್ಕೆ ಹಿನ್ನಡೆಯನ್ನು 15-17ಕ್ಕೆ ಇಳಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಜಿದ್ದಾಜಿದ್ದಿಯ ಹೋರಾಟ ದ್ವಿತೀಯಾರ್ಧದಲ್ಲಿ ಜಿದ್ದಾಜಿದ್ದಿಯ ಹೋರಾಟ ಕಂಡುಬಂತು. ನವೀನ್ ಕುಮಾರ್ ಅವರನ್ನು ಟ್ಯಾಕ್ಲಿಂಗ್ ಬಲೆಯಲ್ಲಿ ಸಿಲುಕಿಸಿ ಸಂಭ್ರಮಿಸಿದ ಸಚಿನ್, ಪಟ್ನಾದ ಮುನ್ನಡೆ ಹೆಚ್ಚಿಸಿದರು. ಮರುಕ್ಷಣದಲ್ಲಿ ಸಚಿನ್ ಅವರನ್ನು ಬಲೆಗೆ ಬೀಳಿಸಿ ಡೆಲ್ಲಿ ಸೇಡು ತೀರಿಸಿಕೊಂಡಿತು. ಆಲೌಟ್‌ನ ಆತಂಕದಲ್ಲಿದ್ದಾಗ ಎರಡು ಟಚ್ ಪಾಯಿಂಟ್‌ಗಳೊಂದಿಗೆ ಸಚಿನ್ ಮಿಂಚಿದರೆ ನವೀನ್ ಅವರನ್ನು ಟ್ಯಾಕಲ್ ಮಾಡಿ ತಂಡ ಬಲ ವೃದ್ಧಿಸಿಕೊಂಡಿತು. ಆದರೂ ಡೆಲ್ಲಿ ಪಟ್ಟುಬಿಡಲಿಲ್ಲ ಪಂದ್ಯ ಮುಕ್ತಾಯಕ್ಕೆ 10 ನಿಮಿಷ ಇರುವಾಗ ಸ್ಕೋರು 24-24ರಲ್ಲಿ ಸಮ ಆಯಿತು. ನವೀನ್ ಮೂಲಕ ಒಂದೊಂದೇ ಪಾಯಿಂಟ್ ಹೆಕ್ಕಿದ ಡೆಲ್ಲಿ 34ನೇ ನಿಮಿಷದಲ್ಲಿ ನೀರಜ್ ಅವರನ್ನು ಹಿಡಿದುರುಳಿಸಿ ಪಟ್ನಾ ಅಂಗಣವನ್ನು ಖಾಲಿ ಮಾಡಿತು. 32-29ರ ಮುನ್ನಡೆಯನ್ನೂ ಗಳಿಸಿತು. ನವೀನ್ (13 ಪಾಯಿಂಟ್ಸ್) ಮತ್ತು ಆಲ್‌ರೌಂಡರ್ ವಿಜಯ್ (14 ಪಾಯಿಂಟ್ಸ್) ಎಚ್ಚರಿಕೆಯ ಆಟದ ಮೂಲಕ ಮುನ್ನಡೆಯನ್ನು ಉಳಿಸಿಕೊಂಡರು.

ಡೇನಿಯಲ್ ಮೆಡ್ವೆಡೆವ್

ಅಗ್ರಪಟ್ಟಕ್ಕೆ ಮೆಡ್ವೆಡೆವ್

ಅಕಾಪುಲ್ಕೊ(ಎಎಫ್‌ಪಿ): ರಷ್ಯಾದ ಡೇನಿಯಲ್ ಮೆಡ್ವೆಡೆವ್ ವಿಶ್ವ ಟೆನಿಸ್ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ.

ಗುರುವಾರ ರಾತ್ರಿ ಮೆಕ್ಸಿಕನ್ ಓಪನ್ ಟೆನಿಸ್ ಟೂರ್ನಿಯ ಎಂಟರ ಘಟ್ಟದಲ್ಲಿ 26 ವರ್ಷದ ಮೆಡ್ವೆಡೆವ್ 6–2, 6–3ರಿಂದ ಯೊಶಿಹಿಟೊ ನಿಶಿಯೊಕಾ ವಿರುದ್ಧ ಜಯಿಸಿದರು.

ಅತ್ತ ದುಬೈ ಓಪನ್ ಟೆನಿಸ್ ಕ್ವಾರ್ಟರ್‌ಫೈನಲ್‌ನಲ್ಲಿ ನೊವಾಕ್ ಜೊಕೊವಿಚ್ ಸೋತಿದ್ದರಿಂದ ಇಲ್ಲಿ ಮೆಡ್ವೆಡೆವ್ ಅಗ್ರಶ್ರೇಯಾಂಕ ಪಡೆಯುವ ಹಾದಿ ಸುಲಭವಾಯಿತು.

ಯುದ್ಧದಿಂದ ಸಾಧನೆ ತೆರೆಮರೆಗೆ: ವಿಶ್ವ ರ್‍ಯಾಂಕಿಂಗ್‌ನಲ್ಲಿ ಒಂದನೇ ಸ್ಥಾನ ಅಲಂಕರಿಸಿದ ರಷ್ಯಾದ 3ನೇ ಆಟಗಾರ ಎನಿಸಿರುವ ಮೆಡ್ವೆಡೆವ್ ರಷ್ಯಾ ಮತ್ತು ಉಕ್ರೇನ್ ಯುದ್ಧದಿಂದಾಗಿ ತಮ್ಮ ಸಾಧನೆ ನಗಣ್ಯವಾಗಲಿದೆ ಎಂದಿದ್ದಾರೆ.

ಜ್ವೆರೆವ್‌ಗೆ ದಂಡ: ವಿಶ್ವದ ಮೂರನೇ ಶ್ರೇಯಾಂಕಿತ ಆಟಗಾರ ಅಲೆಕ್ಸಾಂಡರ್ ಜ್ವೆರೆವ್ ಅವರಿಗೆ ₹ 30 ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆ. ಟೂರ್ನಿಯಲ್ಲಿ ಈಚೆಗೆ ಅವರು ಡಬಲ್ಸ್ ಪಂದ್ಯದ ಸಂದರ್ಭದಲ್ಲಿ ಚೇರ್ ಅಂಪೈರ್‌ಗೆ ರೆಕೆಟ್ ಬೀಸಿದ್ದರು. ಅದಕ್ಕಾಗಿ ಅವರನ್ನು ಟೂರ್ನಿಯಿಂದ ವಜಾಗೊಳಿಸಲಾಗಿತ್ತು.

ಉಕ್ರೇನ್‌ನಲ್ಲಿ ಸಿಲುಕಿರುವ ರಾಷ್ಟ್ರೀಯ ಚೆಸ್ ಆಟಗಾರ ಅನ್ವೇಷ್

ಚೆನ್ನೈ (ಪಿಟಿಐ/ಎಎಫ್‌ಪಿ): ಎರಡು ದಿನಗಳಿಂದ ಏಕಾಂಗಿ. ಫ್ಲ್ಯಾಟ್‌ನಿಂದ ಹೊರಗೆ ಕಾಲಿಡಲು ಆಗದ ಪರಿಸ್ಥಿತಿ. ಎಲ್ಲೆಲ್ಲೂ ಆತಂಕ; ಪ್ರಾಣ ಭಯ...

ರಷ್ಯಾ ಆಕ್ರಮಣದಿಂದಾಗಿ ಯುದ್ಧಪೀಡಿತ ಪ್ರದೇಶವಾಗಿರುವ ಉಕ್ರೇನ್‌ನಲ್ಲಿ ಸಿಲುಕಿರುವ ನೂರಾರು ಭಾರತೀಯರ ಪೈಕಿ ಒಬ್ಬರಾದ ಚೆಸ್ ಆಟಗಾರ ಅನ್ವೇಷ್ ಉಪಾಧ್ಯಾಯ ಅವರು ರಕ್ಷಣೆಗಾಗಿ ಪ್ರತಿಕ್ಷಣವೂ ಕಾತರದಲ್ಲಿದ್ದಾರೆ.

2017ರ ಭಾರತ ರಾಷ್ಟ್ರೀಯ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದಿರುವ ಮಧ್ಯಪ್ರದೇಶದವರಾದ ಅನ್ವೇಷ್ 2012ರಿಂದ ಉಕ್ರೇ ನ್‌ನಲ್ಲಿ ನೆಲೆಸಿದ್ದಾರೆ. 30 ವರ್ಷದ ಅವರು ರಾಜಧಾನಿ ಕೀವ್‌ನ ಆಸ್ಪತ್ರೆಯೊಂ ದರಲ್ಲಿ ಗ್ಯಾಸ್ಟ್ರೊಯೆಂಟರಾಲಜಿ ವಿಷಯದಲ್ಲಿ ಅಪ್ರೆಂಟೈಸ್‌ಷಿಪ್ ಮಾಡುತ್ತಿದ್ದಾರೆ. ಮುಂದಿನ ತಿಂಗಳಲ್ಲಿ ತವರಿಗೆ ಮರಳಲು ಸಿದ್ಧತೆ ನಡೆಸುತ್ತಿದ್ದಾಗಲೇ ಉಕ್ರೇನ್ ಮೇಲೆ ರಷ್ಯಾ ಸೈನಿಕ ದಾಳಿ ಆರಂಭಿಸಿದೆ. ವಿಮಾನಯಾನವೂ ರದ್ದಾಗಿರುವುದರಿಂದ ಮುಂದೇನು ಎಂಬ ಚಿಂತೆಯಲ್ಲಿದ್ದಾರೆ ಅನ್ವೇಷ್.

'ಭಾರತದಲ್ಲಿರುವ ನನ್ನ ತಂದೆ ತಾಯಿ ಈಚೆಗೆ ತುಂಬ ಆತಂಕದಲ್ಲಿದ್ದಾರೆ. ಸತತವಾಗಿ ಕರೆ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮಾರ್ಚ್ ಮೊದಲ ವಾರದಲ್ಲಿ ಮರಳಲು ನಿರ್ಧರಿಸಿದ್ದೆ. ಈಗಾಗಲೇ ಊರಿಗೆ ಮರಳಬೇಕಾಗಿತ್ತು. ಆದರೆ ಸೂಕ್ತ ಸಂದರ್ಭದಲ್ಲಿ ವಿಮಾನ ಟಿಕೆಟ್ ಸಿಕ್ಕಿರಲಿಲ್ಲ. ಇಲ್ಲಿ ಏನಾಗುತ್ತಿದೆ ಮತ್ತು ಏನಾಗಲಿದೆ ಎಂಬುದನ್ನು ಹೇಳಲು ನನಗೆ ಸಾಧ್ಯವಾಗುತ್ತಿಲ್ಲ' ಎಂದು ಅನ್ವೇಷ್ ನುಡಿದರು.

2352 ಇಲೊ ರೇಟಿಂಗ್ ಹೊಂದಿರುವ ಅನ್ವೇಷ್ ಎರಡು ತಿಂಗಳ ಹಿಂದೆ ಪಶ್ಚಿಮ–ಕೇಂದ್ರ ಉಕ್ರೇನ್‌ನಲ್ಲಿ ನಡೆದಿದ್ದ ವಿನಿತ್ಸಿಯಾ ಟೂರ್ನಿಯಲ್ಲಿ ಆಡಿದ್ದರು. ಸದ್ಯ ಚೆಸ್ ಬಗ್ಗೆ ಯೋಚಿಸಲು ಸಮವಿಲ್ಲ. ತವರಿಗೆ ಮರಳಿದರೆ ಸಾಕು ಎಂದೆನಿಸಿದೆ ಎಂದು ಅವರು ಹೇಳಿದರು.

ಯುದ್ಧ ಅಗತ್ಯವಿಲ್ಲ- ನಡಾಲ್: 21ನೇ ಶತಮಾನದಲ್ಲಿ ಯುದ್ಧಗಳು ಅನಿವಾರ್ಯ ಅಲ್ಲ ಎಂದು ದಾಖಲೆಯ 21ನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದಿರುವ ಸ್ಪೇನ್‌ನ ರಫೆಲ್ ನಡಾಲ್ ಅಭಿಪ್ರಾಯಪಟ್ಟರು.

'ಈ ಸಂದರ್ಭದಲ್ಲಿ ಯಾರು ಸರಿ, ಯಾರಿಂದ ತಪ್ಪಾಗಿದೆ ಎಂದು ಹೇಳಲಾಗದು. ಆದರೆ ಯುದ್ಧಗಳ ನಡುವೆ ಬದುಕುವುದು ಕಷ್ಟದ ಕೆಲಸ. ಆದಷ್ಟು ಬೇಗ ಪ್ರಕ್ಷುಬ್ಧ ಸ್ಥಿತಿಯನ್ನು ಕೊನೆಗಾಣಿಸಬೇಕು' ಎಂದು ಅವರು ಆಶಿಸಿದರು.

ಚಾಂಪಿಯನ್ಸ್ ಲೀಗ್ ಫೈನಲ್ ಸ್ಥಳಾಂತರ

ರಷ್ಯಾ ಮತ್ತು ಉಕ್ರೇನ್ ನಡುವಿನ ಬಿಕ್ಕಟ್ಟಿನಿಂದಾಗಿ ಈ ವರ್ಷದ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಫೈನಲ್ ಪಂದ್ಯವನ್ನು ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್‌ನಿಂದ ಪ್ಯಾರಿಸ್‌ಗೆ ಸ್ಥಳಾಂತರಿಸಲು ಯುರೋಪ್ ಸಾಕರ್ ಆಡಳಿತ ನಿರ್ಧರಿಸಿದೆ.

ಉಕ್ರೇನ್ ಮತ್ತು ರಷ್ಯಾದ ಕ್ಲಬ್‌ಗಳು ಪಾಲ್ಗೊಳ್ಳುವ ಪಂದ್ಯಗಳನ್ನು ಹಾಗೂ ರಾಷ್ಟ್ರೀಯ ತಂಡಗಳ ನಡುವಿನ ಪಂದ್ಯಗಳನ್ನು ತಟಸ್ಥ ಸ್ಥಳಗಳಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ಕೂಡ ಅದು ತಿಳಿಸಿದೆ. ಚಾಂಪಿಯನ್ಸ್ ಲೀಗ್‌ನ ಫೈನಲ್ ಪಂದ್ಯ ಮೇ 28ರಂದು ನಡೆಯಲಿದೆ.

ಐಪಿಎಲ್: ಬಿ ಗುಂಪಿನಲ್ಲಿ ಬೆಂಗಳೂರು

ನವದೆಹಲಿ (ಪಿಟಿಐ): ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯಗಳ ಆಯೋಜನೆಯ ಮಾದರಿಗೆ ಹೊಸರೂಪ ನೀಡಲಾಗಿದೆ.

ಎರಡು ಹೊಸ ಫ್ರಾಂಚೈಸಿಗಳೂ ಸೇರಿದಂತೆ ಒಟ್ಟು 10 ತಂಡಗಳು ಕಣದಲ್ಲಿವೆ. ಆದ್ದರಿಂದ ಎರಡು ಗುಂಪುಗಳಲ್ಲಿ ತಂಡಗಳನ್ನು ವಿಂಗಡಿಸಲಾಗಿದೆ.

ಎ ಗುಂಪಿನಲ್ಲಿ ಮುಂಬೈ ಇಂಡಿಯನ್ಸ್, ಕೋಲ್ಕತ್ತ ನೈಟ್ ರೈಡರ್ಸ್, ರಾಜಸ್ಥಾನ ರಾಯಲ್ಸ್, ಡೆಲ್ಲಿ ಕ್ಯಾಪಿಟಲ್ಸ್, ಲಖನೌ ಸೂಪರ್ ಜೈಂಟ್ಸ್ ತಂಡಗಳಿವೆ. ಬಿ ಗುಂಪಿನಲ್ಲಿ ಚೆನ್ನೈ ಸೂಪರ್ ಕಿಂಗ್ಸ್, ಸನ್‌ರೈಸರ್ಸ್ ಹೈದರಾಬಾದ್, ರಾಯಲ್ ಚಾಲೆಂಜರ್ಸ್ ಬೆಂಗಳೂರು, ಪಂಜಾಬ್ ಕಿಂಗ್ಸ್ ಮತ್ತು ಗುಜರಾತ್ ಟೈಟನ್ಸ್ ತಂಡಗಳಿವೆ.

ಐಪಿಎಲ್ ಇತಿಹಾಸದಲ್ಲಿ ತಂಡಗಳ ಸಾಧನೆಯ ಆಧಾರದಲ್ಲಿ ಕ್ರಮಾಂಕ ನೀಡಲಾಗಿದೆ. ಐದು ಬಾರಿ ಪ್ರಶಸ್ತಿ ಗೆದ್ದಿರುವ ಮುಂಬೈ ಇಂಡಿಯನ್ಸ್ ಪ್ರಥಮ ಮತ್ತು ನಾಲ್ಕು ಬಾರಿ ಚಾಂಪಿಯನ್ ಆಗಿರುವ ಚೆನ್ನೈ ಸೂಪರ್ ಕಿಂಗ್ಸ್ ದ್ವಿತೀಯ ಸ್ಥಾನ ಪಡೆದಿವೆ. ಎರಡೂ ತಂಡಗಳು ಕ್ರಮವಾಗಿ ಎ ಮತ್ತು ಬಿ ಗುಂಪುಗಳಲ್ಲಿ ಪ್ರಥಮ ಸ್ಥಾನದಲ್ಲಿವೆ.

ತಂಡಕ್ಕೆ 14 ಪಂದ್ಯಗಳು: ನೂತನ ಮಾದರಿಯಲ್ಲಿ ಪ್ರತಿ ತಂಡವೂ ಲೀಗ್ ಹಂತದಲ್ಲಿ ತಲಾ 14 ಪಂದ್ಯಗಳನ್ನು ಆಡಲಿವೆ. ಗುಂಪಿನೊಳಗೇ ತಂಡಗಳು ಪರಸ್ಪರ ಎರಡು ಬಾರಿ ಮುಖಾಮುಖಿಯಾಗಲಿವೆ. ಅದರಿಂದ ಒಟ್ಟು ಎಂಟು ಪಂದ್ಯಗಳನ್ನು ಆಡಿದಂತಾಗುತ್ತದೆ. ಇನ್ನೊಂದು ಸುತ್ತಿನಲ್ಲಿ ಎರಡು ಗುಂಪುಗಳ ತಂಡಗಳು ಮುಖಾಮುಖಿಯಾಗುವ ಮೂಲಕ ಉಳಿದ ಆರು ಪಂದ್ಯಗಳನ್ನು ಆಡಲಿವೆ.

ಮಾರ್ಚ್ 26ರಂದು ಐಪಿಎಲ್ ಟೂರ್ನಿ ಆರಂಭವಾಗಲಿದೆ. ಮುಂಬೈನಲ್ಲಿರುವ ಮೂರು ಕ್ರೀಡಾಂಗಣಗಳಲ್ಲಿ 55 ಮತ್ತು ಪುಣೆಯ ಎಂಸಿಎ ಕ್ರೀಡಾಂಗಣದಲ್ಲಿ 15 ಪಂದ್ಯಗಳು ನಡೆಯಲಿವೆ.

Participate & Win* upto

₹ 2,00,000

*T&C apply

AWARDS & RECOGNITION:

The song contest, video-making contest, and poster design contest are classified into three categories: Institutional, Professional and Amateur. The top three winners in each category will be awarded exciting cashprizes. Additionally, each category will have cash prizes under a special mention category. The Institutional category will have 4 special mentions while the Professional & Amateur category will have 3 special mentions each.

CATEGORIES ಹವ್ಯಾಸಿಗಳು ವೃತ್ತಿಪರರು ಸಾಂಸ್ಥಿಕ ಸಂಸ್ಥೆಗಳು

VIDEO MAKING CONTEST

Category	First Prize	Second Prize	Third Prize	Special Mention
Institutional	₹ 2,00,000	₹ 1,00,000	₹ 75,000	₹ 30,000
Professional	₹ 50,000	₹ 30,000	₹ 20,000	₹ 10,000
Amateur	₹ 30,000	₹ 20,000	₹ 10,000	₹ 5,000

SONG CONTEST

Category	First Prize	Second Prize	Third Prize	Special Mention
Institutional	₹ 1,00,000	₹ 50,000	₹ 30,000	₹ 15,000
Professional	₹ 50,000	₹ 30,000	₹ 20,000	₹ 10,000
Amateur	₹ 20,000	₹ 10,000	₹ 7,500	₹ 3,000

POSTER DESIGN CONTEST

Category	First Prize	Second Prize	Third Prize	Special Mention
Institutional	₹ 50,000	₹ 30,000	₹ 20,000	₹ 10,000
Professional	₹ 30,000	₹ 20,000	₹ 10,000	₹ 5,000
Amateur	₹ 20,000	₹ 10,000	₹ 7,500	₹ 3,000

SLOGAN CONTEST

First Prize 20,000

Second Prize 10,000

Third Prize - 7,500

Special Mention

Award of 2,000 each to be given to 50 participants.

QUIZ CONTEST

The winners will get exciting ECI merchandise and all participants completing level-3 will be awarded with e-certificates.

ಅತ್ಯಾಕರ್ಷಕ ನಗದು ಬಹುಮಾನ

ಇ–ಪ್ರಮಾಣಪತ್ರ ಮತ್ತು ಇಸಿಐ ಮರ್ಚಂಡೈಸ್

ಚುನಾವಣಾ ಆಯೋಗದ ಸಾಮಾಜಿಕ ಮಾಧ್ಯಮದಲ್ಲಿ ಕಾಣಿಸಿಕೊಳ್ಳುವ ಅವಕಾಶ

Follow us on: @ECI @ECISVEEP @ECISVEEP @ECI

ಸ್ಪರ್ಧಿಸಲು ಈಗಲೇ ಸ್ಕ್ಯಾನ್ ಮಾಡಿ

ecisveep.nic.in/contest

ಸ್ಪರ್ಧೆಯು ಎಲ್ಲಾ ವಯೋಮಾನದವರಿಗೆ ಲಭ್ಯವಿದೆ

ನಿಮ್ಮ ನಮೂದುಗಳನ್ನು ಕಳುಹಿಸಿ

voter-contest@eci.gov.in

ಪ್ರಕಟಣೆ – ಮುಖ್ಯ ಚುನಾವಣಾಧಿಕಾರಿ ಯವರ ಕಛೇರಿ, ಕರ್ನಾಟಕ.